ಬೆಂಗಳೂರು
ಗುರುವಾರ, 7 ಮೇ 2026
ಸಂಪುಟ 33, ಸಂಚಿಕೆ 186, ಪುಟಗಳು 14+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಹಿಂಸೆಯಲ್ಲಿ ಭಾಗಿ ಆದವರನ್ನು ಬಂಧಿಸಿ | ೧೦
ಬಂಗಾಳ ಸಿಎಂ ಪ್ರಮಾಣ ಮೇ 9ಕ್ಕೆ | ೧೦
ಇಂದು ಮೈಸೂರಿಗೆ ಮೋಹನ್ ಭಾಗವತ್ | ೦೩

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಪೂರ್ವಾಷಾಢ

ದಿನದ ಮಾತು

ಏನೇನು ಹೇಳುವುದು? ಭೂಮಿಯಲ್ಲಿ ಹಣವಿಲ್ಲದವನ ಶೀಲ, ಸಾಹಸ, ದೊಡ್ಡಸ್ತಿಕೆ, ಕುಲ, ಕೀರ್ತಿ ಇದೆಲ್ಲ ವ್ಯರ್ಥ.
▲ ಕಾವ್ಯಾವಲೋಕನಂ



ಸೋತ ಮೇಲಿನ ಮಾತುಗಳೇ ಸೋಲಿಗೆ ಕಾರಣವಲ್ಲವೇ?

ಗುರುತರ
• ಸೋಮಶೇಖರ ಸಿ.ಜೆ.
• ಪುಟ ೬

ರಾಜ್ಯ, ರಾಜಕೀಯ, ಸರ್ಕಾರದ ಬಗ್ಗೆ ವರಿಷ್ಠರ ಜತೆ ಚರ್ಚೆ
ಮೇ 9ಕ್ಕೆ ಸಿಎಂ ದಿಲ್ಲಿಗೆ

• **ಬೆಂಗಳೂರು:** ಪಂಚ ರಾಜ್ಯಗಳ ಚುನಾವಣೆ ಮುಕ್ತಾಯದ ನಂತರ ನಿರೀಕ್ಷೆಯಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ದಿಲ್ಲಿಗೆ ತೆರಳುವುದು ಖಾತ್ರಿಯಾಗಿದ್ದು, ಇದೇ ತಿಂಗಳ 9ರಂದು ದೆಹಲಿಗೆ ತೆರಳಲಿದ್ದಾರೆ ಎನ್ನುವ ಮಾಹಿತಿಯಿದೆ. ಮೇನಲ್ಲಿ ರಾಜ್ಯ ರಾಜಕಾರಣದಲ್ಲಿ ಮಹತ್ವದ ಬೆಳವಣಿಗೆಗಳಿಗೆ ಈ ಭೇಟಿ ನಾಂದಿ ಹಾಡಲಿದೆ ಎಂದು ಹೇಳಲಾಗುತ್ತಿದೆ.



ದಿಲ್ಲಿಗೆ ತೆರಳಿ ಪಕ್ಷದ ವರಿಷ್ಠರನ್ನು ಭೇಟಿ ಮಾಡಿ, ಸಂಪುಟ ವಿಸ್ತರಣೆ ಕುರಿತು ಚರ್ಚಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗಾಗಲೇ ಸಾಕಷ್ಟು ಬಾರಿ ಹೇಳಿದ್ದು, ಇದರ ಜತೆಗೆ ಹೈಕಮಾಂಡ್ ತೀರ್ಮಾನವೇ ಅಂತಿಮ ಎಂದು ಹೇಳಿದ್ದಾರೆ. ಈ ನಡುವೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಹುಟ್ಟುಹಬ್ಬಕ್ಕೆ ಹೈಕಮಾಂಡ್ ಶುಭ ಸಂದೇಶ ನೀಡಲಿದೆ ಎಂದು ಅವರ ಬೆಂಬಲಿಗರು ಹೇಳುತ್ತಿದ್ದಾರೆ. ದಿಲ್ಲಿಯಿಂದ ಉಭಯ ನಾಯಕರಿಗೆ ಬುಲಾವ್ ಬಂದಿರುವ ಬಗ್ಗೆ ಇನ್ನೂ ಸ್ಪಷ್ಟತೆ ಸಿಕ್ಕಿಲ್ಲ, ಒಂದು ವೇಳೆ ಇಬ್ಬರು ನಾಯಕರನ್ನು ಹೈಕಮಾಂಡ್ ಕರೆಸಿಕೊಂಡರೆ ಯಾವ ಸೂತ್ರದಲ್ಲಿ ಮಾತುಕತೆ ನಡೆಯಬಹುದು, ಯಾರಿಗೆ ಶುಭ ಸಂದೇಶ ಸಿಗಬಹುದು ಅಥವಾ ರಾಜ್ಯದಲ್ಲಿ ಬದಲಾವಣೆಯೋ, ಪುನರ್ ರಚನೆಯೋ ಎಂಬ ಬಗ್ಗೆ ಹೈಕಮಾಂಡ್ ನಿರ್ಧರಿಸಲಿದೆ. ಸಚಿವ ಸ್ಥಾನಕ್ಕಾಗಿ ಹಿರಿಯ ಶಾಸಕರು ಈಗಾಗಲೇ ದಿಲ್ಲಿಗೆ ತೆರಳಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ವರಿಷ್ಠರನ್ನು ಭೇಟಿಯಾಗಿ ಒತ್ತಡ ತಂದಿದ್ದಾರೆ. ಅಲ್ಲದೆ, ಕಳೆದ ವಾರ ಸಚಿವರಾದ ಎಚ್.ಸಿ. ಮಹಾದೇವಪ್ಪ, ಸತೀಶ್ ಜಾರಕಿಹೊಳಿ ಮತ್ತು ಕೆ.ಎಚ್. ಮುನಿಯಪ್ಪ ಅವರು ಸಹ ದಿಲ್ಲಿಗೆ ಭೇಟಿ ನೀಡಿ ನಾಯಕತ್ವ ಬದಲಾವಣೆ ಬಗ್ಗೆ ಇರುವ ಗೊಂದಲಗಳ ಬಗ್ಗೆ ಸ್ಪಷ್ಟನೆ ನೀಡಬೇಕೆಂದು ಮನವಿ ಮಾಡಿದ್ದಾರೆ. ➡ಪುಟ ೯



> ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಐದು ವರ್ಷಗಳ ಆಡಳಿತವನ್ನು ಪೂರ್ಣಗೊಳಿಸಲಿದೆ. ನಾನು ಮುಖ್ಯಮಂತ್ರಿಯಾಗಿ ಐದು ವರ್ಷದ ತನಕ ಮುಂದುವರಿಯಬೇಕೇ, ಬೇಡವೇ ಎಂಬುದರ ಬಗ್ಗೆ ಪಕ್ಷದ ಹೈಕಮಾಂಡ್ ತೀರ್ಮಾನಿಸುತ್ತದೆ. ಹೈಕಮಾಂಡ್ ಹೇಳಿದರೆ 5 ವರ್ಷವೂ ನಾನೇ ಸಿಎಂ ಆಗಿ ಇರುತ್ತೇನೆ. ನಾನು ಹೈಕಮಾಂಡ್ ತೀರ್ಮಾನಕ್ಕೆ ಬದ್ಧನಾಗಿದ್ದೇನೆ.
> ■ ಸಿದ್ದರಾಮಯ್ಯ, ಸಿಎಂ

ಹೈಕಮಾಂಡ್ ಹೇಳಿದಂತೆ ಕೇಳುವೆ: ಸಿದ್ದರಾಮಯ್ಯ

• **ಮೈಸೂರು:** ನಾನು ಮುಖ್ಯಮಂತ್ರಿಯಾಗಿ ಮುಂದುವರಿಯಬೇಕಾ, ಬೇಡವಾ ಎಂಬುದನ್ನು ನಮ್ಮ ಪಕ್ಷದ ಹೈ ಕಮಾಂಡ್ ತೀರ್ಮಾನಿಸುತ್ತದೆ. ನಾನು ಹೈಕಮಾಂಡ್ ಹೇಳಿದಂತೆ ಕೇಳುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಗುರುವಾರ ನಗರದ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಮಾತನಾಡಿದ ಅವರು, ನಮ್ಮ ಸರ್ಕಾರ ಹಾಗೂ ಕಾರ್ಯಕ್ರಮಗಳನ್ನು ಜನರು ಮೆಚ್ಚಿದ್ದಾರೆ. ಹಾಗಾಗಿ ಎರಡು ಉಪಚುನಾವಣೆಯಲ್ಲಿ ಜನರು ನಮ್ಮ ಪಕ್ಷವನ್ನು ಗೆಲ್ಲಿಸಿದ್ದಾರೆ. ಜನರ ಪ್ರೀತಿ, ಅಭಿಮಾನ, ಆಶೀರ್ವಾದ ನಮ್ಮ ಮೇಲಿದೆ ಎಂದರು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ 5 ವರ್ಷ ಆಡಳಿತವನ್ನು ಪೂರ್ಣಗೊಳಿಸಲಿದೆ. ನಾನು ಸಿಎಂ ಆಗಿ 5 ವರ್ಷದ ತನಕ ಮುಂದುವರಿಯಬೇಕೇ, ಬೇಡವೇ ಎಂಬುದರ ಬಗ್ಗೆ ಪಕ್ಷದ ಹೈಕಮಾಂಡ್ ತೀರ್ಮಾನಿಸುತ್ತದೆ. ಹೈಕಮಾಂಡ್ ಹೇಳಿದರೆ 5 ವರ್ಷವೂ ನಾನೇ ಸಿಎಂ ಆಗಿ ಇರುತ್ತೇನೆ. ನಾನು ಹೈಕಮಾಂಡ್ ತೀರ್ಮಾನಕ್ಕೆ ಬದ್ಧನಾಗಿದ್ದೇನೆ. ಹೈಕಮಾಂಡ್ ಹೇಳಿದಂತೆ ಕೇಳುತ್ತೇನೆ. ಹೈಕಮಾಂಡ್ ದೆಹಲಿಗೆ ಕರೆದರೆ ಹೋಗುತ್ತೇನೆ. ನಾನೇ ದೆಹಲಿಗೆ ಹೋಗಬೇಕಾದರೆ ರಾಹುಲ್ ಗಾಂಧಿಯವರ ಅಪಾಯಿಂಟ್‌ಮೆಂಟ್ ಬೇಕಾಗುತ್ತದೆ. ➡ಪುಟ ೯

> ಹೈಕಮಾಂಡ್ ಕರೆದಾಗ ಸಿಎಂ ಸಿದ್ದರಾಮಯ್ಯ, ನಾವು ಹೋಗುತ್ತೇವೆ. ಕರೆಯದೆ ಹೋಗುವುದು ಸರಿಯಲ್ಲ, ಕರೆಯುತ್ತಾರೆ. ಕರೆದಾಗ ನಾವು ಹೋಗುತ್ತೇವೆ.
> ■ ಡಿ.ಕೆ ಶಿವಕುಮಾರ್, ಉಪಮುಖ್ಯಮಂತ್ರಿ

ಶುಭ ಸುದ್ದಿಗೆ ಕಾಯುತ್ತಿರುವೆ: ಡಿ.ಕೆ.ಸುರೇಶ್

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಹೋದರ ಡಿ.ಕೆ. ಸುರೇಶ್ ಕೂಡ ಶುಭ ಸುದ್ದಿಗಾಗಿ ಕಾಯುತ್ತಿರುವುದಾಗಿ ತಿಳಿಸಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆ, ತಾಳ್ಮೆ ಮುಖ್ಯ ಎಂದು ಒತ್ತಿ ಹೇಳಿದ್ದು, ತಾಳಿದವನು ಬಾಳಿಯಾನು ಎಂಬ ನುಡಿ ಉಲ್ಲೇಖಿಸುತ್ತಾ, ಎಲ್ಲಕ್ಕೂ ಒಂದು ಕಾಲ ಬರುತ್ತದೆ ಎಂದು ಹೇಳಿರುವುದು ಕುತೂಹಲ ಕಾರಿಯಾಗಿದೆ.

ರಾಜ್ಯಪಾಲರ ಭೇಟಿಯಾದ ಮುಖಂಡರು
ಸರ್ಕಾರ ರಚನೆಗೆ ಹಕ್ಕು ಮಂಡಿಸಿದ ವಿಜಯ್

• **ಚೆನ್ನೈ:** ಟಿವಿಕೆ ಮುಖ್ಯಸ್ಥ ವಿಜಯ್ ಅವರು ಬುಧವಾರ ತಮಿಳುನಾಡು ರಾಜ್ಯಪಾಲ ರಾಜೇಂದ್ರ ವಿಶ್ವನಾಥ ಅರ್ಲೇಕರ್ ಅವರನ್ನು ಭೇಟಿ ಮಾಡಿ ರಾಜ್ಯದಲ್ಲಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು. ಇತ್ತೀಚಿನ ವಿಧಾನಸಭೆ ಚುನಾವಣೆಯಲ್ಲಿ ಅವರ ಪಕ್ಷ ಏಕೈಕ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದರೂ ಸರಳ ಬಹುಮತಕ್ಕಿಂತ ಕಡಿಮೆ ಸ್ಥಾನಗಳನ್ನು ಪಡೆದಿದೆ.

ಟಿವಿಕೆ ಸ್ಥಾಪಕರಾದ ವಿಜಯ್ ಅವರು ಲೋಕಭವನದಿಂದ ಆಹ್ವಾನ ಬಂದ ಹಿನ್ನೆಲೆಯಲ್ಲಿ ಮಧ್ಯಾಹ್ನ 3.15ಕ್ಕೆ ರಾಜ್ಯಪಾಲರನ್ನು ಭೇಟಿ ಮಾಡಿದರು. ಈ ವೇಳೆ ಪಕ್ಷದ ನಾಯಕರಾದ ಬಸ್ಸಿ ಎನ್. ಆನಂದ್, ಆಧವ್ ಅರ್ಜುನಾ, ಕೆ.ಎ. ಸೇಂಗೊಟ್ಟಯ್ಯನ್, ಸಿ.ಟಿ. ನಿರ್ಮಲ್ ಕುಮಾರ್ ಸೇರಿದಂತೆ ಇತರರು ಜತೆಯಾಗಿದ್ದರು. ಕಾಂಗ್ರೆಸ್ ಬೆಂಬಲ ಘೋಷಿಸಿದ ಕೆಲವೇ ಗಂಟೆಗಳಲ್ಲಿ ವಿಜಯ್ ಅವರು ರಾಜ್ಯಪಾಲರನ್ನು ಭೇಟಿಯಾದರು. ಅದಕ್ಕೂ ಮೊದಲು ಚೆನ್ನೈನಲ್ಲಿ ಟಿವಿಕೆ ಮತ್ತು ಕಾಂಗ್ರೆಸ್ ನಾಯಕರ ನಡುವೆ ಸಭೆ ನಡೆದಿತ್ತು.

ಬೆಂಬಲ ನಿರಾಕರಿಸಿದ ಎಡಪಕ್ಷಗಳು, ಐಯುಎಂಎಲ್: ಟಿವಿಕೆ ಆಹ್ವಾನ ನೀಡಿದರೂ ಎಡಪಕ್ಷಗಳು ಮತ್ತು ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಬೆಂಬಲ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿವೆ. ಅಲ್ಲದೆ, ಸಿಪಿಐ(ಎಂ), ಸಿಪಿಐ ಮತ್ತು ಐಯುಎಂಎಲ್ ಶಾಸಕರು ಡಿಎಂಕೆ ಮುಖ್ಯಸ್ಥ ಎಂ.ಕೆ. ಸ್ಟಾಲಿನ್ ಅವರನ್ನು ಭೇಟಿ ಮಾಡಿ, ಡಿಎಂಕೆ ಬೆಂಬಲಿಸುವುದಾಗಿ ತಿಳಿಸಿದ್ದಾರೆ. ➡ಪುಟ ೯



ಟಿವಿಕೆಗೆ ಕೈ ಬೆಂಬಲ

ನಟ-ರಾಜಕಾರಣಿ ವಿಜಯ್ ನೇತೃತ್ವದ ಟಿವಿಕೆ ಪಕ್ಷವು ತಮಿಳುನಾಡಿನಲ್ಲಿ ಸರ್ಕಾರ ರಚಿಸಲು ಕಾಂಗ್ರೆಸ್ ಪಕ್ಷ ಬುಧವಾರ ತನ್ನ ಬೆಂಬಲ ಘೋಷಿಸಿದೆ ಮತ್ತು ಡಿಎಂಕೆ ಜತೆಗಿನ ಸುದೀರ್ಘ ಮೈತ್ರಿಯನ್ನು ಕೊನೆಗೊಳಿಸಿದೆ. ಟಿವಿಕೆ ಮುಖ್ಯಸ್ಥ ವಿಜಯ್ ಅವರ ಅಧಿಕೃತ ಮನವಿಯ ಮೇರೆಗೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ, ಎಂದು ಎಐಸಿಸಿ ತಮಿಳುನಾಡು ಉಸ್ತುವಾರಿ ಗಿರೀಶ್ ಚೋಡಂಕರ್ ಘೋಷಿಸಿದ್ದಾರೆ. ಈ ಮೈತ್ರಿ, ಕೇವಲ ಪ್ರಸ್ತುತ ಸರ್ಕಾರ ರಚನೆಗೆ ಮಾತ್ರವಲ್ಲದೆ, ಭವಿಷ್ಯದ ಸ್ಥಳೀಯ ಸಂಸ್ಥೆ ಚುನಾವಣೆಗಳು, ಲೋಕಸಭೆ ಮತ್ತು ರಾಜ್ಯಸಭೆ ಚುನಾವಣೆಗಳಿಗೂ ಅನ್ವಯಿಸಲಿದೆ. ಕೋಮು ಶಕ್ತಿಗಳನ್ನು ಮೈತ್ರಿಯಿಂದ ಹೊರಗಿಡಬೇಕು ಎಂಬ ಷರತ್ತನ್ನು ಕಾಂಗ್ರೆಸ್ ವಿಧಿಸಿದೆ.

ಸರ್ಕಾರ ರಚನೆಗೆ ಡಿಎಂಕೆ, ಎಐಎಡಿಎಂಕೆ ಮಾತುಕತೆ!

• **ಚೆನ್ನೈ:** ಟಿವಿಕೆ ಸರ್ಕಾರ ರಚಿಸಲು ಬೆಂಬಲ ಪಡೆದುಕೊಳ್ಳುವ ಪ್ರಯತ್ನದಲ್ಲಿ ತೊಡಗಿರುವ ನಡುವೆಯೇ, ಡಿಎಂಕೆ ತನ್ನ ದೀರ್ಘಕಾಲದ ರಾಜಕೀಯ ಪ್ರತಿಸ್ಪರ್ಧಿಯಾದ ಎಐಎಡಿಎಂಕೆ ಜತೆ ಗುಪ್ತ ಮಾತುಕತೆಗಳನ್ನು ಆರಂಭಿಸಿದೆ ಎಂದು ವರದಿಯಾಗಿದೆ. ➡ಪುಟ ೯

ಬೆನ್ನಿಗೆ ಇರಿದ ಕಾಂಗ್ರೆಸ್: ಡಿಎಂಕೆ ಟೀಕಾಪ್ರಹಾರ

• ಪುಟ ೯

ಕಿರುಸುದ್ದಿ

ಪಂಜಾಬ್‌ನಲ್ಲಿ ಎರಡು ಕಡೆ ಬಾಂಬ್ ಸ್ಫೋಟ!

• **ಚಂಡೀಗಢ:** ಪಂಜಾಬ್‌ನಲ್ಲಿ ಕೆಲವೇ ಗಂಟೆಗಳ ಅಂತರದಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ಸ್ಫೋಟ ಘಟನೆಗಳು ಭಾರೀ ಭೀತಿ ಸೃಷ್ಟಿಸಿದೆ. ಜಲಂಧರ್‌ನ ಗಡಿ ಭದ್ರತಾ ಪಡೆಯ ಪಂಜಾಬ್ ಗಡಿನಾಡಿನ ಪ್ರಧಾನ ಕಚೇರಿಯ ಹೊರಗೆ ಮಂಗಳವಾರ ರಾತ್ರಿ 8 ಗಂಟೆ ಸುಮಾರಿಗೆ ಮೊದಲ ಸ್ಫೋಟ ಸಂಭವಿಸಿದ್ದು, ಎರಡನೇ ಘಟನೆಯು ಅಮೃತಸರದ ಖಾಸಾ ಕಂಟೋನ್ಮೆಂಟ್ ಪ್ರದೇಶದ ಬಳಿ ಮಂಗಳವಾರ ರಾತ್ರಿ 11 ಗಂಟೆ ಸುಮಾರಿಗೆ ಸಂಭವಿಸಿದೆ. ಘಟನೆಗಳಲ್ಲಿ ಯಾವುದೇ ಸಾವು-ನೋವು ವರದಿಯಾಗಿಲ್ಲ.
• ಪುಟ ೧೦

ರಾಜೀನಾಮೆ ನೀಡಲ್ಲ, ವಜಾಗೊಳಿಸಲಿ: ದೀದಿ
• ಪುಟ ೧೦

ಚೊಚ್ಚಲ ಪ್ರವೇಶದಲ್ಲೇ ಟಿವಿಕೆ ಅಪೂರ್ವ ಸಾಧನೆ
• ಪುಟ ೧೦

ಕೇರಳ ಬಿಜೆಪಿಗೆ 3 ಸ್ಥಾನ, ಗಂಭೀರ ಎಚ್ಚರಿಕೆ: ಸಿಪಿಐ
• ಪುಟ ೧೦

ಜಗದೀಶ್ ಹಿರೇಮನಿ ನಿಧನ
• ಪುಟ ೩

ವನ್ಯಜೀವಿ ದಾಳಿ ತಡೆಗೆ ಕ್ರಮ: ಖಂಡ್ರೆ
• ಪುಟ ೩

ಸಾವಿರ ಮಠಾಧೀಶರು ಭಾಗಿ | ಭಾರೀ ಸ್ಪಂದನೆ: ವಿಜಯೇಂದ್ರ
ಅಭಿಮಾನೋತ್ಸವಕ್ಕೆ ಸಕಲ ಸಿದ್ಧತೆ

• **ಚಿತ್ರದುರ್ಗ:** ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ 50 ವರ್ಷದ ರಾಜಕೀಯ ಜೀವನದ ಹಿನ್ನೆಲೆಯಲ್ಲಿ ಮೇ 9ರಂದು ನಡೆಯಲಿರುವ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಬೇಕಾದ ಸಕಲ ಸಿದ್ಧತೆಗಳು ಭರದಿಂದ ನಡೆಯುತ್ತಿವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ ತಿಳಿಸಿದರು.



ಚಿತ್ರದುರ್ಗ ನಗರದ ಹೊರವಲಯದ ಶ್ರೀ ಮಾದಾರ ಚೆನ್ನಯ್ಯ ಗುರುಪೀಠದ ಪಕ್ಕದಲ್ಲಿರುವ ಮೈದಾನದಲ್ಲಿ ನಡೆಸಲು ಉದ್ದೇಶಿಸಿ ರುವ ಅಭಿಮಾನೋತ್ಸವ ಕಾರ್ಯಕ್ರಮದ ಸಿದ್ಧತೆ ಪರಿಶೀಲಿಸಿದ ನಂತರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ➡ಪುಟ ೯



ಬಿಎಸ್‌ವೈ ಕುರಿತ 2 ಪುಸ್ತಕ ಲೋಕಾರ್ಪಣೆ

• **ಬೆಂಗಳೂರು:** ಬಿ.ಎಸ್. ಯಡಿಯೂರಪ್ಪ ಅವರ 50 ವರ್ಷಗಳ ಸಾರ್ವಜನಿಕ ಜೀವನ ಪಯಣದ ನೆನಪಿಗಾಗಿ ಮೇ 9ರಂದು ಚಿತ್ರದುರ್ಗದಲ್ಲಿ ನಡೆಯುವ ಬಿಎಸ್‌ವೈ ಅಭಿಮಾನೋತ್ಸವದಲ್ಲಿ ಅವರು ನಡೆದು ಬಂದ ಹಾದಿಯ ವಿವರಗಳನ್ನೊಳಗೊಂಡ ಎರಡು ಪುಸ್ತಕಗಳು ಲೋಕಾರ್ಪಣೆಯಾಗಲಿವೆ. ➡ಪುಟ ೯

ಶಾಸಕ ಜೀವರಾಜ್‌ಗೆ ಪ್ರಮಾಣವಚನ ಬೋಧಿಸಿದ ಸ್ಪೀಕರ್
ಶೃಂಗೇರಿ ಶಾರದೆ ಹೆಸರಲ್ಲಿ ಪ್ರಮಾಣ

• **ಬೆಂಗಳೂರು:** ಅಂಚೆ ಮತ ಮರು ಎಣಿಕೆಯಲ್ಲಿ ಗೆಲುವು ಸಾಧಿಸಿದ ಬಿಜೆಪಿಯ ಡಿ.ಎನ್. ಜೀವರಾಜ್ ಅವರು ಶೃಂಗೇರಿ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಶೃಂಗೇರಿ ಶಾರದಾಂಬೆ ಹೆಸರಿನಲ್ಲಿ ಬುಧವಾರ ಪ್ರಮಾಣವಚನ ಸ್ವೀಕರಿಸಿದ್ದಾರೆ. ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು ಪ್ರಮಾಣ ವಚನ ಬೋಧಿಸಿದರು. ಜೀವರಾಜ್ ಅವರ ಪ್ರಮಾಣವಚನ ಸ್ವೀಕಾರ ಕುರಿತು ಗೊಂದಲ ಉಂಟಾದ್ದರಿಂದ ಮಂಗಳವಾರ ಬಿಜೆಪಿ ನಿಯೋಗ ರಾಜ್ಯಪಾಲರನ್ನು ಭೇಟಿ ಮಾಡಿತ್ತು. ಈ ನಡುವೆ ಬೆಂಗಳೂರಿಗೆ ಆಗಮಿಸಿದ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು ನೂತನ ಶಾಸಕ ಡಿ.ಎನ್. ಜೀವರಾಜ್ ಅವರಿಗೆ ಪ್ರಮಾಣವಚನ ಬೋಧಿಸಿದರು. ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್.ಅಶೋಕ, ವಿಧಾನಪರಿಷತ್ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕ ಎಸ್. ಮುನಿರಾಜು, ವಿಧಾನಸಭೆಯ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಮತ್ತಿತರರು ಉಪಸ್ಥಿತರಿದ್ದರು. ➡ಪುಟ ೯



ಕೋರ್ಟ್‌ಗೆ ಮೊರೆ: ಸಿಎಂ

• **ಮೈಸೂರು:** ಶೃಂಗೇರಿ ಮರುಎಣಿಕೆಯಲ್ಲಿ ಬಿಜೆಪಿ ಅಭ್ಯರ್ಥಿಗೆ ಗೆಲುವಾಗಿರುವುದಕ್ಕೆ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ, ಅಂಚೆ ಮತಗಳನ್ನು ಖುದ್ದು ಬಿಜೆಪಿ ಜೀವರಾಜ್, ಚುನಾವಣಾ ಸಿಬ್ಬಂದಿ ಸೇರಿ ತಿದ್ದಿದ್ದಾರೆ. ಈ ಬಗ್ಗೆ ನಾವು ಕೋರ್ಟ್‌ಗೆ ಹೋಗಲಿದ್ದೇವೆ ಎಂದರು. ➡ಪುಟ ೯

ಮೇ 10ಕ್ಕೆ ಬೆಂಗಳೂರಿಗೆ ಮೋದಿ

• **ಹೊಸದಿಲ್ಲಿ/ಬೆಂಗಳೂರು:** ನಗರದಲ್ಲಿರುವ ದಿ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ 45ನೇ ವಾರ್ಷಿಕೋತ್ಸವ ಮತ್ತು ಅದರ ಸಂಸ್ಥಾಪಕ ರವಿ ಶಂಕರ್ ಗುರೂಜಿ 70ನೇ ಜನ್ಮದಿನದ ಅಂಗವಾಗಿ ಮೇ 10ರಂದು ಆಯೋಜಿಸಲಾದ ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳಲಿದ್ದಾರೆ.



ದಿ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಪ್ರಕಟಣೆ ಈ ಮಾಹಿತಿ ನೀಡಿದೆ. ಸರ್ಕಾರದ ನಾಯಕರು ಮತ್ತು ನಾಗರಿಕ ಸೇವಾ ಅಧಿಕಾರಿಗಳು, ರೈತರು ಮತ್ತು ಇಂಜಿನಿಯರ್‌ಗಳು ಗೃಹಿಣಿಯರು ಮತ್ತು ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಹಿರಿಯ ನಾಗರಿಕರಲ್ಲದೆ, ಸಾವಿರಾರು ಅಂತಾರಾಷ್ಟ್ರೀಯ ಪ್ರತಿನಿಧಿಗಳನ್ನು ಒಳಗೊಂಡಿರುವ ಈ ಕಾರ್ಯಕ್ರಮವು ಒಂದು ವಿಶಿಷ್ಟ ಸಮಾವೇಶವಾಗಿದೆ ಎಂದು ತಿಳಿಸಿದೆ. ಈ ಕಾರ್ಯಕ್ರಮದಲ್ಲಿ ಮೋದಿಯವರು ಪ್ರಧಾನ ಭಾಷಣ ಮಾಡಲಿದ್ದಾರೆ. ➡ಪುಟ ೯

ಪ್ರತಿದಿನ 18 ಜನ ಕಾಣೆ | ಮಹಿಳೆಯರೇ ಹೆಚ್ಚು
ಬೆಂಗ್ಳೂರಲ್ಲಿ ಹದಿನೈದು ಸಾವಿರ ಮಂದಿ ನಾಪತ್ತೆ!

▸ ಚಂದನ್ ಲಕ್ಕೂರು

ದಿಗಂತ ವಿಶೇಷ

• **ಬೆಂಗಳೂರು:** ಸಿಲಿಕಾನ್ ಸಿಟಿಯಲ್ಲಿ ನಾಪತ್ತೆ ಪ್ರಕರಣಗಳ ಸಂಖ್ಯೆ ಆತಂಕಕಾರಿ ರೀತಿಯಲ್ಲಿ ಏರಿಕೆಯಾಗುತ್ತಿದೆ. ಅದರಲ್ಲೂ ವಿಶೇಷವಾಗಿ ಪುರುಷರಿಗಿಂತ ಮಹಿಳೆಯರು ಮತ್ತು ಯುವತಿಯರು ಕಾಣೆಯಾಗುತ್ತಿದ್ದಾರೆ. ಪ್ರತಿದಿನ ಸರಾಸರಿ 18 ಜನ ಕಣ್ಮರೆಯಾಗುತ್ತಿದ್ದಾರೆ. ನಾಪತ್ತೆಯಾದವರ ಪೈಕಿ ಮಹಿಳೆಯರ ಸಂಖ್ಯೆಯೇ ಅಗ್ರಸ್ಥಾನದಲ್ಲಿದೆ. 2024ರಲ್ಲಿ ಒಟ್ಟು 3,530 ಮಹಿಳೆಯರು ಕಾಣೆಯಾಗಿದ್ದರೆ, 2025ರ ವೇಳೆಗೆ ಈ ಸಂಖ್ಯೆ 3,661ಕ್ಕೆ ಏರಿಕೆಯಾಗಿದೆ. 2026ರ ಏಪ್ರಿಲ್ ಅಂತ್ಯದ ವೇಳೆಗೆ 1,239 ಮಹಿಳೆಯರು ನಾಪತ್ತೆಯಾಗಿದ್ದು, ಇದು ವರ್ಷಾಂತ್ಯಕ್ಕೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆಯಿದೆ.



ಮಕ್ಕಳ ಸುರಕ್ಷತೆ ಎಲ್ಲಿದೆ?: ಕೇವಲ ಹಿರಿಯರಷ್ಟೇ ಅಲ್ಲದೆ, ಸಣ್ಣ ವಯಸ್ಸಿನ ಹುಡುಗ-ಹುಡುಗಿಯರು ನಾಪತ್ತೆಯಾಗುತ್ತಿರುವುದು ಪೋಷಕರಲ್ಲಿ ಆತಂಕ ಹೆಚ್ಚಿಸಿದೆ. ಕಳೆದ ಎರಡು ವರ್ಷಗಳಲ್ಲಿ ಸರಾಸರಿ 450ಕ್ಕೂ ಹೆಚ್ಚು ಮಕ್ಕಳು ನಾಪತ್ತೆಯಾಗಿದ್ದಾರೆ. 2026ರ ಕೇವಲ ನಾಲ್ಕು ತಿಂಗಳ ಅವಧಿಯಲ್ಲೇ 146ಕ್ಕೂ ಹೆಚ್ಚು ಮಕ್ಕಳು ಕಾಣೆಯಾಗಿದ್ದಾರೆ. ➡ಪುಟ ೯

ಮಾನವ ಕಳ್ಳಸಾಗಣೆ ಜಾಲಕ್ಕೆ ಮಕ್ಕಳ ಮಾರಾಟ?
• ಪುಟ ೯

ಮಗನನ್ನು ಪತ್ತೆ ಹಚ್ಚಿದ ನ್ಯಾಟ್‌ಗ್ರೀಡ್ ತಂತ್ರಾಂಶ



• **ಬೆಳಗಾವಿ:** ಇತ್ತೀಚಿನ ದಿನಗಳಲ್ಲಿ ಸಾಲ ಮಾಡುವುದು ಶೋಕಿಯಾಗಿದೆ. ಮೈತುಂಬ ಸಾಲವನ್ನು ಮಾಡಿಕೊಂಡ ಯುವಕನೊಬ್ಬ, ನನಗೆ ಸಾಲ ಬಹಳ ಆಗಿದೆ ಎಂದು ಮೂರು ವರ್ಷಗಳ ಹಿಂದೆ ಮನೆ ಬಿಟ್ಟು ಹೋಗಿದ್ದ ಯುವಕನನ್ನು ಬೆಳಗಾವಿ ಪೊಲೀಸರು ನ್ಯಾಟ್ ಗ್ರೀಡ್ ತಂತ್ರಾಂಶದ ಮೂಲಕ ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ.

ಸಾಲ ಮಾಡಿ ಮನೆ ಬಿಟ್ಟು ಹೋಗಿದ್ದ ಯುವಕ

ಮುಸ್ತಫಾ ಅಪ್ಪಾಸಾಹೇಬ ಅಲಿಯಾಸ್ ಅಪ್ಪಾಸಾಬ ಜಮಾದಾರ (22) ಕಾಣೆಯಾಗಿದ್ದ ಯುವಕ, ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಸಂಕೇಶ್ವರ ಪಟ್ಟಣದ ಶಿಂದೆ ಚಾಳ ಹಲಿಮಾ ಅಪ್ಪಾಸಾಹೇಬ ಜಮಾದಾರ ಅವರು ಮಗ ಕಾಣೆ ಆಗಿದ್ದಾನೆ ಎಂದು ದೂರು ದಾಖಲಿಸಿದ್ದರು. ➡ಪುಟ ೯

ಏನಿದು ನ್ಯಾಟ್ ಗ್ರೀಡ್ ತಂತ್ರಾಂಶ?
• ಪುಟ ೯



ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,65,000(2,55,000) ಅಪರಂಜಿ ಚಿನ್ನ: 1,51,310(1,49,180) ಆಭರಣ ಚಿನ್ನ: 1,38,700(1,36,750) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ.ಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 77,958(940↑) ಎನ್‌ಎಸ್‌ಇ 24,330(298↑)

$1 = ₹95.09

ಅಭಿಮಾನೋತ್ಸವಕ್ಕೆ ಸಕಲ ಸಿದ್ಧತೆ

ಪುಟ ೧➜ಈ ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧೆಡೆಗಳಿಂದ ಯಡಿಯೂರಪ್ಪನವರ ಸುಮಾರು 10 ಲಕ್ಷ ಸಂಖ್ಯೆಯ ಅಭಿಮಾನಿಗಳು ಆಗಮಿಸಲಿದ್ದಾರೆ. ರಾಜ್ಯದ ವಿವಿಧ 1000 ಮಠಾಧೀಶರು ಭಾಗವಹಿಸಲಿದ್ದಾರೆ ಎಂದರು.

ಈ ಕಾರ್ಯಕ್ರಮಕ್ಕೆ ಕೇಂದ್ರ ಗೃಹಸಚಿವರಾದ ಅಮಿತ್ ಶಾ ಆಗಮಿಸಲಿದ್ದಾರೆ. ಮೇ 9ರಂದು ಬೆಳಗ್ಗೆ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ನೂತನ ಮುಖ್ಯಮಂತ್ರಿಗಳ ಪ್ರಮಾಣವಚನ ಸಮಾರಂಭ ನಡೆಯಲಿದೆ. ಹಾಗಾಗಿ ಅಮಿತ್ ಶಾ ಅವರು ಮಧ್ಯಾಹ್ನದ ನಂತರ ಇಲ್ಲಿಗೆ ಆಗಮಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಮೊದಲು ನಿಗದಿಪಡಿಸಿದ್ದ ಸಮಯ ಬದಲಾಯಿಸಿ ಮಧ್ಯಾಹ್ನ 2 ರಿಂದ 5 ಗಂಟೆಯವರೆಗೆ ಕಾರ್ಯಕ್ರಮ ನಡೆಸಲಾಗುವುದು. ಮಧ್ಯಾಹ್ನ 3.45ರ ವೇಳೆಗೆ ಕೇಂದ್ರ ಗೃಹಸಚಿವ ಅಮಿತ್ ಶಾ ಆಗಮಿಸಲಿದ್ದಾರೆ ಎಂದು ತಿಳಿಸಿದರು.

ರಾಜ್ಯದ ಎಲ್ಲಾ ಮಠಾಧೀಶರನ್ನು ಭೇಟಿ ಮಾಡಿ ಕಾರ್ಯಕ್ರಮಕ್ಕೆ ಆಹ್ವಾನಿಸಬೇಕೆಂಬ ಅಭಿಲಾಷೆ ಇತ್ತು. ಆದರೆ ಸಮಯದ ಕೊರತೆ, ಕೆಲಸದ ಒತ್ತಡದಿಂದ ಆಗುತ್ತಿಲ್ಲ, ಹಾಗಾಗಿ ಎಲ್ಲಾ ಮಠಾಧೀಶರು ಕಾರ್ಯಕ್ರಮಕ್ಕೆ ಆಗಮಿಸಿ ಯಡಿಯೂರಪ್ಪ ಅವರಿಗೆ ಆಶೀರ್ವಾದ ಮಾಡಬೇಕೆಂದು ಮನವಿ ಮಾಡಿದ ಅವರು, ರಾಜ್ಯದ ವಿವಿಧೆಡೆಗಳಿಂದ ಸುಮಾರು 10 ಸಾವಿರ ಬಸ್‌ಗಳು ಹಾಗೂ 40 ರಿಂದ 60 ಸಾವಿರ ಕಾರು ಮತ್ತಿತರ ಲಘುವಾಹನಗಳು ಆಗಮಿಸಲಿವೆ. ನಮ್ಮ ನಿರೀಕ್ಷೆಗೂ ಮೀರಿ ಜನರಿಂದ ಸ್ಪಂದನೆ ಸಿಗುತ್ತಿದ್ದು, ಕಾರ್ಯಕ್ರಮ ಯಶಸ್ವಿಯಾಗಲಿದೆ ಎಂದು ಹೇಳಿದರು.

ಶಾಸಕರಾದ ಹರೀಶ್ ಪೂಂಜ, ರಘು ಕೌಟಿಲ್ಯ, ಭಾಸ್ಕರ್‌ರಾವ್, ಮಾಜಿ ಶಾಸಕರಾದ ಜಿ.ಎಚ್. ತಿಪ್ಪಾರೆಡ್ಡಿ, ಎಸ್.ಕೆ. ಬಸವರಾಜನ್, ರಾಜ್ಯ ಕಾರ್ಯದರ್ಶಿ ತಮ್ಮೇಶ್ ಗೌಡ, ಲಿಂಗಮೂರ್ತಿ, ಮಲ್ಲಿಕಾರ್ಜುನ್, ಸಂಪತ್ ಕುಮಾರ್, ಸೌಭಾಗ್ಯ ಬಸವರಾಜನ್, ನಗರಾಧ್ಯಕ್ಷ ಲೋಕೇಶ್, ಗ್ರಾಮಾಂತರ ಅಧ್ಯಕ್ಷ ನಾಗರಾಜ್, ಸೋಮೇಂದ್ರ, ನಾಗರಾಜ್ ಬೇದ್ರೆ, ದಗ್ಗೆ ಶಿವಪ್ರಕಾಶ್, ಯಶವಂತ ಸೇರಿದಂತೆ ಮತ್ತಿತರರಿದ್ದರು.

ಸಾಂಸ್ಕೃತಿಕ ಹಬ್ಬದಂತೆ ಆಚರಣೆ: ಸಂಸದ ಗೋವಿಂದ ಕಾರಜೋಳ

ಮಾಜಿ ಉಪಮುಖ್ಯಮಂತ್ರಿ ಮತ್ತು ಸಂಸದ ಗೋವಿಂದ ಕಾರಜೋಳ ಮಾತನಾಡಿ, ಬಿ.ಎಸ್. ಯಡಿಯೂರಪ್ಪನವರ 50 ವರ್ಷಗಳ ಸಮಾಜ ಸೇವೆ, ಜೀವನ ಚರಿತ್ರೆಯ ಕಾರ್ಯಕ್ರಮವನ್ನು ಒಂದು ಸಾಂಸ್ಕೃತಿಕ ಹಬ್ಬದ ರೀತಿ ಆಚರಿಸಲು ನಿರ್ಧರಿಸಿದ್ದೇವೆ. ಮೇ 8ರಂದು ಸಂಜೆ ಯಡಿಯೂರಪ್ಪನವರ ಪುರ ಪ್ರವೇಶ ನಡೆಯಲಿದೆ. 24 ಜಾನಪದ ಕಲಾತಂಡಗಳು ಮೆರವಣಿಗೆಯಲ್ಲಿ ಭಾಗವಹಿಸಲಿವೆ ಎಂದು ಹೇಳಿದರು.

ಬಿಎಸ್‌ವೈ ಕುರಿತ 2 ಪುಸ್ತಕ ಲೋಕಾರ್ಪಣೆ

ಪುಟ ೧➜ಯಡಿಯೂರಪ್ಪ ಅವರ ಜೀವನ ಚರಿತ್ರೆಯ ಕೆಂದಾವರೆ–ಕಮಲ ಅರಳಿದ ಕಥೆ ಹಾಗೂ ಯಡಿಯೂರಪ್ಪ ಅವರ ಸುದೀರ್ಘ ಶಾಸಕತ್ವದ ಅವಧಿಯಲ್ಲಿ ವಿಧಾನ ಮಂಡಲದ ಉಭಯ ಸದನದಲ್ಲಿ ಮಾಡಿದ ಭಾಷಣಗಳ ಸಂಗ್ರಹಗಳುಳ್ಳ ಸದನ ಶಿಕಾರಿ–ಯಡಿಯೂರಪ್ಪ ಅವರ ಗುಡುಗಿನ ನುಡಿಗಳು ಎಂಬ ಎರಡೂ ಪುಸ್ತಕಗಳನ್ನು ಕೇಂದ್ರ ಗೃಹ ಸಚಿವ ಅಮಿತ್ ಅವರು ಲೋಕಾರ್ಪಣೆಗೊಳಿಸಲಿದ್ದಾರೆ. ಕೆಂದಾವರೆ–ಕಮಲ ಅರಳಿದ ಕಥೆ ಪುಸ್ತಕದಲ್ಲಿ ಯಡಿಯೂರಪ್ಪ ಅವರು ಹೇಳಿಕೊಂಡಿರುವ ವಿವರವನ್ನು ಬರಹಗಾರ ಆರ್. ರಘು (ಕೌಟಿಲ್ಯ) ನಿರೂಪಿಸಿದ್ದಾರೆ. ಅವರ ಬಾಲ್ಯದಿಂದ ಈವರೆಗಿನ ಪ್ರಮುಖ ಘಟ್ಟಗಳನ್ನು ಈ ಪುಸ್ತಕದಲ್ಲಿ ದಾಖಲಿಸಲಾಗಿದೆ. ಸದನ ಶಿಕಾರಿ–ಯಡಿಯೂರಪ್ಪ ಅವರ ಗುಡುಗಿನ ನುಡಿಗಳು ಪುಸ್ತಕ ಹೋರಾಟದ ಹಿನ್ನೆಲೆಯಿಂದ ಬಂದ ಯಡಿಯೂರಪ್ಪ ಅವರು ತಮ್ಮ ಶಾಸಕತ್ವದ ಅವಧಿಯಲ್ಲಿ ವಿರೋಧ ಪಕ್ಷದಲ್ಲಿರಲಿ ಆಡಳಿತ ಪಕ್ಷದಲ್ಲಿರಲಿ ಜನಪರ ವಿಚಾರಗಳು, ರೈತರ ಸಂಕಷ್ಟಗಳು, ನಾಡಿನ ಹಿತಾಸಕ್ತಿಯ ವಿಚಾರ ಬಂದಾಗ ಸದನದಲ್ಲೂ ಹೋರಾಟಕ್ಕಿಳಿದು ಗುಡುಗಿ ಮಾತನಾಡಿದ್ದಾರೆ. ಅಂಕಿ–ಸಂಖ್ಯೆಗಳ ಸಹಿತ ಆಧಾರಗಳನ್ನು ಇಟ್ಟುಕೊಂಡು ಮಾತನಾಡಿರುವುದೇ ಹೆಚ್ಚು. ಯಡಿಯೂರಪ್ಪ ಗುಡುಗಿದರೆ ವಿಧಾನಸೌಧ ನಡುಗುತ್ತದೆ ಎಂಬ ಮಾತು ಜನಮಾನಸದಲ್ಲಿ ಹಾಸುಹೊಕ್ಕಾಗಿದೆ. ಈ ಹಿನ್ನೆಲೆಯಲ್ಲಿ ಅವರ ಐದು ದಶಕಗಳ ಸುದೀರ್ಘ ಅವಧಿಯಲ್ಲಿ ವಿಧಾನ ಮಂಡಲದಲ್ಲಿ ಮಾತನಾಡಿರುವ ದಾಖಲೆಗಳು 15,000 ಪುಟಗಳನ್ನು ಮೀರುತ್ತವೆ ಇದನ್ನು ಪರಿಷ್ಕರಿಸಿ ಹತ್ತು ಸಂಪುಟಗಳಲ್ಲಿ ತರುವ ಯೋಚನೆಯಿದ್ದು, ಮೊದಲ ಸಂಪುಟವನ್ನು ಶನಿವಾರ ಬಿಡುಗಡೆಗೊಳಿಸಲಾಗುತ್ತಿದೆ. ಬರಹಗಾರ ಆರ್. ರಘು (ಕೌಟಿಲ್ಯ) ಅವರ ಪರಿಕಲ್ಪನೆಯಲ್ಲಿ ಮೂಡಿಬಂದಿರುವ ಈ ಪುಸ್ತಕವನ್ನು ಡಾ. ರೇವಯ್ಯ ಒಡೆಯರ್ ಸಂಪಾದಿಸಿದ್ದಾರೆ.

ರಾಮಚಂದ್ರ ರಾವ್ ಅಮಾನತು ರದ್ದು

• **ಬೆಂಗಳೂರು:** ಶಿಸ್ತು ಕ್ರಮದ ಹಿನ್ನೆಲೆಯಲ್ಲಿ ಅಮಾನತುಗೊಂಡಿದ್ದ ಹಿರಿಯ ಐಪಿಎಸ್ ಅಧಿಕಾರಿ ಡಾ. ಕೆ.ರಾಮಚಂದ್ರ ರಾವ್ ಅಮಾನತನ್ನು ರಾಜ್ಯ ಸರ್ಕಾರವು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿ ಸರ್ಕಾರ ಆದೇಶಿಸಿದೆ. ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಮಹಾನಿರ್ದೇಶಕರಾಗಿದ್ದ ರಾಮಚಂದ್ರರಾವ್ ಅವರ ವಿರುದ್ಧ ಶಿಸ್ತು ಕ್ರಮದ ವಿಚಾರಣೆ ಬಾಕಿ ಇದ್ದ ಕಾರಣ, ಅಖಿಲ ಭಾರತ ಸೇವೆಗಳ (ಶಿಸ್ತು ಮತ್ತು ಅಪೀಲು) ನಿಯಮಗಳ ಅಡಿಯಲ್ಲಿ 2026ರ ಜ.19 ರಂದು ಅಮಾನತುಗೊಳಿಸಲಾಗಿತ್ತು. ತದನಂತರ ಮಾ.18 ರಂದು ಅವರ ವಿರುದ್ಧ ಅಧಿಕೃತವಾಗಿ ಶಿಸ್ತು ಕ್ರಮದ ಪ್ರಕ್ರಿಯೆಗಳನ್ನು ಪ್ರಾರಂಭಿಸಲಾಗಿತ್ತು.

ಇದೀಗ ಅವರ ಅಮಾನತನ್ನು ರದ್ದುಗೊಳಿಸಿ ಆಡಳಿತ ಸುಧಾರಣಾ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಸಂಜಯ್ ಬಿ.ಎಸ್. ಅವರು ಆದೇಶ ಹೊರಡಿಸಿದ್ದಾರೆ.

ಮರು ನೇಮಕ ಮತ್ತು ಹೊಸ ಜವಾಬ್ದಾರಿ: ಪ್ರಸ್ತುತ ಸರ್ಕಾರವು ಅಧಿಕಾರಿಯ ಅಮಾನತನ್ನು ರದ್ದುಗೊಳಿಸಿದ್ದು, ಅವರನ್ನು ಮತ್ತೆ ಸೇವೆಗೆ ಸೇರಿಸಿಕೊಂಡಿದೆ. ಮರು ನೇಮಕಗೊಂಡ ಡಾ. ಕೆ. ರಾಮಚಂದ್ರರಾವ್ ಅವರನ್ನು ಮುಂದಿನ ಆದೇಶದವರೆಗೆ ಪೊಲೀಸ್ ಮ್ಯಾನ್ಯುವಲ್ ವಿಭಾಗದ ಮಹಾನಿರ್ದೇಶಕರನ್ನಾಗಿ (ಡಿಜಿಪಿ) ನೇಮಕ ಮಾಡಲಾಗಿದೆ.

ಈ ಪೊಲೀಸ್ ಮ್ಯಾನ್ಯುವಲ್ ಡಿಜಿಪಿ ಹುದ್ದೆಯು ಸಿಐಡಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳ ವಿಭಾಗದ ಡಿಜಿಪಿ ಹುದ್ದೆಗೆ ಸಮಾನವಾದ ಸ್ಥಾನಮಾನ ಮತ್ತು ಜವಾಬ್ದಾರಿಗಳನ್ನು ಹೊಂದಿರುತ್ತದೆ ಎಂದು ಸರ್ಕಾರದ ಆದೇಶದಲ್ಲಿ ತಿಳಿಸಲಾಗಿದೆ.

ಪ್ರಕರಣದ ಹಿನ್ನೆಲೆ: ಕಳೆದ ಕೆಲವು ದಿನಗಳಿಂದ ಡಿಜಿಪಿ ರಾಮಚಂದ್ರ ರಾವ್ ಅವರು ತಮ್ಮ ಅಧಿಕೃತ ಕಚೇರಿಯಲ್ಲಿಯೇ ಮಹಿಳೆಯೊಬ್ಬರ ಜತೆ ಇರುವ ದೃಶ್ಯಗಳು ಹರಿದಾಡುತ್ತಿದ್ದವು. ಇದು ಸಾರ್ವಜನಿಕ ವಲಯದಲ್ಲಿ ಭಾರೀ ಆಕ್ರೋಶಕ್ಕೆ ಕಾರಣವಾಗಿತ್ತು. ಒಬ್ಬ ಜವಾಬ್ದಾರಿಯುತ ಉನ್ನತ ಹುದ್ದೆಯಲ್ಲಿದ್ದುಕೊಂಡು ಇಂತಹ ಕೃತ್ಯ ಎಸಗಿರುವುದು ಸೇವಾ ನಿಯಮಗಳ ಉಲ್ಲಂಘನೆ ಎಂದು ಪರಿಗಣಿಸಿದ ಸರ್ಕಾರ, ಶಿಸ್ತು ಕ್ರಮವಾಗಿ ಅಮಾನತು ಆದೇಶ ನೀಡಿತ್ತು. ಈ ಘಟನೆಗೆ ಸಂಬಂಧಿಸಿದಂತೆ ಆಡಿಯೋ ಮತ್ತು ವಿಡಿಯೋಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಮತ್ತು ಕಾನೂನು ಕ್ರಮಕ್ಕಾಗಿ ಇಲಾಖಾ ತನಿಖೆಗೆ ಸೂಚಿಸಲಾಗಿತ್ತು.

ಕಿಡಿ ನುಡಿ

• ವಾಸುದೇವರಾವ್ ಕಕ್ಕಸೇಜಿ

◈ ಅಮೇರಿಕಾದ ಅಧ್ಯಕ್ಷ ಟ್ರಂಪ್ ಅವರನ್ನು ಕಂಡರೆ ಭಾರತದಲ್ಲಿ ಕೆಲವರಿಗೆ ಭಯ – ಪ್ರಧಾನಿ ಮೋದಿಗೆ ಸಂತೋಷ್ ಲಾಡ್ ವ್ಯಂಗ್ಯ

-ಹಾಗೆಯೇ ಭಾರತದ ಸಕಲ ಸವಲತ್ತುಗಳನ್ನು ಅನುಭವಿಸಿ ಮೆರೆಯುತ್ತಿರುವ ಇನ್ನು ಕೆಲವು ಮಹಾನ್ ನಾಯಕರಿಗೆ ಪಾಕಿಸ್ತಾನದ ಅಧ್ಯಕ್ಷರನ್ನು ಕಂಡರೆ ಪ್ರೀತಿ ಸಹಿತ ಭೀತಿ!

ದಿನ ಭವಿಷ್ಯ

ಮೇಷ ನಿಮ್ಮ ಬದುಕಲ್ಲಿ ಹೊಸ ಬೆಳವಣಿಗೆ ಉಂಟಾದೀತು. ನಿರ್ಧಾರ ಫಲ ನೀಡಲಿದೆ. ಮುಖ್ಯ ಗುರಿ ಸಾಧಿಸಲ್ಪಡಲಿದೆ. ಕೌಟುಂಬಿಕ ಸಾಮರಸ್ಯ.

ವೃಷಭ ಸರಿಯಾದ ದಿಕ್ಕಿನಲ್ಲಿ ನಿಮ್ಮ ಶ್ರಮ ವ್ಯಯಿಸಿ. ಉತ್ತಮ ಫಲ ಪಡೆಯುವಿರಿ. ವ್ಯರ್ಥ ಕಾರ್ಯ ಎಸಗಬೇಡಿ. ವಾಗ್ವಾದ ನಡೆಸಬೇಡಿ.

ಮಿಥುನ ನಿಮ್ಮ ಉದ್ದೇಶ ಈಡೇರಿಸಲು ಸೂಕ್ತ ದಿನ. ಅಡ್ಡಿ ಎದುರಾಗದು. ಹೆಚ್ಚು ಹೊಣೆಗಾರಿಕೆ ನಿಮ್ಮನ್ನು ಬಸವಳಿಸಬಹುದು. ಅನಿರೀಕ್ಷಿತ ಧನಪ್ರಾಪ್ತಿ.

ಕಟಕ ನೀರಸವಾಗಿ ದಿನ ಆರಂಭವಾದರೂ ಬಳಿಕ ಆಪ್ತರ ಭೇಟಿಯಿಂದ ಉತ್ಸಾಹ ತುಂಬಿಕೊಳ್ಳುವಿರಿ. ಕಾರ್ಯದಲ್ಲಿ ಯಶಸ್ಸು, ಧನಾಗಮ.

ಸಿಂಹ ಚಿಂತೆಯಿಲ್ಲದ ಸ್ಥಿರ ದಿನ. ಕೆಲವು ವಿಚಾರ ನಿಮಗೆ ಪೂರಕವಾಗಿ ಸಾಗುವುದು ನೆಮ್ಮದಿ ತರಲಿದೆ. ವಿರೋಧಿಗಳ ತಂತ್ರ ಫಲಿಸದು.

ಕನ್ಯಾ ವೃತ್ತಿಯಲ್ಲಿ ಕಷ್ಟ ಎದುರಿಸುವಿರಿ. ಆದರಿದು ನಿಮ್ಮ ಕೌಟುಂಬಿಕ ಬದುಕಿನ ಮೇಲೆ ಪರಿಣಾಮ ಬೀರದು. ಆಪ್ತೀಯರ ಒಡನಾಟ ಮುದ ತರಲಿದೆ.

ತುಲಾ ನೆಗೆಟಿವ್ ಚಿಂತನೆ ಮನಸ್ಸನ್ನು ಆವರಿಸಲಿದೆ. ಈ ಸ್ಥಿತಿಯಲ್ಲಿ ಯಶಸ್ಸು ಸಿಗಲಾರದು. ಮೊದಲಿಗೆ ನಿಶ್ಚಿಂತ ಮನೋಭಾವ ರೂಪಿಸಿಕೊಳ್ಳಿ.

ವೃಶ್ಚಿಕ ಕಠಿಣ ದಿನ. ದಿನವಿಡೀ ಅಶಾಂತ ಮನಸ್ಸು. ಸಂಗಾತಿ ಜತೆ ವಾಗ್ವಾದಕ್ಕೆ ಹೋಗದಿರಿ. ದೇವರ ಪ್ರಾರ್ಥನೆ ನೆಮ್ಮದಿ ತರಬಹುದು.

ಧನು ಕೆಲವಾರು ಒಳ್ಳೆಯ ಬೆಳವಣಿಗೆ ಸಂಭವಿಸಲಿದೆ. ಕೌಟುಂಬಿಕ ವಿಚಾರ ಮಾತ್ರ ಭಾವನಾತ್ಮಕ ಏರುಪೇರಿಗೆ ಕಾರಣವಾಗುವುದು. ಆರ್ಥಿಕ ಸ್ಥಿರತೆ.

ಮಕರ ಸಣ್ಣ ವಿಷಯವೊಂದು ಮನಸ್ಸಿನ ನೆಮ್ಮದಿ ಕಲಕಬಹುದು. ಅದನ್ನು ಸರಿಯಾಗಿ ನಿಭಾಯಿಸಿ. ಆಪ್ತೀಯರ ಜತೆ ಸಹನೆಯಿಂದ ವರ್ತಿಸಿ.

ಕುಂಭ ಈ ದಿನ ಅಡ್ಡಿಗಳನ್ನು ಎದುರಿಸುವಿರಿ. ಪ್ರಮುಖ ಕಾರ್ಯ ಮುಂದೂಡಿ. ಆಪ್ತರ ಜತೆ ನಿಮ್ಮ ಚಿಂತೆ ಹಂಚಿಕೊಳ್ಳಿ. ಹೆಚ್ಚುತ್ತಿರುವ ವೆಚ್ಚ ಚಿಂತೆ ತರಲಿದೆ.

ಮೀನ ವೃತ್ತಿಯಲ್ಲೂ ಖಾಸಗಿ ಬದುಕಲ್ಲೂ ಏಳಿಗೆ. ದೀರ್ಘ ಕಾಲದ ಸಮಸ್ಯೆ ಪರಿಹಾರ. ಖಾಸಗಿ ಬದುಕಲ್ಲಿ ಹೊಸ ವ್ಯಕ್ತಿ ಪ್ರವೇಶಿಸಬಹುದು.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ : 5,3,8,2

ವಿದ್ಯಾರ್ಥಿಗಳಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಕರೆ
ನಿರಂತರ ಕಲಿಕೆ ಅಗತ್ಯ

• **ಶಿವಮೊಗ್ಗ :** ಸ್ಪರ್ಧಾತ್ಮಕ ಯುಗದಲ್ಲಿ ನಿರಂತರ ಕಲಿಕೆ ಮತ್ತು ಸಾಮಾಜಿಕ ಜವಾಬ್ದಾರಿ ಬಹಳ ಮುಖ್ಯವಾಗಿದ್ದು, ಜ್ಞಾನ ಮತ್ತು ಕೌಶಲ್ಯಗಳನ್ನು ಕಾಲಕ್ಕೆ ತಕ್ಕಂತೆ ನವೀಕರಿಸಿಕೊಂಡು ಪ್ರಗತಿ ಸಾಧಿಸುತ್ತದೆ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ವಿದ್ಯಾರ್ಥಿಗಳಿಗೆ ಕರೆ ನೀಡಿದರು.



ಶಂಕರಘಟ್ಟದ ಕುವೆಂಪು ವಿಶ್ವವಿದ್ಯಾಲಯದಲ್ಲಿ ಬುಧವಾರ ಏರ್ಪಡಿಸಿದ್ದ 35ನೇ ವಾರ್ಷಿಕ ಘಟಿಕೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸೋಲುಗಳು ಜೀವನದ ಭಾಗ, ಆದರೆ ಅವುಗಳಿಂದ ಕಲಿತು ಮುಂದೆ ಸಾಗುವುದೇ ನಿಜವಾದ ಯಶಸ್ಸು ಎಂದರು.

ಇಲ್ಲಿ ಪಡೆದ ಶಿಕ್ಷಣವು ನಿಮ್ಮ ವೃತ್ತಿಜೀವನವನ್ನು ಯಶಸ್ವಿಗೊಳಿಸುವುದಲ್ಲದೆ, ಜೀವನವನ್ನು ಸಾರ್ಥಕಗೊಳಿಸಲು ಸಹಕಾರಿಯಾಗಲಿದೆ. ಜಗತ್ತು ಇಂದು ಕ್ಷಿಪ್ರ ಬದಲಾವಣೆಯ ಹಂತದಲ್ಲಿದೆ. ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆ (ಇನ್ನೋವೇಟಿವಿಟಿ) ಜೀವನದ ಪ್ರತಿಯೊಂದು ಕ್ಷೇತ್ರವನ್ನು ಪ್ರಭಾವಿಸಿದೆ. ಕೃತಕ ಬುದ್ಧಿಮತ್ತೆ (ಎಐ), ಡೇಟಾ ಸೈನ್ಸ್ ಮತ್ತು ಡಿಜಿಟಲ್ ಕ್ರಾಂತಿಯು ಹೊಸ ಅವಕಾಶಗಳ ಜೊತೆಗೆ ಹೊಸ ಸವಾಲುಗಳನ್ನೂ ತಂದೊಡ್ಡಿದೆ ಎಂದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ದೇಶವು ಇಂದು ವಿಕಸಿತ ಭಾರತ 2047ರ ಸಂಕಲ್ಪದೊಂದಿಗೆ ಹೊಸ ಯುಗದತ್ತ ಸಾಗುತ್ತಿದೆ. ಈ ಸಂಕಲ್ಪವನ್ನು ಸಾಕಾರಗೊಳಿಸುವಲ್ಲಿ ಯುವಕರ ಪಾತ್ರ ಮುಖ್ಯವಾಗಿದೆ. ಹೊಸ ಶಿಕ್ಷಣ ನೀತಿ (ಎನ್‌ಇಪಿ 2020) ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಹೆಚ್ಚು ಕೌಶಲ್ಯ ಆಧಾರಿತ ಮತ್ತು ಸಮಗ್ರವಾಗಿಸಿದೆ. ಶಿಕ್ಷಣವು ಕೇವಲ ಪದವಿ ಪಡೆಯುವ ಸಾಧನವಲ್ಲ, ಅದು ನೈತಿಕತೆ ಮತ್ತು ಸಾಮಾಜಿಕ ಜವಾಬ್ದಾರಿಯ ಅಡಿಪಾಯವಾಗಿದೆ.

ಜಾಗತಿಕ ತಾಪಮಾನ ಏರಿಕೆ ಮತ್ತು ಪರಿಸರ ಮಾಲಿನ್ಯದಂತಹ ಸವಾಲುಗಳ ಬಗ್ಗೆಯೂ ನೀವು ಗಮನಹರಿಸಬೇಕು. ಈ ನಿಟ್ಟಿನಲ್ಲಿ ಸಕಾರಾತ್ಮಕವಾಗಿ ಸ್ಪಂದಿಸಬೇಕು. ಪದವೀಧರರು ಕೇವಲ ಉದ್ಯೋಗ ಹುಡುಕುವವರಾಗದೆ, ಉದ್ಯೋಗ ಸೃಷ್ಟಿಕರ್ತರಾಗಬೇಕು. ಸ್ಟಾರ್ಟಪ್ ಸಂಸ್ಕೃತಿ ಮತ್ತು ಉದ್ಯಮಶೀಲತೆಯ ಮೂಲಕ ಸಮಾಜಕ್ಕೆ ಹೊಸ ಸಾಧ್ಯತೆಗಳನ್ನು ಸೃಷ್ಟಿಸುವಂತೆ ಕರೆ ನೀಡಿದರು.ಸಿವಿಲ್, ಮೆಕ್ಯಾನಿಕಲ್ ಮೊದಲಾದ ಸಂಪ್ರದಾಯಿಕ ಇಂಜಿನಿಯರಿಂಗ್ ಕೋರ್ಸ್‌ಗಳ ನಿರ್ಲಕ್ಷ್ಯ ಮಾಡಲಾಗಿದೆ. ಹೀಗಾಗಿ ಈ ಕೋರ್ಸ್‌ಗಳನ್ನು ಮಾಡಿದವರಿಗೆ ಉತ್ತೇಜನ ನೀಡಲು ಸರ್ಕಾರ ಚಿಂತನೆ ನಡೆಸಿದ್ದು, ಪಠ್ಯ ಬದಲಾವಣೆಯಂತಹ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು. ಬಿಎ ಪದವಿ ದಾಖಲಾಗುವ ಸಂಖ್ಯೆ ಕಡಿಮೆಯಾಗುತ್ತಿದೆ. 70 ಸಾವಿರ ಸೀಟು ಮುಚ್ಚುವ ಸ್ಥಿತಿ ಬಂದಿದೆ. 19 ಸಾವಿರ ಸೀಟುಗಳು ಹೊಸದಾಗಿ ಆರಂಭಿಸಲಾಗುತ್ತಿದ್ದು ರಿಟೈಲ್, ಇ ಕಾಮರ್ಸ್ ಸೇರಿದಂತೆ ನಾಲ್ಕು ವಿಭಾಗಗಳಲ್ಲಿ 3840 ಹೊಸ ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗುತ್ತಿದೆ. ಹಲವಾರು ಹೊಸ ಪ್ರಯೋಗ ಮಾಡುತ್ತಿದ್ದು, ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ಸಹಯೋಗದಲ್ಲಿ ಕೌಶಲ್ಯಕ್ಕೆ ಒತ್ತು ನೀಡಲಾಗುತ್ತಿದೆ. 40 ಪದವಿ ಕಾಲೇಜುಗಳನ್ನು ಮಾದರಿ ಕಾಲೇಜಾಗಿಸಲು ಲ್ಯಾಬ್ ಸ್ಥಾಪನೆ ಮತ್ತು ತರಬೇತಿ ನೀಡಲಾಗುತ್ತದೆ ಎಂದರು.ವಿವಿ ಕುಲಪತಿ ಪ್ರೊ. ಶರತ್ ಅನಂತಮೂರ್ತಿ, ಕುಲಸಚಿವರಾದ ಹೇಮಂತ್ ಎನ್, ಪ್ರೊ. ತಿಮ್ಮರಾಯಪ್ಪ ಹಾಗೂ ಸಿಂಡಿಕೇಟ್ ಸದಸ್ಯರು ಇದ್ದರು.

ಸಂಶೋಧನೆಗೆ ಒತ್ತು ನೀಡಿ

ಕುವೆಂಪು ವಿವಿ ಶೈಕ್ಷಣಿಕವಾಗಿ ಸಾಕಷ್ಟು ಸಾಧನೆ ಮಾಡಿದ್ದರೂ ಹಲವು ಸಮಸ್ಯೆಗಳಿಂದ ಬಳಲುತ್ತಿದೆ. ಗುಣಮಟ್ಟದ ಶಿಕ್ಷಣದೊಂದಿಗೆ ಸಂಶೋಧನೆಗೆ ಒತ್ತು ನೀಡಬೇಕು. ಅಭಿವೃದ್ಧಿ ಹೊಂದುವಲ್ಲಿನ ಸವಾಲುಗಳನ್ನು ದಿಟ್ಟವಾಗಿ ಎದುರಿಸಬೇಕಿದೆ ಎಂದರು. ಎಂಜಿನಿಯರಿಂಗ್ ಪದವಿ ಪಡೆಯುತ್ತಿರುವವರಲ್ಲಿ ಕೇವಲ ಶೇ.17ರಷ್ಟು ಮಾತ್ರ ಉದ್ಯೋಗ ಲಭಿಸುತ್ತಿದೆ. ದೂರದೃಷ್ಟಿ ಕೊರತೆ ಮತ್ತು ಕೇವಲ ಕಂಪ್ಯೂಟರ್ ಸಂಬಂಧಿ ಕೋರ್ಸ್ ಬೇಕೆಂಬ ಆಸೆಯಿಂದಾಗಿ ಸೀಟ್‌ಗಳನ್ನು ಹೆಚ್ಚಿಸಿಕೊಳ್ಳಲಾಗಿದೆ. ಹೀಗಾಗಿ ಕಂಪ್ಯೂಟರ್ ಸೀಟ್‌ಗಳ ನಿಯಂತ್ರಣಕ್ಕೆ ಕ್ರಮಕೈಗೊಳ್ಳಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ತಿಳಿಸಿದರು.

ಮಗನನ್ನು ಪತ್ತೆ ಹಚ್ಚಿದ ನ್ಯಾಟ್‌ಗ್ರೀಡ್ ತಂತ್ರಾಂಶ

ಪುಟ ೧➜ನನಗೆ ಸಾಲ ಬಹಳ ಆಗಿದ್ದರಿಂದ ನಾನು ಮನೆ ಬಿಟ್ಟು ಬೇರೆ ಕಡೆಗೆ ದುಡಿಯಲು ಹೋಗುತ್ತಿದ್ದೇನೆ. 2 ವರ್ಷ ಬಿಟ್ಟು ಬರುತ್ತೇನೆ. ನನ್ನನ್ನು ಹುಡುಕಾಡಬೇಡಿ ಎಂದು ಪತ್ರ ಬರೆದು ಮುಸ್ತಫಾ ಅಪ್ಪಾಸಾಬ ಮನೆ ಬಿಟ್ಟು ಹೋಗಿದ್ದ.

ಈ ಕುರಿತು ಸಂಕೇಶ್ವರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ: 109/2023 ಕಲಂ: ಅಡಿ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿತ್ತು. ಕಾಣೆಯಾದ ಮುಸ್ತಫಾ ಅಪ್ಪಾಸಾಹೇಬ ಅಲಿಯಾಸ್ ಅಪ್ಪಾಸಾಬ ಜಮಾದಾರ ಪತ್ತೆ ಮಾಡಲು ನಾನಾ ರೀತಿಯ ಪ್ರಯತ್ನ ಮಾಡಿದಾಗ ಕೊನೆಗೆ ಕಾಣೆಯಾದ ವ್ಯಕ್ತಿಯ ಭಾವಚಿತ್ರವನ್ನು ನ್ಯಾಟ್ ಗ್ರೀಡ್ ತಂತ್ರಾಂಶದಲ್ಲಿ ಅಪ್ಲೋಡ್ ಮಾಡಿ ಕಾಣೆಯಾದ ವ್ಯಕ್ತಿಯ ಮೊಬೈಲ್ ನಂಬರ್ ಪತ್ತೆ ಮಾಡಿ ಟವರ್ ಲೋಕೇಶನ್ ಸಹಾಯದಿಂದ ವ್ಯಕ್ತಿಯು ಗೋವಾದ ಮಾಂಡ್ರಮನಲ್ಲಿ ಪತ್ತೆಯಾಗಿದ್ದಾನೆ.ಪತ್ತೆಯಾದ ವ್ಯಕ್ತಿ ವಿವರಗಳನ್ನು ವಿಚಾರಿಸಿದ ಪೊಲೀಸರು ತಾಯಿಯ ಜತೆ ಯುವಕನನ್ನು ಕಳುಹಿಸಿದ್ದಾರೆ.

ನ್ಯಾಟ್ ಗ್ರೀಡ್ ತಂತ್ರಾಂಶ ಎಂದರೇನು? : ನ್ಯಾಟ್ ಗ್ರೀಡ್ ಎಂಬುದು ಭಾರತದ ಭದ್ರತಾ ವ್ಯವಸ್ಥೆಯನ್ನು ಬಲಪಡಿಸಲು ನಿರ್ಮಿಸಲಾದ ಅತ್ಯಾಧುನಿಕ ಗುಪ್ತಚರ ಮಾಹಿತಿ ಜಾಲವಾಗಿದೆ. ಇದು ತಂತ್ರಾಂಶಕ್ಕಿಂತ ಹೆಚ್ಚಾಗಿ, ವಿವಿಧ ಸರ್ಕಾರಿ ಏಜೆನ್ಸಿಗಳ ದತ್ತಾಂಶಗಳನ್ನು ಒಂದೆಡೆ ಸೇರಿಸುವ ಒಂದು ಬೃಹತ್ ಮಾಹಿತಿ ತಂತ್ರಜ್ಞಾನ ವ್ಯವಸ್ಥೆ ಆಗಿದೆ ಇದರ ಅಡಿಯಲ್ಲಿ ಅಲವು ತಂತ್ರಾಂಶಗಳು ಕೆಲಸ ಮಾಡುತ್ತವೆ.

ನ್ಯಾಟ್ ಗ್ರೀಡ್ ಎಂದರೆ ಭಯೋತ್ಪಾದನೆ ವಿರೋಧಿ ಚಟುವಟಿಕೆಗಳನ್ನು ತಡೆಯಲು ಮತ್ತು ದೇಶದ ಭದ್ರತೆಯನ್ನು ಹೆಚ್ಚಿಸಲು ವಿವಿಧ ದತ್ತಾಂಶ ಮೂಲಗಳನ್ನು ಸಂಪರ್ಕಿಸಲಾಗುತ್ತದೆ.

ಇದು ಬ್ಯಾಂಕಿಂಗ್, ರೈಲ್ವೆ, ವಿಮಾನಯಾನ, ಟೆಲಿಕಾಂ, ವಲಸೆ, ಮತ್ತು ಕ್ರೆಡಿಟ್ ಕಾರ್ಡ್ ವಹಿವಾಟುಗಳಂತಹ ಸುಮಾರು 10ಕ್ಕೂ ಹೆಚ್ಚು ವಿವಿಧ ವಲಯಗಳ ಮಾಹಿತಿಯನ್ನು ಏಕೀಕರಿಸುವ ಒಂದು ವ್ಯವಸ್ಥೆಯಾಗಿದೆ. ನ್ಯಾಟ್ ಗ್ರೀಡ್ ಒಂದು ಸಂಕೀರ್ಣ ಜಾಲವಾಗಿದ್ದು, ಇದು ವಿವಿಧ ಏಜೆನ್ಸಿಗಳ ದತ್ತಾಂಶಗಳನ್ನು (ಉದಾಹರಣೆಗೆ: ಪಾಸ್ಪೋರ್ಟ್ ಕಚೇರಿ, ಬ್ಯಾಂಕ್‌ಗಳು, ತೆರಿಗೆ ಇಲಾಖೆ) ಒಂದೇ ಸುರಕ್ಷಿತ ವೇದಿಕೆಗೆ ತರುತ್ತದೆ.

ಕಾನೂನಿನ ಚೌಕಟ್ಟಿನಲ್ಲೇ ಕರ್ತವ್ಯ: ಸ್ಪೀಕರ್

• **ಮಂಗಳೂರು:** ಶೃಂಗೇರಿ ವಿಧಾನಸಭಾ ಕ್ಷೇತ್ರದ ಶಾಸಕನಾಗಿ ಜೀವರಾಜ್ ಅವರ ಪ್ರಮಾಣವಚನ ಸ್ವೀಕಾರಕ್ಕೆ ನನ್ನಿಂದ ಯಾವುದೇ ವಿಳಂಬವಾಗಿಲ್ಲ, ಸಂವಿಧಾನ ಮತ್ತು ಕಾನೂನಿನ ಚೌಕಟ್ಟಿನಲ್ಲೇ ಕಾರ್ಯನಿರ್ವಹಿಸಬೇಕಾದ ಜವಾಬ್ದಾರಿ ನನ್ನ ಮೇಲಿದ್ದು, ಅದರಂತೆ ನಡೆದುಕೊಂಡಿದ್ದೇನೆ ಎಂದು ವಿಧಾನಸ್ಪೀಕರ್ ಯು.ಟಿ.ಖಾದರ್ ಸ್ಪಷ್ಟಪಡಿಸಿದ್ದಾರೆ. ಮಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಜಾಪ್ರಭುತ್ವ ಮತ್ತು ಸಂಸದೀಯ ವ್ಯವಸ್ಥೆಯು ವಿಶ್ವಾಸದ ಮೇಲೆ ನಡೆಯಬೇಕು. ವಿಶ್ವಾಸವಿಲ್ಲದಿದ್ದರೆ ವ್ಯವಸ್ಥೆ ಬಲಿಷ್ಠವಾಗಲು ಸಾಧ್ಯವಿಲ್ಲ ಎಂದರು.ಜೀವರಾಜ್ ಅವರು ಮಂಗಳವಾರ ಪೂರ್ವಾಹ್ನ 11 ಗಂಟೆಗೆ ಅರ್ಜಿ ನೀಡಿದ್ದಾರೆ. ನಿಯಮಾವಳಿ ಪ್ರಕಾರ ಅಭಿಪ್ರಾಯ ಪಡೆದು ಸಮಯ ನೀಡಲಾಗುತ್ತದೆ. ಅಷ್ಟರಲ್ಲೇ ವಿಳಂಬವಾಗಿದೆ ಎನ್ನುವುದು ಸರಿಯಲ್ಲ, ಸಂವಿಧಾನ ಮತ್ತು ಕಾನೂನಿನಡಿ ಅವಕಾಶ ಕೊಡಲೇಬೇಕು. ಇದೊಂದು ವಿಶಿಷ್ಟ ಸನ್ನಿವೇಶ. ವಿಳಂಬ ಮಾಡುವ ಉದ್ದೇಶವೇ ಇಲ್ಲ, ಆದರೆ ಸಂವಿಧಾನ ಪೀಠದ ಬಗ್ಗೆ ಸಂಶಯ, ತಪ್ಪು ಅಭಿಪ್ರಾಯ ಬರುವ ರೀತಿಯಲ್ಲಿ ಚರ್ಚಿಸುವುದು, ಹೇಳಿಕೆ ನೀಡುವುದು ಸರಿಯಲ್ಲ ಎಂದರು.

ಬೆಂಗ್ಳೂರಲ್ಲಿ ಹದಿನೈದು ಸಾವಿರ ಮಂದಿ ನಾಪತ್ತೆ!

ಪುಟ ೧➜ಇವರ ಪತ್ತೆ ಕಾರ್ಯ ಸವಾಲಾಗಿ ಪರಿಣಮಿಸಿದೆ.

ಪತ್ತೆ ಹಚ್ಚುವಿಕೆಯಲ್ಲಿ ಪೊಲೀಸರ ಕಾರ್ಯವೈಖರಿ: ನಾಪತ್ತೆ ಪ್ರಕರಣಗಳನ್ನು ತಂತ್ರಜ್ಞಾನ ಸಹಾಯದಿಂದ ಪತ್ತೆ ಹಚ್ಚುವಲ್ಲಿ ಪೊಲೀಸ್ ಇಲಾಖೆ ಚುರುಕಾಗಿ ಕಾರ್ಯನಿರ್ವಹಿಸುತ್ತಿದೆ. 2024ರಲ್ಲಿ ನಾಪತ್ತೆಯಾದ 6,672 ಪ್ರಕರಣಗಳ ಪೈಕಿ 6,275 ಜನರನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ, ಪ್ರತಿ ವರ್ಷವೂ ಪತ್ತೆಯಾಗದವರ ಸಂಖ್ಯೆ ಕೂಡ ಏರುತ್ತಿರುವುದು ಆತಂಕ ಮೂಡಿಸಿದೆ. 2024ರಲ್ಲಿ 397 ಜನ ಪತ್ತೆಯಾಗದೆ ಉಳಿದಿದ್ದರೆ, 2025ರಲ್ಲಿ ಈ ಸಂಖ್ಯೆ 432ಕ್ಕೆ ಏರಿದೆ. ಈ ವರ್ಷದ ಮೊದಲ ನಾಲ್ಕು ತಿಂಗಳಲ್ಲೇ ಇನ್ನೂ 590 ಜನರ ಸುಳಿವು ಸಿಗಬೇಕಿದೆ.

ಮಾನವ ಕಳ್ಳಸಾಗಣೆ ಜಾಲಕ್ಕೆ ಮಕ್ಕಳ ಮಾರಾಟ?

ಚಿಕ್ಕ ಮಕ್ಕಳ ನಾಪತ್ತೆಯ ಹಿಂದೆ ವ್ಯವಸ್ಥಿತ ಭಿಕ್ಷಾಟನೆ ಮಾಫಿಯಾ ಮತ್ತು ಬಾಲಕಾರ್ಮಿಕ ಪದ್ಧತಿಯ ಕರಾಳ ಹಸ್ತವಿರುವ ಸಂಶಯವಿದ್ದು, ಹೆಣ್ಣುಮಕ್ಕಳನ್ನು ಗುರಿಯಾಗಿಸಿಕೊಂಡು ಅವರನ್ನು ವೇಶ್ಯಾವಾಟಿಕೆ ಜಾಲಕ್ಕೆ ತಳ್ಳುವ ದಂಧೆಕೋರರು ಸಕ್ರಿಯರಾಗಿದ್ದಾರೆ. ಪ್ರೀತಿ-ಪ್ರೇಮದ ಹೆಸರಿನಲ್ಲಿ ದಾರಿ ತಪ್ಪಿಸಿ ಅನ್ಯ ರಾಜ್ಯಗಳಿಗೆ ಸಾಗಿಸುವ ಕಳ್ಳಸಾಗಾಣಿಕೆ ಜಾಲ ಭೇದಿಸಲು ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂಬ ಮಾತುಗಳು ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿವೆ.

2024	ಪ್ರಕರಣಗಳು	ಪತ್ತೆಯಾದವು	ಪತ್ತೆಯಾಗಿಲ್ಲ
ಬಾಲಕ	216	211	05
ಬಾಲಕಿ	245	238	07
ಪುರುಷ	2681	2382	299
ಮಹಿಳೆ	3530	3444	86
ಒಟ್ಟು	6672	6275	397
2025	ಪ್ರಕರಣಗಳು	ಪತ್ತೆಯಾದವು	ಪತ್ತೆಯಾಗಿಲ್ಲ
ಬಾಲಕ	205	195	10
ಬಾಲಕಿ	248	237	11
ಪುರುಷ	2344	2069	275
ಮಹಿಳೆ	3661	3525	136
ಒಟ್ಟು	6458	6026	432
2026 (ಏ. ಅಂತ್ಯಕ್ಕೆ)	ಪ್ರಕರಣಗಳು	ಪತ್ತೆಯಾದವು	ಪತ್ತೆಯಾಗಿಲ್ಲ
ಬಾಲಕ	74	48	26
ಬಾಲಕಿ	72	46	26
ಪುರುಷ	776	537	239
ಮಹಿಳೆ	1239	940	299
ಒಟ್ಟು	2161	1571	590



ಪ್ರೀತಿ-ಪ್ರೇಮದ ಹೆಸರಿನಲ್ಲಿ ಮನೆ ಬಿಟ್ಟು ಹೋದವರು ನಂತರದ ದಿನಗಳಲ್ಲಿ ಮರಳಿ ಬಂದಾಗ ಪೊಲೀಸರಿಗೆ ಅಥವಾ ಪೊಲೀಸ್ ಠಾಣೆಗೆ ಮಾಹಿತಿ ನೀಡುವುದಿಲ್ಲ. ಇಂತಹ ಪ್ರಕರಣಗಳು ಇತ್ತೀಚೆಗೆ ಹೆಚ್ಚಾಗುತ್ತಿವೆ. ನಾಪತ್ತೆ ಪ್ರಕರಣಗಳನ್ನು ಪತ್ತೆಹಚ್ಚಲು ವಿಶೇಷ ತಂಡ ರಚಿಸಲಾಗಿದೆ. ಈ ತಂಡದ ಜತೆಗೆ ಪ್ರತಿ ವಾರ ಪ್ರಗತಿ ಪರಿಶೀಲನಾ ಸಭೆ ನಡೆಸಲಾಗುತ್ತಿದೆ.

■ **ಸೀಮಂತ್ ಕುಮಾರ್ ಸಿಂಗ್,** ನಗರ ಪೊಲೀಸ್ ಆಯುಕ್ತ

ಶೃಂಗೇರಿ ಶಾರದೆ ಹೆಸರಲ್ಲಿ ಪ್ರಮಾಣ

ಪುಟ ೧➜**ಕೋರ್ಟ್ ತಡೆ ನೀಡಿದರೆ ಸ್ಥಾನ ರದ್ದು-ಖಾದರ್:** ಸುದ್ದಿಗಾರರೊಂದಿಗೆ ಮಾತನಾಡಿದ ಯು.ಟಿ. ಖಾದರ್, ಚುನಾವಣಾ ಆಯೋಗ ಪ್ರಮಾಣಪತ್ರ ಕೊಟ್ಟ ಬಳಿಕ ಅವರಿಗೆ ಪ್ರಮಾಣವಚನ ಬೋಧಿಸಬೇಕು. ಹಾಗಾಗಿ, ಪ್ರಮಾಣವಚನ ಬೋಧಿಸಿದ್ದೇನೆ. ಒಂದು ವೇಳೆ ನ್ಯಾಯಾಲಯ ಫಲಿತಾಂಶಕ್ಕೆ ತಡೆಯಾಜ್ಞೆ ನೀಡಿದರೆ, ಜೀವರಾಜ್ ಅವರ ಶಾಸಕ ಸ್ಥಾನ ರದ್ದಾಗಲಿದೆ. ಆಗ ರಾಜೇಗೌಡ ಅವರಿಗೆ ಪ್ರಮಾಣವಚನ ಬೋಧಿಸಬಹುದು. ಕಾನೂನು ಇರುವುದೇ ಹೀಗೆ; ಕಾನೂನು ತಜ್ಞರೊಂದಿಗೆ ನಾನು ಮಾತಾಡಿದ್ದೇನೆ ಎಂದು ವಿವರಿಸಿದರು. ಪ್ರಮಾಣವಚನ ವಿಳಂಬದ ಕುರಿತಾಗಿ ಪ್ರತಿಕ್ರಿಯೆ ನೀಡಿ, ಎಲ್ಲಿಯೂ ತಡವಾಗಿಲ್ಲ, ಸೋಮವಾರ ಬೆಳಗ್ಗೆ ಚುನಾವಣಾ ಆಯೋಗ ಆದೇಶಿಸಿದೆ. ಮಂಗಳವಾರ ಬೆಳಗ್ಗೆ ನಮ್ಮ ಕಚೇರಿಗೆ ಅರ್ಜಿ ಕೊಟ್ಟಿದ್ದಾರೆ. ಆದರೆ, ನಾನು ಊರಲ್ಲಿದ್ದೆ, ಬೇರೆ ಬೇರೆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದೆ. ನಮ್ಮ ಕಚೇರಿಗೆ ಅರ್ಜಿ ಕೊಟ್ಟು ರಾಜ್ಯಪಾಲರನ್ನು ಭೇಟಿಯಾಗಿದ್ದಾರೆ. ನಾನು ಬೇರೆ ಬೇರೆ ಕೆಲಸದಲ್ಲಿದ್ದೆ, ಸಂವಿಧಾನಬದ್ಧವಾಗಿ ನಾನು ನನ್ನ ಕೆಲಸ ಮಾಡಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಕೋರ್ಟ್‌ಗೆ ಮೊರೆ: ಸಿಎಂ

ಪುಟ ೧➜ಅಂದು ಫಲಿತಾಂಶ ಬರುವಾಗ ಬಿಜೆಪಿ ಸರ್ಕಾರ ಇತ್ತು. ಅಂಚೆ ಮತ ಪತ್ರಗಳನ್ನು ಎಲ್ಲಾ 12 ಮಂದಿ ಏಜೆಂಟರಿಗೆ ತೋರಿಸಿ,



ಅವುಗಳನ್ನು ಸಿಂಧುಗೊಳಿಸಲಾಗಿತ್ತು. ಆದರೆ ಈಗ ಆ ಮತಪತ್ರಗಳು ಹೇಗೆ ಅಸಿಂಧು ಆಗುತ್ತವೆ ಎಂದು ಕಿಡಿಕಾರಿದರು. ಚುನಾವಣಾ ಸಿಬ್ಬಂದಿ ಅಭ್ಯರ್ಥಿ ಜೀವರಾಜ್ ಜತೆ ಸೇರಿ ಅಂಚೆ ಮತ ತಿದ್ದಿದ್ದಾರೆ.

ಫಲಿತಾಂಶದ ದಿನ ಮತಪತ್ರದಲ್ಲಿ ಇಲ್ಲದ ಗೆರೆ ಈಗ ಹೇಗೆ ಬಂತು ಎಂದು ಪ್ರಶ್ನಿಸಿದರು. ಈ ವಿಚಾರದಲ್ಲಿ ನಾವು ಕೋರ್ಟ್ ಮೊರೆ ಹೋಗುತ್ತೇವೆ ಎಂದು ಹೇಳಿದರು. ಎರಡು ಕ್ಷೇತ್ರಗಳ ಚುನಾವಣೆ ಮುಗಿದಿರುವ ಕಾರಣ ಸ್ಥಳೀಯ ಸಂಸ್ಥೆಗಳಿಗೆ ತಕ್ಷಣವೇ ಚುನಾವಣೆ ನಡೆಸುತ್ತೇವೆ ಎಂದು ತಿಳಿಸಿದರು.

ಪ್ರಮಾಣವಚನಕ್ಕೆ ಅವಕಾಶ ನೀಡುತ್ತೇವೆ. ಎರಡು ದಿನ ಬಿಟ್ಟು ಭೇಟಿ ಮಾಡಲಾಗುವುದು ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು ನಮಗೆ ತಿಳಿಸಿದ್ದಿದ್ದರೆ ನಾವು ರಾಜ್ಯಪಾಲರ ಬಳಿಗೆ ಹೋಗುತ್ತಿರಲಿಲ್ಲ. ವಿಧಾನಸಭಾಧ್ಯಕ್ಷರು ಬೆಂಗಳೂರಿನಲ್ಲಿ ಲಭ್ಯವಿಲ್ಲದ ಕಾರಣ ಭೇಟಿ ಮಾಡಲು ಆಗಲಿಲ್ಲ,

■ **ಡಿ.ಎನ್. ಜೀವರಾಜ್,** ಶೃಂಗೇರಿ ಶಾಸಕ

ಒಂದು ಬಾರಿ ರಾಜ್ಯಪತ್ರದಲ್ಲಿ ಹೆಸರು ಪ್ರಕಟವಾದ ನಂತರ ಹಾಗೂ ಚುನಾವಣಾ ಆಯೋಗ ಪ್ರಮಾಣಪತ್ರ ನೀಡಿದ ಬಳಿಕ ಪ್ರಮಾಣವಚನ ಬೋಧಿಸಲೇಬೇಕು. ರಾಜ್ಯಪಾಲರು ಅಥವಾ ಅವರು ಸೂಚಿಸಿದ ವ್ಯಕ್ತಿ ಪ್ರಮಾಣವಚನ ಬೋಧಿಸಬಹುದು. ಕೊನೆ ಹಂತದಲ್ಲಿ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರೇ ಫಲಿತಾಂಶವನ್ನು ಒಪ್ಪಿಕೊಂಡು ಪ್ರಮಾಣವಚನ ಬೋಧಿಸಿದ್ದು ಸಂತಸ ತಂದಿದೆ.

■ **ಆರ್. ಅಶೋಕ,** ವಿಧಾನಸಭಾ ಪ್ರತಿಪಕ್ಷ ನಾಯಕ

ಸರ್ಕಾರ ರಚನೆಗೆ ಹಕ್ಕು ಮಂಡಿಸಿದ ವಿಜಯ್

ಪುಟ ೧➜ **ಬೆಂಬಲ ನಿರಾಕರಿಸಿದ ವಿಸಿಕೆ:** ಡಿಎಂಕೆ ಮೈತ್ರಿ ಭಾಗವಾದ ವಿಸಿಕೆ ಪಕ್ಷವು ಟಿವಿಕೆಗೆ ಬೆಂಬಲ ನೀಡಬೇಕೇ ಎಂಬುದರ ಕುರಿತು ಬುಧವಾರವಿಡೀ ಚರ್ಚಿಸಿ ಸಂಜೆ ವೇಳೆಗೆ ಟಿವಿಕೆಗೆ ಬೆಂಬಲ ನೀಡುವುದಿಲ್ಲ ಎಂದು ಘೋಷಿಸಿದೆ. ಇದಕ್ಕು ಮುನ್ನ ವಿಸಿಕೆ ಮುಖ್ಯಸ್ಥ ತೋಲ್ ತಿರುಮಾವಳವನ್ ಅಧ್ಯಕ್ಷತೆಯಲ್ಲಿ ಗುರುವಾರ ಸಭೆ ನಡೆಸಿ ತೀರ್ಮಾನಿಸಲಾಗುವುದು ಎನ್ನಲಾಗಿತ್ತು. ವಿಜಯ್ ನಮ್ಮ ಬೆಂಬಲ ಕೇಳಿದ್ದಾರೆ. ಪಕ್ಷದ ಹಿರಿಯ ನಾಯಕರ ಅಭಿಪ್ರಾಯ ಪಡೆದು ನಿರ್ಧಾರ ಕೈಗೊಳ್ಳುತ್ತೇವೆ ಎಂದು ಅವರು ಹೇಳಿದ್ದರು.

234 ಸದಸ್ಯರ ತಮಿಳುನಾಡು ವಿಧಾನಸಭೆಯಲ್ಲಿ ಟಿವಿಕೆ 108 ಸ್ಥಾನಗಳನ್ನು ಗೆದ್ದಿದೆ. ಸರ್ಕಾರ ರಚನೆಗೆ 118 ಸ್ಥಾನಗಳ ಬಹುಮತ ಅಗತ್ಯವಿದೆ. ಪಕ್ಷ ಮೂಲಗಳ ಪ್ರಕಾರ, ವಿಜಯ್ ಅವರು ಮೇ 7ರಂದು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆ ಇದೆ. ಇತ್ತೀಚಿನ ಚುನಾವಣೆಯಲ್ಲಿ ಡಿಎಂಕೆ 59, ಎಐಎಡಿಎಂಕೆ 47, ಕಾಂಗ್ರೆಸ್ 5, ಪಿಎಂಕೆ 4, ಐಯುಎಂಎಲ್ 2, ಸಿಪಿಐ 2, ವಿಸಿಕೆ 2, ಸಿಪಿಐ(ಎಂ) 2 ಸ್ಥಾನಗಳನ್ನು ಪಡೆದಿವೆ. ಬಿಜೆಪಿ, ಡಿಎಂಡಿಕೆ ಮತ್ತು ಎಎಂಎಂಕೆ ತಲಾ ಒಂದು ಸ್ಥಾನ ಗೆದ್ದಿವೆ.

ಸರ್ಕಾರ ರಚನೆಗೆ ಡಿಎಂಕೆ, ಎಐಎಡಿಎಂಕೆ ಮಾತುಕತೆ!

ಪುಟ ೧➜ದಶಕಗಳಿಂದಲೂ ಪ್ರತಿಸ್ಪರ್ಧಿಗಳಾಗಿರುವ ಉಭಯ ಪಕ್ಷಗಳ ನಡುವೆ ಇಂತಹ ಚರ್ಚೆಗಳು ನಡೆಯುತ್ತಿರುವುದು ಅಪರೂಪದ ಬೆಳವಣಿಗೆಯಾಗಿದೆ.ಎಐಎಡಿಎಂಕೆ ಮೂಲಗಳು ಮಾತುಕತೆ ನಡೆದಿರುವುದನ್ನು ದೃಢಪಡಿಸಿದ್ದರೂ, ಯಾವುದೇ ಅಧಿಕೃತ ಒಪ್ಪಂದದ ಬಗ್ಗೆ ಇನ್ನೂ ಸ್ಪಷ್ಟನೆ ನೀಡಲಾಗಿಲ್ಲ, ಆದರೆ, ತಮಿಳುನಾಡಿನ ರಾಜಕೀಯದಲ್ಲಿ ಅಚ್ಚರಿಯ ತಿರುವಾಗಬಹುದಾದ ಈ ಒಕ್ಕೂಟದಲ್ಲಿ ಡಿಎಂಕೆ ಸೇರಲು ಸಿದ್ಧವಿದೆಯೇ ಎಂಬುದು ಅಸ್ಪಷ್ಟವಾಗಿದೆ.

ಬೆನ್ನಿಗೆ ಇರಿದ ಕಾಂಗ್ರೆಸ್: ಡಿಎಂಕೆ ಟೀಕಾಪ್ರಹಾರ

ಕಾಂಗ್ರೆಸ್ ಪಕ್ಷದ ಈ ನಿರ್ಧಾರವನ್ನು ಡಿಎಂಕೆ 'ಬೆನ್ನಿಗೆ ಇರಿದ ಕೆಲಸ' ಎಂದು ಬಣ್ಣಿಸಿದೆ. ಕಾಂಗ್ರೆಸ್ ಮತ್ತು ಡಿಎಂಕೆ ಪಾಲುದಾರಿಕೆ, 1971ರಿಂದ ಆರಂಭವಾಗಿತ್ತು. 2004 ರಿಂದ 2013 ರವರೆಗೆ ಯುಪಿಎ ಸರ್ಕಾರದ ಅವಧಿಯಲ್ಲೂ ಮುಂದುವರಿದಿತ್ತು. ಇತ್ತೀಚೆಗೆ 2016ರಲ್ಲಿ ಕಾಂಗ್ರೆಸ್ ಮತ್ತೆ ಡಿಎಂಕೆ ಜತೆ ಮೈತ್ರಿ ಮಾಡಿಕೊಂಡಿತ್ತು.

ಮೇ 9ಕ್ಕೆ ಸಿಎಂ ದಿಲ್ಲಿಗೆ

ಪುಟ ೧➜ರಾಜ್ಯದ ವಿದ್ಯಮಾನಗಳನ್ನು ಗಮನಿಸುತ್ತಿರುವ ಕಾಂಗ್ರೆಸ್ ಹೈಕಮಾಂಡ್ ಕೂಡ ಸೂಕ್ತ ನಿರ್ಧಾರ ಬಂದಿದೆ ಎಂದು ಹೇಳಲಾಗುತ್ತಿದೆ.

ಯಾವಾಗ ಭೇಟಿ?: ಪಂಚ ರಾಜ್ಯಗಳ ಚುನಾವಣೆ ಪೈಕಿ ಕಾಂಗ್ರೆಸ್‌ಗೆ ಕೇರಳದಲ್ಲಿ ಗೆಲುವು ಬಿಟ್ಟರೆ, ಉಳಿದ ರಾಜ್ಯಗಳಲ್ಲಿ ಪಕ್ಷದ ಯಶಸ್ಸು ನಿರೀಕ್ಷಿತ ಮಟ್ಟದಲ್ಲಿ ಬಂದಿಲ್ಲ, ತಮಿಳುನಾಡಿನಲ್ಲಿ ಅಚ್ಚರಿಯ ಫಲಿತಾಂಶ ಬಂದಿರುವುದು ಮತ್ತು ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿರುವ ಬಗ್ಗೆ ದಿಲ್ಲಿ ಮಟ್ಟದಲ್ಲಿ ಚರ್ಚೆ ನಡೆಯುತ್ತಿದೆ. ಕೇರಳದಲ್ಲಿ ಸಿಎಂ ಆಯ್ಕೆ ಬಗ್ಗೆ ಹಲವು ಸುತ್ತಿನ ಮಾತುಕತೆ ನಡೆಯುತ್ತಿರುವುದರಿಂದ ರಾಹುಲ್ ಗಾಂಧಿ ಸಮಯ ನೀಡಿದ ನಂತರವೇ ದಿಲ್ಲಿ ಭೇಟಿ ದಿನಾಂಕ ಅಂತಿಮಗೊಳ್ಳಲಿದೆ.

ಹೈಕಮಾಂಡ್ ಹೇಳಿದಂತೆ ಕೇಳುವೆ: ಸಿದ್ದರಾಮಯ್ಯ

ಪುಟ ೧➜ಕೊಟ್ಟರೆ ಹೋಗಿ ಸಚಿವ ಸಂಪುಟ ಪುನರ್ ರಚನೆ ಬಗ್ಗೆ ಚರ್ಚೆ ಮಾಡುತ್ತೇನೆ ಎಂದು ತಿಳಿಸಿದರು. ರಾಹುಲ್ ಗಾಂಧಿಯವರ ಅಪಾಯಿಂಟ್ ಮೆಂಟ್ ಫಿಕ್ಸ್ ಆದ ಮೇಲೆ ಸಂಪುಟ ಪುನಾರಚನೆಯಾ? ಸಂಪುಟ ವಿಸ್ತರಣೆಯಾ ಯಾವ ವಿಷಯದ ಚರ್ಚೆ ಎಂಬುದು ಆಗ ಗೊತ್ತಾಗಲಿದೆ. ಅವರು ನನ್ನನ್ನು ಕರೆದೇ ಇಲ್ಲ ಎಂದಮೇಲೆ ಸಭೆಯ ಅಜೆಂಡಾ ಹೇಗೆ ಫಿಕ್ಸ್ ಆಗುತ್ತದೆ ಎಂದರು. ಸಚಿವ ಸತೀಶ್ ಜಾರಕಿಹೊಳಿ ಅವರು ಮುಖ್ಯಮಂತ್ರಿ ಬದಲಾವಣೆ ವಿಚಾರದಲ್ಲಿ ಎದ್ದಿರುವ ಗೊಂದಲಗಳನ್ನೆಲ್ಲ ಹೈಕಮಾಂಡ್ ಬೇಗ ಬಗೆಹರಿಸಬೇಕು ಎಂದು ಹೇಳಿರುವುದು ಅದು ಅವರ ಅಭಿಪ್ರಾಯ ಎಂದರು. ಬೇರೆ ಯಾರೋ ಏನೇನೊ ಮಾತನಾಡಿದರೆ ಅದು ಅವರ ವೈಯಕ್ತಿಕ, ನಮಗೆ ಹೈಕಮಾಂಡ್ ಮಾತೇ ಅಂತಿಮ ಎಂದು ಹೇಳಿದರು.

ಮೇ 10ಕ್ಕೆ ಬೆಂಗಳೂರಿಗೆ ಮೋದಿ

ಪುಟ ೧➜ಇದೇ ಸಂದರ್ಭದಲ್ಲಿ ಅವರು ನೂತನವಾಗಿ ನಿರ್ಮಿಸಲಾದ ಧ್ಯಾನ ಮಂದಿರವನ್ನು ಉದ್ಘಾಟಿಸಲಿದ್ದಾರೆ. ಅಲ್ಲದೆ, ವರ್ಷಪೂರ್ತಿ ನಡೆಯುವ ಪ್ರಮುಖ ದೇಶವ್ಯಾಪಿ ಸೇವಾ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ. ಒಂದು ತಿಂಗಳ ಕಾಲ ನಡೆಯಲಿರುವ ಈ ಸಂಭ್ರಮಾಚರಣೆಯ ಅಂಗವಾಗಿ ಜಾಗತಿಕ ನಾಯಕತ್ವ ಸಂವಾದ ಮತ್ತು ಶೃಂಗಸಭೆಗಳಂತಹ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ತಿಳಿಸಿದೆ.

ಪ್ರತಿಯೊಬ್ಬರ ಮುಖದಲ್ಲೂ ಮುಗುಳ್ನಗೆಯನ್ನು ಕಾಣುವುದೇ ಆರೋಗ್ಯವಂತ ಸಮಾಜದ ಲಕ್ಷಣವಾಗಿದೆ. ಕಳೆದ 45 ವರ್ಷಗಳಿಂದ ನಾವು ಇದೇ ಗುರಿ ತಲುಪುವತ್ತ ಕಾರ್ಯಪ್ರವೃತ್ತರಾಗಿದ್ದೇವೆ.

■ **ಶ್ರೀ ಶ್ರೀ ರವಿಶಂಕರ್ ಗುರೂಜಿ,** ದಿ ಆರ್ಟ್ ಆಫ್ ಲಿವಿಂಗ್

ಕಿರುಸುದ್ದಿ

ಮೈಸೂರಿಗಿಂದು ಮೋಹನ್ ಭಾಗವತ್



• ಮೈಸೂರು: ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಅವರು ಗುರುವಾರ ಮೈಸೂರಿಗೆ ಆಗಮಿಸಲಿದ್ದು, ನಗರದ ಚಾಮುಂಡಿಬೆಟ್ಟದ ತಪ್ಪಲಲ್ಲಿರುವ ಸುತ್ತೂರು ಮಠದಲ್ಲಿ ನಡೆಯಲಿರುವ ಸುವರ್ಣ ಮಹೋತ್ಸವ ಉಪನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಅಂದು ಬೆಳಗ್ಗೆ 10 ಗಂಟೆಗೆ ನಡೆಯಲಿರುವ ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದ 15ನೇ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿದಲ್ಲಿ, ರಾಷ್ಟ್ರೀಯ ಅಭಿವೃದ್ಧಿಗೆ ಸಾಮಾಜಿಕ ಸೌಹಾರ್ದತೆ ಪ್ರೇರಕ ವಿಷಯ ಕುರಿತು ಮೋಹನ್ ಭಾಗವತ್ ಅವರು ಮಾತನಾಡಲಿದ್ದಾರೆ. ಬಳಿಕ ಪ್ರಶ್ನೋತ್ತರಕ್ಕೆ ಅವಕಾಶವಿದೆ. ಇದೇ ಸಂದರ್ಭದಲ್ಲಿ, ಮುದ್ದೇನಹಳ್ಳಿ ಸತ್ಯಸಾಯಿ ಆಶ್ರಮದ ಸದ್ಗುರು ಶ್ರೀಮಧುಸೂದನ ಸಾಯಿ ಅವರು ನೀಡಿದ್ದ 14ನೇ ವಿಶೇಷ ಉಪನ್ಯಾಸದ ಆತ್ಮನೋ ಮೋಕ್ಷಾರ್ಥಂ ಜಗತ್ ಹಿತಾಯ ಚ ಕೃತಿಯನ್ನು ಬಿಡುಗಡೆ ಮಾಡುವರು. ಸುತ್ತೂರು ಮಠದ ಪೀಠಾಧಿಪತಿಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಸಾನ್ನಿಧ್ಯ ವಹಿಸಲಿದ್ದಾರೆ. ಕಾರ್ಯಕ್ರಮಕ್ಕೆ ಬೆಳಗ್ಗೆ 9.15ರ ನಂತರ ಆಗಮಿಸುವವರು ಪಿಂಜರಾಪೋಲ್ ರಸ್ತೆ, ಅರಮನೆ ಪಂಚಗವಿಮಠದ ರಸ್ತೆಯ ಮೂಲಕ ಶ್ರೀಮಠವನ್ನು ತಲುಪಬಹುದಾಗಿದೆ ಎಂದು ಜೆಎಸ್‌ಎಸ್ ಮಹಾ ವಿದ್ಯಾಪೀಠದ ಕಾರ್ಯ ನಿರ್ವಾಹಕ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನನ್ನ ಗೆಲುವಿಗಿಂತ ರಾಜ್ಯದ ಅಭಿವೃದ್ಧಿಗೆ ಒತ್ತು: ಕಿಮ್ಮನೆ

• ಮಂಡ್ಯ: ರಾಜಕಾರಣಿಗಳು ತಮ್ಮ ಭವಿಷ್ಯಕ್ಕಿಂತ ಸಮಾಜದ ಹಾಗೂ ಜನರ ಭವಿಷ್ಯ ಮುಖ್ಯವೆಂಬುವಂತೆ ಕಾಣಬೇಕು ಅಥವಾ ನೋಡಬೇಕು. ನನ್ನ ಗೆಲುವು ಮುಖ್ಯವಾಗುವುದಿಲ್ಲ ಬದಲಿಗೆ ಕರ್ನಾಟಕದ ಅಭಿವೃದ್ಧಿಗೆ ನಿಲ್ಲುತ್ತೇನೆಂಬ ನಿಟ್ಟಿನಲ್ಲಿ ರಾಜಕಾರಣಿಗಳು ನಡೆದುಕೊಳ್ಳಬೇಕಿದೆ ಎಂದು ಮಾಜಿ ಸಚಿವ ಕಿಮ್ಮನೆ ರತ್ನಾಕರ್ ಅಭಿಪ್ರಾಯಪಟ್ಟರು. ನಗರದ ಕೆವಿಎಸ್ ಭವನದಲ್ಲಿ ಕರ್ನಾಟಕ ಸಂಘದ ವತಿಯಿಂದ ನಡೆದ ಎಸ್.ಎಂ.ಕೃಷ್ಣ ಪ್ರಶಸ್ತಿ-2026 ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು. ಸಾರ್ವಜನಿಕ ಬದುಕು ಅನುಭವಿಸಿದವರಿಗಷ್ಟೇ ಗೊತ್ತು. ಅದು ರಾಜಕಾರಣಿಗಳಿಗೆ ಹೆಚ್ಚು ಗೊತ್ತಿರುತ್ತದೆ. ಇದೆಲ್ಲವನ್ನೂ ಎಸ್.ಎಂ.ಕೃಷ್ಣ ಅವರು ಹೇಗೆ ನಿರ್ವಹಿಸಿದರು ಎಂಬ ಪ್ರಶ್ನೆ ಕಾಡುತ್ತಿದೆ. ಯುವ ಸಮೂಹವು ದೇಶದ ರಾಜಕಾರಣವನ್ನು ಹೇಗೆ, ಯಾವ ಕಡೆ ಕೊಂಡೊಯ್ಯಬೇಕೆಂದು ಆಲೋಚನೆ ಮಾಡಬೇಕು ಎಂದು ಕಿವಿಮಾತು ಹೇಳಿದರು. ಎಸ್.ಎಂ.ಕೃಷ್ಣ ಅವರ ಹೆಸರಿನಲ್ಲಿ ಕೊಟ್ಟಿರುವ ಈ ಪ್ರಶಸ್ತಿಯನ್ನು ತೆಗೆದುಕೊಂಡಿದ್ದೇನೆ. ನನಗೆ ಯಾವ ವಿಷಯದ ಮೇಲೆ ನಂಬಿಕೆ ಇಟ್ಟುಕೊಂಡಿದ್ದೀರೋ ಅದರ ನೆಲೆಗಟ್ಟಿನಲ್ಲಿ ನಂಬಿಕೆ ಉಳಿಸಿಕೊಳ್ಳುವೆ. ರಾಜಕಾರಣವನ್ನು ಹೋರಾಟದಿಂದಲೇ ಬದಲಾವಣೆ ಮಾಡುತ್ತೇವೆ ಎನ್ನುವುದನ್ನು ಬಿಡಬೇಕು. ಉದಾಹರಣೆಗೆ ಪ್ರಸ್ತುತ ತಮಿಳುನಾಡಿನ ರಾಜಕಾರಣ ನೋಡಿದರೆ ಬದಲಾವಣೆ ಬಯಸಿದ ಹಾಗೆ ಕಾಣಿಸುತ್ತಿದೆ. ಜಾತಿ ವ್ಯವಸ್ಥೆ, ಧಾರ್ಮಿಕ ಅಸಮಾನತೆಯನ್ನು ಶೇ.100 ರಷ್ಟು ವಿದ್ಯಾವಂತರೆ ಮಾಡುತ್ತಾರೆ. ಅದನ್ನು ಬಿಡಬೇಕು ಎಂದು ಅಭಿಪ್ರಾಯಪಟ್ಟರು.

ಆನೆ ಕಂದಕ ನಿರ್ಮಾಣಕ್ಕೆ ಹಣಕಾಸಿನ ಕೊರತೆ ಇಲ್ಲ: ಸಚಿವ ಖಂಡ್ರೆ

ವನ್ಯಜೀವಿ ದಾಳಿ ತಡೆಗೆ ಕ್ರಮ



• ದುಬಾರೆ (ಕೊಡಗು): ವನ್ಯಜೀವಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದ್ದು, ಜನರ ಅಮೂಲ್ಯ ಜೀವ, ಬೆಳೆ ಹಾನಿ ತಪ್ಪಿಸಲು ಆಯ್ದ ಪ್ರದೇಶದಲ್ಲಿ, ಆಯ್ದ ವನ್ಯಜೀವಿಗಳ ಸಂತಾನ ನಿಯಂತ್ರಣದ ಸಲಹೆಗಳು ಬಂದಿದೆ. ಈ ಬಗ್ಗೆ ಸಾರ್ವಜನಿಕವಾಗಿ ತಜ್ಞರ ಮಟ್ಟದಲ್ಲಿ ಚರ್ಚೆಯಾಗುವ ಆಗತ್ಯವಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಹೇಳಿದ್ದಾರೆ.

ದುಬಾರೆಯಲ್ಲಿ ನೂತನ ತೂಗುಸೇತುವೆ ಮತ್ತು ಅಧಿಕಾರಿಗಳ ವಸತಿಗೃಹಕ್ಕೆ ಶಂಕುಸ್ಥಾಪನೆ ನೆರವೇರಿಸಿ, ನೂತನ ವಾಹನಗಳಿಗೆ ಹಸಿರು ನಿಶಾನೆ ತೋರಿ ಮಾತನಾಡಿದ ಅವರು, ಆನೆ-ಮಾನವ ಸಂಘರ್ಷ ನಿಯಂತ್ರಿಸಲು ತಜ್ಞರ ಸಮಿತಿ ರಚಿಸಲಾಗಿದ್ದು, ವರದಿಯೂ ಲಭ್ಯವಾಗಿದೆ. ಕಾಡಿನಂಚಿನ ಜನರು ಕೂಡಾ ಈ ಬಗ್ಗೆ ಸಲಹೆ ನೀಡಬೇಕು ಎಂದರು.

ರೈಲ್ವೆ ಬ್ಯಾರಿಕೇಡ್, ಆನೆ ಕಂದಕ ನಿರ್ಮಾಣಕ್ಕೆ ಹಣಕಾಸಿನ ಕೊರತೆ ಇಲ್ಲ, ಅನುದಾನದ ಕೊರತೆಯೂ ಇಲ್ಲ, ಹೆಚ್ಚಿನ ಅನುದಾನ ನೀಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದು, ಆದಷ್ಟು ಶೀಘ್ರ ಹೆಚ್ಚಿನ ಬ್ಯಾರಿಕೇಡ್ ಅಳವಡಿಸಲಾಗುವುದು ಎಂದರು.

ಪ್ರಥಮ ಆದ್ಯತೆ ನೀಡಿ: ಅರಣ್ಯವಾಸಿಗಳು ಮತ್ತು ಅರಣ್ಯದಂಚಿನ ಜನರು ದೀರ್ಘ ಕಾಲದಿಂದ ಅರಣ್ಯವನ್ನು ಸಂರಕ್ಷಿಸಿದ್ದಾರೆ. ಆದರೆ ಇಂದು ಮಾನವ-ವನ್ಯಜೀವಿ ಸಂಘರ್ಷದಿಂದ ಅಮೂಲ್ಯ ಜೀವಹಾನಿ ಆಗುತ್ತಿದ್ದು, ಅಧಿಕಾರಿ ಮತ್ತು ಸಿಬ್ಬಂದಿಗಳು ಜನರ ಜೀವ ಉಳಿಸಲು ಪ್ರಥಮ ಆದ್ಯತೆ ನೀಡಬೇಕು ಎಂದರು. ಪ್ರವಾಸಿಗರ ಅನುಕೂಲಕ್ಕಾಗಿ ಮತ್ತು ದುಬಾರೆ ಹಾಡಿಯಲ್ಲಿರುವ 150 ಮನೆಗಳ ನಿವಾಸಿಗಳಿಗೆ ತುರ್ತು ಸಂದರ್ಭದಲ್ಲಿ ನಗರಕ್ಕೆ ಬರಲು ಅನುಕೂಲವಾಗುವಂತೆ 7 ಕೋಟಿ 30 ಲಕ್ಷ ರೂ. ವೆಚ್ಚದಲ್ಲಿ ಗುಣಮಟ್ಟದ ತೂಗು ಸೇತುವೆ ನಿರ್ಮಿಸಲಾಗುತ್ತಿದೆ. ಈ ಮೂಲಕ ದೀರ್ಘ ಕಾಲದ ಬೇಡಿಕೆಯನ್ನು ಈಡೇರಿಸಲಾಗುತ್ತಿದೆ ಎಂದು ಸಚಿವರು ನುಡಿದರು.

ಕೊಡಗು ಜಿಲ್ಲೆ ಜಗತ್ತಿನ ಜೀವವೈವಿಧ್ಯತೆಯ ತಾಣ ಹಾಗೂ ಹಲವು ನದಿಗಳ ಮೂಲವಾದ ಪಶ್ಚಿಮಘಟ್ಟವನ್ನು ಒಳಗೊಂಡ ಸುಂದರ ಪ್ರದೇಶ. ಇಲ್ಲಿ ನೂರಾರು ಪ್ರಭೇದದ ಸಸ್ಯಸಂಕುಲ, ಪ್ರಾಣಿ ಸಂಕುಲ, ಪಕ್ಷಿ ಸಂಕುಲ, ಕೀಟ ಸಂಕುಲವಿರುವ ಸುಂದರ ಪರಿಸರದಲ್ಲಿರುವ ಇಲ್ಲಿನ ಜನರು ನಿಜಕ್ಕೂ ಅದೃಷ್ಟವಂತರು ಎಂದು ಈಶ್ವರ ಖಂಡ್ರೆ ಬಣ್ಣಿಸಿದರು.

ಇಂದಿರಾಗಾಂಧಿ ಪ್ರಧಾನಮಂತ್ರಿಗಳಾಗಿ ವನ್ಯಜೀವಿ ಸಂರಕ್ಷಣಾ ಕಾಯಿದೆ, ಅರಣ್ಯ ಸಂರಕ್ಷಣಾ ಕಾಯಿದೆ ಜಾರಿಗೆ ತಂದ ಪರಿಣಾಮವಾಗಿ ಕಾಡು, ವನ್ಯಜೀವಿ ಉಳಿದಿದೆ. ಪರಿಸರ ಸಮತೋಲನ ಕಾಪಾಡುವಲ್ಲಿ ವನ್ಯಜೀವಿಗಳ ಪಾತ್ರ ಮಹತ್ವದ್ದಾಗಿದ್ದು, ಕಾಡಿನಂಚಿನ ಜನರು ವನ್ಯಜೀವಿಗಳೊಂದಿಗೆ ಸಹಬಾಳ್ವೆ ನಡೆಸಬೇಕು ಎಂದು ತಿಳಿಸಿದರು.

ಅರಣ್ಯ ಇಲಾಖೆ ಆನೆಗಳ ಚಲನವಲನದ ಬಗ್ಗೆ ನಿಗಾ ಇಡಲು ಅತ್ಯಾಧುನಿಕ ತಂತ್ರಜ್ಞಾನ ಬಳಕೆ ಮಾಡಿಕೊಳ್ಳುತ್ತಿದೆ. ನವೆಂಬರ್, ಡಿಸೆಂಬರ್ ಜನವರಿಯಲ್ಲಿ ಆನೆಗಳು ಕಾಡಿನಿಂದ ಹೊರಬರುತ್ತವೆ. ಆಗ ಸಂಘರ್ಷ ಹೆಚ್ಚಾಗುತ್ತದೆ, ಕಾರಣ ಆನೆಗಳು ತೆನೆ ತಿನ್ನಲು ಬರುತ್ತವೆ. ತೋಟದ ಮಾಲಕರು, ಜಮೀನು ಮಾಲಕರು ಕೂಡಾ ಆನೆಗಳ ವಿಚಾರದಲ್ಲಿ ಸೌಹಾರ್ದತೆಯಿಂದ ನಡೆದುಕೊಳ್ಳಬೇಕು ಎಂದರು.

ದುಬಾರೆ ಆನೆ ಶಿಬಿರಕ್ಕೆ 100 ವರ್ಷಗಳ ಇತಿಹಾಸವಿದೆ. ಇಲ್ಲಿ 15 ಕುಮ್ಕಿ ಆನೆಗಳಿದ್ದು, ದಸರಾ ಮಹೋತ್ಸವದಲ್ಲಿ, ವಿವಿಧ ಕಾರ್ಯಾಚರಣೆಗಳಲ್ಲಿ ಭಾಗಿಯಾಗುತ್ತಿವೆ. ಆನೆಗಳಿಗೆ ಪೂಜ್ಯ ಸ್ಥಾನ ಇದೆ. ಹೀಗಾಗಿ ನಾವು ವನ್ಯಜೀವಿಗಳ ಸಂರಕ್ಷಣೆಗೂ ಮುಂದಾಗಬೇಕು ಎಂದರು.


ಜನರನ್ನು ಹೆದರಿಸದಿರಿ: ಕಾಡಿನಂಚಿನ ಜನರೊಂದಿಗೆ ಅರಣ್ಯ ಅಧಿಕಾರಿಗಳು ಮತ್ತು ಸಿಬ್ಬಂದಿ ಸೌಜನ್ಯದಿಂದ ವರ್ತಿಸಬೇಕು. ಕಾನೂನು ಪಾಲಿಸಿ, ಜನರಿಗೆ ಅರಿವು ಮೂಡಿಸಿ, ಆದರೆ ಹೆದರಿಸಬೇಡಿ ಎಂದು ಕಿವಿ ಮಾತು ಹೇಳಿದರು. ಸೆಕ್ಷನ್ 4, ಡೀಮ್ಡ್ ಅರಣ್ಯ ಮೊದಲಾದ ವಿಚಾರಗಳ ಬಗ್ಗೆ ಶಾಸಕರು ಪ್ರಸ್ತಾಪಿಸಿದ್ದು, ಈ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಹೇಳಿದ ಅವರು, ಇಂದು ಯಸಳೂರಿನಲ್ಲಿ ಅರ್ಜುನ ಆನೆಯ ಸ್ಮಾರಕ ಉದ್ಘಾಟನೆ ಮಾಡಲಿರುವುದಾಗಿ ಸಚಿವರು ತಿಳಿಸಿದರು.

ಶಾಸಕ ಡಾ. ಮಂಥರ್ ಗೌಡ ಮಾತನಾಡಿ, ಅರಣ್ಯ ಇಲಾಖೆಯಲ್ಲಿ ಸಾಕಷ್ಟು ಸುಧಾರಣೆಯನ್ನು ಈಶ್ವರ ಖಂಡ್ರೆ ತಂದಿದ್ದಾರೆ. ಕೊಡಗಿನಲ್ಲಿ ಆನೆ-ಮಾನವ ಸಂಘರ್ಷ ಹೆಚ್ಚಾಗಿದ್ದು, ತೋಟದ ಆನೆಗಳನ್ನು ಸ್ಥಳಾಂತರಿಸಲು ಕ್ರಮ ವಹಿಸಬೇಕು. ಬೆಳೆ ಹಾನಿಗೆ ಶೀಘ್ರ ಪರಿಹಾರ ನೀಡಬೇಕು ಎಂದು ಮನವಿ ಮಾಡಿದರು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯಪಡೆ ಮುಖ್ಯಸ್ಥರಾದ ಮೀನಾಕ್ಷಿ ನೇಗಿ, ಮುಖ್ಯ ವನ್ಯಜೀವಿ ಪರಿಪಾಲಕ ಕುಮಾರ್ ಪುಷ್ಕರ್, ಮನೆಹಳ್ಳಿ ಮಠದ ಶ್ರೀ ಮಹಾಂತ ಶಿವಲಿಂಗ ಸ್ವಾಮೀಜಿ, ಕಲ್ಲಹಳ್ಳಿ ಮಠದ ಶ್ರೀ ರುದ್ರಮುನಿ ಸ್ವಾಮೀಜಿ ಮತ್ತಿತರರು ಪಾಲ್ಗೊಂಡಿದ್ದರು.

> **ಪರಿಸರ ಸಂರಕ್ಷಣೆ ಎಲ್ಲರ ಕರ್ತವ್ಯ**
>
> ಇಂದು ನಾವು ಜಾಗತಿಕ ತಾಪಮಾನ ಏರಿಕೆ, ಹವಾಮಾನ ಬದಲಾವಣೆಯ ಪರಿಣಾಮ ಎದುರಿಸುತ್ತಿದ್ದೇವೆ. ಬೆಂಗಳೂರು ನಿವೃತ್ತರ ಸ್ವರ್ಗವಾಗಿತ್ತು. ಆದರೆ ಇಂದು ತಾಪಮಾನ ಏರಿಕೆ ಆಗುತ್ತಿದೆ. ರಾಜ್ಯದಲ್ಲಿ ಬಿಸಿಲ ಝಳ ಹೆಚ್ಚಳವಾಗುತ್ತಿದೆ. ಇದೆಲ್ಲ ಕಾಡು ನಾಶದ ಪರಿಣಾಮವಾಗಿದೆ. ಹೀಗಾಗಿ ಅರಣ್ಯ, ಪರಿಸರ ಸಂರಕ್ಷಣೆ ಎಲ್ಲರ ಕರ್ತವ್ಯವಾಗಿದೆ ಎಂದು ಸಚಿವರು ನುಡಿದರು.

ಜಲ ಸೋರಿಕೆಯಾಗದಂತೆ ಎಚ್ಚರವಹಿಸಿ: ಬೋಸರಾಜು



• ಬೆಂಗಳೂರು: ಮುಂದಿನ ದಿನಗಳಲ್ಲಿ ಎದುರಾಗಬಹುದಾದ ಎಲ್ ನಿನೊ ಪ್ರಭಾವವನ್ನು ಸಮರ್ಥವಾಗಿ ಎದುರಿಸಲು ನಾವು ಇಂದಿನಿಂದಲೇ ಸಜ್ಜಾಗಬೇಕಿದೆ. ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುವ ಕೆರೆಗಳು, ಪಿಕ್-ಅಪ್ ಡ್ಯಾಂಗಳು ಹಾಗೂ ಕಿಂಡಿ ಅಣೆಕಟ್ಟುಗಳಲ್ಲಿ ಸಂಗ್ರಹವಾಗಿರುವ ನೀರಿನಲ್ಲಿ ಸೋರಿಕೆಯಾಗದಂತೆ ಎಚ್ಚರವಹಿಸಬೇಕು ಎಂದು ಅಧಿಕಾರಿಗಳಿಗೆ ಸಚಿವ ಎನ್.ಎಸ್. ಬೋಸರಾಜು ನಿರ್ದೇಶನ ನೀಡಿದರು.

ಎಲ್ ನಿನೊ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಎದುರಾಗಬಹುದಾದ ಜಲ ಸಂಕಷ್ಟವನ್ನು ಸಮರ್ಥವಾಗಿ ನಿಭಾಯಿಸಲು ಹಾಗೂ ಜಲ ಭದ್ರತೆಯನ್ನು ಖಚಿತಪಡಿಸಲು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ವತಿಯಿಂದ ಸಚಿವರ ನೇತೃತ್ವದಲ್ಲಿ ಮಹತ್ವದ ತಾಂತ್ರಿಕ ಸಮಾಲೋಚನಾ ಹಾಗೂ ಪರಿಶೀಲನಾ ಸಭೆ ನಡೆಸಲಾಯಿತು. ತಜ್ಞರ ಸಲಹೆಗಳಿಗೆ ಸ್ಪಂದಿಸಿದ ಸಚಿವರು, ಇಲಾಖೆಯ ಅಧೀನದಲ್ಲಿರುವ ಎಲ್ಲಾ 18 ವಲಯಗಳ ಕಾರ್ಯಪಾಲಕ ಇಂಜಿನಿಯರ್‌ಗಳಿಗೆ ಖಡಕ್ ಸೂಚನೆ ನೀಡಿದರು. ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕೆರೆಗಳು, ಅಣೆಕಟ್ಟುಗಳು, ಜಲಾಶಯಗಳ ನಿರ್ವಹಣೆಯ ಸಂಪೂರ್ಣ ಉಸ್ತುವಾರಿಯನ್ನು ಕಾರ್ಯಪಾಲಕ ಇಂಜಿನಿಯರ್‌ಗಳು ವಹಿಸಿಕೊಳ್ಳಬೇಕು. ಸಣ್ಣ ಪ್ರಮಾಣದ ನೀರಿನ ಸೋರಿಕೆಯೂ ಆಗದಂತೆ ತಕ್ಷಣವೇ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಅಲ್ಲದೇ ಈಗಾಗಲೇ ಇಲಾಖೆಯ ವತಿಯಿಂದ ಪ್ರಾರಂಭಿಸಲಾಗಿರುವ ನೀರಿದ್ದರೆ ನಾಳೆ ಯೋಜನೆಯನ್ನು ಜನರ ಬಳಿಗೆ ಕೊಂಡೊಯ್ಯುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಸೂಚನೆ ನೀಡಿದರು. ಸಭೆಯಲ್ಲಿ ಭಾಗವಹಿಸಿದ್ದ ತಜ್ಞರು, ರಾಜ್ಯದಲ್ಲಿ ಪ್ರಸ್ತುತ ಲಭ್ಯವಿರುವ ನೀರನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಅಂತರ್ಜಲ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು. ಇದರ ಜೊತೆಗೆ, ಸಾರ್ವಜನಿಕರಲ್ಲಿ ಮಳೆ ನೀರು ಕೊಯ್ಲು ಪದ್ಧತಿಯನ್ನು ಅಳವಡಿಸಿಕೊಳ್ಳುವ ಬಗ್ಗೆ ವ್ಯಾಪಕ ಜಾಗೃತಿ ಮೂಡಿಸುವ ಅಗತ್ಯವನ್ನು ತಜ್ಞರು ಒತ್ತಿ ಹೇಳಿದರು.

ಕೇಂದ್ರ ಸಚಿವರ ಹೆಸರಿನಲ್ಲಿ ವಂಚನೆ

• ಬೆಳಗಾವಿ: ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರ ನಕಲಿ ವಿಡಿಯೋ ಸೃಷ್ಟಿಸಿ ಬೆಳಗಾವಿ ನಗರದ ವಂಟಮೂರಿ ಕಾಲೋನಿಯ ಪ್ರಕಾಶ ಗುಬ್ಬಿ (76) ಅವರನ್ನು ವಂಚಿಸಿರುವ ಪ್ರಕರಣ ಬೆಳಕಿಗೆ ಬಂದಿದೆ. ಕೊಲ್ಹಾಪುರ ಮೂಲದ ಆದರ್ಶ ಆನಂದ ಹಾಗೂ ಮಹಾರಾಷ್ಟ್ರದ ಬುಲ್ಡಾಣಾ ಮೂಲದ ದಾಮೋದರ ಆರೋಪಿಗಳ ವಿರುದ್ಧ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ, ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿ ಭಾರೀ ಲಾಭ ಪಡೆಯಿರಿ ಎಂದು ಮಾತನಾಡಿರುವ ಜಾಹೀರಾತು ವಿಡಿಯೋ ನೋಡಿ ಮರುಳಾಗಿ, ಹಣ ಹೂಡಿಕೆ ಮಾಡಿ ಸುಮಾರು 7.9 ಲಕ್ಷ ರೂ. ಕಳೆದುಕೊಂಡಿದ್ದಾರೆ. ಆಯುಕ್ತ ಭೂಷಣ ಬೊರಸೆ ಮಾಧ್ಯಮಗಳೊಂದಿಗೆ ಮಾತನಾಡಿ, ಹಿಂದಿನ ವರ್ಷ ನವೆಂಬರ್ ತಿಂಗಳಲ್ಲಿ ಪ್ರಕಾಶ ಗುಬ್ಬಿ ಅವರು ಯೂಟ್ಯೂಬ್‌ನಲ್ಲಿ ಒಂದು ವಿಡಿಯೋ ನೋಡಿದ್ದಾರೆ. ಅದರಲ್ಲಿ ನಿರ್ಮಲಾ ಸೀತಾರಾಮನ್ ಅವರನ್ನು ತೋರಿಸಿದ್ದಾರೆ.

ಕೈ ನಂಬಿಕೆಗೆ ಅರ್ಹವಲ್ಲ: ಅಶೋಕ



• ಬೆಂಗಳೂರು: ಕಾಂಗ್ರೆಸ್ ಪಕ್ಷ ನಂಬಿಕೆಗೆ ಅರ್ಹವಲ್ಲ ಎಂಬುದು ಸ್ಪಷ್ಟವಾಗಿದೆ. ತಮಿಳುನಾಡಲ್ಲಿ ಡಿಎಂಕೆ ಜೊತೆ ಚುನಾವಣೆ ಎದುರಿಸಿದ ಕಾಂಗ್ರೆಸ್, ಈಗ ಅದೇ ಪಕ್ಷಕ್ಕೆ ಕೈ ಕೊಟ್ಟಿದೆ. ಇಂಡಿ ಒಕ್ಕೂಟದ ಮಿತ್ರಪಕ್ಷಗಳು ಈ ಬಗ್ಗೆ ಪರಾಮರ್ಶೆ ಮಾಡಬೇಕಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮಿಳುನಾಡಲ್ಲಿ ಕಾಂಗ್ರೆಸ್‌ನ ಬಣ್ಣ ಬಯಲಾಗಿದೆ. ಕಾಂಗ್ರೆಸ್‌ನ ಸ್ನೇಹ ಮಾಡಿದ ಡಿಎಂಕೆ ಪಕ್ಷದ ನಾಯಕರು ಈಗ ಸಪ್ಪೆ ಮೋರೆ ಹಾಕಿಕೊಂಡಿದ್ದಾರೆ. ಚುನಾವಣೆ ಬಳಿಕ ಒಂದಾಗಿ ಸರ್ಕಾರ ರಚಿಸಬೇಕೆಂದು ತೀರ್ಮಾನವಾಗಿತ್ತು. ಫಲಿತಾಂಶ ಬಂದ ನಂತರ ಕಾಂಗ್ರೆಸ್ ಗೆದ್ದ ತ್ರಿನ ಬಾಲ ಹಿಡಿದಿದೆ ಎಂದರು.

ಯಾವುದೇ ಸಿದ್ಧಾಂತವನ್ನು ಕಾಂಗ್ರೆಸ್ ಪಕ್ಷ ಅನುಸರಿಸುತ್ತಿಲ್ಲ, ಇವರನ್ನು ನಂಬಿದ ಡಿಎಂಕೆ ಬೆನ್ನಿಗೆ ಚೂರಿ ಹಾಕಿದ್ದು, ಕಾಂಗ್ರೆಸ್ ಕೈ ಕೊಡುವ ಪಕ್ಷ ಎಂದು ಜನರಿಗೆ ಗೊತ್ತಾಗಿದೆ. ಇಂಡಿ ಒಕ್ಕೂಟದಲ್ಲಿರುವ ಬೇರೆ ಪಕ್ಷಗಳು ಈ ಬಗ್ಗೆ ಪರಾಮರ್ಶೆ ಮಾಡಿಕೊಳ್ಳಬೇಕಿದೆ. ಕಾಂಗ್ರೆಸ್ ಹೇಗೆ ಕೈ ಕೊಡುತ್ತದೆ ಎಂದು ಗಮನಿಸಬೇಕಾಗುತ್ತದೆ. ಇಲ್ಲವಾದರೆ ಮಿತ್ರಪಕ್ಷಗಳಿಗೂ ಡಿಎಂಕೆ ಸ್ಥಿತಿಯೇ ಬರಲಿದೆ ಎಂದು ಹೇಳಿದರು.

ಮಲ್ಲಿಕಾರ್ಜುನ ಖರ್ಗೆ ಪ್ರವೇಶದ ಬಳಿಕ ಮುಖ್ಯಮಂತ್ರಿ ಕುರ್ಚಿ ಬಗ್ಗೆ ಯಾರೂ ಮಾತಾಡುತ್ತಿಲ್ಲ, ಡಿ.ಕೆ.ಶಿವಕುಮಾರ್ ಅವರ ಕನಸು ಭಗ್ನವಾಗಿದೆ ಎಂದರು.

ಜಗದೀಶ್ ಹಿರೇಮನಿ ನಿಧನ



• ಬೆಂಗಳೂರು: ರಾಜ್ಯ ಬಿಜೆಪಿಯ ನಿಕಟಪೂರ್ವ ಕಾರ್ಯದರ್ಶಿಗಳಾಗಿದ್ದ ಜಗದೀಶ್ ಹಿರೇಮನಿ (52) ಅವರು ಬುಧವಾರ ಬೆಳಗ್ಗೆ 10.30ಕ್ಕೆ ಖಾಸಗಿ ಆಸ್ಪತ್ರೆಯಲ್ಲಿ ತೀವ್ರ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಮೂಲತಃ ಬಾಗಲಕೋಟೆಯವರಾದ ಜಗದೀಶ್ ಹಿರೇಮನಿ ಅವರು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಮೂಲಕ ವಿದ್ಯಾರ್ಥಿ ದೆಸೆಯಲ್ಲಿ ಸಾರ್ವಜನಿಕ ಜೀವನ ಪ್ರವೇಶಿಸಿದರು. ಕೇಂದ್ರ ಸರ್ಕಾರದ ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. ಬಿಜೆಪಿಯ ಪ್ರಶಿಕ್ಷಣ ವಿಭಾಗದ ಸಂಚಾಲನಾ ತಂಡದಲ್ಲಿದ್ದರು.

ಹುಟ್ಟೂರಲ್ಲಿ ಇಂದು ಅಂತ್ಯಸಂಸ್ಕಾರ: ಮೃತರ ಪಾರ್ಥಿವ ಶರೀರವನ್ನು ಬುಧವಾರ ಮಧ್ಯಾಹ್ನ 2ರಿಂದ ಸಂಜೆ 4 ಗಂಟೆಯವರೆಗೆ ಮಲ್ಲೇಶ್ವರದಲ್ಲಿರುವ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಅಂತಿಮ ದರ್ಶನಕ್ಕೆ ಇರಿಸಲಾಗಿತ್ತು. ನಂತರ ಪಾರ್ಥಿವ ಶರೀರವನ್ನು ಅವರ ಹುಟ್ಟೂರಾದ ಬಾಗಲಕೋಟೆಗೆ ಸಕಲ ಗೌರವದೊಂದಿಗೆ ಒಯ್ಯಲಾಯಿತು. ಗುರುವಾರ ಬಾಗಲಕೋಟೆಯಲ್ಲಿ ಅಂತ್ಯಸಂಸ್ಕಾರದ ವಿಧಿವಿಧಾನಗಳನ್ನು ಪೂರ್ಣಗೊಳಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗಣ್ಯರಿಂದ ಅಂತಿಮ ದರ್ಶನ: ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ ಮತ್ತು ಶೋಭಾ ಕರಂದ್ಲಾಜೆ ಅವರು ಜಗದೀಶ್ ಹಿರೇಮನಿ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು ಗೌರವ ಸಲ್ಲಿಸಿದರು.

> **ವಿಜಯೇಂದ್ರ ಸಂತಾಪ**
>
> ರಾಜ್ಯ ಬಿಜೆಪಿ ಮಾಜಿ ಕಾರ್ಯದರ್ಶಿ ಜಗದೀಶ್ ಹಿರೇಮನಿ ಅವರ ನಿಧನವು ತೀವ್ರ ದುಃಖ ತಂದಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸಂತಾಪ ಸೂಚಿಸಿದ್ದಾರೆ. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಪೂರ್ಣಾವಧಿ ಕಾರ್ಯಕರ್ತರು, ಕೇಂದ್ರ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಸದಸ್ಯರೂ ಆದ ಅವರು ಎಸ್.ಐ.ಆರ್. ರಾಜ್ಯ ಸಂಚಾಲಕರಾಗಿ ಕೆಲಸ ಮಾಡುತ್ತಿದ್ದರು. ಅಟಲ್ ಬಿಹಾರಿ ವಾಜಪೇಯಿ ಜನ್ಮ ಶತಮಾನೋತ್ಸವ ಕಾರ್ಯಕ್ರಮವನ್ನು ರಾಜ್ಯದಲ್ಲಿ ಅತ್ಯಂತ ಸಮರ್ಥವಾಗಿ ನಿಭಾಯಿಸಿದ್ದರು. ಪಕ್ಷಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡು ಸದಾ ಕ್ರಿಯಾಶೀಲರಾಗಿ ಇರುತ್ತಿದ್ದರು ಎಂದು ವಿವರಿಸಿದ್ದಾರೆ.

ಬಿಎಸ್‌ವೈರವರ ದೇವ ದುರ್ಲಭ ಕಾರ್ಯಕರ್ತ

► ಬಿದರೆಪ್ರಕಾಶ್, ಸಂಪಾದಕರು, ಕಮಲ ಪಥ ಮತ್ತು ರಾಜ್ಯ ಸಂಚಾಲಕರು, ಪ್ರಕಾಶನ ಪ್ರಕೋಷ್ಠ



1997ರ ಚಿಕ್ಕನಾಯಕನಹಳ್ಳಿ ವಿಧಾನಸಭಾ ಸ್ಥಾನದ ಉಪಚುನಾವಣೆ. ಬಿಜೆಪಿಗೆ ಅಷ್ಟೇನೂ ಪೂರಕವಾದ ವಾತಾವರಣವಿಲ್ಲದಿದ್ದರೂ ಬಿಜೆಪಿಯ ಎಲ್ಲಾ ರಾಜ್ಯ ನಾಯಕರು ಚುನಾವಣೆಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದರು. ಅರವಿಂದ ಲಿಂಬಾವಳಿಯವರು ಚಿಕ್ಕನಾಯಕನಹಳ್ಳಿಯಲ್ಲಿಯೇ ಬೀಡು ಬಿಟ್ಟು ಚುನಾವಣೆಯ ಉಸ್ತುವಾರಿಯನ್ನು ವಹಿಸಿಕೊಂಡಿದ್ದರು. ಸಾಮಾನ್ಯ ಕಾರ್ಯಕರ್ತನಾಗಿದ್ದ, ಹಿಂದುಳಿದ ವರ್ಗಕ್ಕೆ ಸೇರಿದ್ದ ಶಂಕರಪ್ಪನವರನ್ನು ಪಕ್ಷದ ಅಭ್ಯರ್ಥಿಯನ್ನಾಗಿಸಲಾಗಿತ್ತು. ಬಿ.ಎಸ್‌ಯಡಿಯೂರಪ್ಪ ಹಾಗೂ ಅನಂತಕುಮಾರ್ ಪ್ರಚಾರದಲ್ಲಿ ಪೂರ್ಣಪ್ರಮಾಣದಲ್ಲಿ ತೊಡಗಿಸಿಕೊಂಡಿದ್ದರು. ಯಡಿಯೂರಪ್ಪನವರಿಗೆ ಕಾರ್ಯಕರ್ತರ ಬಗ್ಗೆ ಇದ್ದ ಕಾಳಜಿಯ ದ್ಯೋತಕ ಎನ್ನಬಹುದಾದ ಘಟನೆಯಿದು. ಬಿಎಸ್‌ವೈರವರು ಕಾರ್ಯಕರ್ತರ ನಾಯಕ ಎನ್ನುವುದಕ್ಕೆ ಇದಕ್ಕಿಂತ ಮತ್ತೊಂದು ಉದಾಹರಣೆ ಇಲ್ಲ ಎನ್ನಬಹುದು.

ಸಣ್ಣ ಸಣ್ಣ ಊರಿಗೂ ಬಂದು ಚುನಾವಣಾ ಪ್ರಚಾರದಲ್ಲಿ ಭಾಗಿಯಾಗುತ್ತಿದ್ದ ಬಿಎಸ್‌ವೈರವರು ಅಂದು ತಾಲೂಕಿನ ಕರಡಾಳು ಗ್ರಾಮದ ಸಂತೆ ಮೈದಾನದಲ್ಲಿ ಭಾಷಣ ಮಾಡಬೇಕಿತ್ತು. ಭಾಷಣ ಮಾಡಲು ತಿಪಟೂರಿನ ನಾಯಕರಾಗಿದ್ದ ನಂಜಾಮರಿಯವರ ಟಾಟಾಮೊಬೈಲ್ ವಾಹನವನ್ನು ನಿಗದಿ ಪಡಿಸಿ ಅದಕ್ಕೆ ಧ್ವನಿವರ್ಧಕ ಹಾಗೂ ಹಿಂಬದಿಯಲ್ಲಿ ಕಮಲದ ಚಿಹ್ನೆಯನ್ನು ಅಳವಡಿಸಲಾಗಿತ್ತು. ನಿಗದಿಯಾದ ಸಮಯವಾದರೂ ಆ ವಾಹನ ಸಭೆ ನಡೆಯುವ ಸ್ಥಳಕ್ಕೆ ಬರಲೇ ಇಲ್ಲ, ಮೊಬೈಲ್ ಇಲ್ಲದಿದ್ದ ಆ ಕಾಲದಲ್ಲಿ ಸ್ಥಿರ ದೂರವಾಣಿ ಮೂಲಕ ಮಾತನಾಡಿದರೆ ಆಗಲೇ ತಿಪಟೂರಿನಿಂದ ವಾಹನ ಬಿಟ್ಟಿದೆ ಎಂಬ ಸಂದೇಶ ಬರುತ್ತಿತ್ತು. ಆದರೆ ವಾಹನ ಕರಡಾಳು ಗ್ರಾಮಕ್ಕೆ ಬಂದಿರಲಿಲ್ಲ, ಸಮಯವಾಯಿತು. ಬಿಎಸ್‌ವೈರವರು ಬಂದೇ ಬಿಟ್ಟರು. ಅವರು ಅಂದಿನ ಸಭೆಯನ್ನು ಮುಗಿಸಿ ಮತ್ತೊಂದು ಕಡೆಗೆ ಪ್ರಯಾಣಿಸಬೇಕಿತ್ತು. ಬಂದವರೇ ಅಲ್ಲಿನ ಕಾರ್ಯಕರ್ತರನ್ನು ಧ್ವನಿವರ್ಧಕ ಮತ್ತು ವಾಹನದ ಬಗ್ಗೆ ಪ್ರಸ್ತಾಪಿಸಿದರು. ಯಡಿಯೂರಪ್ಪನವರ ಸಿಟ್ಟನ್ನು ಅರಿತ ಎಲ್ಲರೂ ವಾಹನ ಬಂದಿಲ್ಲವೆಂಬ ವಿಷಯವನ್ನು ಹೇಳಲು ಹಿಂಜರಿಯುತ್ತಿದ್ದರು. ಕಾರ್ಯಕರ್ತರೊಬ್ಬರು ಧೈರ್ಯ ಮಾಡಿ ಇನ್ನೂ ವಾಹನ ಬಂದಿಲ್ಲವೆಂದು ಮೆಲುದನಿಯಲ್ಲಿ ಹೇಳಿದರು. ತರಾತುರಿಯಲ್ಲಿದ್ದ ಯಡಿಯೂರಪ್ಪನವರಿಗೆ ಸಿಟ್ಟು ನೆತ್ತಿಗೇರಿತು. 'ಸರಿಯಾಗಿ ಗಮನಿಸಬೇಕಲ್ಲವೇ, ಯಾರು ಇದರ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿರುವವರು?' ಎಂಬ ಆಕ್ರೋಶ ಅವರಿಂದ ಹೊರಬಂತು. ಆದರೆ ಯಾರಿಗೂ ಹೇಳಲು ಧೈರ್ಯವಿಲ್ಲ, ಮೆಲ್ಲಗೆ ಅಲ್ಲಿದ್ದ ಕಾರ್ಯಕರ್ತನೊಬ್ಬನ ಕಡೆಗೆ ಎಲ್ಲರೂ ತಿರುಗಿದರು. ಆ ಕಾರ್ಯಕರ್ತ ಬೆವತು ಹೋದ. 'ಸರಿಯಾಗಿ ಯೋಜನೆ ಮಾಡಬೇಕಲ್ಲವೆ?' ಎಂದು ಅವನನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಜವಾಬ್ದಾರಿ ಹೊತ್ತ ಆ ಕಾರ್ಯಕರ್ತ ಯಡಿಯೂರಪ್ಪನವರ ಆಕ್ರೋಶ ಕಂಡು ಬೆವತು ಹೋದ. ಅವರಾಡಿದ ನುಡಿಗಳು ಅವನ ಕಣ್ಣನ್ನು ತೇವವಾಗಿಸಿತು. ಇಷ್ಟೆಲ್ಲಾ ಆಗುವ ವೇಳೆಗೆ ವಾಹನ ಬಂತು. ಯಡಿಯೂರಪ್ಪನವರು ಭಾಷಣ ಮಾಡಿ ನಂತರ ತೆರಳಿದರು.



ರಾತ್ರಿ ಅವಲೋಕನ ಬೈಠಕ್. ಬಿಎಸ್‌ವೈರವರೂ ಉಪಸ್ಥಿತರಿದ್ದರು. ಬೆಳಗ್ಗೆ ಯಡಿಯೂರಪ್ಪನವರ ಕಾರ್ಯಕ್ರಮಕ್ಕೆ ಧ್ವನಿವರ್ಧಕದ ವಾಹನ ತಡವಾದ ಕಾರಣ ಪ್ರಸ್ತಾಪವಾಯಿತು. ಮಾರ್ಗ ಮಧ್ಯದಲ್ಲಿ ಆ ವಾಹನದ ಮುಂದಿನ ಚಕ್ರ ಪಂಚರ್ ಆಗಿ ಅದನ್ನು ಬದಲಾಯಿಸಿಕೊಂಡು ಬರಬೇಕಾಗಿದ್ದರಿಂದ ಆ ವಾಹನ ತಡವಾಯಿತು ಎಂಬ ವಿಷಯ ಯಡಿಯೂರಪ್ಪನವರಿಗೆ ಗೊತ್ತಾಯಿತು. ಬೆಳಗ್ಗೆ ಅವರಿಂದ ಬೈಯಿಸಿಕೊಂಡ ಕಾರ್ಯಕರ್ತನೂ ಅಲ್ಲಿಯೇ ಇದ್ದ. ಆದರೆ ಬೆಳಗ್ಗೆ ಯಡಿಯೂರಪ್ಪನವರ ಸಿಟ್ಟನ್ನು ನೋಡಿದ್ದ ಅವನಿಗೆ ಅವರೆದುರು ಬರಲು ಅಳುಕು ಕಾಡುತ್ತಿತ್ತು. ಬೈಠಕ್ ಮುಗಿಯಿತು. ಯಡಿಯೂರಪ್ಪನವರು ತಮ್ಮ ಮುಂದೆ ಕಾಣಿಸಿಕೊಳ್ಳಲು ಹಿಂದೇಟು ಹಾಕುತ್ತಿದ್ದ ಆ ಕಾರ್ಯಕರ್ತನನ್ನು ಗಮನಿಸಿದರು. ಅವನ ಬಳಿಗೇ ಬಂದರು. ಕಾರ್ಯಕರ್ತನ ಹೆಗಲ ಮೇಲೆ ಕೈಹಾಕಿದರು. ಬೆಳಗ್ಗೆ ನಡೆದ ಘಟನೆಯ ಬಗ್ಗೆ ನಿನ್ನದೇನೂ ತಪ್ಪಿಲ್ಲ, ಬೇಜಾರು ಮಾಡಿಕೊಳ್ಳಬೇಡ ಎಂದರು. ಮತ್ತೆರಡು ಸಾಂತ್ವನದ ಮಾತುಗಳು ಅವರ ಬಾಯಿಯಿಂದ ಬಂತು. ಕಾರ್ಯಕರ್ತರ ಬಗ್ಗೆ ಯಡಿಯೂರಪ್ಪನವರ ಬಗ್ಗೆ ಇದ್ದ ಕಳಕಳಿಗೆ ಇದಕ್ಕಿಂತ ಮತ್ತೊಂದು ಉದಾಹರಣೆ ಬೇಕಿಲ್ಲ ಎನಿಸುತ್ತದೆ. ಅಷ್ಟೊಂದು ದೊಡ್ಡ ನಾಯಕರು ನಡೆದ ಸಣ್ಣ ಘಟನೆಯನ್ನೂ ಮತ್ತು ಆ ಕಾರ್ಯಕರ್ತನನ್ನೂ ನೆನಪಿನಲ್ಲಿಟ್ಟುಕೊಂಡು ರಾತ್ರಿ ಕಾರ್ಯಕರ್ತನಿಗೆ ಸಾಂತ್ವನ ಹೇಳಬೇಕಿರಲಿಲ್ಲ, ಆದರೆ ಯಡಿಯೂರಪ್ಪನವರು ಕಾರ್ಯಕರ್ತರ ನಾಯಕ. ಅದಕ್ಕಾಗಿಯೇ ಬೆಳಗ್ಗೆ ಅವನದಲ್ಲದ ಕಾರಣಕ್ಕೆ ಬೈಸಿಕೊಂಡ ಕಾರ್ಯಕರ್ತನ ಬಗ್ಗೆ ಕಾಳಜಿಯಿತ್ತು. ಇದೇ ಅವರ ದೊಡ್ಡಗುಣ. ನೋವನ್ನು ಅನುಭವಿಸಿದ, ನಂತರ ಯಡಿಯೂರಪ್ಪನವರ ಸಾಂತ್ವನದಿಂದ ಸಂತುಷ್ಟಗೊಂಡ ತಿಪಟೂರು ತಾಲೂಕು ಬಿಳಿಗೆರೆ ಗ್ರಾಮದ ಕಾರ್ಯಕರ್ತ ಪ್ರತಾಪ್ ಸಿಂಗ್ ಈ ಘಟನೆಯನ್ನು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಬಿಜೆಪಿಯಲ್ಲಿ ಕಾರ್ಯಕರ್ತ ಎಂಬ ಪದಕ್ಕೆ ಅರ್ಥ, ಮಹತ್ವ ತಂದು ಕೊಟ್ಟ ಅನೇಕರಿದ್ದಾರೆ. ಆದರೆ ಕಾರ್ಯಕರ್ತನಿಗೆ ದೇವದುರ್ಲಭ ಎಂದು ಗುಣವಾಚನವನ್ನಿಟ್ಟವರು ಯಡಿಯೂರಪ್ಪನವರೇ. ಅವರು ಮಾಡಿದ ಯಾವುದೇ ಸಾರ್ವಜನಿಕ ಭಾಷಣಗಳಲ್ಲಿ ಈ ಗುಣವಾಚಕದಿಂದ ಕಾರ್ಯಕರ್ತನನ್ನು ಸಂಬೋಧಿಸದೆ ಇರುತ್ತಿರಲಿಲ್ಲ, ಕಾರ್ಯಕರ್ತರೆಲ್ಲರೂ ಯಡಿಯೂರಪ್ಪನವರನ್ನು ದೇವದುರ್ಲಭ ನಾಯಕನೆಂದರೆ, ಸ್ವತಃ ಯಡಿಯೂರಪ್ಪನವರು ಬಿಜೆಪಿ ಕಾರ್ಯಕರ್ತರನ್ನೇ ದೇವದುರ್ಲಭ ಕಾರ್ಯಕರ್ತರು ಎನ್ನುತ್ತಿದ್ದರು.

ರಾಜಕೀಯದ ಮೆಟ್ಟಿಲು ಏರುವುದು ಅನೇಕರಿಗೆ ಸಾಧ್ಯ. ಆದರೆ ಆ ಮೆಟ್ಟಿಲ ಕೆಳಗೆ ನಿಂತಿರುವ ಅಸಂಖ್ಯಾತ ಕಾರ್ಯಕರ್ತರ ಬೆವರನ್ನು, ನೋವನ್ನು, ತ್ಯಾಗವನ್ನು ಅರ್ಥ ಮಾಡಿಕೊಳ್ಳುವ ನಾಯಕರು ಬೆರಳೆಣಿಕೆಯಷ್ಟು ಮಂದಿ ಮಾತ್ರ. ಬಿ.ಎಸ್. ಯಡಿಯೂರಪ್ಪನವರು ಅಂಥ ಅಪರೂಪದ ನಾಯಕ. ಅವರಿಗೆ ಕಾರ್ಯಕರ್ತರು ಕೇವಲ ಮತ ಕ್ರೋಢೀಕರಿಸುವ ಸಾಧನಗಳು ಮಾತ್ರವಲ್ಲ, ಕಾರ್ಯಕರ್ತರು ಅವರ ಕುಟುಂಬ, ಅವರ ಶಕ್ತಿ, ಅವರ ಸ್ಫೂರ್ತಿ. ಇದು ಅವರ ರಾಜಕೀಯ ಜೀವನದಲ್ಲಿ ಅಳವಡಿಸಿಕೊಂಡ ಕಾರ್ಯಪದ್ಧತಿ. ಏಕೆಂದರೆ ಯಡಿಯೂರಪ್ಪನವರು ಕಾರ್ಯಕರ್ತರಾಗಿ ನಾಯಕರಾದವರೇ. ಅವರ ರಾಜಕೀಯ ಜೀವನ ಆರಂಭಗೊಂಡಿದ್ದು ಸಭೆ-ಸಮಾರಂಭಗಳಲ್ಲಿ ಭಾಷಣ ಮಾಡುವ ಮೂಲಕ ಅಲ್ಲ, ಬದಲಾಗಿ ಬೀದಿ ಬೀದಿ ತಿರುಗಿ ಕಾರ್ಯಕರ್ತರೊಂದಿಗೆ ಕಷ್ಟ-ಸುಖ ಹಂಚಿಕೊಳ್ಳುವ ಮೂಲಕ. ಅವರು ಸ್ವತಃ ತಳಮಟ್ಟದಿಂದ ಬಂದ ಕಾರಣ, ಆ ಮಟ್ಟದ ಕಾರ್ಯಕರ್ತರ ಸಂಕಟ ಅವರಿಗೆ ಚೆನ್ನಾಗಿ ಅರ್ಥವಾಗುತ್ತಿತ್ತು.

ಯಡಿಯೂರಪ್ಪನವರ ಅದ್ಭುತ ಗುಣ ಎಂದರೆ ಅವರ ಸ್ಮರಣಶಕ್ತಿ. ಒಮ್ಮೆ ಭೇಟಿಯಾದ ಕಾರ್ಯಕರ್ತನ ಹೆಸರು, ಅವನ ಊರು, ಅವನ ಕುಟುಂಬದ ವಿಷಯ - ಇವೆಲ್ಲ ಅವರ ಮನಸ್ಸಿನ ಮೂಲೆಯಲ್ಲಿ ಭದ್ರವಾಗಿ ಕುಳಿತಿರುತ್ತಿದ್ದವು. ವರ್ಷಗಳ ನಂತರ ಭೇಟಿಯಾದಾಗಲೂ ಅವರ ಹೆಸರು ಹೇಳಿ ಮಾತನಾಡಿಸುತ್ತಿದ್ದರು. ಈ ಒಂದು ಗುಣ ಕಾರ್ಯಕರ್ತರ ಹೃದಯದಲ್ಲಿ ಅಪಾರ ವಿಶ್ವಾಸ ಬಿತ್ತುತ್ತಿತ್ತು. 'ನಾಯಕ ನಮ್ಮನ್ನು ಮರೆತಿಲ್ಲ' ಎಂಬ ಭಾವನೆ ಒಬ್ಬ ಕಾರ್ಯಕರ್ತನಿಗೆ ಎಷ್ಟು ಶಕ್ತಿ ಕೊಡುತ್ತದೆ ಎಂಬುದನ್ನು ಯಡಿಯೂರಪ್ಪ ಅರ್ಥ ಮಾಡಿಕೊಂಡಿದ್ದರು. ಅದಕ್ಕಾಗಿ ಅವರು ಉದ್ದೇಶಪೂರ್ವಕವಾಗಿಯೇ ಈ ವೈಯಕ್ತಿಕ ಸಂಪರ್ಕ ಕಾಪಾಡಿಕೊಳ್ಳುತ್ತಿದ್ದರು.

ಯಡಿಯೂರಪ್ಪ ಕಾರ್ಯಕರ್ತರ ಬೆಳವಣಿಗೆಗೆ ಕೊಟ್ಟ ಮಹತ್ವ ಅಪ್ರತಿಮ. ಅವರು ನಂಬಿದ್ದು - ಒಬ್ಬ ಸಮರ್ಥ ಕಾರ್ಯಕರ್ತ ಇಂದಿನ ಕಾರ್ಯದರ್ಶಿಯಾದರೆ, ನಾಳೆ ಅವನು ಮಂಡಲ ಅಧ್ಯಕ್ಷ, ನಂತರ ಜಿಲ್ಲಾ ಪದಾಧಿಕಾರಿ, ಒಂದಿನ ಶಾಸಕ ಕೂಡ ಆಗಬಲ್ಲ ಎಂದು. ಯುವ ಕಾರ್ಯಕರ್ತರನ್ನು ಗುರುತಿಸಿ, ಅವರಿಗೆ ಜವಾಬ್ದಾರಿ ನೀಡಿ, ವೇದಿಕೆ ಕೊಡುತ್ತಿದ್ದರು. ಸಭೆಗಳಲ್ಲಿ ಹಿರಿಯ ನಾಯಕರ ಜೊತೆ ಕೂರಿಸಿ ಅನುಭವ ಕೊಡಿಸುತ್ತಿದ್ದರು. 'ನೀನು ಮಾಡಬಲ್ಲೆ' ಎಂದು ಧೈರ್ಯ ಹೇಳುತ್ತಿದ್ದರು. ಈ ಪ್ರೋತ್ಸಾಹ ಅನೇಕ ಕಾರ್ಯಕರ್ತರನ್ನು ದೊಡ್ಡ ನಾಯಕರನ್ನಾಗಿ ರೂಪಿಸಿತು.

ಯಡಿಯೂರಪ್ಪ ತಮ್ಮ ರಾಜಕೀಯ ಜೀವನದಲ್ಲಿ ಅನೇಕ ಬಾರಿ ಕಷ್ಟದ ಸಮಯ ಎದುರಿಸಿದ್ದಾರೆ - ಚುನಾವಣೆ ಸೋಲು, ಪಕ್ಷದ ಒಳ ಜಗಳ, ಸರ್ಕಾರ ಉರುಳಿಸುವ ಪ್ರಯತ್ನ, ನ್ಯಾಯಾಲಯದ ಮೆಟ್ಟಿಲೇರಬೇಕಾದ ಪ್ರಸಂಗ. ಇಂಥ ಕ್ಷಣಗಳಲ್ಲಿ ಕಾರ್ಯಕರ್ತರು ಮಾತ್ರ ಅವರ ಜೊತೆ ದೃಢವಾಗಿ ನಿಂತರು. ಅದೇ ರೀತಿ ಯಡಿಯೂರಪ್ಪ ಕೂಡ ಕಾರ್ಯಕರ್ತರ ಕಷ್ಟ ಕಾಲದಲ್ಲಿ ಕೈ ಬಿಡಲಿಲ್ಲ, ಇದು ಒಂದು ಭಾವನಾತ್ಮಕ ಬಂಧವನ್ನು ನಿರ್ಮಿಸಿತು - ಇದು ಕೇವಲ ರಾಜಕೀಯ ಸಂಬಂಧ ಮಾತ್ರವಲ್ಲ, ಮಾನವೀಯ ಸಂಬಂಧ.

ಯಡಿಯೂರಪ್ಪನವರು ಸ್ವತಃ ಭಾವುಕ ಮನಸ್ಸಿನ ವ್ಯಕ್ತಿ. ಅವರ ಭಾಷಣದಲ್ಲಿ ಅದು ವ್ಯಕ್ತವಾಗುತ್ತಿತ್ತು. ಈ ಭಾವನಾತ್ಮಕ ಸಂಪರ್ಕ ಕಾರ್ಯಕರ್ತರ ಮನಸ್ಸಿನಲ್ಲಿ ಶಾಶ್ವತ ನಿಷ್ಠೆ ಬಿತ್ತಿತು. ರಾಜಕಾರಣದಲ್ಲಿ ಭಾವನೆಗಳೆಂದೂ ದೌರ್ಬಲ್ಯವಲ್ಲ ಎಂದು ಭಾವಿಸಿ ಅದನ್ನು ಶಕ್ತಿಯಾಗಿಸಿಕೊಂಡವರು ಯಡಿಯೂರಪ್ಪನವರು. ನಾಯಕ ಕಾರ್ಯಕರ್ತನಿಗಾಗಿ ಮಿಡಿದಾಗ ಕಾರ್ಯಕರ್ತ ಜೀವ ಕೊಡಲು ಸಿದ್ಧನಾಗುತ್ತಾನೆ. ಇದು ಯಡಿಯೂರಪ್ಪನವರ ರಾಜಕೀಯ ಜೀವನದಲ್ಲಿ ಜೊತೆಯಾಗಿಸಿಕೊಂಡ ಸತ್ಯದ ಸಂಗತಿ. ಅವರ ಮತ್ತು ಕಾರ್ಯಕರ್ತರ ನಂಟು ಕೇವಲ ರಾಜಕೀಯ ಸಂಬಂಧ ಅಲ್ಲ - ಅದೊಂದು ಭಾವನಾತ್ಮಕ ಕುಟುಂಬ ಸಂಬಂಧ. ಒಂದು ಕಡೆ ನಾಯಕ ತನ್ನ ಕಾರ್ಯಕರ್ತನನ್ನು ಮಗನಂತೆ ನೋಡಿಕೊಂಡರೆ, ಇನ್ನೊಂದು ಕಡೆ ಕಾರ್ಯಕರ್ತ ನಾಯಕನನ್ನು ತಂದೆಯಂತೆ ಗೌರವಿಸಿದ ರಾಜಕಾರಣದ ಅಪರೂಪದ ಮಾದರಿ. ಇದು ಪ್ರತಿಯೊಬ್ಬ ರಾಜಕೀಯ ನಾಯಕನಿಗೂ ಅನುಕರಣೀಯ.



> **ವರ್ಷ ಪೂರ್ತಿ ಕಾರ್ಯಕರ್ತರ ಜೊತೆ**
>
> ಒಬ್ಬ ಸಾಮಾನ್ಯ ಕಾರ್ಯಕರ್ತ ರಾತ್ರಿ ಊರು ಸುತ್ತಿ, ಪೋಸ್ಟರ್ ಹಚ್ಚಿ, ಮೀಟಿಂಗ್ ಜೋಡಿಸಿ ಆಯಾಸಗೊಂಡಾಗ - ಅವನ ಮನೆಯ ಸ್ಥಿತಿ ಏನಿರಬಹುದು ಎಂದು ಯಡಿಯೂರಪ್ಪ ಯೋಚಿಸುತ್ತಿದ್ದರು. ಆದಕ್ಕೇ ಅವರು ಚುನಾವಣಾ ಕಾಲದಲ್ಲಿ ಮಾತ್ರವಲ್ಲ, ವರ್ಷ ಪೂರ್ತಿ ಕಾರ್ಯಕರ್ತರ ಜೊತೆ ಇರುತ್ತಿದ್ದರು. ಕಾರ್ಯಕರ್ತರ ಸಮಸ್ಯೆಗಳನ್ನು ಕೇಳಿ ತಮ್ಮ ಸಹಾಯಕರಿಗೆ ನೋಟ್ ಮಾಡಿಸಿ ಮರೆತುಬಿಡುವ ನಾಯಕರುಗಳ ಮಧ್ಯೆ, ಅವನ ಸಮಸ್ಯೆಗಳಿಗೆ ಸ್ಪಂದಿಸಿ ಮಾಡಬೇಕಾದ ಸಹಾಯವನ್ನು ತಕ್ಷಣ ಮಾಡಿಸುತ್ತಿದ್ದರು. ಬಿಜೆಪಿಯ ಬಹುತೇಕ ಕಾರ್ಯಕರ್ತರಿಗೆ ಬಿಎಸ್‌ವೈರವರಿಂದ ತಮ್ಮ ಮನೆಯ ಶುಭದಲ್ಲಿ ಶುಭಾಶಯ, ಸಂಕಷ್ಟದಲ್ಲಿ ಸಾಂತ್ವನ ಯಾವಾಗಲೂ ಇರುತ್ತಿತ್ತು. ಕಾರ್ಯಕರ್ತ ಬೆಳೆದರೆ ಪಕ್ಷ ಬೆಳೆಯುತ್ತದೆ. ಪಕ್ಷ ಬೆಳೆದರೆ ನಾವು ಬೆಳೆಯುತ್ತೇವೆ. ಅದಕ್ಕಾಗಿ ನನ್ನ ಕಾರ್ಯಕರ್ತ ಯಾವತ್ತೂ ನನಗೆ ಮೊದಲು. ಇದು ಅವರು ಸಂಘಟನೆಯ ವೈಚಾರಿಕ ಸಿದ್ಧಾಂತದೊಂದಿಗೆ ಅಳವಡಿಸಿಕೊಂಡಿದ್ದ ಮತ್ತೊಂದು ಸಿದ್ಧಾಂತ.

ವಿಂಡ್ ಟನಲ್ ಜಂಕ್ಷನ್‌ಗೆ ಜಿಬಿಎ ಮುಖ್ಯ ಆಯುಕ್ತರ ಭೇಟಿ

ಹೊಸ ತಂತ್ರಜ್ಞಾನ ಬಳಸಿ ಕೆಳಸೇತುವೆ ನಿರ್ಮಾಣ



• **ಬೆಂಗಳೂರು:** ಹಳೆ ವಿಮಾನ ನಿಲ್ದಾಣ ರಸ್ತೆಯ ವಿಂಡ್ ಟನಲ್ ಜಂಕ್ಷನ್‌ನಲ್ಲಿ ಕೈಗೆತ್ತಿಕೊಂಡಿರುವ ಕೆಳಸೇತುವೆ ಕಾಮಗಾರಿಯನ್ನು ಅತ್ಯಾಧುನಿಕ ತಂತ್ರಜ್ಞಾನ ಬಳಸಿ 3 ತಿಂಗಳೊಳಗಾಗಿ ಪೂರ್ಣಗೊಳಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು. ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಹಳೆ ವಿಮಾನ ನಿಲ್ದಾಣ ರಸ್ತೆಯ ಯು.ಆರ್. ರಾವ್ ಉಪಗ್ರಹ ಕೇಂದ್ರದ ಬಳಿ ಇರುವ ವಿಂಡ್ ಟನಲ್ ಜಂಕ್ಷನ್‌ಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ಹೆಚ್ಚಿನ ಸಂಚಾರ ದಟ್ಟಣೆಯುಳ್ಳ ಪ್ರದೇಶವಾಗಿರುವುದರಿಂದ ಹೆಚ್ಚುವರಿ ಯಂತ್ರೋಪಕರಣಗಳನ್ನು ಬಳಸಿಕೊಂಡು, ಮೂರು ಪಾಳಿಗಳಲ್ಲಿ ಕಾಮಗಾರಿ ನಡೆಸಿ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ನಿರ್ದೇಶನ ನೀಡಿದರು.

ಕೆಳಸೇತುವೆ ಕಾಮಗಾರಿಗೆ ಸಂಚಾರ ಪೊಲೀಸ್ ವಿಭಾಗವು ಈಗಾಗಲೇ ಅನುಮತಿ ನೀಡಿದ್ದು, ಎಚ್.ಎ.ಎಲ್ ಕಡೆಯಿಂದ ನಗರದೊಳಗೆ ಬರುವ ರಸ್ತೆ ಭಾಗದಲ್ಲಿ ವಾಹನ ಸಂಚಾರವನ್ನು ನಿರ್ಬಂಧಿಸಿ ಆರ್.ಸಿ.ಸಿ ಗೋಡೆ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ಸದರಿ ಭಾಗದಲ್ಲಿ ಇರುವ ಜಲಮಂಡಳಿ ಪೈಪ್ ಲೈನ್, ಕೇಬಲ್ ಸೇರಿದಂತೆ ಇತರೆ ಉಪಯುಕ್ತತೆಗಳನ್ನು ಸ್ಥಳಾಂತರಿಸಿ ಕಾಮಗಾರಿ ನಿರ್ವಹಿಸಲು ಅಧಿಕಾರಿಗಳಿಗೆ ಸೂಚಿಸಿದರು. ವಿಂಡ್ ಟನಲ್ ಜಂಕ್ಷನ್‌ನಲ್ಲಿ 19 ಕೋಟಿ ರೂ. ವೆಚ್ಚದಲ್ಲಿ 300 ಮೀಟರ್ ಉದ್ದದ ಕೆಳಸೇತುವೆ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ಎರಡೂ ಬದಿಗಳಲ್ಲಿ 7.5 ಮೀಟರ್ ಅಗಲದ 6 ಪಥಗಳ ಕೆಳಸೇತುವೆ ನಿರ್ಮಿಸಲಾಗುತ್ತಿದೆ. ಶೇ.60 ರಷ್ಟು ಕಾಮಗಾರಿ ಪೂರ್ಣಗೊಂಡಿದೆ. ಕೆಳಸೇತುವೆ ಕಾಮಗಾರಿ ನಡೆಯುವ ಅವಧಿಯಲ್ಲಿ ತಾತ್ಕಾಲಿಕ ರಸ್ತೆಗಳನ್ನು ನಿರ್ಮಿಸಿ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ ಎಂದು ಕಾರ್ಯಪಾಲಕ ಅಭಿಯಂತರರು ಆಯುಕ್ತರಿಗೆ ಮಾಹಿತಿ ನೀಡಿದರು.

17 ಕಿ.ಮೀ. ರಸ್ತೆ ಸಮಗ್ರ ಅಭಿವೃದ್ಧಿ

ಹಳೆ ವಿಮಾನ ನಿಲ್ದಾಣ ರಸ್ತೆಯ ಎ.ಎಸ್.ಸಿ ಜಂಕ್ಷನ್ ನಿಂದ ಹೋಪ್ ಫಾರ್ಮ್ ಜಂಕ್ಷನ್ ವರೆಗಿನ 17 ಕಿ.ಮೀ ಉದ್ದದ ಮಾರ್ಗವನ್ನು 3 ಕೆಳಸೇತುವೆಗಳನ್ನು ಒಳಗೊಂಡಂತೆ ಸಮಗ್ರವಾಗಿ ಅಭಿವೃದ್ಧಿಪಡಿಸಲು 2015 ರಲ್ಲಿ ಕಾರ್ಯಾದೇಶ ನೀಡಲಾಗಿತ್ತು. ಅದರಂತೆ, 2022ರಲ್ಲಿ ಕುಂದಲಹಳ್ಳಿ ಜಂಕ್ಷನ್ ಹಾಗೂ 2023 ರಲ್ಲಿ ಸುರಂಜನ್ ದಾಸ್ ಜಂಕ್ಷನ್‌ನಲ್ಲಿ ಕೆಳಸೇತುವೆ ಕಾಮಗಾರಿಗಳು ಪೂರ್ಣಗೊಂಡು ವಾಹನ ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ. ವಿಂಡ್ ಟನಲ್ ಜಂಕ್ಷನ್ ಕಾಮಗಾರಿಗೆ ಸಂಚಾರ ಪೊಲೀಸ್ ವಿಭಾಗದಿಂದ ಅನುಮತಿ ಲಭ್ಯವಾಗದ ಕಾರಣ ವಿಳಂಬವಾಗಿತ್ತು. ಇದೀಗ ಪೊಲೀಸ್ ಅನುಮತಿ ದೊರೆತಿರುವುದರಿಂದ 3 ತಿಂಗಳೊಳಗೆ ಕಾಮಗಾರಿ ಪೂರ್ಣಗೊಳಿಸಲು ಯೋಜನೆ ರೂಪಿಸಲಾಗಿದೆ ಎಂದು ಪಾಲಿಕೆ ತಿಳಿಸಿದೆ.

ಕಾಮಗಾರಿಗೆ ಗುದ್ದಲಿಪೂಜೆ



• **ಹಾಸನ:** ನಗರದ ಚನ್ನಪಟ್ಟಣ ಬಡಾವಣೆಯಲ್ಲಿ ಬುಧವಾರ ಎಸ್‌ಸಿಪಿ ಯೋಜನೆ ಅಡಿಯಲ್ಲಿ 50 ಲಕ್ಷ ರೂ.ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಸ್ವರೂಪ್ ಪ್ರಕಾಶ್ ಗುದ್ದಲಿ ಪೂಜೆ ನೆರವೇರಿಸಿದರು.

ಮಳೆಗಾಲ ಪ್ರಾರಂಭವಾಗಿರುವ ಪ್ರಸ್ತುತ ಸಂದರ್ಭದಲ್ಲಿ ಒಳಚರಂಡಿ ಹಾಗೂ ರಸ್ತೆ ಸಮಸ್ಯೆಯಿಂದ ಬಳಲುತ್ತಿದ್ದ ಬಡಾವಣೆ ಜನರಿಗೆ ಅವರ ಮನವಿಗೆ ಸ್ಪಂದಿಸಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಇನ್ನು ಕೆಲವೇ ದಿನದಲ್ಲಿ ಕಾಮಗಾರಿ ಮುಗಿಸಿ ಜನರಿಗೆ ಅನುಕೂಲ ಕಲ್ಪಿಸಲಾಗುವುದು ಎಂದರು.

ಗುದ್ದಲಿ ಪೂಜೆ ನೆರವೇರಿಸುವ ವೇಳೆ ಪಕ್ಷದ ಮುಖಂಡರು ಕಾರ್ಯಕರ್ತರು ಹಾಗೂ ಬಡಾವಣೆಯ ಮುಖಂಡರು ಜೊತೆಗೆ ಸಹಕಾರ ನೀಡಿದರು. ಬಡಾವಣೆಗೆ ಇನ್ನಷ್ಟು ಸಮಸ್ಯೆಗಳ ಬಗ್ಗೆ ಅಲ್ಲಿನ ಜನರು ನನ್ನ ಗಮನಕ್ಕೆ ತಂದಿದ್ದು ಮುಂದಿನ ದಿನದಲ್ಲಿ ಅವುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ತಿಳಿಸಿದರು.

IN THE COURT OF THE 3rd ADDL. CIVIL JUDGE AND JMFC. AT ANEKAL

C.Mis. No. 748/2026

BETWEEN : SMT. VENKATESHAMMA & OTHERS ...PETITIONERS

AND : THE THASILDHAR ANEKAL ...RESPONDENT

PUBLIC NOTICE

Whereas the petitioners have filed the above petition for seeking death certificate of father namely THIRUMALAPPA he was died on 21.06.1988 at Krishna Dhoddi Village, Jigani Hobli, Anekal Taluk, Bengaluru District for necessary relief take notice that if any interested persons in respect of Death certificate of THIRUMALAPPA are hereby called upon to appear before this Hon'ble court either personally or through on Advocate duly instructed on **29.06.2026 at 11:00 A.M.** otherwise the matter will be heard and decided ex-parte.

Given under my hand and seal of the Court this is the 6th day of May 2026.

By Order of the Court
Sd/- Sheristedar
Civil Judge (Jr. Dn) and JMFC Court, Anekal

Advocate for Petitioners.
Smt.Ashwini. V, Advocate
at Anekal, Anekal Taluk, Bengaluru-562106.

CHANGE OF NAME

I, Mr. **MUNGAMURU SIVAKUMAR REDDY**, S/o Mungamuru Chandrashekar, age 65 years, R/at No. S1, 2nd Floor, Sai Residency, Site No. 134/135, 1st Cross, Bhuvaneshwari Nagar, Bengaluru-560 092 do hereby declare that both the names i.e. **MUNGAMURI SIVAKUMAR REDDY** and **MUNGAMURU SIVAKUMAR REDDY** are one and the same and refers to me only, but my correct name is **MUNGAMURU SIVAKUMAR REDDY**, vide affidavit dated 05-05-2026, sworn before Advocate and Notary **L.B. ANASUYAMMA** at Bangalore.

IN THE COURT OF PRL SENIOR CIVIL JUDGE AND CJM AT CHIKKABALLAPUR

RA NO. 44 /2024

BETWEEN: 1 **SRI.Ganeshappa,** S/o Late Chikka Munishamy aged about 52 years R/at Gangarekaluve Village, Kasaba hobli, Chikkaballpur Taluk ...Petitioner

AND 1. **Sri. Ramesh** S/o Late ChikkaNagappa aged about 59 years R/at Gangarekaluve village, Kasaba Hobli,ChikkaballapurTaluk ... Respondent

SUMMONS TO RESPONDENT NO.1

1. Sri. Ramesh S/o Late Chikka Nagappa, aged about 61 years Residing at Gangarekaluve Villae, Kasaba hobli, chikkaballapur Taluk and District.

Whereas, the appellant have filed the above appeal (R.A No. 44/2024) against the preliminary decree passed by the 1st Additional Civil Judge and JMFC at Chikkaballapura in O.S No. 342 of 2016 in a suit for partition and separate possession in respect of suit schedule to properties, and during pendency of the above regular appeal the he summons and RPAD issued to the Respondent No.1 returned back for the reason not in the address mentioned in the cause title and hence you are hereby called upon to appear before the Hon'ble Additional Senior Civil Judge and JMFC court at Chikkaballapur in R.A No. 44/2024 in person or through pleader on 08.06.26 at 11.00 A.M to answer the same, failing which, the above suit filed by the plaintiff will be decided in your absence as ex-parte.

SCHEDULE

1. All that part and parcel of the Immovable Property bearing sy. 2 acres 36 guntas situated at No. 43/1 Measuring Lakkinayakanahalli village, Nandi Hobli, Chikkaballapura Taluk & Dsitrict, and bounded on the: East by: Land of Thimmaiah; West by: Road; North by: Land of Muniyamma South by: Land of Muniyappa

2. All that part and parcel of the Immovable Property bearing sy. No. 124/1 measuring 1 acres 27 guntas, situated at Gangarekaluve Village, Kasaba hobli, Chikkaballapura Taluk & Dsitrict, and bounded on the: East by: Land of Kyathappa; West by: Land of Basavarajappa; North by: Road South by: Land of Thimmaiah.

By Order of the Court
Chief Ministerial Officer, Senior Civil Judge & C.J.M.Court, CHICKBALLAPURA-562 101

Advocate for Apeplliant:
K.S Ravindra Prasad (KSR)LL,M 2nd Floor, Krishnappa Building opposite to Palamrutha shardha Talkies Road, Near KSRTC Bus Stand, Kolar PIN: 563101

ಕರ್ನಾಟಕ ಸರ್ಕಾರ

ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ದಾವಣಗೆರೆ.

ಸಂಖ್ಯೆ:ಕಾಪಾಇಂ/ಪಂರಾಇಂ/ವಿದಾ/ಇ-ಪ್ರೊಕ್ಯೂರ್ ಮೆಂಟ್//2026-27/210
ದಿನಾಂಕ:-06/5/2026

ಕೆ.ಪಿ.ಪಿ ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಈ ವಿಭಾಗದಿಂದ 2026-27ನೇ ಸಾಲಿಗೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ದಾವಣಗೆರೆ ಹಾಗೂ 5 ಉಪವಿಭಾಗಗಳಿಗೆ ಅಗತ್ಯವಿರುವ ಡಾಟಾ ಎಂಟ್ರಿ ಆಪರೇಟರ್‌ಗಳು, ವಾಹನ ಚಾಲಕರು ಮತ್ತು ಗ್ರೂಪ್-ಡಿ ಸೇವೆಯನ್ನು ಹೊರ ಸಂಪನ್ಮೂಲಗಳಿಂದ ಪಡೆಯಲು ಕರೆದಿರುವ ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಇಲಾಖಾ ನಿಯಮಾವಳಿಯ ಮೇರೆಗೆ ಕೆಪಿಪಿ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು Standard bid documents ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:16-5-2026 ರ ಸಾಯಂಕಾಲ 5.00 ಗಂಟೆಯವರೆಗೆ ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ವೆಬ್ ಸೈಟ್‌ನಲ್ಲಿ ನೋಡಬಹುದು.

ವಾಸಾಇ/ಡಿಐಜಿ/64/ ಕೆಎಸ್‌ಎಂಸಿಎ/2026-27 — ಸಹಿ/- ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ದಾವಣಗೆರೆ.

ಕರ್ನಾಟಕ ಸರಕಾರ (ಜಿಲ್ಲಾ ಪಂಚಾಯತ್, ಗದಗ)

ಕಾರ್ಯನಿರ್ವಾಹಕ ಇಂಜಿನೀಯರ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಗದಗ.

ನಂ:ಪಂ.ರಾಜ್.ಇಂ.ವಿ/ಗದಗ/ಪಿ.ಬಿ.3/ಟೆಂಡರ/2026-27/257
ದಿನಾಂಕ : 06-05-2026

ಕೆಪಿಪಿ ಪೋರ್ಟಲ್ ಟೆಂಡರ ಪ್ರಕಟಣೆ
Standard Bid Document KW-1, KW-2,

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್-2000 ನಿಯಮದಂತೆ Standard Bid Document KW-1,KW-2, ರ ನಿಯಮುಗಳನ್ವಯ ಅರ್ಹ ಗುತ್ತೇದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ 9 ಕಾಮಗಾರಿಗಳ ಟೆಂಡರನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ : 2025-26 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ, ಟೆಂಡರನ್ನು ಆಹ್ವಾನಿಸಲಾಗಿದೆ. ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, (https://kppp.karnataka.gov.in) ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ ಈ ಕೆಳಗಿನಂತೆ ಇರುತ್ತವೆ.

WORK_INDENT : 25786, 26379, 26380, 26382, 26385, 26389, 26407, 26417, 26422

ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ. **16.77** ಲಕ್ಷ ಮತ್ತು ಗರಿಷ್ಠ ಮೊತ್ತ ರೂ. **25.15** ಲಕ್ಷಗಳು ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ :- ಅರ್ಜಿ ಬೆಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಇ.ಎಂ.ಡಿ. ಸಂಬಂಧಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.

ಇ-ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್-ಬಿ ಯನ್ನು ವೆಬ್‌ಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ : **07-05-2026** ರಿಂದ **22-05-2026** ರಂದು 16.00 ಗಂಟೆಯವರೆಗೆ. ಟೆಂಡರ ತೆರೆಯುವ ದಿನಾಂಕ : **25-05-2026** ರಂದು 16.30 ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗೆದಾರರಲ್ಲಿ ಆರ್ಥಿಕ ಬಿಡ್‌ದಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ 20 ದಿನಗಳ ಒಳಗಾಗಿ (ಷರತ್ತು ಕ್ರ.ಸಂ :13 ರಂತೆ) ಭರಣಾ ಮಾಡಬೇಕು. ಇ-ಪದ್ಧತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾಜ್. ಇಂಜಿನೀಯರಿಂಗ್ ವಿಭಾಗ, ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/49/2026-27

IN THE COURT OF THE MOTOR ACCIDENT CLAIMS TRIBUNAL AT BANGALORE

M.V.C. No. 6774 / 2025 (SCCH-05)

BETWEEN : BASHEER ABDUL SHAIK and other ...PETITIONERS

AND : HUZAIF UZ ZAMA & ANOTHER ...RESPONDENTS

NOTICE TO RESPONDENT No. 1

HUZAIF UZ ZAMA Rafeeq Ahmed No : 47, 1st Floor, Berlie Street, 3rd Cross, Shanthi Nagar, Bangalore - 560027. R C Owner of the Motor Cycle bearing Reg. No. KA-03-JD-5238.

Whereas, the above Claim Petition is filed by the Petitioner against you for seeking compensation for a sum of Rs. 50,00,000/- account of Death of Late ShaikAslamBasheer in the Road Traffic Accident that occurred On. 20.03.2025 at about 04:30 A.M, the Deceased Late. ShaikAslamBasheer, was travelling as Pillion rider on Motor Cycle bearing Reg. No. KA-03-JD-5238, when approached near Anepalya Junction, Hosur Lashakar Road, Anepalya, Bangalore, the rider of the said Motor cycle was riding at high speed in rash and negligent manner so as to endanger to the public, hence lost control of the Motor cycle, dashed against the Electric Poll, caused the accident.

You are hereby Summoned to appear in this Court in person or pleader duly instructed **on 08.06.2026 at 11-00 A.M.** To answer the Claim Petition.

Take notice that in default of your appearance on the said date, the same will be heard and determined in your absence.

Given under my hand and seal of the court 24.04.2026.

By Order of the Court, Assistant Registrar, Court of Small Causes, Bangalore.

ADVOCATE FOR PETITIONER :
VINODA B C, ADVOCATE
No. 5/9, 50 Feet Road, Muneshwara Block, Girinagar, Bangalore-560 058.

ಜಾಹೀರಾತಿಗಾಗಿ ಸಂಪರ್ಕಿಸಿ:
9845438807/ 9611755391

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ

ನಂ. ಗ್ರಾಕುನೀ&ನೈವಿ/ಹಾವೇರಿ/ಪಿಬಿ-4/ಟೆಂಡರ್:02/2026-27/137
ದಿನಾಂಕ : 04-05-2026

ಅಲ್ಪಾವಧಿ ಟೆಂಡರ ಪ್ರಕಟಣೆ
(E-GOK ಇ-ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ)

MVS (O&M) ಯೋಜನೆಯಡಿ ಹಾವೇರಿ ತಾಲೂಕಿನ ಈ ಕೆಳಕಂಡ ಗ್ರಾಮದಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಯ ಕಾರ್ಯಾಚರಣೆ & ನಿರ್ವಹಣೆ (O&M) ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ.

(1) Tender queries/ Clarifications ಗೆ ಕೊನೆಯ ದಿನ ಮತ್ತು ಸಮಯ : ದಿನಾಂಕ : **11-05-2026** ರ 11:00 ಗಂಟೆವರೆಗೆ (2) E-Procurement ನಲ್ಲಿ ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನ ಮತ್ತು ಸಮಯ ದಿನಾಂಕ : **14-05-2026** ರ 17:00 ಗಂಟೆವರೆಗೆ (3) ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಬಿಡ್ ತೆರೆಯುವ (ಸಾಧ್ಯವಾದಲ್ಲಿ) : ದಿನಾಂಕ : **15-05-2026**ರ 17:30 ಗಂಟೆ ನಂತರ

ಇಂಡೆಂಟ್ ನಂ :- (1) Providing Operation and Maintenance of Multi Village Water Supply scheme to Kanavalli and Other 8 villages in Haveri Taluk of Haveri District (RWSSD/2024-25/WS/WORK_INDENT8544/CALL-4)

(2) Providing Operation and Maintenance of Multi Village Water Supply scheme to Agadi and Other 7 villages in Haveri Taluk of Haveri District. (RWSSD/2024-25/WS/WORK_INDENT8413/CALL-3)

ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E.GOK ಇ-ಪ್ರಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ https://kppp.karnataka.gov.in ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.

ಸಹಿ/- ಕಾರ್ಯನಿರ್ವಾಹಕ ಇಂಜನೀಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ.

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/79/2026-27

ಕರ್ನಾಟಕ ಸರ್ಕಾರ

ನಗರಸಭೆ ಕಾರ್ಯಾಲಯ, ಶಹಾಪುರ

ಜಿ: ಯಾದಗಿರಿ, ಕರ್ನಾಟಕ ರಾಜ್ಯ.

Website:www.shahapurcity.gov.in e-mail: itstaff_ulb_shahapur@yahoo.com,

ಕ್ರ.ಸಂ/ನಸಶ/ಟೆಂಡರ್/ಜಾ.ಪ್ರ./2026-27 — ದಿನಾಂಕ:05.05.2026

ಇ-ಪ್ರೆಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999-2000ರ ಪ್ರಕಾರ ಪಾರದರ್ಶಕತೆ ಕಾಯ್ದೆ-2000 ನಿಯಮದಂತೆ 2025-26ನೇ ಸಾಲಿನ ಅಮೃತ್ 2.0 ಅನುದಾನದಲ್ಲಿ ತೆಗೆದುಕೊಂಡ ಕಾಮಗಾರಿಯ ಅರ್ಹ ಗುತ್ತಿಗೆದಾರರಿಗೆ/ ಏಜೇನ್ಸಿರವರು ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗೊಳಪಟ್ಟಂತೆ ಇ-ಪ್ರೆಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ www.kppp.karnatak.gov.in ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

1) Name of works: IMPROVEMENT OF NAGARKERE (LAKE) IN SHAHAPUR CMC LIMITS UNDER AMRUT 2.0. **Indent Number:** DMA/2026-27/OW/WORK_INDENT57633. **Estimate cast (in lakhs):** 234.24. **E M D (in Rs):** As per E-Portal. **Class of contractor:** Class 1 and Above.

1) ಟೆಂಡರ್ ಪ್ರಾರಂಭ ದಿನಾಂಕ: 05/05/2026 2) ಭರ್ತಿ ಮಾಡಿದ ಟೆಂಡರಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 19/05/2026 ಸಾಯಂಕಾಲ 5:30 ಘಂಟೆಗೆ 3) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 21/05/2026 ಬೆಳಗ್ಗೆ 11.00 ಘಂಟೆಗೆ 4) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: 25/05/2026 ಬೆಳಗ್ಗೆ 11.00 ಘಂಟೆಗೆ 5) ವಿಳಾಸ: www.kppp.karnatak.gov.in

ಸಹಿ/- ಪೌರಾಯುಕ್ತರು, ನಗರಸಭೆ ಶಹಾಪುರ

ವಾ.ಸಾ.ಸಂ.ಇ/ಯಾದಗಿರಿ/53/ಕೆ.ಎಸ್.ಎಂ.ಸಿ.ಎ/2026-27

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಧಾರವಾಡ

ಫೋ: (0836) 2213838 Email: eedharwad@gmail.com

ನಂ.ಎಚ್.ಡಿಎಂಸಿ/66/07/02/2026-27 — ದಿನಾಂಕ: 06-05-2026

ಅಲ್ಪಾವಧಿ/ಪೂರ್ಣಾವಧಿ ಇ-ಟೆಂಡರ್ ಅಧಿಸೂಚನೆ

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಿವಿಧ ಯೋಜನೆ ಅನುದಾನದಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000ರ ನಿಯಮದನ್ವಯ ಕರ್ನಾಟಕ ಪಬ್ಲಿಕ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಪಿಡಬ್ಲ್ಯುಡಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಈ ಕೆಳಕಂಡ ಕಾಮಗಾರಿಗಳ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಪಾಲಿಕೆ ವಾರ್ಡ ಸದಸ್ಯರ /ಮಹಾಪೌರರ/ಉಪಮಹಾಪೌರರ/ಅಮೃತ 2.0 ಅನುದಾನ

1) ಇಂಡೆಂಟ್ ನಂ. 53896/9.93 ಲಕ್ಷ/ಸಾಮಾನ್ಯ 2) ಇಂಡೆಂಟ್ ನಂ. 54610/10.00ಲಕ್ಷ/ಸಾಮಾನ್ಯ 3) ಇಂಡೆಂಟ್ ನಂ. 54149/13.00 ಲಕ್ಷ/ಸಾಮಾನ್ಯ 4) ಇಂಡೆಂಟ್ ನಂ. 54147/2.25 ಲಕ್ಷ/ಸಾಮಾನ್ಯ 5) ಇಂಡೆಂಟ್ ನಂ. 54612/10.00 ಲಕ್ಷ/ಸಾಮಾನ್ಯ 6) ಇಂಡೆಂಟ್ ನಂ. 49139/2.00ಲಕ್ಷ/ಸಾಮಾನ್ಯ 7) ಇಂಡೆಂಟ್ ನಂ. 56116/8.50 ಲಕ್ಷ/ಪರಿಶಿಷ್ಟ ಜಾತಿ 8) ಇಂಡೆಂಟ್ ನಂ. 55124/30.00 ಲಕ್ಷ/ಸಾಮಾನ್ಯ 9) ಇಂಡೆಂಟ್ ನಂ. 55128/10.00 ಲಕ್ಷ/ಸಾಮಾನ್ಯ 10) ಇಂಡೆಂಟ್ ನಂ. 54105/ 14.00 ಲಕ್ಷ/ಸಾಮಾನ್ಯ 11) ಇಂಡೆಂಟ್ ನಂ. 48796/10.00 ಲಕ್ಷ/ ಸಾಮಾನ್ಯ 12) ಇಂಡೆಂಟ್ ನಂ. 54159/4.05 ಲಕ್ಷ/ಸಾಮಾನ್ಯ 13) ಇಂಡೆಂಟ್ ನಂ. 53141/7.10 ಲಕ್ಷ/ಸಾಮಾನ್ಯ 14) ಇಂಡೆಂಟ್ ನಂ. 53145/18.45 ಲಕ್ಷ/ಸಾಮಾನ್ಯ 15) ಇಂಡೆಂಟ್ ನಂ. 54629/7.00 ಲಕ್ಷ/ಸಾಮಾನ್ಯ 16) ಇಂಡೆಂಟ್ ನಂ. 54075/15.00 ಲಕ್ಷ/ಸಾಮಾನ್ಯ 17) ಇಂಡೆಂಟ್ ನಂ. 54145/15.00 ಲಕ್ಷ/ಸಾಮಾನ್ಯ 18) ಇಂಡೆಂಟ್ ನಂ. 53571/25.00 ಲಕ್ಷ/ಸಾಮಾನ್ಯ 19) ಇಂಡೆಂಟ್ ನಂ. 54626/4.10 ಲಕ್ಷ/ಸಾಮಾನ್ಯ 20) ಇಂಡೆಂಟ್ ನಂ. 54158/5.11 ಲಕ್ಷ/ಸಾಮಾನ್ಯ 21) ಇಂಡೆಂಟ್ ನಂ. 54141/10.00 ಲಕ್ಷ/ಸಾಮಾನ್ಯ 22) ಇಂಡೆಂಟ್ ನಂ. 51287/14.10 ಲಕ್ಷ/ಸಾಮಾನ್ಯ 23) ಇಂಡೆಂಟ್ ನಂ. 54630/35.00 ಲಕ್ಷ/ಸಾಮಾನ್ಯ 24) ಇಂಡೆಂಟ್ ನಂ. 56117/10.00 ಲಕ್ಷ/ಸಾಮಾನ್ಯ 25) ಇಂಡೆಂಟ್ ನಂ. 53994/32.00 ಲಕ್ಷ/ಸಾಮಾನ್ಯ 26) ಇಂಡೆಂಟ್ ನಂ. 53101/38.00 ಲಕ್ಷ/ಸಾಮಾನ್ಯ 27) ಇಂಡೆಂಟ್ ನಂ. 53103/6.50 ಲಕ್ಷ/ಸಾಮಾನ್ಯ 28) ಇಂಡೆಂಟ್ ನಂ. 53075/13.00 ಲಕ್ಷ/ಸಾಮಾನ್ಯ 29) ಇಂಡೆಂಟ್ ನಂ. 54088/26.60 ಲಕ್ಷ/ಸಾಮಾನ್ಯ 30) ಇಂಡೆಂಟ್ ನಂ. 53901/25.00 ಲಕ್ಷ/ಸಾಮಾನ್ಯ 31) ಇಂಡೆಂಟ್ ನಂ. 49066/7.27 ಲಕ್ಷ/ಸಾಮಾನ್ಯ 32) ಇಂಡೆಂಟ್ ನಂ. 49822/5.00 ಲಕ್ಷ/ಸಾಮಾನ್ಯ 33) ಇಂಡೆಂಟ್ ನಂ. 54391/2.20 ಲಕ್ಷ/ಸಾಮಾನ್ಯ 34) ಇಂಡೆಂಟ್ ನಂ. 51957/10.00 ಲಕ್ಷ/ಸಾಮಾನ್ಯ 35) ಇಂಡೆಂಟ್ ನಂ. 52551/3.00 ಲಕ್ಷ/ಸಾಮಾನ್ಯ 36) ಇಂಡೆಂಟ್ ನಂ. 52217/23.60 ಲಕ್ಷ/ಸಾಮಾನ್ಯ 37) ಇಂಡೆಂಟ್ ನಂ. 54745/6.00 ಲಕ್ಷ/ಸಾಮಾನ್ಯ 38) ಇಂಡೆಂಟ್ ನಂ. 56235/30.27 ಲಕ್ಷ/ಪರಿಶಿಷ್ಟ ಜಾತಿ 39) ಇಂಡೆಂಟ್ ನಂ. 56205/8.05 ಲಕ್ಷ/ಪರಿಶಿಷ್ಟ ಜಾತಿ 40) ಇಂಡೆಂಟ್ ನಂ. 56191/8.05 ಲಕ್ಷ/ಸಾಮಾನ್ಯ 41) ಇಂಡೆಂಟ್ ನಂ. 56152/12.00 ಲಕ್ಷ/ಪ್ರವರ್ಗ-2ಎ 42) ಇಂಡೆಂಟ್ ನಂ. 55242/25.00 ಲಕ್ಷ/ಪರಿಶಿಷ್ಟ ಜಾತಿ 43) ಇಂಡೆಂಟ್ ನಂ. 56145/25.00 ಲಕ್ಷ/ಸಾಮಾನ್ಯ 44) ಇಂಡೆಂಟ್ ನಂ. 57647/11.50ಲಕ್ಷ/ಸಾಮಾನ್ಯ 45) ಇಂಡೆಂಟ್ ನಂ. 57649/30.00 ಲಕ್ಷ/ಪರಿಶಿಷ್ಟ ಜಾತಿ 46) ಇಂಡೆಂಟ್ ನಂ. 56949/10.30 ಲಕ್ಷ/ಸಾಮಾನ್ಯ 47) ಇಂಡೆಂಟ್ ನಂ. 55951/2.50 ಲಕ್ಷ/ಸಾಮಾನ್ಯ 48) ಇಂಡೆಂಟ್ ನಂ. 56976/25.00 ಲಕ್ಷ/ಸಾಮಾನ್ಯ 49) ಇಂಡೆಂಟ್ ನಂ. 55327/21.80 ಲಕ್ಷ/ಸಾಮಾನ್ಯ 50) ಇಂಡೆಂಟ್ ನಂ. 58004/34.00 ಲಕ್ಷ/ಸಾಮಾನ್ಯ 51) ಇಂಡೆಂಟ್ ನಂ. 57958/5.00 ಲಕ್ಷ/ಸಾಮಾನ್ಯ 52) ಇಂಡೆಂಟ್ ನಂ. 57360/5.00 ಲಕ್ಷ/ಸಾಮಾನ್ಯ 53) ಇಂಡೆಂಟ್ ನಂ. 54100/20.00 ಲಕ್ಷ/ಸಾಮಾನ್ಯ 54) ಇಂಡೆಂಟ್ ನಂ. 52924/4.00ಲಕ್ಷ/ಸಾಮಾನ್ಯ 55) ಇಂಡೆಂಟ್ ನಂ. 52884/5.00 ಲಕ್ಷ/ಸಾಮಾನ್ಯ 56) ಇಂಡೆಂಟ್ ನಂ. 49114/34.00 ಲಕ್ಷ/ಸಾಮಾನ್ಯ 57) ಇಂಡೆಂಟ್ ನಂ. 54567/45.00 ಲಕ್ಷ/ಪ್ರವರ್ಗ-1 58) ಇಂಡೆಂಟ್ ನಂ. 57619/8.00 ಲಕ್ಷ/ಪ್ರವರ್ಗ-2ಎ 59) ಇಂಡೆಂಟ್ ನಂ. 57622/7.00 ಲಕ್ಷ/ಪರಿಶಿಷ್ಟ ಜಾತಿ 60) ಇಂಡೆಂಟ್ ನಂ. 57621/19.00 ಲಕ್ಷ/ಪರಿಶಿಷ್ಟ ಜಾತಿ 61) ಇಂಡೆಂಟ್ ನಂ. 56778/12.63 ಲಕ್ಷ/ಪ್ರವರ್ಗ-2ಎ 62) ಇಂಡೆಂಟ್ ನಂ. 56779/12.00 ಲಕ್ಷ/ಪ್ರವರ್ಗ-1 63) ಇಂಡೆಂಟ್ ನಂ. 56777/25.75 ಲಕ್ಷ/ಸಾಮಾನ್ಯ 64) ಇಂಡೆಂಟ್ ನಂ. 57692/8.00 ಲಕ್ಷ/ಪರಿಶಿಷ್ಟ ಜಾತಿ 65) ಇಂಡೆಂಟ್ ನಂ. 57956/5.00 ಲಕ್ಷ/ಸಾಮಾನ್ಯ 66) ಇಂಡೆಂಟ್ ನಂ. 57995/4.88 ಲಕ್ಷ/ಸಾಮಾನ್ಯ 67) ಇಂಡೆಂಟ್ ನಂ. 57993/5.00 ಲಕ್ಷ/ಪ್ರವರ್ಗ-2ಎ 68) ಇಂಡೆಂಟ್ ನಂ. 57991/6.30 ಲಕ್ಷ/ಸಾಮಾನ್ಯ 69) ಇಂಡೆಂಟ್ ನಂ. 57576/410.00 ಲಕ್ಷ/ಸಾಮಾನ್ಯ.

ಒಟ್ಟು 69 ಕಾಮಗಾರಿಗಳು ಮೊತ್ತ ರೂ.1417.29 ಲಕ್ಷಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು ಧಾರವಾಡ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂಖ್ಯೆ: 0836-2213838 ರಿಂದ ಮಾಹಿತಿ ಪಡೆಯಬಹುದು ಮತ್ತು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ http://www.kppp.karnataka.gov.in ರಲ್ಲಿ ಪಡೆಯಬಹುದು. ಒಂದು ವೇಳೆ ಸದರಿ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರಕಾರ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಅ.ಸಂ. 1 ರಿಂದ 69 ರವರೆಗೆ ದಿನಾಂಕ: 08-05-2026 ರಿಂದ ಪಡೆಯಬಹುದಾಗಿದೆ.

ಈ ಮೇಲಿನ ಕಾಮಗಾರಿಗಳಿಗೆ (1 ರಿಂದ 55 ಕ್ಕೆ)	1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 27-05-2026 ಸಂಜೆ 04:00 ಗಂಟೆ 2) ಟೆಂಡರ್ ತೆರೆಯುವ ದಿನಾಂಕ: 29-05-2026 ಬೆಳಗ್ಗೆ 10:00 ಗಂಟೆ
ಈ ಮೇಲಿನ ಕಾಮಗಾರಿಗಳಿಗೆ (56 ರಿಂದ 68 ಕ್ಕೆ)	1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 16-05-2026 ಸಂಜೆ 04.00 ಗಂಟೆ 2) ಟೆಂಡರ್ ತೆರೆಯುವ ದಿನಾಂಕ : 18-05-2026 ಬೆಳಗ್ಗೆ 10:00 ಗಂಟೆ
ಈ ಮೇಲಿನ ಕಾಮಗಾರಿಗಳಿಗೆ (69 ಕ್ಕೆ)	1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 16-06-2026 ಸಂಜೆ 04.00 ಗಂಟೆ

2) ಟೆಂಡರ್ ತೆರೆಯುವ ದಿನಾಂಕ: 17-06-2026 ಸಂಜೆ 04:30 ಗಂಟೆ 3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 22-06-2026 ಸಂಜೆ 04:30 ಗಂಟೆ

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಧಾರವಾಡ.

ಡಿಐಪಿಆರ್/ಧಾರವಾಡ/134/ಮಾಹಿತಿ/2026-27

ನಗರಸಭೆ ಕಾರ್ಯಾಲಯ ಕೋಲಾರ

ಸಂಖ್ಯೆ:ನಸಕೋ/ತಾಂತ್ರಿಕ/ಟೆಂಡರ್/ಸಿಆರ್/02/2026-27
ದಿನಾಂಕ:04.05.2026

ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗಳಿಗೆ ಒಳಪಟ್ಟು ಇ-ಟೆಂಡರ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999-2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ 2026-27 ನೇ ಸಾಲಿನ ನಗರಸಭೆ ನಿಧಿಯಡಿಯಲ್ಲಿ ನೀರು ಸರಬರಾಜು ಕೊಳವೆ ಮಾರ್ಗಗಳ ಲೀಕೇಜ್ (ಪಂಪ್ ಹೌಸ್ ಒಳಗೊಂಡು) ವಾರ್ಷಿಕ ದುರಸ್ಥಿ ಮತ್ತು ನಿರ್ವಹಣೆಯ 3 ಸಂಖ್ಯೆ ಪ್ಯಾಕೇಜ್‌ಗಳಿಗೆ, ಒಳಚರಂಡಿ ಮಾರ್ಗಗಳ ವಾರ್ಷಿಕ ದುರಸ್ಥಿ ಮತ್ತು ನಿರ್ವಹಣೆಯ 2 ಸಂಖ್ಯೆ ಪ್ಯಾಕೇಜ್‌ಗಳಿಗೆ, ಪೌರಾಯುಕ್ತರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರುಗಳಿಗೆ ಕಛೇರಿ ನಿರ್ವಹಣೆಗೆ ನಾಲ್ಕು ಚಕ್ರದ ಎರಡು ಸಂಖ್ಯೆ ವಾಹನಗಳನ್ನು ಖರೀದಿಸಲು ಮತ್ತು 2022-23, 2024-25 ಮತ್ತು 2025-26ನೇ ಸಾಲಿನ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನ (ನಿರ್ಬಂಧಿತ) ದಲ್ಲಿ 3 ಸಂಖ್ಯೆ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಈ ಕೆಳಕಂಡ ಸಹಿ ಮಾಡಿರುವವರು ಟೆಂಡರ್‌ನ್ನು ಆಹ್ವಾನಿಸಿರುತ್ತಾರೆ. ಇಲಾಖಾ ವೆಬ್‌ಸೈಟ್ **https://kppp.karnataka.gov.in** ರಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ. (1) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಪ್ಯಾಕೇಜ್ ಸಂಖ್ಯೆ: 1 ರಿಂದ 6 ರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 18.05.2026 ರ ಸಂಜೆ 17.30 ಗಂಟೆವರೆಗೆ.** ಹಾಗೂ ಪ್ಯಾಕೇಜ್ ಸಂಖ್ಯೆ: 7 ರಿಂದ 9 ಕ್ಕೆ **ದಿನಾಂಕ: 11.05.2026 ರ ಸಂಜೆ 17.30 ಗಂಟೆವರೆಗೆ.** (2) ಪ್ಯಾಕೇಜ್ ಸಂಖ್ಯೆ: 1 ರಿಂದ 6 ರ ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ 20.05.2026 ರ ಬೆಳಿಗ್ಗೆ 11.00 ಗಂಟೆಗೆ.** ಹಾಗೂ ಪ್ಯಾಕೇಜ್ ಸಂಖ್ಯೆ: 7 ರಿಂದ 9 ನ್ನು **ದಿನಾಂಕ: 13.05.2026 ರ ಬೆಳಿಗ್ಗೆ 11.00 ಗಂಟೆಗೆ** ತೆರೆಯಲಾಗುವುದು. **ಸೂಚನೆ:** ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ವಿಭಾಗದಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು ಹಾಗೂ **www.kolarcity.mrc.gov.in** ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು.

ಸಹಿ/- ಆಡಳಿತಾಧಿಕಾರಿಗಳು, ನಗರಸಭೆ, ಕೋಲಾರ ಹಾಗೂ ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ, ಕೋಲಾರ — ಸಹಿ/- ಪೌರಾಯುಕ್ತರು, ನಗರಸಭೆ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:59/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಆಡಳಿತ ವೈದ್ಯಾಧಿಕಾರಿಗಳು, ತಾಲೂಕಾ ಸಾರ್ವಜನಿಕ ಆಸ್ಪತ್ರೆ, ಬಸವನ ಬಾಗೇವಾಡಿ ರವರ ಕಾರ್ಯಾಲಯ

ಫೋನ್:08358-244081 ಇ-ಮೇಲ್:www.tlhbbagewadi@gmail.com

ಸಂ:ತಾ.ಸಾ.ಆ.ಬ.ಬಾ/ಟೆಂಡರ್/ಪಥ್ಯಾಹಾರ/2025-26/29/380 — ದಿನಾಂಕ:04.05.2026

ಇ-ಪ್ರಕ್ಯುರಮೆಂಟ ಟೆಂಡರ್ ಪ್ರಕಟಣೆ

ತಾಲೂಕಾ ಸಾರ್ವಜನಿಕ ಆಸ್ಪತ್ರೆ ಬಸವನ ಬಾಗೇವಾಡಿ 2026-27 ನೇ ಸಾಲಿಗಾಗಿ ಉಪಹಾರ ಮತ್ತು ಸಿದ್ಧಪಡಿಸಿದ ಉತ್ತಮ ದರ್ಜೆಯ ಪಥ್ಯಾಹಾರ (ಚಪಾತಿ/ರೊಟ್ಟಿ, ಅನ್ನ, ಸಾಂಬಾರು) ಹಾಗೂ ಬಾಳೆ ಹಣ್ಣು, ಬೇಯಿಸಿದ ಕೋಳಿ ಮೊಟ್ಟೆ ಹಾಗೂ ಉತ್ತಮ ದರ್ಜೆಯ ಬ್ರೆಡ್, ಕಾಫೀ/ಟೀ ಸರಬರಾಜು ಮಾಡಲು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದ್ವಿ ಲಕೋಟೆ ಪದ್ಧತಿಯಲ್ಲಿ 8 ದಿನಗಳ ಕಾಲಾವಕಾಶ ನೀಡಿ ಮರು ಅಲ್ಪಾವಧಿ ಟೆಂಡರ ಆಹ್ವಾನಿಸಲಾಗಿದೆ. ಟೆಂಡರ ಅವಧಿಯು ಆದೇಶ ನೀಡುವ ದಿನಾಂಕದಿಂದ 31.03.2027 ರ ವರೆಗೆ ಮಾತ್ರ ಇರುತ್ತದೆ. ಟೆಂಡರಿನ ಅಂದಾಜು ಮೌಲ್ಯ ರೂ.30,00,000/- ಗಳು ಇದ್ದು, ಟೆಂಡರ್ ವಿವರ ಈ ಕೆಳಗಿನಂತಿದೆ.

ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವವರು ಇ-ಪ್ರೊಕ್ಯೂರ್‌ಮೆಂಟ್ ವಿಳಾಸ http://kppp.karnataka.gov.in ವೆಬ್‌ಸೈಟನಲ್ಲಿ ಮಾಹಿತಿ ಪಡೆದು ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಆಡಳಿತ ವೈದ್ಯಾಧಿಕಾರಿಗಳು, ತಾಲೂಕಾ ಸಾರ್ವಜನಿಕ ಆಸ್ಪತ್ರೆ ಬಸವನ ಬಾಗೇವಾಡಿ, ಇವರಿಂದ ಪಡೆಯಬಹುದು. ಮೊ:9448920612, 9740494801

ಇ-ಮೇಲ್: tlhbbagewadi@gmail.com

ಟೆಂಡರ ವಿವರ

ಟೆಂಡರ್ ಪ್ರಕಟಣೆ ಸಂಖ್ಯೆ: DHFWS/2025-26/SE1973/Call-2

01) ಇ-ಪೋರ್ಟಲ್ ಟೆಂಡರ ಅಪ್ಲೋಡ್ ಮಾಡುವ ದಿನಾಂಕ: As per portal, 04.05.2026

02) ಇ-ಪೋರ್ಟಲ್ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: As per portal, 12.05.2026, ಸಂಜೆ 4.30 ಘಂಟೆಗೆ.

03) ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: As per portal, 14.05.2026 ಬೆಳಗ್ಗೆ 11.00 ಘಂಟೆಗೆ.

04) ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ: As per portal, 18.05.2026 ಬೆಳಗ್ಗೆ 11.00 ಘಂಟೆಗೆ.

ಸೂಚನೆ: 1) ಒಂದು ವೇಳೆ ತಾಂತ್ರಿಕ ಹಾಗೂ ಹಣಕಾಸು ಬಿಡ್ ತೆರೆಯುವ ದಿನಾಂಕದಂದು ಸರಕಾರಿ ರಜೆ ಘೋಷಣೆಯಾದಲ್ಲಿ ಆಡಳಿತಾತ್ಮಕ ಹಾಗೂ ತಾಂತ್ರಿಕ ತೊಂದರೆಯಾದಲ್ಲಿ ಮುಂದಿನ ಕರ್ತವ್ಯ ದಿನದಂದು ತೆರೆಯಲಾಗುವುದು.

ಸಹಿ/- ಆಡಳಿತ ವೈದ್ಯಾಧಿಕಾರಿಗಳು, ತಾಲೂಕಾ ಸಾರ್ವಜನಿಕ ಆಸ್ಪತ್ರೆ, ಬಸವನ ಬಾಗೇವಾಡಿ

ವಾಸಾಸಂಇ/ವಿಜಯಪುರ/80/ಕೆಎಸ್‌ಎಂಸಿಎ/2026-27



ವಂಗಭಂಗದಿಂದ ಭ್ರಮಾಭಂಗದವರೆಗೆ ನಾಗರಿಕತೆಯ ಹೋರಾಟ

ಪಶ್ಚಿಮ ಬಂಗಾಳದಲ್ಲಿ ಬಂಗಾಳಿ ನಾಗರಿಕತೆಯ ಸಂರಕ್ಷಣೆಗೆ 2026ರಲ್ಲಿ ವೇದಿಕೆಯಾಗಿದ್ದು ಭಾರತೀಯ ಜನತಾ ಪಕ್ಷ. ಹೀಗೆ ಇಂದಿನ ಪ.ಬಂಗಾಳದ ಫಲಿತಾಂಶ ಹಲವು ಸಂಗತಿಗಳನ್ನು ಧ್ವನಿಸುತ್ತದೆ. ಅಂತಿಮವಾಗಿ ಹೇಳಬೇಕೆಂದರೆ ಪ್ರತೀ ಬಂಗಾಳಿಗೂ ಬಿಜೆಪಿ ಮಾತ್ರ ಬಂಗಾಳವನ್ನು ಉಳಿಸಬಹುದು ಎನಿಸಿ ಅದಕ್ಕೆ ಮತದಾನ ಮಾಡಿದರೇ ವಿನಹ ರಾಜಕೀಯಕ್ಕಾಗಿ ಮಾತ್ರ ಬಿಜೆಪಿಯಾಗಿರಲಿಲ್ಲ.

▸ ಅರುಣ್ ಬಿನ್ನಡಿ



ಪಶ್ಚಿಮ ಬಂಗಾಳದ ಚುನಾವಣೆಯನ್ನು ಹಿಮ್ಮುಖ ಚಲನೆಯಾಧಾರದಲ್ಲಿ (reverse order), ಅಂದರೆ ಫಲಿತಾಂಶಕ್ಕೆ ಮುಂಚಿನಿಂದ ಶತಮಾನಗಳ ಹಿಂದಿನ ನಾಗರಿಕತೆಯ ಸಂಘರ್ಷದ ಕಾಲದಿಂದ ವಿಶ್ಲೇಷಿಸಬೇಕಾಗಿದೆ. ಎಲ್ಲವನ್ನೂ ಭೂತಕಾಲದಿಂದ ವಿಶ್ಲೇಷಿಸುವ ಒಂದು ಕ್ರಮ ತಜ್ಞರಲ್ಲಿ ಮತ್ತು ಸಮಾಜದ ಚಿಂತಕವರ್ಗದಲ್ಲಿದೆ. ಆದರೆ ಇದು ಹಾಗೂ ಅಲ್ಲ! ಅದನ್ನು ಓರ್ವ ಸಾಮಾನ್ಯ ಬಂಗಾಳಿ ವ್ಯಕ್ತಿಯ ದೃಷ್ಟಿಕೋನದಿಂದ ಕೂಡ ವಿಶ್ಲೇಷಣೆ ಮಾಡಬೇಕಾಗಿದೆ. ಆ ದೃಷ್ಟಿಗೆ ಹೊರತಾಗಿ ಪ.ಬಂಗಾಳದ ಚುನಾವಣೆಯನ್ನು ವಿಶ್ಲೇಷಣೆ ಮಾಡತೊಡಗಿದರೆ ಅದು ಬಂಗಾಳಿ ಜನರಿಗೆ ಮಾಡುವ ಅವಮಾನವೂ ಆದೀತು ಮತ್ತು ವಿಶ್ಲೇಷಣೆಯ ದಾರಿಯೂ ಕೂಡ ತಪ್ಪುತ್ತದೆ. ಆದರೆ ಪಶ್ಚಿಮ ಬಂಗಾಳದಲ್ಲಿ ಚುನಾವಣೆ ಘೋಷಣೆಯಾದ ನಂತರ ಬಹುತೇಕರು ನಡೆಸಿದ ಚರ್ಚೆಗಳೆಲ್ಲವೂ ಅದಕ್ಕೆ ಹೊರತಾಗಿಯೇ ನಡೆಯಿತು. ವಿಶೇಷವಾಗಿ ಸೋಕಾಲ್ಡ್ ರಾಜಕೀಯ ಪಂಡಿತರು, ನರೇಟಿವ್‌ಗಾಗಿ ಕೆಲಸ ಮಾಡುವವರು, ನಾಗರಿಕತೆಯ ವ್ಯಾಖ್ಯಾನದಲ್ಲೇ ಎಡವಿದ ಅನನುಭವಿಗಳೆಲ್ಲರೂ ಈ ಚುನಾವಣೆಯನ್ನು ತಮ್ಮದೇ ಆದ ರೀತಿಯಲ್ಲಿ ಮಂಡಿಸುತ್ತಾ ಸಾಗಿದರು. ಆದರೆ ಫಲಿತಾಂಶ ಬಂದಾಗ ಅವರೆಲ್ಲರ ಗ್ರಹಿಕೆಗಳು ಸುಳ್ಳಾದವು. ಮಾಧ್ಯಮಗಳು ಮತ್ತು ಸರ್ವೇಕ್ಷಣಾ ತಂಡಗಳ ಗ್ರಹಿಕೆ ಮತ್ತು ಲೆಕ್ಕಾಚಾರಗಳು ತಪ್ಪಿದವು. ಪೂರ್ವಾಗ್ರಹ ಅಥವಾ ಚುನಾವಣೆಗಳೆಲ್ಲವೂ ಒಂದೇ ಎನ್ನುವ ಧೋರಣೆಯೇ ಇದಕ್ಕೆ ಕಾರಣವಾಗಿದ್ದವು. ವಿಶ್ಲೇಷಕರೆಲ್ಲರೂ ಬಿಜೆಪಿಯು ಪ.ಬಂಗಾಳದ ಚುನಾವಣೆಯನ್ನು ಹೇಗೆ ಎದುರಿಸುತ್ತದೆ ಎನ್ನುವುದನ್ನು ಚರ್ಚಿಸುವುದರಲ್ಲೇ ಹೆಚ್ಚು ಆಸಕ್ತರಾಗಿದ್ದಂತಿದ್ದರು. ಆದರೆ ಬಂಗಾಳದಲ್ಲಿ ಚುನಾವಣೆ ಬಿಜೆಪಿಯದ್ದು ಅಥವಾ ಯಾವುದೋ ಒಂದು ಪಕ್ಷಕ್ಕೆ ಮಾತ್ರ ಸಂಬಂಧಪಟ್ಟ ಸಂಗತಿಯಾಗಿರಲಿಲ್ಲ, ಈ ಚುನಾವಣೆಯನ್ನು ಮತ್ತು ಫಲಿತಾಂಶದ ಮೂಲಕ ಒಂದು ರಾಜಕೀಯ ಪಕ್ಷದ ವ್ಯಕ್ತಿಪರತೆ ಮತ್ತು ರಾಜಕೀಯ ತಂತ್ರಗಾರಿಕೆಯನ್ನು ಅಳೆಯಬೇಕಾಗಿರಲಿಲ್ಲ, ಏಕೆಂದರೆ ಆ ಸ್ಥಿತಿಯಿಂದ ಪ.ಬಂಗಾಳ ಯಾವತ್ತೋ ಮುಂದೆ ಸಾಗಿ ಬಂದುಬಿಟ್ಟಿತ್ತು. ಸಾಮಾನ್ಯವಾಗಿ ದೇಶದ ಇತರೆಡೆಗಳ ಚುನಾವಣೆಗಳಲ್ಲಿ ನಡೆಯುವುವಂತೆ ಅಲ್ಲಿ ಯಾವುದೂ ಇರಲಿಲ್ಲ, ಸಿದ್ಧ ಮಾದರಿಯ ಯಾವ ಸಂಗತಿಗಳೂ ಇರಲಿಲ್ಲ, ಏಕೆಂದರೆ ಅದು ಸಾಮಾನ್ಯ ಜನರು ತಮಗಾಗಿ, ತಮ್ಮ ಉಳಿವಿಗಾಗಿ ನಡೆಸಿದ ಚುನಾವಣೆಯಾಗಿತ್ತು. ದುರದೃಷ್ಟವೆಂದರೆ ಅದನ್ನು ಯಾರೂ ಅರಿಯಲಾರದೇ ಹೋದರು. ಹಾಗಾಗಿ ಎಲ್ಲರೂ ಸಹಜವಾಗಿ ತಪ್ಪು ಲೆಕ್ಕಾಚಾರದಲ್ಲಿ ತೊಡಗಿದರು.



ಹಾಗಾದರೆ ಅಲ್ಲಿ ಬಿಜೆಪಿಯ ಪಾತ್ರವೇನು ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಪ.ಬಂಗಾಳದಲ್ಲಿ ಬಿಜೆಪಿಯು ಬಂಗಾಳಿಗಳ ಧ್ವನಿಯಾಗಿತ್ತೇ ಹೊರತು ಇನ್ನೇನೂ ಆಗಿರಲಿಲ್ಲ ಎಂಬ ಸತ್ಯ ಮಾತ್ರ ಚುನಾವಣೆ ಮತ್ತು ಇಂದಿನ ಫಲಿತಾಂಶದ ಅಂತಿಮ ವ್ಯಾಖ್ಯಾನ! ಬಂಗಾಳಿಗಳ ಹಿಂದಿನ ಶಕ್ತಿಯಾಗಿ, ಬೆನ್ನೆಲುಬಾಗಿ ನಿಲ್ಲುವ ಕೆಲಸವನ್ನು ಮಾಡುವುದಷ್ಟೇ ಅಲ್ಲಿ ಮಾಡಬೇಕಾದ ಕೆಲಸವಾಗಿತ್ತು. ಬಿಜೆಪಿ ಅದನ್ನು ಮಾಡಿತು. ಪರಿಣಾಮ, ಐದು ದಶಕಗಳ ಭಯದ ಸಂಕೋಲೆ ಮುರಿದುಬಿತ್ತು. ಅದರ ಜೊತೆಗೆ ಕಪಟ-ಛದ್ಮವೇಷದ ರಾಜಕಾರಣದ ಕೊನೆಯೂ ಆಯಿತು.

ಬಂಗಾಳ ಚುನಾವಣಾ ಸಂದರ್ಭದಲ್ಲಿ, ಬಿಜೆಪಿ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್ ಸಂತೋಷ್ ಅವರು, ‹‹ಬಂಗಾಳ ಗೆಲ್ಲಬೇಕಾಗಿರುವುದು ಅಧಿಕಾರಕ್ಕಾಗಿ ಅಲ್ಲ, ನಮ್ಮ ನಾಗರಿಕತೆಯ ರಕ್ಷಣೆಗಾಗಿ›› ಎಂದಿದ್ದರು. ಪ್ರಧಾನಮಂತ್ರಿ ನರೇಂದ್ರ ಮೋದಿಯವರೂ ‹‹ನೀವು ನಮಗೆ ಮತ ನೀಡಿ, ನಾವು ನಿಮಗೆ ಸ್ವಾತಂತ್ರ್ಯ ತಂದು ಕೊಡುತ್ತೇವೆ›› ಎಂದಿದ್ದರು. ಗೃಹ ಸಚಿವ ಅಮಿತ್ ಶಾ ಅವರು, ‹‹ಬಂಗಾಳ ಗೆದ್ದೇ ಸಿದ್ಧ›› ಎಂದು ಶಪಥಮಿತ್ತರು. ಈ ಪ್ರತಿಜ್ಞೆಗಳು ಈಗ ಈಡೇರಿವೆ. ಅಂದರೆ ಬಂಗಾಳಿಗಳು ಬಂಗಾಳಕ್ಕಾಗಿ ಮತ ನೀಡುವ ಮೂಲಕ ಅವರ ಸ್ವಾತಂತ್ರ್ಯವನ್ನು ಮರಳಿ ಗಳಿಸಿಕೊಂಡಿದ್ದಾರೆ. ಬಂಗಾಳಿ ನಾಗರಿಕತೆಯ ರಕ್ಷಣೆಯಾಗಿದೆ. ಬಂಗಾಳದ ನಾಗರಿಕತೆಯನ್ನು ಬಂಗಾಳಿಗಳೇ ರಕ್ಷಿಸಿಕೊಂಡಿದ್ದಾರೆ. ಹಾಗಾಗಿ ಇದು ನಾಗರಿಕತೆಯ ಗೆಲುವು ಕೂಡ! ಕಳೆದ ಎಂಟು ದಶಕಗಳ ನಿರಂತರ ಹೋರಾಟಕ್ಕೆ ಸಿಕ್ಕ ಗೆಲುವು. ಹಾಗಾಗಿ ಇದು ಸಾಮಾನ್ಯವಾದ ಗೆಲುವಲ್ಲ, ಬಂಗಾಳದ ಇತಿಹಾಸವನ್ನು ಬಲ್ಲವರಿಗೆ ಮಾತ್ರ ಈ ಚುನಾವಣಾ ಫಲಿತಾಂಶವನ್ನು ಸರಿಯಾಗಿ ಗ್ರಹಿಸಲು ಸಾಧ್ಯವಾಗುತ್ತದೆ. ಹೇಗೆ ವಂಗಭಂಗವಾದಾಗ ಬಂಗಾಳದ ಮನೆಮನೆಗಳಲ್ಲಿ ಕ್ರಾಂತಿಯ ಕಿಡಿ ನಾನಾ ಸ್ವರೂಪಗಳ ಮೂಲಕ ಅರಸೊತ್ತಿಗೆಗೆ ಬಿಸಿ ಮುಟ್ಟಿಸುವುದರಲ್ಲಿ ಯಶಸ್ವಿಯಾಗಿತ್ತೋ ಇದೂ ಅಂಥದ್ದೇ ಕೆಚ್ಚಿನ ಗೆಲುವು. ಅಂದು ಹೇಗೆ ಪ್ರತಿಯೊಬ್ಬ ಬಂಗಾಳಿಗೆ ತನ್ನ ಬಂಗಾಳ ಒಡೆದರೆ ತಾವು ಉಳಿಯುವುದಿಲ್ಲ ಎಂಬುದು ಅರಿವಾಗಿ ಸ್ವಾತಂತ್ರ್ಯ ಜ್ವಾಲೆಯಾಗಿ ಉರಿಯಿತೋ ಈಗ ಉರಿದಿದ್ದೂ ಕೂಡ ಅಂಥದ್ದೇ ಜ್ವಾಲೆ. ಅಂದು ಹೇಗೆ ವಿಭಜನೆಗೊಂಡ ಬಂಗಾಳಕ್ಕಾಗಿ ರಾಜಕೀಯ ನಡೆಯಲಿಲ್ಲವೋ ಇಂದೂ ಬಂಗಾಳಿಗಳು ಬಂಗಾಳಕ್ಕಾಗಿ ರಾಜಕೀಯ ಮಾಡಲಿಲ್ಲ, ರಾಜಕೀಯವಾಗಿ ಒಡೆದುಹೋಗಲಿಲ್ಲ, ಅಂದು ದೇಶವಿಭಜನೆಯ ದಳ್ಳುರಿಗೆ ಬಂಗಾಳ ಹೇಗೆ ಬೆಂದಿತ್ತೋ ಇಂದು ಸ್ವತಂತ್ರ ಭಾರತದಲ್ಲೂ ಬಂಗಾಳ ಬೇಯುತ್ತಿತ್ತು. ಆ ಬೇಗೆಯಿಂದ ಹೊರಬರಲು ಬಂಗಾಳ ಹೇಗೆ ಏಕತ್ರವಾಯಿತೋ, ಇಂದು ಕೂಡ ಬಂಗಾಳ ಏಕತ್ರವಾಗಿದ್ದು ಹಾಗೆಯೇ! ರಾಜಕೀಯದಿಂದ ದೂರವಿದ್ದು, ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಶ್ಯಾಮಪ್ರಸಾದ್ ಮುಖರ್ಜಿಯವರಂಥ ನಾಯಕರು ಅಂದು ಬೀದಿಗಿಳಿಯಲು ಕಾರಣವಾಗಿದ್ದು ಒಂದು ನಾಗರಿಕತೆ ಉಳಿಯಬೇಕು ಎಂಬ ಒಂದೇ ಕಾರಣಕ್ಕಾಗಿ. ಆಗಲೂ ಮುಖರ್ಜಿಯವರಿಗೆ ಹಿಂದು ಮಹಾಸಭಾ, ಪ್ರಜಾ ಪರಿಷತ್ ಮುಂತಾದ ಸಂಘಟನೆಗಳು ವೇದಿಕೆಯಾಗಿದ್ದಂತೆ 2026ರಲ್ಲಿ ಬಂಗಾಳಿ ನಾಗರಿಕತೆಯ ಸಂರಕ್ಷಣೆಗೆ ವೇದಿಕೆಯಾಗಿದ್ದು ಭಾರತೀಯ ಜನತಾ ಪಕ್ಷ. ಹೀಗೆ ಇಂದಿನ ಪ.ಬಂಗಾಳದ ಫಲಿತಾಂಶ ಹಲವು ಸಂಗತಿಗಳನ್ನು ಧ್ವನಿಸುತ್ತದೆ. ಅಂತಿಮವಾಗಿ ಹೇಳಬೇಕೆಂದರೆ ಪ್ರತೀ ಬಂಗಾಳಿಗೂ ಬಿಜೆಪಿ ಮಾತ್ರ ಬಂಗಾಳವನ್ನು ಉಳಿಸಬಹುದು ಎನಿಸಿ ಅದಕ್ಕೆ ಮತದಾನ ಮಾಡಿದರೇ ವಿನಹ ರಾಜಕೀಯಕ್ಕಾಗಿ ಮಾತ್ರ ಬಿಜೆಪಿಯಾಗಿರಲಿಲ್ಲ.

ವಲಸಿಗರ ಹೆಬ್ಬಾಗಿಲಾದ ಬಂಗಾಳ

1948ರಲ್ಲಿ ಹೇಗೆ ಮುಸ್ಲಿಂ ಲೀಗಿನ ಡೈರೆಕ್ಟ್ ಆಕ್ಷನ್ ಡೇ ಹಿಂಸಾಚಾರಕ್ಕೆ ಬಂಗಾಳ ನಡುಗಿತ್ತೋ ಇಂದಿನ ಬಂಗಾಳವೂ ಹಾಗೆ ನಡುಗಿದ ಕಾರಣಕ್ಕೆ ಆತ ಬಿಜೆಪಿಯನ್ನು ಈ ಪರಿಯಲ್ಲಿ ಗೆಲ್ಲಿಸಿದ. ಹೀಗೆ ಪ.ಬಂಗಾಳದ ಚುನಾವಣಾ ಫಲಿತಾಂಶವನ್ನು ವಿಶ್ಲೇಷಣೆ ಮಾಡುತ್ತಾ ಹೋದರೆ ಭಾರತೀಯ ಇತಿಹಾಸದ ಪ್ರಮುಖ ಪುಟಗಳು ತೆರೆಯುತ್ತಾ ಹೋಗುತ್ತದೆ. ಇವುಗಳ ನಡುವೆ ಅಲ್ಲಲ್ಲಿ ಪ್ರಶ್ನೆಗಳು ಕೂಡ ಏಳುತ್ತಲೂ ಹೋಗುತ್ತವೆ. ಉದಾಹರಣೆಗೆ ಸದಾ ಸಂಘರ್ಷವನ್ನು ಎದುರಿಸುತ್ತಾ ಬಂದ ಬಂಗಾಳದ ನಾಗರಿಕತೆ ಸ್ವಾತಂತ್ರ್ಯಾನಂತರ ಕಾಂಗ್ರೆಸ್-ಕಮ್ಯುನಿಸ್ಟ್ ಮತ್ತು ತೃಣಮೂಲ ಕಾಂಗ್ರೆಸ್ ಕಾಲಘಟ್ಟದಲ್ಲಿ ತನ್ನ ವೈಭವವನ್ನು ಕಂಡಿರಬೇಕಲ್ಲವೇ, ಕೇವಲ ಬಿಜೆಪಿ ಜಯಗಳಿಸಿದಾಗ ಮಾತ್ರ ಅದನ್ನು ನಾಗರಿಕತೆಯ ವಿಜಯ ಎಂದು ಬಣ್ಣಿಸಬೇಕೆ ಎಂಬ ಪ್ರಶ್ನೆಗಳೂ ಹುಟ್ಟಬಹುದು. ಆದರೆ ಕಳೆದ ಏಳು ದಶಕಗಳಲ್ಲಿ, ಈ ಮೂರು ಪಕ್ಷಗಳ ಆಡಳಿತಾವಧಿಯಲ್ಲಿ ಬಂಗಾಳದ ಪರಿಸ್ಥಿತಿಯನ್ನು ಪೂರ್ವಾಗ್ರಹಗಳಿಲ್ಲದೆ ಅವಲೋಕಿಸಬೇಕು. ಹಿಂದಿನ ಸಂದರ್ಭಗಳಲ್ಲಿ ಬಂಗಾಳಿ ಅಸ್ಮಿತೆಗೆ ಅಪಾಯ ಬಂದಾಗಲೆಲ್ಲಾ ಒಗ್ಗೂಡುತ್ತಿದ್ದ ಬಂಗಾಳಕ್ಕೆ ಸ್ವಾತಂತ್ರ್ಯಾನಂತರ ಮಹಾಮರೆವು ಆವರಿಸಿತು. ಅದು ಕೇವಲ ಬಂಗಾಳಕ್ಕೆ ಸೀಮಿತವಾಗಿರಲಿಲ್ಲವೆಂಬುದು ಸತ್ಯವಾದರೂ ಬಂಗಾಳದ ಪ್ರಜ್ಞೆಗೆ ಕತ್ತಲಾವರಿಸಿದರೆ ಪರಿಣಾಮ ಘೋರವಾಗಿರುತ್ತದೆ. ಸ್ವಾತಂತ್ರ್ಯಪೂರ್ವದ ಬಂಗಾಳದ ಪ್ರಜ್ಞೆಗೆ ಭಾರತ ನಮ್ಮದು ಎಂಬುದು ಮುಖ್ಯವಾಗಿದ್ದರೆ, ನಂತರದ ಬಂಗಾಳಕ್ಕೆ ಬಂಗಾಳ ಮಾತ್ರ ನಮ್ಮದು ಎಂಬ ಪೊರೆ ಆವರಿಸಿತು. ಶ್ರೇಷ್ಠವಾದ ಬಂಗಾಳದ ಸಾಮಾಜಿಕ ಲೋಕಕ್ಕೆ ಒಗ್ಗದ ವಿದೇಶಿ ಸಿದ್ಧಾಂತದ ಹುಚ್ಚು ಹಿಡಿಯಿತು. ಬಂಗಾಳದ ಸಾಂಸ್ಕೃತಿಕ ಚೈತನ್ಯ ಪತನವಾಗತೊಡಗಿತು. ಸಾಂಸ್ಕೃತಿಕ ಮತ್ತು ಧಾರ್ಮಿಕ ನೆಲೆಗಟ್ಟಿನ ರಾಜಕಾರಣದ ಜಾಗದಲ್ಲಿ ವಿದೇಶಿ ಚಿಂತನೆಗಳ ರಾಜಕಾರಣ ನೆಲೆಯಾಯಿತು. ಕಮ್ಯುನಿಸಮ್ಮಿನ ಬೀಜಗಳು ಬಿತ್ತನೆಯಾಗಿ ಅದು ರಾಜಕಾರಣವನ್ನು ಕ್ರಿಮಿನಲ್ ಸ್ವರೂಪಕ್ಕಿಳಿಸಿತು. ಸಿದ್ಧಾಂತದ ಹೆಸರಿನಲ್ಲಿ ಕೊಲೆ ಬಂಗಾಳದಲ್ಲಿ ಸಹಜವೆಂಬಂತೆ ನಡೆಯತೊಡಗಿತು. ಬಣ್ಣಬಣ್ಣದ ಮಾತುಗಳಿಗೆ ಬಂಗಾಳ ಬಲಿಯಾಯಿತು. ಕಾಂಗ್ರೆಸಿನಿಂದ ಅಧಿಕಾರವನ್ನು ಪಡೆದ ಕಮ್ಯುನಿಸ್ಟ್ ಆಡಳಿತದ ಅವಧಿ ಭಾರತದ ಇತಿಹಾಸದ ಅತ್ಯಂತ ಕರಾಳ ಅಧ್ಯಾಯ. ದೀರ್ಘಾವಧಿಯವರೆಗೆ ಅಧಿಕಾರದಲ್ಲಿದ್ದರೂ ಬಂಗಾಳ ಅಭಿವೃದ್ಧಿ ಕಾಣಲಿಲ್ಲ, ಅಧಿಕಾರದಲ್ಲಿದ್ದ ಮುಖ್ಯಮಂತ್ರಿಗಳೇನೋ ಮುತ್ಸದ್ದಿಗಳೆನಿಸಿಕೊಂಡರು. ಆದರೆ ಬಂಗಾಳ ಬಡವಾಗುತ್ತಾಹೋಗುತ್ತಿತ್ತು. ಚುನಾವಣಾ ಅಕ್ರಮಗಳ ಮೂಲಕ, ಮತಪೆಟ್ಟಿಗೆ ಅಪಹರಣಗಳ, ಅತಿಯಾದ ಮುಸಲ್ಮಾನ ಓಲೈಕೆಯ ಕಾರಣದಿಂದ ಬಾಂಗ್ಲಾ ವಲಸಿಗರ ಹೆಬ್ಬಾಗಿಲಾಗಿ ಬಂಗಾಳ ಬದಲಾಯಿತು.



ಟಿಎಂಸಿ ಸೋಲಿಗೆ ಇವೂ ಕಾರಣ

- ಟಿ.ಎಂಸಿ ಕಚೇರಿಯ ಮೇಲೆ ಇಡಿ ದಾಳಿಯಾದಾಗ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಫೈಲುಗಳನ್ನು ಎತ್ತಿ ಓಡುವ ದೃಶ್ಯ ಮತ್ತು ಕೋಪಾವಿಷ್ಟರಾಗಿ ಪತ್ರಿಕಾಗೋಷ್ಠಿ ನಡೆಸಿದ್ದನ್ನು ಪ್ರಬುದ್ಧ ಬಂಗಾಳಿ ನೋಡಿ ಅಸಹ್ಯಪಟ್ಟುಕೊಂಡ.
- ಬಾಂಗ್ಲಾದೇಶದಲ್ಲಿ ಹಿಂದು ಯುವಕ ದೀಪುಚಂದ್ರನ ಭೀಕರ ಹತ್ಯೆಯನ್ನು ಪಶ್ಚಿಮ ಬಂಗಾಳದ ಹಿಂದು ಗಂಭೀರವಾಗಿ ತೆಗೆದುಕೊಂಡ. ದೀಪುಚಂದ್ರನನ್ನು ಕೊಂದವರ ಬಂಧುಗಳ ಜೊತೆಯಲ್ಲಿ ತಾವು ಕೂಡ ಬದುಕುತ್ತಿದ್ದೇವೆ ಎಂಬ ಆತಂಕ ಅವರನ್ನು ಕಾಡಿತು.
- ಚುನಾವಣಾ ಆಯೋಗ ಈ ಬಾರಿ ಕೇಂದ್ರೀಯ ಮೀಸಲು ಪಡೆಯ ಬೃಹತ್ ಸಂಖ್ಯೆಯ ಯೋಧರನ್ನು ಕರೆಸಿ ರಾಜ್ಯದಲ್ಲಿ ಕಟ್ಟುನಿಟ್ಟಿನ ಭದ್ರತೆಯನ್ನು ಒದಗಿಸಿದ್ದು ಜನರಲ್ಲಿ ಧೈರ್ಯ ತುಂಬಿತು. ತಾವಿನ್ನು ನಿರ್ಭಯವಾಗಿ ಮತಗಟ್ಟೆಗೆ ಹೋಗಬಹುದು ಎಂಬ ವಿಶ್ವಾಸ ಅವರಿಗೆ ಬಂತು.
- ಈಶಾನ್ಯದ ಸಿಲಿಗುರಿ ಗಡಿಯಲ್ಲಿ ಚೀನಾವು ಬಾಂಗ್ಲಾದೇಶಕ್ಕಾಗಿ 16 ಕಿ.ಮೀ ಉದ್ದದ ಏರ್ ಬೇಸನ್ನು ನಿರ್ಮಿಸಿಕೊಡುತ್ತಿದೆ. ಅದರ ಜೊತೆಗೆ ತೀಸ್ತಾನದಿ ಯೋಜನೆಯನ್ನು ನಿರ್ಮಿಸುವ ಉದ್ದೇಶವನ್ನೂ ಚೀನಾ ಇಟ್ಟುಕೊಂಡಿದೆ. ಇದು ಕೂಡ ಪ.ಬಂಗಾಳ ಚುನಾವಣೆಯ ಮೇಲೆ ಪರಿಣಾಮ ಬೀರಿದೆ.
- ಬಾಂಗ್ಲಾದೇಶ ಗಡಿ ಭಾಗಗಳಲ್ಲಿ ವಲಸಿಗರಿಗೆ ನೆಲೆ ನೀಡುವ ಯೋಜನೆಯನ್ನು ಮಮತಾ ಸರ್ಕಾರ ಮಾಡುತ್ತಲೇ ಬಂತು. ಇದು ಚಿಕನ್ ನೆಕ್ ಸೂಕ್ಷ್ಮ ಪ್ರದೇಶದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂಬುದು ಜನರಿಗೆ ಮನವರಿಕೆಯಾಯಿತು.



ಕಮ್ಯುನಿಸ್ಟರಿಗಿಂತ ಕುಲಗೆಡಿಸಿದ ಮಮತಾ

ಆ ದಿನಗಳಲ್ಲಿ ಬಾಂಗ್ಲಾ ವಲಸಿಗರ ವಿರುದ್ಧ ಧ್ವನಿ ಎತ್ತಿದ ಮಮತಾ ಬ್ಯಾನರ್ಜಿಯವರಿಗೆ ತನ್ನೆಲ್ಲಾ ಶಕ್ತಿಯನ್ನು ಧಾರೆ ಎರೆದು ಭಾರತೀಯ ಜನತಾ ಪಕ್ಷ. ಕಾಂಗ್ರೆಸನ್ನು ಬಿಟ್ಟ ಮಮತಾ ತೃಣಮೂಲ ಕಾಂಗ್ರೆಸ್ ರಚನೆ ಮಾಡುವಾಗಲೂ ಆಕೆಯ ಹಿಂದಿಂದ ಶಕ್ತಿ ಬಿಜೆಪಿ. ಎನ್‌ಡಿಎ ಮೈತ್ರಿಕೂಟದ ಭಾಗವಾಗಿ ಕೇಂದ್ರ ಸಚಿವೆಯೂ ಆದ ಮಮತಾ ರಾಜ್ಯದಲ್ಲಿ ಅಧಿಕಾರಕ್ಕೇರುವವರೆಗೂ ಬಿಜೆಪಿ ಆಕೆಯ ಇಂಧನಶಕ್ತಿಯಾಗಿತ್ತು. ಇವೆಲ್ಲವನ್ನೂ ಮಾಡಲು ಬಿಜೆಪಿಗಿದ್ದ ಏಕೈಕ ಕಾರಣ ಕಮ್ಯುನಿಸ್ಟರು ತೊಲಗಬೇಕು ಮತ್ತು ಬಂಗಾಳ ಮರಳಿ ಭಾರತದ ಶಕ್ತಿಯಾಗಬೇಕೆಂಬುದು ಮಾತ್ರ. ವಿಪರ್ಯಾಸವೆಂದರೆ ಕಮ್ಯುನಿಸ್ಟರ ವಿರುದ್ಧ ಹೋರಾಡುತ್ತಾ ಬಂದ ಮಮತಾ ಬ್ಯಾನರ್ಜಿ ತಾನು ಕಮ್ಯುನಿಸ್ಟರಿಗಿಂತ ಬಂಗಾಳವನ್ನು ಕುಲಗೆಡಿಸಿದರು. ವಲಸಿಗರ ವಿರುದ್ಧ ಸಿಡಿದೇಳುತ್ತಿದ್ದ ಮಮತಾ ಅದೇ ಬಾಂಗ್ಲಾ ವಲಸಿಗರಿಗೆ ಮಣೆ ಹಾಕತೊಡಗಿದರು.

ಬಾಂಗ್ಲಾ ವಲಸಿಗರೇ ಬಾಡಿಗೆ ಗೂಂಡಾಗಳು


ಮತದಾರರ ಪಟ್ಟಿ ಪರಿಷ್ಕರಣೆಯಿಂದ ಪ.ಬಂಗಾಳದಲ್ಲಿ ನೆಲೆಸಿದ್ದ ಸುಮಾರು 92 ಲಕ್ಷ ಅಕ್ರಮ ಮತದಾರರನ್ನು ಕಿತ್ತೊಗೆಯಲಾಯಿತು. ಇದು ಓಲೈಕೆಯ ತೃಣಮೂಲ ಸರ್ಕಾರಕ್ಕೆ ಹಿನ್ನಡೆಯಾಗಿ ಪರಿಣಮಿಸಿತು. ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ಅಕ್ರಮ ಮತದಾರರ ಪ್ರಮಾಣ ಹೆಚ್ಚಾಗುತ್ತಲೇ ಇತ್ತು. ಅಕ್ರಮವಾಗಿ ನೆಲೆಸಿದ್ದ ಬಾಂಗ್ಲಾದೇಶಿ ವಲಸಿಗರಿಗೆ ಸಕಲ ಸವಲತ್ತುಗಳನ್ನು ನೀಡುತ್ತಿದ್ದ ಮಮತಾ ಸರ್ಕಾರ ಚುನಾವಣಾ ಸಮಯದಲ್ಲಿ ಅವರನ್ನು ಬಾಡಿಗೆ ಗೂಂಡಾಗಳಾಗಿ ಬಳಸಿಕೊಳ್ಳುತ್ತಿತ್ತು.

2014ರ ನಂತರ ಬಿಜೆಪಿ

2004ರವರೆಗೂ ಮಮತಾ ಬ್ಯಾನರ್ಜಿಯ ಆಟಾಟೋಪಗಳನ್ನು ಸಹಿಸಿದ ಬಿಜೆಪಿ ಸ್ವತಃ ತಾನೇ ಬಂಗಾಳದ ರಕ್ಷಣೆಗಿಳಿಯಿತು. ಯೋಜನಾಬದ್ಧವಾಗಿ ಸಾಂಘಟನಾ ಕಾರ್ಯವನ್ನು ಆರಂಭಿಸಿತು. ಆದರೆ ಬಿಜೆಪಿ ಎಲ್ಲವನ್ನೂ ಸೊನ್ನೆಯಿಂದ ಆರಂಭಿಸಬೇಕಿತ್ತು. ಏಕೆಂದರೆ ಬಿಜೆಪಿ ಎಲ್ಲವನ್ನೂ ಟಿಎಂಸಿಗೆ ಕೊಟ್ಟಾಗಿತ್ತು. ಅದರ ಪರಿಣಾಮವಾಗಿ 2006ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮೂರು ಸೀಟುಗಳನ್ನು ಗೆದ್ದಿತು. ಅದರ ನಂತರ ಕೆಲವೇ ವರ್ಷಗಳಲ್ಲಿ ಬಂದ ಪಂಚಾಯತ್ ಚುನಾವಣೆಗಳಲ್ಲಿ ಬಿಜೆಪಿ ಪ್ರಬಲ ಪೈಪೋಟಿಗಿಳಿಯಿತು. ಮೊಟ್ಟಮೊದಲ ಬಾರಿಗೆ ಬಂಗಾಳದ ಹಳ್ಳಿಗಳಲ್ಲಿ ಬಿಜೆಪಿ ಕಾರ್ಯಕರ್ತ ಪಕ್ಷದ ಬಾವುಟವನ್ನು ಹಿಡಿದು ನಿಂತ. ಆದರೆ ಅದರ ಪರಿಣಾಮವನ್ನು ಆ ಕಾರ್ಯಕರ್ತ ಅನುಭವಿಸಿದ್ದು ಮಾತ್ರ ಅತ್ಯಂತ ಭೀಕರ. ಚುನಾವಣೆಯ ನಂತರ ಸುಮಾರು 300 ಕಾರ್ಯಕರ್ತರ ಹತ್ಯೆಯಾಯಿತು. ಮನೆಗಳ ಧ್ವಂಸ ನಡೆಯಿತು. ಆತನ ಬೆಳೆಗಳನ್ನು ನಾಶಪಡಿಸಲಾಯಿತು. ಗ್ರಾಮಗ್ರಾಮಗಳನ್ನೇ ಟಿಎಂಸಿ ಕಾರ್ಯಕರ್ತರು ಸುಟ್ಟು ಹಾಕಿದರು. ಹೆಣ್ಣುಮಕ್ಕಳ ಮೇಲೆ ಅತ್ಯಾಚಾರಗಳು ನಡೆಯಿತು. ಈ ಸಂಘರ್ಷದ ಚುನಾವಣೆಯ ನಂತರ ಪ್ರತಿ ರಾಷ್ಟ್ರೀಯವಾದಿಯೂ ಬಿಜೆಪಿಯತ್ತ ನೋಡಲಾರಂಭಿಸಿದ. ಸುಮಾರು 2017ರ ಹೊತ್ತಿಗೆ ಬಂಗಾಳದ ಪ್ರಬುದ್ಧ ವರ್ಗ ಬಿಜೆಪಿಯನ್ನು ಒಪ್ಪುವ ಹಂತಕ್ಕೆ ಬಂತು. ದೊಡ್ಡ ಕೇಡರ್ ಬಿಜೆಪಿಯತ್ತ ಹರಿದುಬರತೊಡಗಿತು. 2021ರ ಚುನಾವಣೆಯ ಹೊತ್ತಿಗೆ ಬೇರೆಬೇರೆ ಸಿದ್ಧಾಂತಗಳ ಜನರೂ ಬಿಜೆಪಿಯೊಂದೇ ಪರಿಹಾರ ಎನ್ನುವ ಪರಿಸ್ಥಿತಿಗೆ ಬಂದರು. ಆದರೆ 2021ರ ಚುನಾವಣೆ ಸಂದರ್ಭದಲ್ಲಿ ಕೂಡ ಪಕ್ಷದ ಸಂಘಟನೆಗೊಂದು ನಿಶ್ಚಿತ ಆಕಾರವಿರಲಿಲ್ಲ, ಮೋದಿ ಮತ್ತು ರಾಷ್ಟ್ರೀಯತೆಗಳೆಂಬ ಘೋಷಣೆಗಳೇ ಬಿಜೆಪಿಗೆ 77 ಸೀಟುಗಳನ್ನು ದೊರಕಿಸಿಕೊಟ್ಟಿತು. ಶೇ. 38ರಷ್ಟು ಪ್ರಮಾಣದ ವೋಟುಗಳು ಬಿಜೆಪಿಗೆ ಬಂದು. ಎಂದಿನಂತೆ ಆ ಚುನಾವಣೆಯ ನಂತರ ಕೂಡ ರಾಜ್ಯದಲ್ಲಿ ಭೀಕರ ಗಲಭೆ ನಡೆಯಿತು. ಸರ್ಕಾರಿ ಪ್ರಾಯೋಜಿತ ಕೊಲೆಗಳು ನಡೆದು ಸುಮಾರು 300ಕ್ಕೂ ಹೆಚ್ಚಿನ ಕಾರ್ಯಕರ್ತರ ಹತ್ಯೆ ನಡೆಯಿತು. ಇಡೀ ಬಂಗಾಳ ಹೊತ್ತಿ ಉರಿಯಿತು. ರಾಜ್ಯದ ಪೊಲೀಸ್ ವ್ಯವಸ್ಥೆ ಟಿಎಂಸಿಯ ಅಂಗಸಂಸ್ಥೆಯಂತೆ ಕಾರ್ಯನಿರ್ವಹಿಸುತ್ತಿತ್ತು. ಸಾವಿರಾರು ಕಾರ್ಯಕರ್ತರನ್ನು ಪಕ್ಷ ವರ್ಷಗಟ್ಟಲೆ ಅಸ್ಸಾಮಿನಲ್ಲಿಟ್ಟು ರಕ್ಷಣೆ ಮಾಡುವ ಹಂತಕ್ಕೆ ಪರಿಸ್ಥಿತಿ ಮುಟ್ಟಿತ್ತೆಂದರೆ ಬಂಗಾಳದ ಪರಿಸ್ಥಿತಿ ಹೇಗಿದ್ದಿರಬಹುದೆಂಬುದನ್ನು ಯೋಚಿಸಬಹುದು. ಇಂಥ ರಾಜಕೀಯ ಹತ್ಯೆಗಳನ್ನು ಗಂಭೀರವಾಗಿ ಪರಿಗಣಿಸಿದ ಸಿಬಿಐ 600ಕ್ಕೂ ಹೆಚ್ಚಿನ ಪ್ರಕರಣಗಳನ್ನು ತನಿಖೆಗೊಳಪಡಿಸಿ 6000ಕ್ಕೂ ಹೆಚ್ಚು ಟಿಎಂಸಿ ಗೂಂಡಾಗಳನ್ನು ಬಂಧಿಸಿತು. ಇದು ಶಾಂತಿ ಸ್ಥಾಪನೆಯ ಬದಲು ತೃಣಮೂಲ ಕಾಂಗ್ರೆಸ್ ಕಾರ್ಯಕರ್ತರನ್ನು ಮತ್ತಷ್ಟು ಸಿಟ್ಟಿಗೇಳಿಸಿತು. ಇದರ ಪರಿಣಾಮವಾಗಿ 24ರ ಲೋಕಸಭಾ ಚುನಾವಣೆಯಲ್ಲಿ ಎಷ್ಟೋ ಬೂತ್‌ಗಳಲ್ಲಿ ಹಿಂದುಗಳು ವೋಟ್ ಹಾಕಲು ಬರದ ಪರಿಸ್ಥಿತಿ ನಿರ್ಮಾಣವಾಯಿತು. ಬೂತ್ ಏಜೆಂಟರ ಕೊರತೆಯಾಯಿತು. ಕಾರ್ಯಕರ್ತರ ಮೇಲೆ ಸುಳ್ಳು ಕೇಸುಗಳನ್ನು ಹಾಕಲಾಯಿತು. ಇವೆಲ್ಲದರ ತರುವಾಯ ಕೂಡ ಬಿಜೆಪಿ 12 ಸೀಟುಗಳನ್ನು ಗೆದ್ದಿತು. ಈ ಬದಲಾವಣೆ ಕೂಡ ಬಿಜೆಪಿಯ ಮುಂದಿನ ಹೋರಾಟಕ್ಕೆ ಪ್ರೇರಣೆ ನೀಡಿದವು. ಇಂದು ಶ್ಯಾಮಪ್ರಸಾದ್ ಮುಖರ್ಜಿಯವರ ಕನಸು ನನಸಾಗಿದೆ. ಪ್ಲಾಸಿ ಕದನಕ್ಕೂ ಮುಂಚಿನಿಂದಲೂ ಬಂಗಾಳ ಪಡುತ್ತಿದ್ದ ಬವಣೆ ನೀಗಿದೆ. ಚುನಾವಣೆಯ ಸಮಯದಲ್ಲಿ ಬಂಗಾಳಿಗಳು ಬಿಜೆಪಿಯ ಮೇಲೆ ಯಾವ ಭರವಸೆಯನ್ನು ಇಟ್ಟಿದ್ದರೋ ಅದನ್ನು ಈಡೇರಿಸುವುದು ಮಾತ್ರ ಇನ್ನುಳಿದಿರುವ ಕೆಲಸ. ಆದುದರಿಂದ ಈ ಫಲಿತಾಂಶ ಕೇವಲ ರಾಜಕೀಯ ಅಂಕಿಸಂಖ್ಯೆಯ ಆಟವಾಗಿಲ್ಲ, ಅದೊಂದು ಮಹಾತಪಸ್ಸು, ಮಹಾಸಂಕಲ್ಪ, ಶತಮಾನಗಳ ಕಾಲದ ಸಂಘರ್ಷದ ಅಂತಿಮ ಹಂತ. ಈ ಎಲ್ಲಾ ಕಾರಣಗಳಿಂದ ಮೊನ್ನೆ ಬಂಗಾಳದ ಚುನಾವಣೆ ಎಲ್ಲಾ ಚುನಾವಣೆಗಳಂತೆ ಅಲ್ಲ, ಕೇವಲ ರಾಜಕೀಯ ವಿಶ್ಲೇಷಣೆಗಳಿಂದ ಅದನ್ನು ಅಳೆಯಲಾಗದು.

2026ರ ಹೆದ್ದೆರೆ

ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ, ಕಾರ್ಯಕರ್ತ ಎಲ್ಲಾ ಅಡೆತಡೆಗಳನ್ನು ಮೀರಿ ನಿಂತ. ಮಾಡು ಇಲ್ಲವೇ ಮಡಿ ಎನ್ನುವಂತೆ ಕೆಲಸ ಮಾಡಿದ. ಸಂಘಟನೆ ಹಿಂದೆಂದಿಗಿಂತಲೂ ಗಟ್ಟಿಗೊಂಡಿತು. 80 ಸಾವಿರ ಬೂತ್‌ಗಳಲ್ಲಿ 70 ಸಾವಿರ ಬೂತ್ ಕಮಿಟಿಗಳನ್ನು ರಚನೆ ಮಾಡಲಾಯಿತು. ಮೊದಲ ಬಾರಿಗೆ ಬಂಗಾಳದಲ್ಲಿ ಮೂರುಮೂರು ಬಾರಿ ಮನೆಮನೆ ಪ್ರಚಾರ ನಡೆಯಿತು. ರಾಜ್ಯದಲ್ಲಿ ಒಟ್ಟು 80 ಸಾವಿರಕ್ಕೂ ಹೆಚ್ಚಿನ ಸಣ್ಣ ಸಭೆಗಳು ನಡೆದವು. ಕ್ಷೇತ್ರ ಮಟ್ಟದಲ್ಲಿ ನಡೆಯುತ್ತಿದ್ದ ಸಭೆಗಳಿಗೆ ಸಾವಿರಾರು ಜನರು ಸೇರತೊಡಗಿದರು. ಅದರಲ್ಲೂ ಕಳೆದ ರಾಮನವಮಿಯ ದಿನವಂತೂ ಮಾಲ್ಡಾ, ಸಿಲಿಗುರಿ ಅಯೋಧ್ಯೆಯಂತೆ ಸಿಂಗಾರಗೊಂಡು ಉತ್ಸವವನ್ನು ಆಚರಿಸಿತು.







ಸಂಪಾದಕೀಯ

ಪಥದರ್ಶಿ ಕಾರ್ಯಾಚರಣೆ

ಕೆಲವು ಸೈನಿಕ ಕಾರ್ಯಾಚರಣೆಗಳು ಭಾರತದ ಇತಿಹಾಸದಲ್ಲಿ ಅಚ್ಚಳಿಯದ ನೆನಪಾಗಿ ಉಳಿದುದಿದೆ. ದೇಶದ ಗತಿಯನ್ನೆ ಬದಲಿಸಿದ್ದಿದೆ. ಭವಿಷ್ಯದ ಕಾರ್ಯಾಚರಣೆಗಳಿಗೆ ಮಾದರಿಯಾಗಿ ನಿಂತುದಿದೆ. 'ಅಪರೇಷನ್ ಸಿಂದೂರ್' ಕೂಡಾ ನಿಶ್ಚಿತವಾಗಿ ಅದರಲ್ಲೊಂದು. ಒಂದು ವರ್ಷದ ಹಿಂದೆ ಇದೇ ದಿನ ಆರಂಭಿಸಿದ ಅಪರೇಷನ್ ಸಿಂದೂರ್ ಕಾರ್ಯಾಚರಣೆಯು ನೆರೆಯ ಪಾಕಿಸ್ತಾನಕ್ಕೆ ಮತ್ತು ಪಾಕ್ ಪ್ರೇರಿತ ಭಯೋತ್ಪಾದಕರಿಗೆ ಎಂದೂ ಮರೆಯಲಾರದ ಪಾಠವೊಂದನ್ನು



ಕಲಿಸಿದ್ದಷ್ಟೇ ಅಲ್ಲದೆ, ಜಗತ್ತಿಗೂ ಭಾರತದ ಸೈನಿಕ ಶಕ್ತಿ ಸಾಮರ್ಥ್ಯದ ಅರಿವು ಮಾಡಿಕೊಟ್ಟಿತು. ಭಾರತದ ವಿದೇಶಾಂಗ ನೀತಿಯಲ್ಲಿ ಹಾಗೂ ಭಯೋತ್ಪಾದನಾ ವಿರೋಧಿ ನೀತಿಯಲ್ಲಿ ಕೂಡಾ ಮಹತ್ತರ ಬದಲಾವಣೆಯನ್ನು ಸಂಕೇತಿಸಿತು. ಪಾಕಿಸ್ತಾನದ 'ಪರಮಾಣು ಬ್ಲ್ಯಾಕ್ ಮೇಲ್'ನ್ನು ತಾನು ಲೆಕ್ಕಿಸುವುದೇ ಇಲ್ಲವೆಂಬ ಸ್ಪಷ್ಟ ಸಂದೇಶ ಸಾರಿತು. ದೇಶದ ಹಿತಾಸಕ್ತಿಯ ವಿಷಯ ಬಂದಾಗ ಯಾವುದೇ ಜಾಗತಿಕ ಒತ್ತಡಕ್ಕೂ ಮಣಿಯುವುದಿಲ್ಲವೆಂಬ ಗಟ್ಟಿ ನಿಲುವನ್ನು ಪ್ರದರ್ಶಿಸಿತು.

ಪಹಲ್ಗಾಂನಲ್ಲಿ ಪಾಕಿಸ್ತಾನಿ ಪ್ರೇರಿತ ಭಯೋತ್ಪಾದಕರು 26 ಮಂದಿ ಅಮಾಯಕ ಪ್ರವಾಸಿಗರನ್ನು ಕ್ರೂರವಾಗಿ ಹತ್ಯೆಗೈದಾಗ ಭಾರತದ ತಾಳ್ಮೆಯ ಕಟ್ಟೆಯೊಡೆದುದು ಸಹಜವೇ ಆಗಿತ್ತು. ಹಾಗಾಗಿ ಭಾರತದ ಪ್ರತಿಕ್ರಿಯೆ ಕೂಡಾ ಅಷ್ಟೇ ಕಠೋರವಾಗಿತ್ತು. 2025ರ ಮೇ 7ರಂದು ಪಾಕಿಸ್ತಾನದ 9 ಭಯೋತ್ಪಾದಕರ ನೆಲೆಗಳ ಮೇಲೆ ಕ್ಷಿಪಣಿ ದಾಳಿ ಮತ್ತು ಡ್ರೋನ್ ದಾಳಿ ನಡೆಸಲಾಯಿತು. ಅದುವರೆಗೆ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಮಾತ್ರ ಸರ್ಜಿಕಲ್ ದಾಳಿ ನಡೆಸಿದ್ದ ಭಾರತ ಈ ಬಾರಿ ಪಾಕಿಸ್ತಾನದ ಪಂಜಾಬ್ ಪ್ರಾಂತಕ್ಕೂ ನುಗ್ಗಿ ದಾಳಿ ನಡೆಸಿತು. ಆರಂಭದಲ್ಲಿ ಪಾಕಿಸ್ತಾನದ ಮಿಲಿಟರಿ ಗುರಿಗಳ ಮೇಲೆ ದಾಳಿ ನಡೆಸಲಿಲ್ಲವಾದರೂ, ಪಾಕಿಸ್ತಾನವು ಭಾರತದ ನಾಗರಿಕ ಪ್ರದೇಶಗಳ ಮೇಲೆ ದಾಳಿ ನಡೆಸಲಾರಂಭಿದ ಬಳಿಕ ಭಾರತವು ಪಾಕಿಸ್ತಾನದ ಮಿಲಿಟರಿ ಕೇಂದ್ರಗಳ ಮೇಲೂ ದಾಳಿ ನಡೆಸಿತು. ಪಾಕಿಸ್ತಾನದ ಪರಮಾಣು ಕಾರ್ಯಕ್ರಮದ ಕೇಂದ್ರವಾದ ನೂರ್ ಖಾನ್ ನೆಲೆಯ ಮೇಲೂ ಕ್ಷಿಪಣಿ ದಾಳಿ ನಡೆಸಲಾಯಿತು. ಭಾರತದ 88 ಗಂಟೆಗಳ ಕಾರ್ಯಾಚರಣೆ ಅದೆಷ್ಟು ಅತ್ಯುಗ್ರವಾಗಿತ್ತೆಂದರೆ ಪಾಕಿಸ್ತಾನವು ಮೊಣಕಾಲೂರಿ ಸಮರ ನಿಲ್ಲಿಸಲು ಕೋರಿಕೊಂಡಿತು. ಕದನವಿರಾಮ ಘೋಷಿಸುವಂತೆ ಮಾಡಲು ಅಮೆರಿಕ ಮೊದಲಾದ ರಾಷ್ಟ್ರಗಳ ಕೈಕಾಲು ಹಿಡಿಯಿತು.

ಭಾರತವು ಪಾಕಿಸ್ತಾನದ ಶಕ್ತಿ ಉಡುಗಿಸಿದ ಬಳಿಕ ಸಮರ ವಿರಾಮ ಘೋಷಿಸಿದ್ದು, ಆ ಕಾಲದಲ್ಲಿ ಕೆಲವರಿಂದ ಟೀಕೆಗೆ ಗುರಿಯಾಯಿತಾದರೂ ಅದು ಪ್ರಬುದ್ಧ ನಿಲುವಾಗಿತ್ತು ಎನ್ನುವುದು ಈಗ ಸ್ಪಷ್ಟವಾಗುತ್ತಿದೆ. ರಷ್ಯಾ, ಉಕ್ರೇನ್, ಇರಾನ್, ಅಮೆರಿಕಗಳು ತಾವು ಆರಂಭಿಸಿದ ಯುದ್ಧವನ್ನು ನಿಲ್ಲಿಸಲು ಹೆಣಗುತ್ತಿರುವಾಗ ಭಾರತವು ತನ್ನ 'ನಿಶ್ಚಿತ ಗುರಿ' ಸಾಧಿಸಿದೊಡನೆ ಸಮರ ನಿಲ್ಲಿಸಿ ವಿವೇಕ ಪ್ರದರ್ಶಿಸಿತು. ಒಟ್ಟಿನಲ್ಲಿ 'ಅಪರೇಷನ್ ಸಿಂದೂರ್' ಭಾರತದ ಕ್ಷಿಪ್ರ ಮತ್ತು ನಿರ್ಣಾಯಕ ಮಿಲಿಟರಿ ಕಾರ್ಯಾಚರಣೆಗೆ ಸಂಕೇತವಾಗಿದೆ.

ಸೋತ ಮೇಲಿನ ಮಾತುಗಳೇ ಸೋಲಿಗೆ ಕಾರಣವಲ್ಲವೇ?

ಗುರುತರ
• ಸೋಮಶೇಖರ ಸಿ.ಜೆ.
sompreethi@gmail.com



ಬಹಳಷ್ಟು ಬಾರಿ ಕೆಲಸವಿಲ್ಲದ ವೇಳೆಯಲ್ಲಿ ಕುಳಿತು ಕೆಲವೊಂದು ಹಗಲುಗನಸು ಕಾಣುತ್ತಿರುತ್ತೇವೆ. ಎಂಥಾ ವಿಚಿತ್ರ ಕನಸುಗಳು ಎಂದರೆ, ರಾತ್ರಿ ಕಳೆದು ಬೆಳಗಾಗುವಷ್ಟರಲ್ಲಿ ಕೋಟಿ ಕೋಟಿ ಗಳಿಸಿದ್ದು, ದೇಶದ ಪ್ರಧಾನಮಂತ್ರಿಯೇ ಆಗಿದ್ದು, ಯಾರೋ ಒಬ್ಬರು ಬಂದು ಈ ಎಲ್ಲವನ್ನು ಮಾಡಿಸಿದ್ದು... ಹೀಗೆ ಕನಸುಗಳ ಪಟ್ಟಿ ಬೆಳೆಯುತ್ತಾ ಹೋಗುತ್ತಿರುತ್ತದೆ. ಆದರೆ, ಪ್ರಧಾನಿಯಾಗದಿದ್ದರೂ, ಹಣ ದುಡಿಯಲು ಅವಕಾಶಗಳಿವೆ. ದಾರಿ ಹುಡುಕಿಕೊಂಡು ಹೋಗಿ, ಉದ್ಯಮವೋ, ಸ್ಟಾರ್ಟ್ಅಪ್ ರೀತಿಯ ಯಾವುದಾದರೂ ವ್ಯಾಪಾರ ನಡೆಸಿದರೆ, ನಾಳೆ ಬೆಳಗ್ಗೆಯೇ ಆಗದಿದ್ದರೂ ಒಂದಷ್ಟು ವರ್ಷಗಳಲ್ಲಾದರೂ ಸಿರಿವಂತರಾಗಬಹುದು, ಕೋಟಿ ಕೋಟಿ ಗಳಿಸಬಹುದು. ಆದರೆ, ಇದಕ್ಕೆ ಶ್ರಮವನ್ನೇ ಹಾಕದೇ, ದಿನವಿಡೀ ಯಾರೋ ಬರ್ತಾರೆ, ಅವರು ಕೋಟಿ ಕೊಡ್ತಾರೆ ಅಂತ ಕುಳಿತುಕೊಂಡರೆ, ಏನೂ ಆಗದು. ಕೋಟಿ ಸಿಗದೇ ಇದ್ದಾಗ ಮಾತ್ರ, ಜಗತ್ತಿನ ಎಲ್ಲರಿಗೂ ಬೈದುಕೊಂಡು, ನನಗೇಕೆ ಕೋಟಿ ಕೋಟಿ ಸಿಗಲಿಲ್ಲ, ಇಲ್ಲಿ ಯಾರೋ ಮೋಸ ಮಾಡ್ತಿದ್ದಾರೆ ಅಂದುಕೊಂಡ್ರೆ ಅಷ್ಟೇ.

ಈಗಲೂ ನೋಡಿ, ಪಂಚ ರಾಜ್ಯ ಚುನಾವಣಾ ಫಲಿತಾಂಶ ಹೊರಬಿದ್ದು, ಎರಡು ದಿನಗಳಾಗಿದ್ದರೂ, ಕೆಲವರು ತಾವು ಸೋತದ್ದು ಏಕೆ ಎಂಬ ಆತ್ಮಾವಲೋಕನ ಮಾಡದೇ, ಬೇರೊಬ್ಬರ ಮೇಲೆ ಸೋಲಿನ ಹೊಣೆ ಹೊರಿಸಿಕೊಂಡು ಕುಳಿತಿದ್ದಾರೆ. ಚುನಾವಣೆಗಳಿಗಾಗಿ ಹಗಲು ರಾತ್ರಿ ಪರಿಶ್ರಮ ಹಾಕಿರುವಂಥವರಿಗೆ ಕಳ್ಳತನದ ಪಟ್ಟ ಹೊರಿಸುವುದು ಅಲ್ಲದೇ, ಈ ಚುನಾವಣೆಗಳನ್ನು ಗೆಲ್ಲಲು ತಾವೇನು ಮಾಡಿದ್ದೇವೆ ಎಂಬುದನ್ನೇ ಮರೆಯುತ್ತಾರೆ. ಇದೊಂದು ರೀತಿಯಲ್ಲಿ ಸಂವಿಧಾನ ರಕ್ಷಣೆ ಮಾಡುತ್ತೇವೆ ಎಂಬವರ ವಿರೋಧಾಭಾಸ ನಡೆಗಳಲ್ಲವೇ? ಈಗ ಫಲಿತಾಂಶ ಮತ್ತದರ ಸುತ್ತಲಿನ ಬೆಳವಣಿಗೆಗಳಿಗೆ ಬರೋಣ, ಪಂಚರಾಜ್ಯಗಳ ಚುನಾವಣಾ ಫಲಿತಾಂಶಗಳು ಕೇವಲ ಐದು ರಾಜ್ಯಗಳ ರಾಜಕೀಯ ಬದಲಾವಣೆಗಳಲ್ಲ, ಅವು ವಿಪಕ್ಷಗಳ ರಾಜಕೀಯ ಸಂಸ್ಕೃತಿಯನ್ನೂ ಬೆತ್ತಲಾಗಿಸಿವೆ. ಈ ತೀರ್ಪುಗಳಲ್ಲಿ ಒಂದೇ ಸಾಮಾನ್ಯ ಸಂದೇಶ ಇದೆ. ಮತದಾರರು ಯಾರಿಗೂ ಶಾಶ್ವತ ಹಕ್ಕುಪತ್ರ ಕೊಡುವುದಿಲ್ಲ, ಆಡಳಿತ ಸರಿಯಾಗಿಲ್ಲವೇ, ಪಕ್ಷ ಜನರಿಂದ ದೂರವಾಗಿದ್ದೇವೆಯೇ, ನಾಯಕತ್ವ ವಿಶ್ವಾಸ ಕಳೆದುಕೊಂಡಿದೆಯೇ? ಈ ಎಲ್ಲವನ್ನೂ ಮತದಾರರು ಮೌನವಾಗಿ ಗಮನಿಸುತ್ತಾರೆ ಮತ್ತು ಮತಗಟ್ಟೆಯಲ್ಲಿ ಉತ್ತರ ಕೊಡುತ್ತಾರೆ. ಆದರೆ ಸೋತವರು ಆ ಉತ್ತರವನ್ನು ಓದಲು ಸಿದ್ಧರಿಲ್ಲದಾಗ, ಪ್ರಜಾಪ್ರಭುತ್ವದ ನಿಜವಾದ ಸಂಕಟ ಆರಂಭವಾಗುತ್ತದೆ.

ವಿಪಕ್ಷಗಳ ಈ ಬಾರಿಯ ಪ್ರತಿಕ್ರಿಯೆ ರಾಜಕೀಯ ಸೋಲಿಗಿಂತಲೂ ಗಂಭೀರವಾದ ನೈತಿಕ ಸೋಲನ್ನು ತೋರಿಸಿದೆ. ಪಶ್ಚಿಮ ಬಂಗಾಳದಲ್ಲಿ ಸೋಲಿನ ನಂತರ ಮಮತಾ ಬ್ಯಾನರ್ಜಿ ಅವರು ಇವಿಎಂ ಅಕ್ರಮ, ಎಸ್ಐಆರ್, ಸಂಸ್ಥೆಗಳ ದುರುಪಯೋಗ ಮತ್ತು ಚುನಾವಣಾ ಆಯೋಗದ ವಿರುದ್ಧ ತೀವ್ರ ಆರೋಪಗಳನ್ನು ಮಾಡುತ್ತಲೇ ಇದ್ದಾರೆ. ಜತೆಗೆ ಸಿಎಂ ಸ್ಥಾನಕ್ಕೂ ರಾಜೀನಾಮೆ ಕೊಡಲ್ಲ ಎಂದಿದ್ದಾರೆ. ಅವರು ಮುಖ್ಯ ಚುನಾವಣಾ ಆಯುಕ್ತರನ್ನು ಈ ಚುನಾವಣೆಯ ವಿಲನ್ ಎಂದು ಕರೆದಿದ್ದಾರೆ.

ಇದು ಸಾಮಾನ್ಯ ಅಸಮಾಧಾನವಲ್ಲ, ಇದು ಜನತೆಯ ತೀರ್ಪನ್ನು ತಿರಸ್ಕರಿಸುವ ಧೋರಣೆ. ತಾವು ಗೆದ್ದಾಗ ಮತಯಂತ್ರ ಪವಿತ್ರ, ಸೋತಾಗ ಮತಯಂತ್ರ ಸಂಶಯಾಸ್ಪದ, ಈ ಎರಡುಮುಖದ ರಾಜಕೀಯಕ್ಕೆ ಪ್ರಜಾಪ್ರಭುತ್ವದಲ್ಲಿ ಸ್ಥಾನವಿಲ್ಲ. ಚುನಾವಣಾ ಪ್ರಕ್ರಿಯೆಯಲ್ಲಿ ದೋಷವಿದ್ದರೆ ನ್ಯಾಯಾಲಯವಿದೆ, ಚುನಾವಣಾ ಆಯೋಗದ ನಿಯಮಗಳಿವೆ, ಸಾಕ್ಷ್ಯಾಧಾರಗಳೊಂದಿಗೆ ಹೋರಾಡುವ ಮಾರ್ಗವಿದೆ. ಆದರೆ ಫಲಿತಾಂಶ ಬಂದ ತಕ್ಷಣವೇ ನಾವು ಸೋತಿಲ್ಲ, ನೈತಿಕವಾಗಿ ನಾವು ಗೆದ್ದಿದ್ದೇವೆ, ಚುನಾವಣೆ ಕದಿಯಲಾಗಿದೆ ಎಂಬ ಮಾತುಗಳು ಜನರ ಮತದಾನ ಬುದ್ಧಿವಂತಿಕೆಗೆ ನೇರ ಅವಮಾನ ಮಾಡಿದಂತೆ. ಇದು ರಾಜಕೀಯ ಜಾಗರೂಕತೆ ಅಲ್ಲ, ಇದು ಸೋಲಿನ ಮುನ್ನವೇ ಸೋಲಿಗೆ ನೆಪ ಕಟ್ಟುವ ತಂತ್ರ. ಚುನಾವಣಾ ಫಲಿತಾಂಶ ಬರುವುದಕ್ಕೂ ಮುಂಚೆ ಅಕ್ರಮ, ಫಲಿತಾಂಶ ಬಂದ ನಂತರ ಕಳ್ಳತನ, ಸೋಲಿನ ನಂತರ ಸಂಚು ಎಂಬ ಈ ಸರಣಿ ಈಗ ವಿಪಕ್ಷಗಳ ಸಿದ್ಧ ಮಾದರಿಯಂತಾಗಿದೆ. ಜನತೆ ತಮ್ಮ ಪರವಾಗಿ ಮತ ಹಾಕಿದಾಗ ಜನಶಕ್ತಿ, ವಿರುದ್ಧವಾಗಿ ಮತ ಹಾಕಿದಾಗ ಮತಚೋರಿ ಎಂಬ ವ್ಯಾಖ್ಯಾನವೇ ಪ್ರಜಾಪ್ರಭುತ್ವದ ಅವಮಾನ.

ಇದಕ್ಕಿಂತ ಗಂಭೀರವಾದದ್ದು ರಾಹುಲ್ ಗಾಂಧಿಯವರ ಪ್ರತಿಕ್ರಿಯೆ. ಅವರು ಅಸ್ಸಾಂ ಮತ್ತು ಬಂಗಾಳ ಚುನಾವಣೆಗಳು ಬಿಜೆಪಿ ಮತ್ತು ಚುನಾವಣಾ ಆಯೋಗದ ಬೆಂಬಲದಿಂದ ಕದ್ದುಕೊಳ್ಳಲ್ಪಟ್ಟಿವೆ ಎಂದು ಆರೋಪಿಸಿ, ಬಂಗಾಳದಲ್ಲಿ 100ಕ್ಕೂ ಹೆಚ್ಚು ಸ್ಥಾನಗಳು ಕದ್ದುಕೊಳ್ಳಲ್ಪಟ್ಟಿವೆ ಎಂಬ ಮಮತಾ ಬ್ಯಾನರ್ಜಿ ಅವರ ಆರೋಪಕ್ಕೆ ಬೆಂಬಲ ನೀಡಿದ್ದಾರೆ. ಈಗಲೂ ಲೋಕಸಭೆ ಚುನಾವಣೆಯಲ್ಲೂ ಮತಚೋರಿಯಾಗಿತ್ತು ಎಂಬ ಆರೋಪವನ್ನೂ ನಡೆಸಿ, ಪ್ರತಿ ಆರರಲ್ಲಿ ಒಬ್ಬ ಬಿಜೆಪಿ ಸಂಸದ ಮತಚೋರಿಯಿಂದ ಗೆದ್ದಿದ್ದಾರೆ ಎಂದು ಬಿಟ್ಟಿದ್ದಾರೆ.

ಇಂತಹ ಹೇಳಿಕೆಗಳು ಸಾಮಾನ್ಯ ರಾಜಕೀಯ ಟೀಕೆಗಳಲ್ಲ, ದೇಶದ ಚುನಾವಣಾ ವ್ಯವಸ್ಥೆಯ ಮೇಲಿನ ಸಾರ್ವಜನಿಕ ವಿಶ್ವಾಸವನ್ನು ಕುಂದಿಸುವ ಗಂಭೀರ ಆರೋಪಗಳು. ಇಷ್ಟು ದೊಡ್ಡ ಆರೋಪಗಳನ್ನು ಮಾಡುವಾಗ ಸಾಕ್ಷ್ಯವೂ ಅಷ್ಟೇ ದೊಡ್ಡದಾಗಿರಬೇಕು. ಇಲ್ಲದಿದ್ದರೆ ಅದು ಪ್ರಜಾಪ್ರಭುತ್ವದ ರಕ್ಷಣೆಯ ಹೆಸರಿನಲ್ಲಿ ಪ್ರಜಾಪ್ರಭುತ್ವದ ಅಡಿಪಾಯವನ್ನೇ ದುರ್ಬಲಗೊಳಿಸುವ ಕೆಲಸವಾಗುತ್ತದೆ. ಸೋತ ಪಕ್ಷಗಳು ತಮ್ಮ ಸೋಲಿನ ಕಾರಣಗಳನ್ನು ಪರಿಶೀಲಿಸುವ ಬದಲು ಚುನಾವಣಾ ಆಯೋಗ, ಇವಿಎಂ, ಕೇಂದ್ರ ಸಂಸ್ಥೆಗಳು, ಮಾಧ್ಯಮ, ಆಡಳಿತ ಸೇರಿ ಎಲ್ಲರ ಮೇಲೂ ಹೊಣೆ ಹಾಕಿದರೆ, ಅಂತಿಮವಾಗಿ ಹೊಣೆಗಾರಿಕೆ ಎಂಬ ರಾಜಕೀಯ ಗುಣವೇ ನಾಶವಾಗುತ್ತದೆ. ಇಲ್ಲಿ ವಿಚಿತ್ರ ವಿರೋಧಾಭಾಸ ಇದೆ. ತಮಿಳುನಾಡಿನಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿಲ್ಲ, ಟಿವಿಕೆ ದೊಡ್ಡ ಶಕ್ತಿಯಾಗಿ ಹೊರಹೊಮ್ಮಿದೆ. ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಅಧಿಕಾರಕ್ಕೇರಲು ಸಿದ್ಧವಾಗಿದೆ. ಆದರೂ ಈ ಚುನಾವಣೆಗಳಲ್ಲಿ ವೋಟ್ ಚೋರಿಯಾಗಿದೆ ಅಂತ ಕಾಂಗ್ರೆಸ್ ಆಗಲಿ, ಮಮತಾ ಬ್ಯಾನರ್ಜಿಯಾಗಲಿ ಹೇಳುತ್ತಲೇ ಇಲ್ಲ, ಇದರಿಂದ ಸ್ಪಷ್ಟವಾಗುವುದು ಏನೆಂದರೆ, ಕೆಲವು ವಿಪಕ್ಷಗಳಿಗೆ ಸಮಸ್ಯೆ ಫಲಿತಾಂಶದ ಸ್ವರೂಪದಲ್ಲಿಲ್ಲ, ಸಮಸ್ಯೆ ತಮ್ಮ ನಿರೀಕ್ಷೆಗೆ ವಿರುದ್ಧವಾದ ಜನಮತದಲ್ಲಿದೆ.

ವಿಪಕ್ಷಗಳ ಈ ಮೊಂಡಾಟದ ಮೂಲದಲ್ಲಿ ಒಂದು ಅಪಾಯಕಾರಿ ಅಹಂಕಾರ ಅಡಗಿದೆ. ನಾವು ಸೋಲಲು ಸಾಧ್ಯವೇ ಇಲ್ಲ; ಸೋತಿದ್ದರೆ ವ್ಯವಸ್ಥೆಯೇ ತಪ್ಪು ಎಂಬ. ಮನೋಭಾವವು ಅವರನ್ನು ಜನರಿಂದ ದೂರ ಮಾಡುತ್ತಿದೆ. ಜನರು ಬೆಲೆ ಏರಿಕೆ, ಉದ್ಯೋಗ, ಭದ್ರತೆ, ಪ್ರಾದೇಶಿಕ ಅಸ್ಮಿತೆ, ಭ್ರಷ್ಟಾಚಾರ, ಆಡಳಿತದ ದಕ್ಷತೆ, ನಾಯಕತ್ವದ ವಿಶ್ವಾಸಾರ್ಹತೆ ಇವುಗಳ ಆಧಾರದ ಮೇಲೆ ಮತ ಹಾಕುತ್ತಾರೆ. ಆದರೆ ಸೋತ ಪಕ್ಷಗಳು ಈ ಸಂದೇಶವನ್ನು ಕೇಳಲು ಸಿದ್ಧವಿಲ್ಲ, ಅವುಗಳಿಗೆ ಜನರ ಧ್ವನಿಗಿಂತ ತಮ್ಮದೇ ಆರೋಪಗಳ ಪ್ರತಿಧ್ವನಿ ಹೆಚ್ಚು ಸಿಹಿಯಾಗಿ ಕೇಳಿಸುತ್ತಿದೆ. ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ತಮ್ಮ ಭದ್ರತೆಯ ಕ್ಷೇತ್ರ ಭವಾನಿಪುರದಲ್ಲೇ ಸೋತಿದ್ದಾರೆ. ಬಿಜೆಪಿ ರಾಜ್ಯದಲ್ಲಿ ಮೊದಲ ಬಾರಿಗೆ ಆಡಳಿತ ಹಿಡಿಯಲು ಸಜ್ಜಾಗಿದೆ. ಇಂತಹ ತೀರ್ಪನ್ನು ಕೇವಲ ಇವಿಎಂ, ಸಂಚು, ಮತಚೋರಿ ಎಂದು ತಳ್ಳಿ ಹಾಕುವುದು ರಾಜಕೀಯ ವಾಸ್ತವದಿಂದ ಓಡಿಹೋಗುವುದು. ಒಬ್ಬ ನಾಯಕ ಅಥವಾ ಪಕ್ಷ ಅಜೇಯವಲ್ಲ, ಜನರು ಅಧಿಕಾರ ಕೊಡುತ್ತಾರೆ, ಜನರೇ ಅದನ್ನು ಹಿಂಪಡೆಯುತ್ತಾರೆ. ಇದೇ ಪ್ರಜಾಪ್ರಭುತ್ವದ ಸೌಂದರ್ಯ. ಅದನ್ನೇ ಒಪ್ಪದವರು ಪ್ರಜಾಪ್ರಭುತ್ವದ ಹೆಸರು ಜಪಿಸಿದರೂ ಅದರ ಆತ್ಮವನ್ನು ಗೌರವಿಸುವುದಿಲ್ಲ, ವಿಪಕ್ಷಗಳ ಕರ್ತವ್ಯ ಕೇವಲ ಆರೋಪ ಮಾಡುವುದು ಅಲ್ಲ, ಜನರಿಗೆ ವಿಶ್ವಾಸಾರ್ಹ ಪರ್ಯಾಯ ಒದಗಿಸುವುದು. ಸೋಲಿನ ನಂತರ ಸಂಯಮ ತೋರಿಸುವುದು, ಕಾರ್ಯಕರ್ತರನ್ನು ಶಾಂತವಾಗಿಡುವುದು, ಮತದಾರರಿಗೆ ಧನ್ಯವಾದ ಹೇಳುವುದು, ತಪ್ಪುಗಳ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುವುದು ರಾಜಕೀಯ ಪ್ರೌಢಿಮೆಯ ಲಕ್ಷಣಗಳು. ಆದರೆ ಸೋಲಿನ ತಕ್ಷಣವೇ ಚುನಾವಣಾ ಆಯೋಗವನ್ನು ಶತ್ರುವಿನಂತೆ ಚಿತ್ರಿಸುವುದು, ಜನರ ತೀರ್ಪನ್ನು ಅಕ್ರಮ ಎಂದು ಕರೆಯುವುದು, ಮತದಾರರ ನಿರ್ಧಾರವನ್ನು ಅನುಮಾನದಲ್ಲಿ ಮುಚ್ಚಿಡುವುದು ಇವು ಜವಾಬ್ದಾರಿಯುತ ವಿರೋಧ ಪಕ್ಷದ ಲಕ್ಷಣಗಳಲ್ಲ, ಈ ಮೊಂಡಾಟದಿಂದ ಗೆದ್ದವರಿಗೆ ಲಾಭವಾಗಬಹುದು, ಆದರೆ ಪ್ರಜಾಪ್ರಭುತ್ವಕ್ಕೆ ಹಾನಿ. ಏಕೆಂದರೆ ಜನರು ಒಂದು ಹಂತದ ನಂತರ ಪ್ರಶ್ನಿಸುತ್ತಾರೆ. ಪ್ರತಿ ಸೋಲಿಗೂ ಕಳ್ಳತನವೇ ಕಾರಣವೇ? ಹಾಗಾದರೆ ನಿಮ್ಮ ರಾಜಕೀಯ ವೈಫಲ್ಯಕ್ಕೆ ನೀವು ಯಾವಾಗ ಹೊಣೆ ಹೊರುತ್ತೀರಿ? ಈ ಪ್ರಶ್ನೆಗೆ ವಿಪಕ್ಷಗಳು ಉತ್ತರ ಕೊಡದಿದ್ದರೆ, ಜನರು ಮುಂದಿನ ಚುನಾವಣೆಯಲ್ಲೂ ಇನ್ನಷ್ಟು ಕಠಿಣ ಉತ್ತರ ನೀಡುತ್ತಾರೆ.

ಈ ಚುನಾವಣಾ ಫಲಿತಾಂಶಗಳು ಸೋತ ಪಕ್ಷಗಳಿಗೆ ಕೊಟ್ಟಿರುವ ಸಂದೇಶ ಸ್ಪಷ್ಟವಾಗಿದೆ. ಮತದಾರರನ್ನು ದೂಷಿಸಬೇಡಿ, ಮತಯಂತ್ರವನ್ನು ಶಪಿಸಬೇಡಿ, ಆಯೋಗವನ್ನು ನಿರಂತರವಾಗಿ ಅವಮಾನಿಸಬೇಡಿ. ಮೊದಲು ಕನ್ನಡಿಯಲ್ಲಿ ನಿಮ್ಮ ಮುಖ ನೋಡಿ. ಸಂಘಟನೆ ದುರ್ಬಲವಾಗಿದೆಯೇ? ನಾಯಕತ್ವ ಸರಿ ಇಲ್ಲವೇ? ಜನರ ನೋವುಗಳಿಂದ ಪಕ್ಷ ದೂರವಾಗಿದೆಯೇ? ಅಭ್ಯರ್ಥಿ ಆಯ್ಕೆ ತಪ್ಪಿದೆಯೇ? ಮೈತ್ರಿಗಳು ಕೇವಲ ಹೆಸರಿಗಷ್ಟೇ ಇದ್ದವೇ, ಜನಮನ ಗೆಲ್ಲುವ ನೀತಿ ಇರಲಿಲ್ಲವೇ? ಇವೆಲ್ಲ ಪ್ರಶ್ನೆಗಳಿಗೆ ಉತ್ತರ ಕೊಡದೆ ವೋಟ್ ಚೋರಿ ಎಂಬ ಒಂದೇ ಘೋಷಣೆಯ ಹಿಂದೆ ಅಡಗಿಕೊಳ್ಳುವುದು ರಾಜಕೀಯ ಪಲಾಯನ. ಪ್ರಜಾಪ್ರಭುತ್ವದಲ್ಲಿ ಸೋಲು ಅವಮಾನವಲ್ಲ, ಆದರೆ ಸೋಲನ್ನು ಒಪ್ಪದ ಅಹಂಕಾರವೇ ಅವಮಾನ. ಜನರು ತೀರ್ಪು ನೀಡಿದ್ದಾರೆ. ಆ ತೀರ್ಪು ಕೆಲವರಿಗೆ ಕಹಿಯಾಗಿರಬಹುದು, ಆದರೆ ಕಹಿ ಔಷಧಿಯೇ ರೋಗಕ್ಕೆ ಚಿಕಿತ್ಸೆ. ವಿಪಕ್ಷಗಳು ಈ ತೀರ್ಪನ್ನು ಮೊಂಡಾಟದಿಂದ ತಳ್ಳಿಹಾಕಿದರೆ, ಅವು ಜನತೆಯಿಂದ ಇನ್ನೂ ದೂರ ಸರಿಯುತ್ತವೆ. ಆದರೆ ಅದನ್ನು ಆತ್ಮಪರಿಶೀಲನೆಯ ಅವಕಾಶವನ್ನಾಗಿ ಮಾಡಿಕೊಂಡರೆ ಮಾತ್ರ ಮತ್ತೆ ಜನರ ವಿಶ್ವಾಸ ಗಳಿಸಬಹುದು. ಇದೀಗ ವಿಪಕ್ಷಗಳಿಗೆ ಆಯ್ಕೆ ಒಂದೇ. ಜನರ ತೀರ್ಪಿನ ಮುಂದೆ ತಲೆಬಾಗುವುದೇ ಅಥವಾ ಮೊಂಡಾಟದ ಗೋಡೆಯ ಹಿಂದೆ ಇನ್ನಷ್ಟು ಕುಸಿಯುವುದೇ. ಪ್ರಜಾಪ್ರಭುತ್ವದಲ್ಲಿ ಜನರೇ ಅಂತಿಮ ನ್ಯಾಯಾಧೀಶರು. ಆ ನ್ಯಾಯಾಧೀಶರ ತೀರ್ಪನ್ನು ಅವಮಾನಿಸುವ ರಾಜಕೀಯ, ಎಷ್ಟೇ ದೊಡ್ಡ ಘೋಷಣೆಗಳ ಹಿಂದೆ ಅಡಗಿದರೂ, ಕೊನೆಯಲ್ಲಿ ಜನರ ನ್ಯಾಯಾಲಯದಲ್ಲೇ ಸೋಲುತ್ತದೆ.

'ಆಪರೇಷನ್ ಸಿಂದೂರ್' ವಿಜಯಕ್ಕೆ 1 ವರ್ಷ

▸ ಮೇಜರ್ ಜನರಲ್ ರವಿ ಮುರುಗನ್ (ನಿವೃತ್ತ)



ಒಂದು ವರ್ಷದ ಹಿಂದೆ, 2025ರ ಮೇ 07ರಂದು, ಭಾರತವು 'ಆಪರೇಷನ್ ಸಿಂದೂರ್' ಪ್ರಾರಂಭಿಸಿತು. ಆ ಮೂಲಕ ತನ್ನ ಘೋಷಿತ ನೀತಿಯನ್ನು ದೃಢವಾದ ಮಿಲಿಟರಿ ಕ್ರಮವನ್ನಾಗಿ ಪರಿವರ್ತಿಸಿತು. ದಶಕಗಳಿಂದ ಭಾರತದ ಮಣ್ಣಿನಲ್ಲಿ ಪಾಕಿಸ್ತಾನ ನಡೆಸುತ್ತಿರುವ ಭಯೋತ್ಪಾದನಾ ಕೃತ್ಯಗಳಿಗೆ ಕೇವಲ ಮೌಖಿಕ ಎಚ್ಚರಿಕೆ ನೀಡುವ ಬದಲು, ಪ್ರತ್ಯಕ್ಷವಾಗಿ ತಿರುಗೇಟು ನೀಡುವ ಭಾರತದ ಸಂಕಲ್ಪವನ್ನು ಈ ಕಾರ್ಯಾಚರಣೆ ಸಾಬೀತುಪಡಿಸಿತು. ಪಾಕಿಸ್ತಾನವು ಭಯೋತ್ಪಾದಕ ಸಂಘಟನೆಗಳನ್ನು ತನ್ನ ಪರೋಕ್ಷ ಯುದ್ಧದ ದಾಳಗಳಾಗಿ ಬಳಸಿಕೊಳ್ಳುತ್ತಿರುವುದನ್ನು ಎದುರಿಸುವಲ್ಲಿ, 'ಆಪರೇಷನ್ ಸಿಂದೂರ್' ಭಾರತದ ಇತಿಹಾಸದಲ್ಲಿ ಒಂದು ಮಹತ್ವದ ಮೈಲಿಗಲ್ಲಾಗಿದೆ.

ಈ ಕಾರ್ಯಾಚರಣೆಯ ಹಿಂದಿದ್ದ ರಾಜಕೀಯ ಉದ್ದೇಶವು ಅತ್ಯಂತ ಸ್ಪಷ್ಟ ಮತ್ತು ಅಚಲವಾಗಿತ್ತು. 2025ರ ಏ. 22ರಂದು ಪಹಲ್ಗಾಮ್‌ನಲ್ಲಿ ಪಾಕಿಸ್ತಾನ ಪ್ರೇರಿತ ಭಯೋತ್ಪಾದಕರು ನಡೆಸಿದ ಭೀಕರ ದಾಳಿಯಲ್ಲಿ 26 ಅಮಾಯಕರು ಬಲಿಯಾದ ನಂತರ, ಭಾರತದ ಪ್ರತಿಕ್ರಿಯೆಯು ಕೇವಲ ಸಾಂಕೇತಿಕವಾಗಿರಲಿಲ್ಲ, ಅದು ಅತ್ಯಂತ ಯೋಜಿತ, ಸಮಯೋಚಿತ ಮತ್ತು ಗುರಿಕೇಂದ್ರಿತವಾಗಿತ್ತು. ಒಟ್ಟು 88 ಗಂಟೆಗಳ ಕಾಲ ನಡೆದ ಈ ಮಿಲಿಟರಿ ಅಭಿಯಾನವು, ಸ್ಪಷ್ಟ ಗುರಿಗಳನ್ನು ಹೊಂದಿದ್ದ ಸುಸಂಘಟಿತ 'ಶಿಕ್ಷಾರ್ಹ ಕಾರ್ಯತಂತ್ರ'ವಾಗಿತ್ತು. ಭಾರತವು ತಾನು ಅಂದುಕೊಂಡ ಗುರಿಗಳನ್ನು ಸಾಧಿಸಿದ ನಂತರ, ತನ್ನದೇ ಆದ ಷರತ್ತುಗಳ ಮೇಲೆ ಈ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ಮುಕ್ತಾಯಗೊಳಿಸಿತು.


ರಾಜಕೀಯ ಮತ್ತು ಕಾರ್ಯತಂತ್ರದ ದೃಷ್ಟಿಕೋನದಿಂದ, ಇಲ್ಲಿ ಎರಡು ಪ್ರಮುಖ ಅಂಶಗಳು ವಿಶೇಷವಾಗಿ ಗಮನ ಸೆಳೆಯುತ್ತವೆ: ಮೊದಲನೆಯದಾಗಿ, ಈ ದಾಳಿಯ ಭೌಗೋಳಿಕ ವ್ಯಾಪ್ತಿಯು ಈವರೆಗಿನ ಎಲ್ಲಾ ಪೂರ್ವನಿದರ್ಶನಗಳನ್ನು ಬದಿಗೊತ್ತಿ ಹೊಸ ದಾಖಲೆ ಬರೆಯಿತು. ಭಾರತದ ಗುರಿಗಳು ಕೇವಲ ನಿಯಂತ್ರಣ ರೇಖೆಯಾಚೆಗಿನ ಪಾಕಿಸ್ತಾನ ಆಕ್ರಮಿತ ಜಮ್ಮು ಮತ್ತು ಕಾಶ್ಮೀರಕ್ಕೆ ಸೀಮಿತವಾಗಿರಲಿಲ್ಲ; ಬದಲಾಗಿ ಅವು ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಹೃದಯಭಾಗದವರೆಗೂ ವಿಸ್ತರಿಸಿದ್ದವು. ಇದು ಕೇವಲ ಮಿಲಿಟರಿ ದಾಳಿಯಲ್ಲ, ಬದಲಾಗಿ ಪಾಕಿಸ್ತಾನದ ಪರಮಾಣು ಮಿತಿಯನ್ನು ಪರೀಕ್ಷಿಸುವ ಮತ್ತು ಅದರ ಪ್ರತಿರೋಧದ ಸಾಮರ್ಥ್ಯದ ಮಿತಿಗಳನ್ನು ಬಹಿರಂಗಪಡಿಸುವ ಒಂದು ಲೆಕ್ಕಾಚಾರದ ಹೆಜ್ಜೆಯಾಗಿತ್ತು.

ಎರಡನೆಯದಾಗಿ, ಈ ಕಾರ್ಯಾಚರಣೆಯು ಮಾಹಿತಿ ಯುಗದ ಇಂದಿನ ಯುದ್ಧಗಳಲ್ಲಿ ತಂತ್ರಜ್ಞಾನದ ನಿರ್ಣಾಯಕ ಪಾತ್ರವನ್ನು ತಿಳಿಸಿತು. ಕ್ರೂಸ್ ಕ್ಷಿಪಣಿಗಳು, 'ಲೋಯಿಟರಿಂಗ್ ಮ್ಯೂನಿಷನ್ಸ್' (ಸ್ವಯಂ- ಚಾಲಿತ ವಿಧ್ವಂಸಕ ಡ್ರೋನ್‌ಗಳು), ನೆಟ್ವರ್ಕ್-ಕೇಂದ್ರಿತ ವ್ಯವಸ್ಥೆಗಳು ಮತ್ತು ಹಂತ-ಹಂತದ ಕ್ಷಿಪಣಿ ರಕ್ಷಣಾ ವ್ಯವಸ್ಥೆಗಳ ಬಳಕೆ ಮಾಡಿದ್ದು, ಯುದ್ಧತಂತ್ರವು ಈಗ 'ನಿಖರತೆ, ವೇಗ ಮತ್ತು ಸಮನ್ವಯದ ಯುದ್ಧಭೂಮಿ ಜಾಗೃತಿ'ಯತ್ತ ನಿರ್ಣಾಯಕವಾಗಿ ಬದಲಾಗಿರುವುದನ್ನು ತೋರಿಸಿಕೊಟ್ಟಿತು. ಆಪರೇಷನ್ ಸಿಂದೂರ್ ಕೇವಲ ಒಂದು ಶಿಕ್ಷಾರ್ಹ ಕ್ರಮವಾಗಿರಲಿಲ್ಲ; ಬದಲಾಗಿ ದೂರಗಾಮಿ ದಾಳಿ ಸಾಮರ್ಥ್ಯ, ಕ್ಷಿಪ್ರ ನಿರ್ಧಾರಗಳು ಮತ್ತು ಭೂ-ಜಲ-ಆಕಾಶ ಮಾರ್ಗಗಳ ಸಮನ್ವಯದ ಈ ಆಧುನಿಕ ಯುಗದಲ್ಲಿ ಭಾರತವು ಯುದ್ಧವನ್ನು ಹೇಗೆ ನಡೆಸಲಿದೆ ಎಂಬುದಕ್ಕೆ ಒಂದು ಶಕ್ತಿಶಾಲಿ ನಿದರ್ಶನವಾಗಿತ್ತು.

2025ರ ಮೇ 7ರಂದು ಆರಂಭವಾದ ಈ ಕಾರ್ಯಾಚರಣೆಯು, ಪಾಕಿಸ್ತಾನದಲ್ಲಿರುವ ಭಯೋತ್ಪಾದಕ ನೆಲೆಗಳ ವಿರುದ್ಧ ನಡೆದ ತೀವ್ರಗತಿಯ ಮತ್ತು ನಿಖರ ಅಭಿಯಾನವಾಗಿತ್ತು. ಇದು ಸಂಘರ್ಷವು ಮಿತಿಮೀರದಂತೆ ಎಚ್ಚರವಹಿಸಿ ಶತ್ರುವಿಗೆ ಗರಿಷ್ಠ ಹಾನಿ ಉಂಟುಮಾಡುವಂತೆ ವಿನ್ಯಾಸಗೊಳಿಸಲಾದ ಭಾರತದ ಸುಸಂಘಟಿತ ಮಿಲಿಟರಿ ಸಾಮರ್ಥ್ಯದ ಪ್ರದರ್ಶನವಾಗಿತ್ತು. ಒಂದು ವರ್ಷದ ನಂತರ, ಇದು ಭಾರತದ ಬೆಳೆಯುತ್ತಿರುವ 'ಕಾರ್ಯತಂತ್ರದ ಪ್ರಬುದ್ಧತೆ'ಗೆ ಸಾಕ್ಷಿಯಾಗಿ ನಿಂತಿದೆ. ಪರಮಾಣು ಶಸ್ತ್ರಾಸ್ತ್ರ ಹೊಂದಿರುವ ಎದುರಾಳಿಯನ್ನು ಹೊಣೆಗಾರರನ್ನಾಗಿ ಮಾಡುವುದು ಮತ್ತು ಪರಿಸ್ಥಿತಿಯನ್ನು ಹತೋಟಿಯಲ್ಲಿಟ್ಟುಕೊಂಡೇ ಅಚಲ ಸಂಕಲ್ಪ ಹಾಗೂ ದೃಢ ಉದ್ದೇಶದೊಂದಿಗೆ ತಿರುಗೇಟು ನೀಡುವ ಸಾಮರ್ಥ್ಯವನ್ನು ಇದು ಸಾಬೀತುಪಡಿಸಿದೆ.

ಅನಿರ್ದಿಷ್ಟವಾಗಿ ಎಳೆಯಲ್ಪಡುವ ಮತ್ತು ಅನಿಶ್ಚಿತ ಫಲಿತಾಂಶದ ಸಮಕಾಲೀನ ಯುದ್ಧಗಳಿಗೆ ವ್ಯತಿರಿಕ್ತವಾಗಿ, 'ಆಪರೇಷನ್ ಸಿಂದೂರ್' ಸ್ಪಷ್ಟತೆ ಮತ್ತು ದೃಢವಾದ ಕ್ರಮಗಳಿಂದ ಕೂಡಿತ್ತು. ಭಯೋತ್ಪಾದನಾ ಜಾಲ ಹಾಗೂ ಅದರ ಪೋಷಕರಿಗೆ ಭೌತಿಕವಾಗಿ ನಷ್ಟವನ್ನು ಉಂಟುಮಾಡುವ ರಾಜಕೀಯ ಉದ್ದೇಶವು ಅತ್ಯಂತ ಸ್ಪಷ್ಟವಾಗಿತ್ತು ಮತ್ತು ಆ ಗುರಿ ತಲುಪಿದ ತಕ್ಷಣ ಸೈನ್ಯದ ಹಿಂತೆಗೆಯುವಿಕೆ ನಡೆಯಿತು. ಗುರಿಗಳ ಆಯ್ಕೆಯು ಸಂಯಮ ಮತ್ತು ಸಂಕಲ್ಪದ ನಡುವಿನ ಸಮತೋಲನವನ್ನು ಪ್ರತಿಬಿಂಬಿಸಿತ್ತು. ಲಷ್ಕರ್-ಎ-ತೈಬಾ, ಜೈಶ್-ಎ-ಮೊಹಮ್ಮದ್ ಮತ್ತು ಹಿಜ್ಬುಲ್ ಮುಜಾಹಿದೀನ್‌ನಂತಹ ಗುಂಪುಗಳ ಪ್ರಮುಖ ಕೇಂದ್ರಗಳ ಮೇಲಿನ ದಾಳಿಗೆ ಆದ್ಯತೆ ನೀಡಲಾಯಿತು. ನಾಗರಿಕರಿಗೆ ಹಾನಿಯಾಗದಂತೆ ಕೇವಲ ಭಯೋತ್ಪಾದಕರ ಕಾರ್ಯಾಚರಣಾ ಸಾಮರ್ಥ್ಯವನ್ನು ಕುಂದಿಸುವುದರ ಮೇಲೆ ಸಂಪೂರ್ಣ ಗಮನ ಹರಿಸಲಾಗಿತ್ತು.

ಕಾರ್ಯಾಚರಣೆಯ ದೃಷ್ಟಿಯಿಂದ, ಈ ಅಭಿಯಾನವು ಭಾರತದ ಪ್ರೌಢಿಮೆ ಹೊಂದುತ್ತಿರುವ 'ದೂರಗಾಮಿ ನಿಖರ ಯುದ್ಧತಂತ್ರ'ದ ಸಿದ್ಧಾಂತವನ್ನು ಪ್ರದರ್ಶಿಸಿತು. ದೀರ್ಘ ವ್ಯಾಪ್ತಿಯ ಕ್ರೂಸ್ ಕ್ಷಿಪಣಿಗಳು ಮತ್ತು ನಿಖರ ಮಾರ್ಗದರ್ಶಿತ ಅಸ್ತ್ರಗಳನ್ನು ಹೊತ್ತ ರಫೇಲ್ ಯುದ್ಧ ವಿಮಾನಗಳು ಹಾಗೂ ಬ್ರಹ್ಮೋಸ್ ಕ್ಷಿಪಣಿ ವ್ಯವಸ್ಥೆಯೊಂದಿಗೆ ಸಂಯೋಜಿತಗೊಂಡ ಸುಖೋಯ್ ವಿಮಾನಗಳು ವಿಸ್ತೃತ ಯುದ್ಧಭೂಮಿಯಾದ್ಯಂತ ಆಳವಾದ ಮತ್ತು ಸುಸಂಘಟಿತ ದಾಳಿಗಳನ್ನು ನಡೆಸಲು ಸಾಧ್ಯವಾಗಿಸಿದವು. ಈ ಕಾರ್ಯಾಚರಣೆಯು ಪಾಕ್ ಆಕ್ರಮಿತ ಜಮ್ಮು ಕಾಶ್ಮೀರವನ್ನು ಮೀರಿ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಹೃದಯಭಾಗದವರೆಗೂ ವಿಸ್ತರಿಸಿದ್ದು ಒಂದು ಉದ್ದೇಶಪೂರ್ವಕ ಬದಲಾವಣೆ ಸೂಚಿಸಿತು: ಭಾರತವು ಹಳೆಯ ಭೌಗೋಳಿಕ ಮಿತಿಗಳನ್ನು ಕಿತ್ತೆಸೆಯಿತು



ಮತ್ತು ಶತ್ರುಗಳಿಗೆ ಯಾವುದೇ ಸುರಕ್ಷಿತ ತಾಣವಿಲ್ಲ ಎಂಬ ಸಂದೇಶವನ್ನು ರವಾನಿಸಿತು.

ಈ ಅಭಿಯಾನದ ಬೆನ್ನೆಲುಬಾಗಿದ್ದ ರಕ್ಷಣಾತ್ಮಕ ರಚನೆಯೂ ಅಷ್ಟೇ ಮಹತ್ವದ್ದಾಗಿತ್ತು. ಸಮಗ್ರ ವಾಯು ಮತ್ತು ಕ್ಷಿಪಣಿ ರಕ್ಷಣಾ ವ್ಯವಸ್ಥೆಗಳು ಶತ್ರುಗಳ ಡ್ರೋನ್ ಅಥವಾ ಕ್ಷಿಪಣಿ ದಾಳಿಯ ಪ್ರತಿರೋಧಗಳನ್ನು ಪರಿಣಾಮಕಾರಿಯಾಗಿ ಹತ್ತಿಕ್ಕಿದವು. ಆಕ್ರಮಣಕಾರಿ ದಾಳಿಯ ಸಾಮರ್ಥ್ಯ ಮತ್ತು ವಿಶ್ವಾಸಾರ್ಹ ರಕ್ಷಣಾತ್ಮಕ ಸ್ಥಿತಿಸ್ಥಾಪಕತ್ವದ ಈ ಸಮ್ಮಿಲನವು, ಆಧುನಿಕ ಸಂಘರ್ಷಗಳಲ್ಲಿ 'ನೆಟ್ವರ್ಕ್-ಕೇಂದ್ರಿತ ಯುದ್ಧತಂತ್ರ' ಮತ್ತು ಹಂತ-ಹಂತದ ರಕ್ಷಣಾ ಕವಚದ ಪ್ರಾಮುಖ್ಯತೆಯನ್ನು ತಿಳಿಸಿತು.

ಸೈದ್ಧಾಂತಿಕ ಮಟ್ಟದಲ್ಲಿ, 'ಆಪರೇಷನ್ ಸಿಂದೂರ್' ಏಕಕಾಲದಲ್ಲಿ ಮೂರು ನಿರ್ಣಾಯಕ ಮಿತಿಗಳನ್ನು ದಾಟಿತು: ಜವಾಬ್ದಾರಿಯುತ ಗುರಿ ಆಯ್ಕೆ, ಅಳತೆಗೋಲಿನಂತಿರುವ ಬಲ ಪ್ರಯೋಗ ಮತ್ತು ಶತ್ರುವಿಗೆ ಕಠಿಣ ಎಚ್ಚರಿಕೆ. ರಾಜಕೀಯ ಉದ್ದೇಶ, ನಿಖರ ಮಿಲಿಟರಿ ಗುರಿಗಳು ಮತ್ತು ಅತ್ಯಾಧುನಿಕ ರಕ್ಷಣಾ ಸಾಮರ್ಥ್ಯದ ಮಾರ್ಗದರ್ಶನವಿದ್ದರೆ, ಇಂತಹ ಶಿಕ್ಷಾರ್ಹ ಕ್ರಮಗಳು ಅನಿಯಂತ್ರಿತವಾಗಿ ಯುದ್ಧಕ್ಕೆ ತಿರುಗಬೇಕಿಲ್ಲ ಎಂಬುದನ್ನು ಇದು ಸಾಬೀತುಪಡಿಸಿತು. ಭಾರತವು ಸಮರ ವ್ಯಾಪ್ತಿಯನ್ನು 'ಲಂಬವಾಗಿ' (ಪೂರ್ಣ ಪ್ರಮಾಣದ ಯುದ್ಧ) ಹೆಚ್ಚಿಸುವ ಬದಲು 'ಸಮತಲವಾಗಿ' (ಹೊಸ ಪ್ರದೇಶಗಳಿಗೆ) ವಿಸ್ತರಿಸಿತು; ಆ ಮೂಲಕ ಪೂರ್ಣ ಪ್ರಮಾಣದ ಯುದ್ಧವನ್ನು ತಪ್ಪಿಸಿಯೂ ಶತ್ರುವಿಗೆ ಭಾರಿ ನಷ್ಟವನ್ನು ಉಂಟುಮಾಡಿತು.

ಮತ್ತೊಂದು ವಿಶಿಷ್ಟ ಲಕ್ಷಣವೆಂದರೆ ಭೂಸೇನೆ, ವಾಯುಸೇನೆ ಮತ್ತು ನೌಕಾಸೇನೆಗಳ ನಡುವಿನ ಅದ್ಭುತ ಸಮನ್ವಯ. ಅದರಲ್ಲೂ ವಿಶೇಷವಾಗಿ 'ಚೀಫ್ ಆಫ್ ಡಿಫೆನ್ಸ್ ಸ್ಟಾಫ್' (ಸಿಡಿಎಸ್) ಹುದ್ದೆಯ ಸೃಷ್ಟಿಯ ನಂತರ ಉನ್ನತ ರಕ್ಷಣಾ ನಿರ್ವಹಣೆಯಲ್ಲಿ ಆದ ಪ್ರಗತಿಯು, ಈ ತ್ರಿ-ಸೇವಾ ಸಂಘಟಿತ ಕಾರ್ಯಾಚರಣೆಯಲ್ಲಿ ಪ್ರತಿಫಲಿಸಿತು. ನೌಕಾಪಡೆಯ ರಣತಂತ್ರ, ವಾಯುಪಡೆಯ ಪ್ರಾಬಲ್ಯ ಮತ್ತು ಭೂಸೇನೆಯ ಗುರಿ ಕೇಂದ್ರಿತ ದಾಳಿಗಳು ಪ್ರತ್ಯೇಕ ಕ್ರಮಗಳಾಗಿರದೆ, ಒಂದು 'ಏಕೀಕೃತ ಕಾರ್ಯಾಚರಣಾ ವಿನ್ಯಾಸ'ದ ಅಂಗಗಳಾಗಿದ್ದವು.

ರಕ್ಷಣಾ ಕ್ಷೇತ್ರದಲ್ಲಿನ ದೇಶೀಯ ಸಾಮರ್ಥ್ಯದ ಬೆಳವಣಿಗೆ ಅಥವಾ 'ಆತ್ಮನಿರ್ಭರತೆ' ಈ ಯಶಸ್ಸನ್ನು ಮತ್ತಷ್ಟು ಬಲಪಡಿಸಿತು. ಸ್ವದೇಶಿ ನಿರ್ಮಿತ ಯುದ್ಧೋಪಕರಣಗಳು, ನಿಖರ ಅಸ್ತ್ರ ವ್ಯವಸ್ಥೆಗಳು, ಡ್ರೋನ್ ವಿರೋಧಿ ತಂತ್ರಜ್ಞಾನಗಳು ಮತ್ತು ಸುಧಾರಿತ ಗುಪ್ತಚರ ಹಾಗೂ ಕಣ್ಗಾವಲು ಬೆಂಬಲವು, ಭಾರತವು ಸ್ವಾವಲಂಬನೆಯತ್ತ ಸಾಧಿಸಿರುವ ಪ್ರಗತಿಯನ್ನು ಬಿಂಬಿಸಿದವು. ಹೀಗಾಗಿ, 'ಆಪರೇಷನ್ ಸಿಂದೂರ್' ಕೇವಲ ಮಿಲಿಟರಿ ಸಂಕಲ್ಪದ ಪ್ರದರ್ಶನವಾಗಿರದೆ, ಭಾರತದ ಕೈಗಾರಿಕಾ ಮತ್ತು ತಾಂತ್ರಿಕ ಶಕ್ತಿಯನ್ನು ಜಗತ್ತಿಗೆ ಪರಿಚಯಿಸಿತು. ಇಂದು ರಾಷ್ಟ್ರದ ರಕ್ಷಣಾ ಸನ್ನದ್ಧತೆಯು ಕೈಗಾರಿಕಾ ಸಾಮರ್ಥ್ಯದಿಂದ ಬೇರ್ಪಡಿಸಲಾಗದಂತಿದೆ.

ರಾಜತಾಂತ್ರಿಕವಾಗಿ, ಈ ಕಾರ್ಯಾಚರಣೆಯನ್ನು ಅತ್ಯಂತ ವ್ಯವಸ್ಥಿತವಾದ 'ನಿರೂಪಣಾ ನಿರ್ವಹಣೆ'ಯೊಂದಿಗೆ ಸಮನ್ವಯಗೊಳಿಸಲಾಗಿತ್ತು. ತನ್ನ ಕ್ರಮಗಳನ್ನು ಭಯೋತ್ಪಾದನಾ ವಿರೋಧಿ ಮತ್ತು ಆತ್ಮರಕ್ಷಣೆಯ ಕಾರ್ಯವಾಗಿ ಬಿಂಬಿಸುವ ಮೂಲಕ, ಆಪರೇಷನ್ ಸಿಂದೂರ್‌ಗೆ ಅಂತಾರಾಷ್ಟ್ರೀಯ ಕಾನೂನುಬದ್ಧ ಸಮರ್ಥನೆಯನ್ನು (Jus ad bellum) ನೀಡಲಾಯಿತು. ಮಿಲಿಟರಿ ಕ್ರಮ ಮತ್ತು ರಾಜತಾಂತ್ರಿಕ ಸಂದೇಶಗಳ ನಡುವಿನ ಈ ಅದ್ಭುತ ಹೊಂದಾಣಿಕೆಯು, ಜಾಗತಿಕ ಒತ್ತಡಗಳ ನಡುವೆಯೂ ಭಾರತದ ಕಾರ್ಯತಂತ್ರದ ಹಿತಾಸಕ್ತಿಗಳನ್ನು ಕಾಪಾಡುವಲ್ಲಿ ನಿರ್ಣಾಯಕ ಪಾತ್ರ ವಹಿಸಿತು.

ಅಂತಿಮವಾಗಿ, 'ಆಪರೇಷನ್ ಸಿಂದೂರ್'ನ ಅತ್ಯಂತ ವಿಶಿಷ್ಟ ಲಕ್ಷಣವೆಂದರೆ ಅದರ ಮುಕ್ತಾಯ. ತನ್ನ ಗುರಿಗಳನ್ನು ಸಾಧಿಸಿದ ನಂತರ, ಭಾರತವು ಒಂದು ನಿಗದಿತ ಕಾಲಮಿತಿಯೊಳಗೆ ಕಾರ್ಯಾಚರಣೆಯನ್ನು ಕೊನೆಗೊಳಿಸಿತು. ಆ ಮೂಲಕ ಅನೇಕ ಇಂದಿನ ಸಂಘರ್ಷಗಳಲ್ಲಿ ಕಂಡುಬರುವ 'ಕಾರ್ಯತಂತ್ರದ ದಿಕ್ಕುತಪ್ಪುವಿಕೆ'ಯನ್ನು ಯಶಸ್ವಿಯಾಗಿ ತಪ್ಪಿಸಿತು. ಕಾರ್ಯಾಚರಣೆಯ ಪ್ರಾರಂಭ, ಅನುಷ್ಠಾನ ಮತ್ತು ಅಂತ್ಯದ ನಿರ್ವಹಣೆಯಲ್ಲಿದ್ದ ಸ್ಪಷ್ಟತೆ ಹಾಗೂ ನಿಖರತೆಯೇ ಈ ಕಾರ್ಯಾಚರಣೆಯ ಶ್ರೇಷ್ಠ ಗುಣಮಟ್ಟಕ್ಕೆ ಸಾಕ್ಷಿಯಾಗಿದೆ.

ಒಂದು ವರ್ಷದ ನಂತರ, ಆಪರೇಷನ್ ಸಿಂದೂರ್‌ನ ಪರಂಪರೆಯು ಕೇವಲ ಶತ್ರುಗಳಿಗೆ ಮಾಡಿದ ಹಾನಿಯ ಪ್ರಮಾಣದಲ್ಲಿಲ್ಲ; ಬದಲಾಗಿ ಅದು ಸ್ಥಾಪಿಸಿದ ಹೊಸ ಮಾದರಿಯಲ್ಲಿದೆ. ನಿಖರವಾದ, ತಂತ್ರಜ್ಞಾನ ಆಧಾರಿತ ಮತ್ತು ರಾಜಕೀಯವಾಗಿ ನಿರ್ದೇಶಿಸಲ್ಪಟ್ಟ ಮಿಲಿಟರಿ ಕ್ರಮವು ಶತ್ರುಗಳಿಗೆ ಭಾರಿ ನಷ್ಟ ಉಂಟುಮಾಡಬಲ್ಲದು, ಅವರ ಪ್ರತಿರೋಧದ ತಂತ್ರವನ್ನು ಬದಲಿಸಬಲ್ಲದು ಮತ್ತು ಅದೇ ಸಮಯದಲ್ಲಿ ಸಂಘರ್ಷವು ಮಿತಿಮೀರದಂತೆ ನೋಡಿಕೊಳ್ಳಬಲ್ಲದು ಎಂಬುದನ್ನು ಇದು ತೋರಿಸಿಕೊಟ್ಟಿದೆ. ಇದು ಅಣ್ವಸ್ತ್ರದ ಅಡಿಯಲ್ಲೂ 'ಸೀಮಿತ ಯುದ್ಧ'ಕ್ಕಾಗಿ ಭಾರತವು ರೂಪಿಸಿಕೊಂಡಿರುವ ಉದ್ದೇಶದಲ್ಲಿ ದೃಢತೆ, ಅನುಷ್ಠಾನದಲ್ಲಿ ನಿಖರತೆ ಮತ್ತು ಸಂಯಮದಲ್ಲಿ ಶಿಸ್ತು ಇವುಗಳ ಹೊಸ ವಿನ್ಯಾಸವನ್ನು ಪ್ರತಿಬಿಂಬಿಸುತ್ತದೆ.

(ಲೇಖಕರು ಪರಮ ವಿಶಿಷ್ಟ ಸೇವಾ ಪದಕ ಮತ್ತು ಅತಿ ವಿಶಿಷ್ಟ ಸೇವಾ ಪದಕ ಪುರಸ್ಕೃತರು. ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನಾ ನಿಗ್ರಹ ಪಡೆಯ ಕಮಾಂಡರ್ ಆಗಿದ್ದರು. ಇವರು ಭಾರತೀಯ ಸೇನೆಯ ಸಾಮರ್ಥ್ಯ ವರ್ಧನೆಯ ಜವಾಬ್ದಾರಿ ಹೊಂದಿದ್ದ ಮಿಲಿಟರಿ ಕಾರ್ಯಾಚರಣೆಗಳ ಹೆಚ್ಚುವರಿ ಮಹಾನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದಾರೆ.)

ಟಾಗೋರ್ ಜಯಂತಿಯಂದೇ ಬಂಗಾಳದಲ್ಲಿ ನೂತನ ಯುಗಾರಂಭ

▸ ಗುರುಪ್ರಸಾದ ಭಟ್ ಉಡುಪಿ

ಇಂದು ಗುರುದೇವ ರವೀಂದ್ರನಾಥ ಟಾಗೋರರ 165 ನೆಯ ಜಯಂತಿಯನ್ನು ಆಚರಿಸಲಾಗುತ್ತಿದ್ದು ಅದಕ್ಕೊಂದು ಮಹತ್ತರ ಐತಿಹಾಸಿಕ ಮೆರುಗು ಲಭಿಸಿದೆ! ಏಕೆಂದರೆ ಬಂಗಾಳದಲ್ಲಿ ಹೊಸ ಸೂರ್ಯೋದಯವಾಗಿದೆ. ದೇಶದ ಸಂಸ್ಕೃತಿ ಮತ್ತು ಧಾರ್ಮಿಕ ಸ್ವಾತಂತ್ರ್ಯವನ್ನು ಮರಳಿ ಪಡೆದುಕೊಂಡ ಬಂಗಾಳಿಗಳಿಗಂತೂ ಇದು ನವೀನ ಯುಗಾರಂಭವೆಂದೇ ಹೇಳಬೇಕು. ಕಳೆದ ಐದು ದಶಕಗಳ ಕಾಲ ಅಲ್ಲಿಯ ರಾಜಕೀಯ ಪರಿಸ್ಥಿತಿ ಅಕ್ಷರ ಮಟ್ಟಿಗೆ ಹಳಸಿಹೋಗಿತ್ತು. ಸುಮಾರು ಮೂರುವರೆ ದಶಕಗಳ ಕಾಲ ಬಂಗಾಳವನ್ನಾಳಿದ ಕೆಂಪು ಕಮ್ಯುನಿಸ್ಟರನ್ನು ಉಚ್ಚಾಟಿಸಿ ಗದ್ದುಗೆಗೇರಿದ್ದ ಮಮತಾ ಬ್ಯಾನರ್ಜಿ ವೋಟ್‌ಬ್ಯಾಂಕ್ ಲಾಲಸೆಯಿಂದ ಕ್ರಮೇಣ ಹಿಂದೂದ್ವೇಷಿ ಧೋರಣೆಯನ್ನು ತೋರ್ಪಡಿಸಿ, ಬಹಿರಂಗವಾಗಿ ಬಾಂಗ್ಲಾ ನುಸುಳುಕೋರ ಮುಸ್ಲಿಮರ ಪರವಾಗಿಯೇ ಆಳಲು ಪ್ರಾರಂಭಿಸಿದ್ದಳು.



ಸ್ಥಳೀಯ ಹಿಂದುಗಳ ಧಾರ್ಮಿಕ ಅಸ್ತಿತ್ವವನ್ನು ಕೊನೆಗಾಣಿಸಿ, ಅವರೆಲ್ಲರ ಮೇಲೆ ದೌರ್ಜನ್ಯಗಳನ್ನು ಕಂಡರೂ ಕಡೆಗಣಿಸಿ, ಸ್ಥಳೀಯರನ್ನು ಹೀನಾಯವಾಗಿ ಹಿಂಸಿಸಲು ಶುರುಮಾಡಿದ್ದಳು. ಕೊನೆಗೂ ಆಕೆಯ ಸರ್ಕಾರ ಜನರ ಆಕ್ರೋಶಕ್ಕೆ ಬಲಿಯಾಗಿ ನುಚ್ಚುನೂರಾಯಿತು. ಬಂಗಾಳಿಗಳು ತಮ್ಮ ಅಸ್ಮಿತೆ ಮತ್ತು ಸಂಸ್ಕೃತಿಯನ್ನು ರಕ್ಷಿಸಲು ಈ ಬಾರಿ ಕಟ್ಟಕಡೆಯ ರೈಲನ್ನು ಸುಮ್ಮನೆ ಹೋಗಲು ಬಿಡಲಿಲ್ಲ, ಅವಕಾಶವನ್ನು ಸದುಪಯೋಗ ಪಡೆಸಿಕೊಂಡರು. ಸಕಾಲದಲ್ಲಿ ಅದನ್ನೇರಿ, ಹಳಿತಪ್ಪಿದ್ದ ತಮ್ಮ ರಾಜ್ಯವನ್ನು ಸರಿದಾರಿಯಲ್ಲಿ ತಂದು ರಕ್ಷಿಸಿದ್ದಾರೆ. ಆದ್ದರಿಂದ ಇದು ಬಂಗಾಳಿ ಅಸ್ಮಿತೆಯನ್ನು ಪುನರ್ ಸ್ಥಾಪಿಸಲು ಹಿಂದುಗಳಿಗೆ ಸಿಕ್ಕಿದ ಪುನರ್ಜನ್ಮವೇ ಸರಿ. ಬಂಗಾಳದಲ್ಲಿ ಇದೊಂದು ಹೊಸ ಯುಗಾರಂಭ. ಅಂದೇ ಗುರುದೇವ ರವೀಂದ್ರನಾಥ ಟಾಗೋರ್ ಅವರ 165 ನೆಯ ಜಯಂತಿಯೂ ಆಗಿರುವುದು 'ಸೋನೆ ಪೆ ಸುಹಾಗ್' ಎನ್ನುವಷ್ಟರ ಮಟ್ಟಿಗೆ ವಿಶೇಷ.

ಅಪ್ರತಿಮ ರಾಷ್ಟ್ರವಾದಿಗಳಾಗಿದ್ದ ಬಂಗಾಳಿಗಳಲ್ಲಿ 1920ರ ನಂತರ ಅದೇಕೆ ಕ್ರಮೇಣ ದೇಶಪ್ರೇಮ ಮತ್ತು ರಾಷ್ಟ್ರಭಕ್ತಿ ಸಡಿಲಗೊಂಡಿತು? ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಂಚೂಣಿಯಲ್ಲಿದ್ದ ಬಂಗಾಳದ ಭೂಮಿಯಿಂದ ನೂರಾರು, ಸಾವಿರಾರು ಪ್ರಖಂಡ ದೇಶಭಕ್ತರು, ಕ್ರಾಂತಿಕಾರಿಗಳು, ಯೋಧರು ಜನ್ಮತಾಳಿದ್ದರು. ನಿಸ್ವಾರ್ಥತೆಯಿಂದ ದೇಶಕ್ಕಾಗಿ ಬಲಿದಾನಗೈದಿದ್ದರು. 1920ರವರೆಗೆ ಸಾಹಿತ್ಯಕೃಷಿಯಲ್ಲಿ ತೊಡಗಿದ್ದ ಬಹುತೇಕ ಎಲ್ಲ ಕವಿಗಳು ಪ್ರಖರ ರಾಷ್ಟ್ರವಾದಿಗಳಾದ್ದರು. ತದನಂತರ ಕೆಲವೊಂದು ಇತಿಹಾಸಕಾರರು ನಿಜೇತಿಹಾಸವನ್ನು ತಿರುಚಿ, ಕಲ್ಪಿತಕತೆಗಳನ್ನು ಸೃಷ್ಟಿಸಿ ಬಂಗಾಳದಲ್ಲಿ ಗೊಂದಲ ಹುಟ್ಟುಹಾಕಿದರು. ಮುಸ್ಲಿಂ ನವಾಬರಿಂದ ತಮ್ಮನ್ನು ರಕ್ಷಿಸಿದ್ದವರನ್ನೇ 'ಮರಾಠಾ ಬೋರ್ಗಿ' ಲೂಟಿಗಾರರೆಂದು ತಪ್ಪಾಗಿ ಬರೆದು ಬಂಗಾಳದ ಇತಿಹಾಸದ ಮೇಲೆ ಅನಾಚಾರವನ್ನೆಸಗಿದರು.

ಉದಾಹರಣೆಗೆ, ದೇಶದಲ್ಲಿ ಪ್ರಥಮ ಬಾರಿಗೆ ಶಿವಾಜಿ ಉತ್ಸವವನ್ನು ಆಚರಿಸಿದ್ದು (ಏಪ್ರಿಲ್ 1896) ಬಂಗಾಳದಲ್ಲಿಯೇ. ಅದರ ಮುಂಚೂಣಿಯಲ್ಲಿದ್ದವರು ಬಾಲಗಂಗಾಧರ ತಿಲಕರು ಮತ್ತು ಗುರುದೇವ ರವೀಂದ್ರನಾಥ ಟಾಗೋರ್. ಶಿವಾಜಿ ಮಹಾರಾಜರ ಹಿಂದವೀ ಸ್ವರಾಜ್ಯದಿಂದಲೂ, ಸ್ವಾಮಿ ದಯಾನಂದ ಸರಸ್ವತಿ ಅವರಿಂದಲೂ ಪ್ರೇರಿತರಾಗಿ ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು, ಅದನ್ನು ನಾನು ಪಡೆದೇ ಪಡೆಯುತ್ತೇನೆ ಎಂದು ಹೂಂಕರಿಸಿದ್ದರು. ಸ್ವರಾಜ್ಯ ಸ್ಥಾಪನೆಗಾಗಿ ಇಡೀ ದೇಶವನ್ನೇ ಜಾಗೃತಗೊಳಿಸಿದ್ದರು. ಆಗ ಅವರಿಗೆ ಸಾಥ್ ನೀಡಿದ್ದು ಗುರುದೇವ ರವೀಂದ್ರರು. ಅವರಂತೂ 'ಶಿವಾಜಿ ಉತ್ಸಬ್' ಎಂಬ ಬಂಗಾಳಿ ಕವಿತಾ ಪುಸ್ತಕವನ್ನು ಪ್ರಕಟಿಸಿ ಸುಮಾರು 20,000 ಪ್ರತಿಗಳನ್ನು ಹಂಚಿದ್ದರು. ಇದರಲ್ಲಿ ಅವರು ಶಿವಾಜಿ ಮಹಾರಾಜರ ಮತ್ತು ಮರಾಠರ ಮೇಲಿದ್ದ ಗೌರವಾದರಗಳನ್ನು ವ್ಯಕ್ತಪಡಿಸಿದ್ದರು.

ಶಿವಾಜಿ ಉತ್ಸಬ್ ಪುಸ್ತಕದಲ್ಲಿ ನೀಡಿದ ಕರೆಯ ಭಾವಾರ್ಥ ಹೀಗಿದೆ:

."ಓ ಬೆಂಗಾಳಿಗಳೇ, ನಿಮ್ಮ ಧ್ವನಿಯನ್ನು ಮರಾಠರ ಧ್ವನಿಯೊಡನೆ ಒಂದಾಗಿಸಿ, ಎಲ್ಲರೂ ಒಂದೇ ಕಂಠದಿಂದ 'ಶಿವಾಜಿ ಮಹಾರಾಜರಿಗೆ ಜೈ' ಎಂದು ಘೋಷಣೆ ಕೂಗಿ. ಶಿವಾಜಿ ಮಹೋತ್ಸವದ ಈ ಮಹಾನ್ ಆಚರಣೆಗೆ ಮರಾಠರೂ ಮತ್ತು ಬೆಂಗಾಳಿಗಳೂ ಕೈಜೋಡಿಸಿ ಜೊತೆಜೊತೆಗೆ ಮುಂದೆ ಸಾಗೋಣ. ಭಾರತದ ಪೂರ್ವವೂ ಪಶ್ಚಿಮವೂ, ಬಲವೂ ಎಡವೂ, ಎಲ್ಲರೂ ಒಂದಾಗಿ ಶಿವಾಜಿ ಎಂಬ ಪವಿತ್ರ ನಾಮದ ಮಹಿಮೆಯ ಗುಣಗಾನದಲ್ಲಿ ಒಮ್ಮನಸ್ಸಿನಿಂದ ಹಾಡೋಣ"

ಈ ಕವನದಿಂದ ಗುರುದೇವ ಟಾಗೋರರಿಗೆ ಶಿವಾಜಿ ಮಹಾರಾಜರು ಮತ್ತು ಮರಾಠರೆಂದರೆ ಎಷ್ಟರ ಮಟ್ಟಿನ ಉತ್ಕಟ ಆರಾಧನಾ ಭಾವವಿತ್ತು ಎಂಬುದು ಸ್ಪಷ್ಟವಾಗುತ್ತದೆ. ಏಕೆಂದರೆ ಶಿವಾಜಿ ಉತ್ಸವದಿಂದ ಪ್ರೇರಿತರಾದ ಟಾಗೋರ್ ಅವರ ತಂಗಿಯ ಪುತ್ರಿ ಸರಳಾ ದೇವಿ ಅವರು ಬಂಗಾಳದಲ್ಲಿ 'ಪ್ರತಾಪಾದಿತ್ಯ ಉತ್ಸವ'ವನ್ನು ಆಚರಿಸಲು ತೊಡಗಿದರು. ಮಹಾರಾಜ ಪ್ರತಾಪಾದಿತ್ಯನು (1561-1611) 16ನೇ ಶತಮಾನದ ಪ್ರಬಲ ಬಂಗಾಳಿ ಹಿಂದು ರಾಜ. ಸ್ವತಂತ್ರ ಸಾಮ್ರಾಜ್ಯವನ್ನು ಕಟ್ಟಿ, ಮೊಘಲರನ್ನು ಕಟುವಾಗಿ ವಿರೋಧಿಸಿದವನಾಗಿದ್ದ. ಆತ ದಕ್ಷಿಣ ಬಂಗಾಳವನ್ನು (ಜೆಸ್ಸೋರ್, ಖುಲ್ನಾ, ಬಕರ್‌ಗಂಜ್) ಆಳಿದ ಬಾರೋ ಭುಯಿನ್ ಮುಖ್ಯಸ್ಥರಲ್ಲಿ ಅತ್ಯಂತ ಪ್ರಮುಖರಾಗಿದ್ದರೂ ಗುರುದೇವರು ಆತನ ಹೆಸರಿನಲ್ಲಿ ಶಿವಾಜಿ ಉತ್ಸವದಂತೆ ಉತ್ಸವವನ್ನು ಆಚರಿಸುವುದನ್ನು ವಿರೋಧಿಸಿದರು. ಏಕೆಂದರೆ, ಅವರಿಗೆ ಶಿವಾಜಿ ಮಹಾರಾಜರ ಆದರ್ಶವು ಎಷ್ಟು ಉದಾತ್ತವಾಗಿತ್ತೆಂದರೆ, ಶಿವಾಜಿ ಮತ್ತು ಪ್ರತಾಪಾದಿತ್ಯರನ್ನು ಒಂದೇ ನೆಲೆಯಲ್ಲಿ ಇಡುವುದನ್ನು ಅವರು ಸುತರಾಂ ಒಪ್ಪಿಕೊಳ್ಳಲಿಲ್ಲ, ಶಿವಾಜಿಯ ಸಾಧನೆಗಳನ್ನು ಇಡೀ ಭಾರತವನ್ನು ಒಂದುಗೂಡಿಸುವ ದೃಷ್ಟಿಕೋನವೆಂದು ಅವರು ವಾದಿಸುತ್ತಿದ್ದರು. ಶಿವಾಜಿಗೆ ಬೇರೆ ಯಾವುದೇ ರಾಜರು ಸರಿಸಾಟಿಯಲ್ಲ ಎಂದೇ ಅವರ ಅಭಿಮತವಾಗಿತ್ತು. ಕೊನೆಗೆ ಬಂಗಾಳದಲ್ಲಿ 'ಪ್ರತಾಪಾದಿತ್ಯ ಉತ್ಸವ' ಆಚರಣೆಯಾಗಲಿಲ್ಲ, ಕೊನೆಯವರೆಗೂ ಗುರುದೇವ ಟಾಗೋರರು ತಮ್ಮ ಶಿವಾಜಿ ಮಹಾರಾಜರ ಮೇಲಣ ಗೌರವಾದರ ಭಕ್ತಿಗೆ ಕಿಂಚಿತ್ತೂ ಚ್ಯುತಿ ಬಾರದಂತೆ ಜತನದಿಂದ ನೋಡಿಕೊಂಡಿದ್ದರು. ಒಂದುವೇಳೆ ಅವರಿಂದು ಇದ್ದಿದ್ದರೆ, ಶಿವಾಜಿ ಮಹಾರಾಜರನ್ನು ಮತ್ತು ಮರಾಠರನ್ನು ತುಚ್ಛವಾಗಿ ಹೀಯಾಳಿಸುವ ಬಂಗಾಳಿಗಳನ್ನು ತರಾಟೆಗೆ ತೆಗೆದುಕೊಂಡು, ಛೀಮಾರಿ ಹಾಕುತ್ತಿದ್ದರೇನೋ.

ಇನ್ನೊಂದು ಉದಾಹರಣೆ: ಬಂಗಾಳ ಕಂಡ ಇನ್ನೊಬ್ಬ ಅಪ್ರತಿಮ ರಾಷ್ಟ್ರವಾದಿ ಕವಿ ಮತ್ತು ಪ್ರಸಿದ್ಧ ಲೇಖಕ ನವೀನಚಂದ್ರ ಸೇನ್ (1847-1909) ತಮ್ಮ 'ಸಂಗಮತಿ' ಎಂಬ ಬಂಗಾಳಿ ಕವನ ಸಂಕಲನದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಬಗ್ಗೆ ಗಾಢವಾದ ಭಾವಭಕ್ತಿ ಸೂಸುವ ಕವನಗಳ ಮೂಲಕ ಪ್ರಶಂಸೆಯನ್ನು ವ್ಯಕ್ತಪಡಿಸಿದ್ದಾರೆ. ಅವರು ಶಿವಾಜಿ ಮಹಾರಾಜರನ್ನು ಸ್ವಾತಂತ್ರ್ಯ, ಧೈರ್ಯ ಮತ್ತು ಪ್ರತಿರೋಧದ ಪ್ರಬಲ ಮೂರ್ತಿರೂಪವೆಂದು ಚಿತ್ರಿಸಿದ್ದಾರೆ. ಶಿವಾಜಿ ಮಹಾರಾಜರ ಹಿಂದವೀ ಸ್ವರಾಜ್ಯದ ಉದಯದೊಂದಿಗೆ ಲಕ್ಷ್ಮಿಯಂತೆ ಹೊಳೆಯುತ್ತಿದ್ದ ಮೊಘಲ್ ಸಾಮ್ರಾಜ್ಯದ ವೈಭವ ಮತ್ತು ಭಾಗ್ಯ ನಿಧಾನವಾಗಿ ಮಂಕಾಗಿ ಅಂಧಕಾರದಲ್ಲಿ ಲೀನವಾಯಿತು (ವಿನಾಶವಾಯಿತು) ಎಂದು ಅವರು ಬರೆದಿದ್ದಾರೆ.

ಇಂತಹ ಅನೇಕ ಬಂಗಾಳಿ ಕವಿಗಳು ಛತ್ರಪತಿ ಶಿವಾಜಿ ಮಹಾರಾಜರ ಮತ್ತು ಮರಾಠರ ಮೇಲಿನ ತಮ್ಮ ಅದಮ್ಯ ಗೌರವಾದರವನ್ನು ಮುಕ್ತವಾಗಿ ವ್ಯಕ್ತಪಡಿಸಿದ್ದಾರೆ. ಎಲ್ಲದಕ್ಕಿಂತ ಮುಖ್ಯವಾಗಿ ಅವರೆಲ್ಲರೂ ಮೊದಲು ಪ್ರಖರ ರಾಷ್ಟ್ರವಾದಿಗಳಾಗಿದ್ದರು. ಅವರನ್ನು ಹಾಗೆ ಬರೆಯಲು ಪ್ರೇರೇಪಿಸಿದ್ದು ದೇಶಪ್ರೇಮ ಎಂಬ ಏಕಮೇವ ಸೂತ್ರ. ಇದೆಲ್ಲವೂ ಕ್ರಮೇಣ ಬದಲಾಗಲು ಶುರು ಹಚ್ಚಿದ್ದೇ 1920ರ ಅನಂತರ ಸೃಷ್ಟಿಸಿದ 'ಬೋರ್ಗಿ' ಮತ್ತು 'ಮಹಾರಾಷ್ಟ್ರಪುರಾಣ'ದಂತಹ ಅಸಂಬದ್ಧ ಕಲ್ಪಿತಕತೆಗಳು! ಆದರೆ ಇವೆಲ್ಲದರ ಹೊರತಾಗಿಯೂ ಇಂದಿಗೂ ಬಂಗಾಳಿಗಳ ರಾಷ್ಟ್ರಪ್ರೇಮ ಮತ್ತು ಧರ್ಮ ರಕ್ಷಣೆಗಾಗಿ ಸದಾ ತತ್ಪರರಾಗಿರುವ ಅವರ ಕೆಚ್ಚೆದೆ ಮೆಚ್ಚುವಂತಹದು.

ಈ ಎಲ್ಲ ಕವಿವರೇಣ್ಯರ ಲೇಖನಗಳನ್ನು, ಬರೆಹಗಳನ್ನು ಮತ್ತು ಕವಿತೆ-ಕಾವ್ಯಗಳನ್ನು ಪುನಃ ಬಂಗಾಳಿ ಸಮಾಜದಲ್ಲಿ ಬಿತ್ತರಿಸಬೇಕು. ಅವರಲ್ಲಿ ಹುದುಗಿದ್ದ ರಾಷ್ಟ್ರ ಚೈತನ್ಯವನ್ನು ಉದ್ದೀಪನಗೊಳಿಸಬೇಕು. ತಮ್ಮ ಸಂಸ್ಕೃತಿ ಮತ್ತು ಅಸ್ಮಿತೆಯನ್ನು ಉಳಿಸಿಕೊಂಡ ಬಂಗಾಳಿಗಳಿಗೆ ಕೋಟಿಕೋಟಿ ಪ್ರಣಾಮಗಳು.

ಕಿರುಸುದ್ದಿ

ಇ-ಖಾತೆ ಇಲ್ಲದವರಿಗೆ ನೋಂದಣಿ ನಿರಾಕರಿಸಲಾಗದು: ಹೈಕೋರ್ಟ್

ಬೆಂಗಳೂರು: ನ್ಯಾಯಾಲಯದ ಡಿಕ್ರಿ ಆದೇಶದ ಹೊರತಾಗಿಯೂ ಆಸ್ತಿಯ ಇ-ಖಾತಾ ಇಲ್ಲದಿರುವುದನ್ನು ಮುಂದು ಮಾಡಿ ಕ್ರಯಪತ್ರ ನೋಂದಣಿ ನಿರಾಕರಿಸಲಾಗದು ಎಂದು ಆದೇಶಿಸಿರುವ ಹೈಕೋರ್ಟ್ ಈ ಸಂಬಂಧ ಮಾರ್ಗಸೂಚಿ ರೂಪಿಸಿದೆ. ವಿಚಾರಣಾಧೀನ ನ್ಯಾಯಾಲಯದ ಡಿಕ್ರಿಯ ಹೊರತಾಗಿಯೂ ಇ-ಖಾತಾ ಇಲ್ಲ ಎಂದು ನೋಂದಣಿ ಮಾಡಲು ತುಮಕೂರು ಜಿಲ್ಲೆಯ ನೋಂದಣಾಧಿಕಾರಿ ತಿರಸ್ಕರಿಸಿ 2025 ರಲ್ಲಿ ಹಿಂಬರಹ ನೀಡಿದ್ದರು. ಇದನ್ನು ಪ್ರಶ್ನಿಸಿ ತುಮಕೂರಿನ ಪಿ.ಎಸ್.ಅಶೋಕ್ ಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾ. ಸಚಿನ್ ಶಂಕರ್ ಮಗದುಮ್ ಅವರ ಏಕಸದಸ್ಯ ಪೀಠ ಪುರಸ್ಕರಿಸಿದೆ. ಇ-ಖಾತಾ ಇಲ್ಲ ಎಂದು ಕ್ರಯ ಪತ್ರ ನೋಂದಣಿ ಮಾಡಲು ನಿರಾಕರಿಸಿರುವ ಸರ್ಕಾರದ ಪ್ರಾಧಿಕಾರ ನಿರ್ಧಾರ ಒಪ್ಪಿತವಲ್ಲ, ಕಾನೂನು ಮತ್ತು ಡಿಕ್ರಿ ಆದೇಶಗಳ ಕಾರ್ಯಗತಗೊಳಿಸುವುದಕ್ಕೆ ಸಂಬಂಧಿಸಿದ ಮೊದಲ ತತ್ವಕ್ಕೆ ಇದು ವಿರುದ್ಧವಾಗಿದೆ. ಈ ಪರಿಸ್ಥಿತಿಯು ಪದೇಪದೇ ನ್ಯಾಯಾಲಯದ ಮುಂದೆ ಬರುತ್ತಿದ್ದು, ಸಾಂಸ್ಥಿಕ ಅಸಹಜತೆಯಾಗಿದೆ. ಇದು ಆಡಳಿತಾತ್ಮಕ ಚೌಕಟ್ಟಿನಲ್ಲಿ ಸಮಸ್ಯೆಯಾಗಿದ್ದು, ನ್ಯಾಯಾಲಯದ ಆದೇಶ ಪಾಲಿಸುವುದಕ್ಕೆ ಬದಲಾಗಿ ಡಿಕ್ರಿ ಆದೇಶ ಜಾರಿಗೊಳಿಸಲು ಅಸಾಧ್ಯವಾದ ಸನ್ನಿವೇಶವನ್ನು ನಿರ್ಮಿಸಿದೆ ಎಂದು ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ಒಮ್ಮೆ ನ್ಯಾಯಾಲಯದಲ್ಲಿ ಡಿಕ್ರಿಯಾದರೆ ಅದು ಹಕ್ಕಿನ ಘೋಷಣೆ ಮಾತ್ರವಲ್ಲ, ಕಾನೂನಿನ ಅಡಿ ಕಾರ್ಯಗತಗೊಳಿಸಬೇಕಾದ ಸಂದೇಶವಾಗಿದೆ. ನ್ಯಾಯಾಲಯದ ಆಯುಕ್ತರನ್ನು ನೇಮಿಸುವುದೂ ಸೇರಿದಂತೆ ವಿಚಾರಣಾಧೀನ ನ್ಯಾಯಾಲಯಕ್ಕೆ ಡಿಕ್ರಿಯನ್ನು ಕಾರ್ಯಗತಗೊಳಿಸಲು ಸಾಧ್ಯವಾಗುವಂಥ ಅಸಾಧ್ಯವಾದ ಅಧಿಕಾರ ನೀಡಲಾಗಿದೆ ಎಂದು ಪೀಠವು ಆದೇಶದಲ್ಲಿ ಉಲ್ಲೇಖಿಸಿದೆ.

ಸರಕಾರಿ ನೌಕರರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ

ಬೆಂಗಳೂರು: 2026ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇ.90ಕ್ಕಿಂತ ಹೆಚ್ಚಿನ ಅಂಕ ಪಡೆದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರಕ್ಕೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. https://powermedia.info ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಲು ಮೇ 25 ರಂದು ಕೊನೆಯ ದಿನಾಂಕವಾಗಿದೆ. ಆನ್‌ಲೈನ್ ಅರ್ಜಿ ಸಲ್ಲಿಸುವ ವಿಧಾನ ಹಾಗೂ ಅಗತ್ಯವಿರುವ ಮಾಹಿತಿಗಾಗಿ ಕೆಎಸ್‌ಜಿಇಎ ನ್ಯೂಸ್ ಯೂಟ್ಯೂಬ್ ಚಾನಲ್‌ಗೆ ಭೇಟಿ ನೀಡಬಹುದಾಗಿದೆ.

ಅರ್ಜಿ ಸಲ್ಲಿಸಲು ವಿದ್ಯಾರ್ಥಿಯು 2026ರ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ತೇರ್ಗಡೆಯಾಗಿರಬೇಕು. ವಿದ್ಯಾರ್ಥಿಯ ತಂದೆ/ತಾಯಿ ರಾಜ್ಯ ಸರ್ಕಾರದ ಯಾವುದಾದರೊಂದು ಇಲಾಖೆಯಲ್ಲಿ ಖಾಯಂ ಸರ್ಕಾರಿ ನೌಕರರಾಗಿರಬೇಕಿದೆ. ನಿಗಮ, ಮಂಡಳಿ, ಪ್ರಾಧಿಕಾರ, ವಿಶ್ವವಿದ್ಯಾಲಯ, ಖಾಸಗಿ ಹಾಗೂ ಅನುದಾನಿತ ವಿದ್ಯಾ ಸಂಸ್ಥೆಗಳಲ್ಲಿ ನೇಮಕವಾಗಿರುವ ನೌಕರರು ಅರ್ಜಿ ಸಲ್ಲಿಸುವಂತಿಲ್ಲ ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ತಿಳಿಸಿದೆ.

ಸಾಲ ಕೊಟ್ಟ ಕಂಪನಿಯಿಂದ ಮನೆಗೆ ಬೀಗ

ಆಲೂರು: ರೈತ ಕುಟುಂಬವೊಂದು ಬ್ಯಾಂಕ್ ಸಾಲ ತೀರಿಸಿದ್ದರೂ ಕೋರ್ಟ್ ಆದೇಶದಂತೆ ಸಾಲ ವಸೂಲಾತಿ ಹಿನ್ನೆಲೆ ಮನೆ ಜಪ್ತಿ ಮಾಡಿದ ಪ್ರಸಂಗ ಬುಧವಾರ ನಡೆಯಿತು. ಖಾಸಗಿ ಬ್ಯಾಂಕ್‌ನಲ್ಲಿ ಸಾಲ ಮಾಡಿದ್ದಕ್ಕೆ ಬೀದಿಗೆ ಬಿದ್ದ ಕುಟುಂಬ ಕಂಗಾಲಾಗಿದ್ದು, ರೈತ ಸಂಘಟನೆಯ ಮೊರೆ ಹೋಗಿದ್ದ ಕುಟುಂಬ ಸಂಘಟನೆಯವರು ಮನೆಯ ಬೀಗ ಒಡೆದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೋರ್ಟ್ ಆದೇಶದಂತೆ ಮನೆ ಜಪ್ತಿ ಮಾಡಿದ ಖಾಸಗಿ ಬ್ಯಾಂಕ್, ಮಾನವೀಯತೆಯೂ ಇಲ್ಲದೇ ಬ್ಯಾಂಕ್ ಅಧಿಕಾರಿಗಳು ಮನೆಗೆ ಬೀಗ ಹಾಕಿದ್ದು, ಇದೀಗ ಕುಟುಂಬಸ್ಥರು ತಮ್ಮ ಸಾಮಗ್ರಿಗಳ ಜತೆಗೆ ಮನೆಯಿಂದ ಆಚೆಯೇ ಬೀದಿಯಲ್ಲಿದ್ದು ನೆರೆ ಮನೆಯ ಆಶ್ರಯ ಪಡೆದು ಸಹಾಯಕ್ಕಾಗಿ ಕಣ್ಣೀರು ಸುರಿಸುತ್ತಿದ್ದಾರೆ.

ಇಂಥದ್ದೊಂದು ಅಮಾನವೀಯ ಘಟನೆ ಹಾಸನ ಜಿಲ್ಲೆ, ಆಲೂರು ತಾಲೂಕಿನ ಕುಂದೂರು ಹೋಬಳಿಯ ವಳಗರವಳ್ಳಿ ಗ್ರಾಮದಲ್ಲಿ ನಡೆದಿದೆ. ವಳಗರಹಳ್ಳಿ ಗ್ರಾಮದ ಪ್ರಸನ್ನ ಮ ಉಮಾವತಿ ದಂಪತಿ ಈಕ್ವಿಟಾಸ್ ಬ್ಯಾಂಕ್ ಅಧಿಕಾರಿಗಳು ಮನೆಯಿಂದ ಹೊರ ಹಾಕಿ, ಬೀದಿ ಪಾಲು ಮಾಡಿದ್ದಾರೆ. ಇದನ್ನು ಕಂಡು ರೈತ ಮುಖಂಡ ಕಣಗಾಲ್ ಮೂರ್ತಿ ಅವರ ಮೊರೆ ಹೋಗಿದ್ದಾರೆ. ಇದನ್ನು ಗಮನಿಸಿದ ರೈತ ಮುಖಂಡರು ಕುಟುಂಬಸ್ಥರ ಅಸಹಾಯಕ ಸ್ಥಿತಿ ಬಗ್ಗೆ ತಿಳಿದು ತಮ್ಮ ರೈತ ಸಂಘಟನೆಯವರೆಲ್ಲರು ಸೇರಿ ಮನೆಯ ಬೀಗ ಹೊಡೆದು ತಮ್ಮ ಆಕ್ರೋಶ ವ್ಯಕ್ತ ಪಡಿಸಿದರು. ಮನೆಯ ವಾರಸುದಾರರಾದ ಉಮಾವತಿ ಮಾತನಾಡಿ, ನಾವು ಕಟ್ಟಿದ ಹಣವನ್ನು ಬ್ಯಾಂಕ್ ಸಿಬ್ಬಂದಿ ಕಟ್ಟದೇ ನಮ್ಮ ಮೇಲೆ ಆರೋಪ ಹೊರಿಸುತ್ತಿದ್ದಾರೆ. ಇನ್ನೂ ಹೆಚ್ಚು ಹಣ ಕಟ್ಟುವಂತೆ ಹಿಂಸೆ ಕೊಡುತ್ತಿದ್ದಾರೆ. ನಾವು ಬಡವರು ನಮಗೆ ಅಷ್ಟೊಂದು ಹಣವನ್ನು ಕಟ್ಟಲು ಸಾಧ್ಯವಿಲ್ಲವೆಂದು ಕಣ್ಣೀರಿಡುತ್ತಾ ತಮ್ಮ ಅಳಲನ್ನು ತೋಡಿಕೊಂಡರು.

ತೋಟದ ಬಳಿಗೇ ಬರುವ ವ್ಯಾಪಾರಸ್ಥರು | ದ್ರಾಕ್ಷಿ ಬೆಳೆಗಾರರಲ್ಲಿ ಕಳೆದ ಸಾಲಿಗಿಂತ ಹೆಚ್ಚಿನ ಲಾಭದ ನಿರೀಕ್ಷೆ

ಪ್ರಾಕೃತಿಕ ವಿಪತ್ತಿನಲ್ಲೂ ದ್ರಾಕ್ಷಿಗೆ ಉತ್ತಮ ಬೆಲೆ

▸ ಮಹೇಶ್ (ಬೆಳ್ಳಿ) ವಿಜಯಪುರ

ವಿಜಯಪುರ: ಈಗ ಮಾರುಕಟ್ಟೆಯಲ್ಲಿ ದ್ರಾಕ್ಷಿ ಹಣ್ಣಿಗೆ ಉತ್ತಮ ಬೆಲೆ ಬಂದಿದೆ. ಬೆಲೆ ಕುಸಿತದಿಂದ ಕಂಗಾಲಾಗಿದ್ದ ಬೆಳೆಗಾರರಿಗೆ ಈ ಬಾರಿ ದ್ರಾಕ್ಷಿ ಬೆಳೆ ಕೈ ಹಿಡಿದಿದ್ದು, ಬೆಳೆಗಾರರ ಮೊಗದಲ್ಲಿ ಸಂತಸ ಮೂಡಿಸಿದೆ.

ಜಿಲ್ಲೆಯಲ್ಲಿ ಅತಿ ಹೆಚ್ಚು ದೇವನಹಳ್ಳಿ ತಾಲೂಕಿನಲ್ಲಿ ದ್ರಾಕ್ಷಿ ಬೆಳೆಯಲಾಗುತ್ತಿದೆ. ವಿವಿಧ ತಳಿಯ ಸುಮಾರು 1,200 ಹೆಕ್ಟೇರ್ ಪ್ರದೇಶ ದ್ರಾಕ್ಷಿ ಹೊಂದಿದೆ. ಅದರಲ್ಲೂ ವಿಜಯಪುರ ಹೋಬಳಿಯಲ್ಲಿ ಸುಮಾರು 700 ಹೆಕ್ಟೇರ್‌ಗೂ ಅಧಿಕ ಪ್ರದೇಶದಲ್ಲಿ ದ್ರಾಕ್ಷಿ ಬೆಳೆಯಲಾಗುತ್ತಿದೆ. ಪ್ರಮುಖವಾಗಿ ಕಪ್ಪು ದ್ರಾಕ್ಷಿ (ಬೆಂಗಳೂರು ಬ್ಲೂ), ಶರತ್ ಹೆಚ್ಚಾಗಿ ಬೆಳೆಯಲಾಗುತ್ತಿದೆ. ದಿಲ್ ಕುಷ್, ಆರ್.ಕೆ. ಗೋಲ್ಡ್, ಸೊನಾಕಾ, ರೆಡ್ ಬ್ಲೂ ಹೀಗೆ ವಿವಿಧ ತಳಿಯ ದ್ರಾಕ್ಷಿಯನ್ನು ಹಲವೆಡೆ ಬೆಳೆಯಲಾಗುತ್ತಿದೆ. ಈ ಬಾರಿ ಇಳುವರಿ ಚೆನ್ನಾಗಿ ಬಂದಿರುವುದರಿಂದ ಎಕರೆಗೆ 10ರಿಂದ 12ಟನ್ ವರೆಗೂ ದ್ರಾಕ್ಷಿ ಫಸಲು ಬಂದಿದೆ. ರೈತರ ತೋಟದ ಬಳಿಯೇ ವ್ಯಾಪಾರಿಗಳು ಬಂದು ಖರೀದಿಸುತ್ತಿದ್ದಾರೆ.



ದ್ರಾಕ್ಷಿಗಿದ್ದ ಹಿಂದಿನ ವಾರದ ಬೆಲೆ

ವಾರದ ಹಿಂದೆ 1 ಕೆ.ಜಿಗೆ 20 ರಿಂದ 25 ರೂ. ಇದ್ದ ಕಪ್ಪು ದ್ರಾಕ್ಷಿ ಈಗ 40 ರೂ. ದಾಟಿದೆ. ಶರತ್ 80 ರಿಂದ 90 ರೂ, ರೆಡ್ ಗ್ಲೋಬ್ 120-130 ರೂ, ದಿಲ್ಖುಷ್ 40-50 ರೂ. ವರೆಗೂ ಮಾರಾಟ ಆಗುತ್ತಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಮಾರುಕಟ್ಟೆಯಲ್ಲಿ ದ್ರಾಕ್ಷಿಗೆ ಉತ್ತಮ ಬೆಲೆ ಸಿಗುತ್ತಿದೆ.

ದಿಗಂತ ವಿಶೇಷ

ನೆರೆ ರಾಜ್ಯದಿಂದಲೂ ಬೇಡಿಕೆ

ಫೆಬ್ರವರಿ, ಮಾರ್ಚ್, ಏಪ್ರಿಲ್, ಮೇ ತಿಂಗಳವರೆಗೂ ದ್ರಾಕ್ಷಿ ಕೊಯ್ಲು ನಡೆಯುತ್ತದೆ. ಈ ಬಾರಿ ಮಹಾರಾಷ್ಟ್ರದಲ್ಲಿ ದ್ರಾಕ್ಷಿ ಇಳುವರಿ ಕುಸಿತದಿಂದ ತಮಿಳುನಾಡು, ಆಂಧ್ರಪ್ರದೇಶ, ಕೇರಳ ಸೇರಿದಂತೆ ಹಲವು ರಾಜ್ಯಗಳಿಂದ ಇಲ್ಲಿನ ದ್ರಾಕ್ಷಿಗೆ ಬೇಡಿಕೆ ಬಂದಿದೆ. ಹೀಗಾಗಿ ಈ ಬಾರಿ ದ್ರಾಕ್ಷಿ ದರ ಹೆಚ್ಚಳಕ್ಕೆ ಕಾರಣವಾಗಿದೆ ಎನ್ನುತ್ತಾರೆ ದ್ರಾಕ್ಷಿ ಬೆಳೆಗಾರರು.

ತುಂಬಾ ಸಂತೋಷ

ವಿಜಯಪುರ ಹೋಬಳಿಯ ಹಾರೋಹಳ್ಳಿ ಗ್ರಾಮದ ಬಹುತೇಕ ರೈತರು ದ್ರಾಕ್ಷಿ ಬೆಳೆಯುತ್ತಿದ್ದಾರೆ. ನಾವು ಸುಮಾರು 30 ರಿಂದ 40 ವರ್ಷದಿಂದ ದ್ರಾಕ್ಷಿ ಬೆಳೆಯುತ್ತಿದ್ದೇವೆ. ಲಾಭ ನಷ್ಟ ಎರಡನ್ನು ನೋಡಿದ್ದೇವೆ. ಇದೀಗ ದ್ರಾಕ್ಷಿಗೆ ಉತ್ತಮ ಬೆಲೆ ಸಿಗುತ್ತಿರುವುದರಿಂದ ಬೆಳೆಗಾರರಿಗೆ ಒಳ್ಳೆಯ ಆದಾಯ ತಂದಿದೆ ಎಂದು ದ್ರಾಕ್ಷಿ ಬೆಳೆಗಾರ ಹಾರೋಹಳ್ಳಿ ರಘು ತಿಳಿಸಿದರು.

ಆಲಿಕಲ್ಲು ಮಳೆ ಆತಂಕದ ಚಿಂತೆ

ವಿಜಯಪುರ ಹೋಬಳಿಯ ಅತಿ ಹೆಚ್ಚು ದ್ರಾಕ್ಷಿ ಬೆಳೆಯುವ ಹಾರೋಹಳ್ಳಿ ಹಾಗೂ ಸುತ್ತಮುತ್ತ ರೈತರ ದ್ರಾಕ್ಷಿ ತೋಟಗಳತ್ತ ಕಣ್ಣಾಯಿಸಿ ನೋಡಿದರೆ ಗೊಂಚಲು ಗೊಂಚಲು ಕಟ್ಟಿರುವ ದ್ರಾಕ್ಷಿ ಗೊನೆಗಳು ಕಣ್ಣಿಗೆ ರಾಚುತ್ತವೆ. ದ್ರಾಕ್ಷಿ ಬೆಳೆಗಾರರಿಗೆ ಈಗ ಆಲಿಕಲ್ಲು, ಬಿರುಗಾಳಿ ಅಕಾಲಿಕ ಮಳೆಯದ್ದೆ ಆತಂಕವಾಗಿದೆ. ಇದೀಗ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಇದ್ದು ಇಂತಹ ಸಂದರ್ಭದಲ್ಲಿ ಅಕಾಲಿಕ ಮಳೆ, ಬಿರುಗಾಳಿ ಆಲಿಕಲ್ಲು ಮಳೆ ಬಿದ್ದರೆ ದ್ರಾಕ್ಷಿಗೆ ಹೆಚ್ಚು ಪೆಟ್ಟು ಬೀಳಲಿದೆ ಎನ್ನುತ್ತಾರೆ ದ್ರಾಕ್ಷಿ ಬೆಳೆಗಾರ ಹಾರೋಹಳ್ಳಿ ರಘು ತಿಳಿಸಿದರು.



ದಾಳಿಂಬೆಯತ್ತಲೂ ಬೆಳೆಗಾರರ ಚಿತ್ತ

ಕಳೆದ ಹಿಂದಿನ ವರ್ಷದಲ್ಲಿ ವಿವಿಧ ಕಾರಣಗಳಿಂದ ದ್ರಾಕ್ಷಿಗೆ ಉತ್ತಮ ಬೆಲೆ ಸಿಕ್ಕಿರಲಿಲ್ಲ, ಹೀಗಾಗಿ ಸಾಕಷ್ಟು ರೈತರು ದ್ರಾಕ್ಷಿಯನ್ನು ತೆಗೆದು ಈಚೆಗೆ ಈ ಭಾಗದಲ್ಲಿ ಜನಪ್ರಿಯವಾಗುತ್ತಿರುವ ದಾಳಿಂಬೆ ಬೆಳೆಯುವತ್ತ ಆಸಕ್ತಿ ತೋರಿದ್ದಾರೆ.

ಕನ್ನಡ ಕಂಪು ಹರಡಲು ಶ್ರಮಿಸಲಿ



ವಿಜಯಪುರ: ವಿದ್ಯಾರ್ಥಿಗಳು ಕನ್ನಡ ಭಾಷೆಯ ಕಂಪನ್ನು ಪಸರಿಸುವ ಕೆಲಸ ಮಾಡಬೇಕು ಎಂದು ಕಸಾಪ ತಾಲ್ಲೂಕು ಅಧ್ಯಕ್ಷ ಆರ್.ಕೆ.ನಂಜೇಗೌಡ ತಿಳಿಸಿದರು. ಪಟ್ಟಣದ ಸಾಯಿ ಜ್ಞಾನ ಗಂಗಾ ಪದವಿ ಕಾಲೇಜಿನಲ್ಲಿ ಕಸಾಪ ವತಿಯಿಂದ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ಹಾಗೂ ನೂತನ ಪದಾಧಿಕಾರಿಗಳಿಗೆ ಪ್ರಮಾಣ ಪತ್ರ ವಿತರಿಸಿದ ಬಳಿಕ ಮಾತನಾಡಿ, ಕಸಾಪ ಸದಸ್ಯತ್ವದ ಶುಲ್ಕ ಅತ್ಯಂತ ಕಡಿಮೆ ಇದ್ದು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯತ್ವ ಪಡೆಯಬೇಕು ಎಂದು ಕಾಲೇಜಿನ ಪ್ರಾಂಶುಪಾಲರಾದ ಪ್ರದೀಪ್ ತಿಳಿಸಿದರು. ನಮ್ಮ ಭಾಷೆ ಮತ್ತು ಸಂಸ್ಕೃತಿಯ ಶಕ್ತಿ ಅಪಾರವಾದುದು. ವಿದ್ಯಾರ್ಥಿಗಳು ದೈನಂದಿನ ವ್ಯವಹಾರಗಳಲ್ಲಿ ಕನ್ನಡ ಪದ ಹಾಗೂ ಅಂಕೆಯನ್ನು ಬಳಸುವ ಮೂಲಕ ಇತರರಿಗೆ ಪ್ರೇರಕರಾಗಬೇಕು ಎಂದು ಶಿಕ್ಷಕಿ ಸುಕನ್ಯಾ ಬೈರೇಗೌಡ ಹೇಳಿದರು.

ಸಂಘ-ಸಂಸ್ಥೆಗಳ ಪ್ರತಿನಿಧಿಯಾಗಿ ಎಸ್.ಸಿ. ಮನೋವೆಂಕಟರಮಣ, ಅಲ್ಪಸಂಖ್ಯಾತ ಘಟಕದ ಪ್ರತಿನಿಧಿಯಾಗಿ ಎಫ್.ಬಾಬಾಜಾನ್, ಗೌರವ ಕಾರ್ಯದರ್ಶಿ ವಿ.ಗೋವಿಂದರಾಜು, ಪರಿಶಿಷ್ಟ ಜಾತಿ ಪ್ರತಿನಿಧಿಯಾಗಿ ನರಸಿಂಹಮೂರ್ತಿ ಅವರನ್ನು ನೇಮಿಸಿ ಪ್ರಮಾಣ ಪತ್ರ ವಿತರಿಸಲಾಯಿತು.

ಆಲೂರಿಗೆ ವಿದ್ಯುತ್ ಉಪ ವಿತರಣೆ ಕೇಂದ್ರಕ್ಕೆ ಚಾಲನೆ

ವಿದ್ಯುತ್ ಸಮಸ್ಯೆಗೆ ಪರಿಹಾರ: ಶಾಸಕ ಮಂಜು

ಆಲೂರು: ಮುಂದಿನ ಒಂದು ತಿಂಗಳಿನಲ್ಲಿ ತಾಲೂಕಿಗೆ ಮತ್ತೊಂದು ವಿದ್ಯುತ್ ಉಪಕೇಂದ್ರ ಮಾಡುವುದಾಗಿ ಶಾಸಕ ಸಿಮೆಂಟ್ ಮಂಜು ತಿಳಿಸಿದರು.

ಆಲೂರು ಮುಖ್ಯ ರಸ್ತೆಯಂಚಿನಲ್ಲಿರುವ ಪ್ರವಾಸಿ ಮಂದಿರದಿಂದ ಕಸಬಾ ಯಡೂರು ಗ್ರಾಮದವರೆಗೆ 900 ಮೀ. ಕಾಂಕ್ರಿಟ್ ರಸ್ತೆಗೆ ಭೂಮಿಪೂಜೆ ನೆರವೇರಿಸಿದ ಬಳಿಕ ಮಾತನಾಡಿ, ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಕೇವಲ ಒಂದು ವಿದ್ಯುತ್ ವಿತರಣೆ ಉಪಕೇಂದ್ರವಿತ್ತು. ಸದ್ಯ 27 ಕೋಟಿ ರೂ. ವೆಚ್ಚದಲ್ಲಿ ಅಬ್ಬನ ಬಳಿ ವಿದ್ಯುತ್ ಉಪ ಕೇಂದ್ರ ನಿರ್ಮಾಣವಾಗುತ್ತಿದೆ. ನಾಲ್ಕಾರು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ. ತಾಲೂಕಿನಲ್ಲಿ ಎರಡು ವಿದ್ಯುತ್ ಉಪಕೇಂದ್ರಗಳಾದರೆ ವಿದ್ಯುತ್ ಸಮಸ್ಯೆ ನಿವಾರಣೆಯಾಗಲಿದೆಂದರು.



ಯಡೂರು ಗ್ರಾಮದ ರಸ್ತೆ ದುರಸ್ತಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಬಹುತೇಕ ಗ್ರಾಮೀಣ ಭಾಗದ ಹಲವಾರು ಗ್ರಾಮಗಳಲ್ಲಿ ಶಾಸಕರ ಅನುದಾನದಲ್ಲಿ ರಸ್ತೆಗಳ ದುರಸ್ತಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಪಟ್ಟಣದ ಬಿಕ್ಕೋಡು ವೃತ್ತದಿಂದ ಭೈರಾಪುರದವರೆಗೆ ಸುಮಾರು 4.5 ಕೋಟಿ ರೂ. ವೆಚ್ಚದಲ್ಲಿ ರಸ್ತೆ ವಿಸ್ತರಣೆ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆಂದು ತಿಳಿಸಿದರು. ತಾಲೂಕಿನಲ್ಲಿ ವಾಟೆಹೊಳೆ, ಯಗಚಿ ನದಿ ಹರಿಯುತ್ತದೆ. ಎಂಟು ಏತ ನೀರಾವರಿಗಳು ಸ್ಥಗಿತಗೊಂಡಿವೆ. ಏತನೀರಾವರಿ ಯೋಜನೆಗಳನ್ನು ಪುನಃ ಆರಂಭಿಸಿ ರೈತರ ಜಮೀನಿಗೆ ನೀರು ಹರಿಸುತ್ತೇನೆ. ವಾಟೆಹೊಳೆ ಯೋಜನೆಯಲ್ಲಿ 18 ಸಾವಿರ ಎಕರೆ ಪ್ರದೇಶಕ್ಕೆ ನೀರು ಕೊಡಬೇಕಾಗಿತ್ತು. ಕೇವಲ 5 ಸಾವಿರ ಎಕರೆ ಪ್ರದೇಶಕ್ಕೆ ಮಾತ್ರ ನೀರು ಹರಿಯುತ್ತಿದೆಂದರು.

ಪ್ರತಿ ವಿಧಾನಸಭೆ ಅಧಿವೇಶನದಲ್ಲಿ ಪ್ರಶ್ನೆಗಳನ್ನು ಮಾಡಿ ಯೋಜನೆ ಪೂರೈಸಲು ಶ್ರಮಿಸುತ್ತಿದ್ದೇನೆ. ಅಧಿವೇಶನದಲ್ಲಿ ಕ್ಷೇತ್ರದ ಅಭಿವೃದ್ಧಿ ಕುರಿತು ನೀರಾವರಿ, ರಸ್ತೆಗಳು, ವಿದ್ಯುತ್ ಬಗ್ಗೆ ಮಾತ್ರ ಪ್ರಶ್ನೆ ಮಾಡುತ್ತೇನೆ ಹೊರತು, ಯಾವುದೇ ವೈಯಕ್ತಿಕ ಪ್ರಶ್ನೆಗಳನ್ನು ಮಾಡುವುದಿಲ್ಲ ಎಂದರು.

ಗ್ರಾಮಸ್ಥರಾದ ವೈ.ಬಿ.ಟೀಕರಾಜ್, ಶಂಕರಪ್ಪ, ವೈ.ಡಿ.ವಿಶ್ವನಾಥ್, ಪುಟ್ಟಸ್ವಾಮಿ, ಗಂಗಾಧರಶಾಸ್ತ್ರಿ, ಮೋಹನ್, ರವಿ, ನಂಜುಂಡಪ್ಪ ಉಪಸ್ಥಿತರಿದ್ದರು.

ಚಾಕು ಇರಿದ ದುಷ್ಕರ್ಮಿಗಳು

ಮಂಡ್ಯ: ಸೀಟಿನ ವಿಚಾರಕ್ಕೆ ಮೂವರು ಯುವಕರು ಹಾಗೂ ಪ್ರಯಾಣಿಕರ ನಡುವೆ ಮಾತಿನ ಚಕಮಕಿ ನಡೆದು ಪರಿಸ್ಥಿತಿ ವಿಕೋಪಕ್ಕೆ ತಿರುಗಿದ ಪರಿಣಾಮ ಯುವಕರ ಗುಂಪು ಪ್ರಯಾಣಿಕರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಮೈಸೂರಿನಿಂದ ಬೆಂಗಳೂರಿಗೆ ತೆರಳುತ್ತಿದ್ದ ರಾಜರಾಣಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಮದ್ದೂರಿನ ಚನ್ನೇಗೌಡನದೊಡ್ಡಿ ಬಳಿ ಬುಧವಾರ ಮಧ್ಯಾಹ್ನ ನಡೆದಿದೆ.

ಮಂಡ್ಯದಿಂದ ಬೆಂಗಳೂರಿಗೆ ಪ್ರಯಾಣ ಮಾಡುತ್ತಿದ್ದ ಮಧುಗಿರಿ ತಾಲೂಕಿನ ಬಡವನಹಳ್ಳಿಯ ಶಿವಕುಮಾರ್ (44), ಚನ್ನೇಗೌಡನದೊಡ್ಡಿಯ ಗೇಟ್‌ಮನ್ ಕುಮಾರ (36), ಚನ್ನೇಗೌಡನದೊಡ್ಡಿಯ ಶಿವಕುಮಾರ್ (40) ಗಾಯಗೊಂಡವರು. ಆರೋಪಿಗಳಾದ ಮೈಸೂರಿನ ಗೌಸಿಯಾನಗರದ ಖುರೇಶಿ (27), ವಾಸಿಂ (23), ಕ್ಯಾತನಹಳ್ಳಿಯ ಶೋಯೇಬ್ (20) ಹಲ್ಲೆ ನಡೆಸಿದವರು. ಮೈಸೂರಿನ ಗೌಸಿಯಾ ಬಡಾವಣೆಯ ಖುರೇಶಿ ತನ್ನ ಪತ್ನಿ ಸುಬಾನ್, ಇಬ್ಬರು ಮಕ್ಕಳು, ವಾಸಿಂ, ಶೋಯೇಬ್ ಅವರು ಚಿಂತಾಮಣಿಯಲ್ಲಿ ನಡೆಯುತ್ತಿದ್ದ ದರ್ಗಾ ಉತ್ಸವದಲ್ಲಿ ಪಾಲ್ಗೊಳ್ಳಲು ಮೈಸೂರಿನಿಂದ ರಾಜರಾಣಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಪ್ರಯಾಣಿಸುತ್ತಿದ್ದರು. ಸುಜಾತಾ ಎಂಬುವರು ತಮ್ಮ ಮಕ್ಕಳೊಂದಿಗೆ ಅವರೊಂದಿಗಿದ್ದರು. ಈ ವೇಳೆ ರೈಲಿನಲ್ಲಿ ಸೀಟಿನ ವಿಚಾರಕ್ಕಾಗಿ ಸಹ ಪ್ರಯಾಣಿಕರೊಂದಿಗೆ ಆರೋಪಿಗಳಾದ ಖುರೇಶಿ, ವಾಸಿಂ, ಶೋಯೇಬ್ ಅವರು ಜಗಳ ತೆಗೆದಿದ್ದಾರೆ. ಮಾತಿನ ಚಕಮಕಿ ವೇಳೆ ಮಹಿಳೆಯೊಬ್ಬರ ಮೇಲೆ ಹಲ್ಲೆ ನಡೆಸಿದ್ದಾರೆ.

ಮಧ್ಯ ಪ್ರವೇಶಿಸಿದ ಮಧುಗಿರಿಯ ಶಿವಕುಮಾರ್ ಅವರು ಪ್ರಶ್ನೆ ಮಾಡಿದ್ದಾರೆ. ಇದರಿಂದ ಕುಪಿತಗೊಂಡ ಆರೋಪಿಗಳು ಅವರ ಕುತ್ತಿಗೆಗೆ ಚಾಕುವಿನಿಂದ ಇರಿದಿದ್ದಾರೆ. ಮತ್ತೂ ಸಾಲದೆಂಬಂತೆ ಅವರ ಕಿಬ್ಬೊಟ್ಟೆ, ತೋಳಿನ ಮೇಲೂ ಚಾಕುವಿನಿಂದ ಇರಿದಿದ್ದಾರೆ. ಇದರಿಂದ ಆತಂಕಗೊಂಡ ಶಿವಕುಮಾರ್ ಅವರು ರೈಲಿನ ಚೈನು ಎಳೆದಿದ್ದಾರೆ. ಚನ್ನೇಗೌಡನದೊಡ್ಡಿ ಬಳಿ ನಿಂತಿದೆ. ರೈಲು ನಿಲ್ಲುತ್ತಿದ್ದಂತೆ ಆರೋಪಿಗಳು ರೈಲಿನಿಂದ ಇಳಿದು ಹೊರಗೆ ಓಡಲು ಪ್ರಾರಂಭಿಸಿದರು. ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕರು ಆರೋಪಿಗಳನ್ನು ಹಿಡಿಯುವಂತೆ ಕೂಗಿಕೊಂಡಿದ್ದಾರೆ.

ರೈಲಿನಲ್ಲಿ ಸೀಟಿನ ವಿಚಾರಕ್ಕೆ ಪ್ರಯಾಣಿಕರ ಜಗಳ

ಇದರಿಂದ ಎಚ್ಚೆತ್ತ ಚನ್ನಪ್ಪನದೊಡ್ಡಿ ಗ್ರಾಮದ ಬಳಿ ಗೇಟ್‌ಮನ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಕುಮಾರ ಅಡ್ಡ ಬಂದಾಗ ಆತನ ಮೇಲೂ ಆರೋಪಿಗಳು ಚಾಕುವಿನಿಂದ ಇರಿದು ಪರಾರಿಯಾಗಲು ಯತ್ನಿಸಿದ್ದಾರೆ. ತಕ್ಷಣ ಸ್ಥಳದಲ್ಲಿದ್ದ ಅದೇ ಗ್ರಾಮದ ಶಿವಕುಮಾರ್ ಅವರೂ ಸಹ ರಕ್ಷಣೆಗೆ ಬಂದಾಗ ಅವರ ಮೇಲೂ ಹಲ್ಲೆ ನಡೆಸಿದ್ದಾರೆ. ಈ ದೃಶ್ಯವನ್ನು ಕಂಡ ಸಾರ್ವಜನಿಕರು ತಕ್ಷಣ ಆರೋಪಿಗಳನ್ನು ಹಿಡಿದು ಹಿಗ್ಗಾಮುಗ್ಗಾ ಥಳಿಸಿದ್ದಾರೆ. ಸಾರ್ವಜನಿಕರ ಧರ್ಮದೇಟಿನಿಂದ ಮೂವರು ಆರೋಪಿಗಳಿಗೂ ಗಾಯಗಳಾಗಿವೆ. ಸುದ್ದಿ ತಿಳಿದ ತಕ್ಷಣ ಸ್ಥಳಕ್ಕೆ ಧಾವಿಸಿದ ಮದ್ದೂರು ಗ್ರಾಮಾಂತರ ಠಾಣೆ ಪಿಎಸ್‌ಐ ನಾರಾಯಣ ಮತ್ತು ಸಿಬ್ಬಂದಿ ಗುಂಪನ್ನು ಚದುರಿಸಿ ಯುವಕರನ್ನು ವಶಕ್ಕೆ ಪಡೆದು ಗಾಯಾಳುಗಳನ್ನು ಮದ್ದೂರು ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿದ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ದಾಖಲಿಸಿದ್ದಾರೆ. ಈ ಸಂಬಂಧ ರೈಲ್ವೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಮುಂದಿನ ಕ್ರಮಕ್ಕೆ ಮುಂದಾಗಿದ್ದಾರೆ.

ದೇವನಹಳ್ಳಿ ಬಳಿ ಭೂಸ್ವಾಧೀನ ಪ್ರಕ್ರಿಯೆಗೆ ಅಧಿಕೃತ ಆದೇಶ

ಉಪನಗರ ರೈಲ್ವೆ ಯೋಜನೆಗೆ ವೇಗ

ಬೆಂಗಳೂರು: ಬಹುನಿರೀಕ್ಷಿತ ಬೆಂಗಳೂರು ಉಪನಗರ ರೈಲು ಯೋಜನೆಗೆ ವೇಗ ದೊರೆತಿದೆ. ದೇವನಹಳ್ಳಿ ಸಮೀಪದ ಭೂಸ್ವಾಧೀನ ಪ್ರಕ್ರಿಯೆಗೆ ರಾಜ್ಯ ಸರ್ಕಾರ ಅಧಿಕೃತ ಮುದ್ರೆ ಒತ್ತಿದೆ. ಕೆ-ರೈಡ್ ನಿರ್ಮಿಸುತ್ತಿರುವ ಸಂಪಿಗೆ ಲೈನ್ (ಮೆಜೆಸ್ಟಿಕ್-ದೇವನಹಳ್ಳಿ ಕಾರಿಡಾರ್) ಯೋಜನೆಗಾಗಿ ಸುಮಾರು 31,000 ಚದರ ಮೀಟರ್ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರ ಒಪ್ಪಿಗೆ ನೀಡಿದೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಈಗಾಗಲೇ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದು, ದೇವನಹಳ್ಳಿ ಸಮೀಪದ ಐದು ಪ್ರಮುಖ ಗ್ರಾಮಗಳ ಭೂಮಿಯನ್ನು ಗುರುತಿಸಿದೆ. ಅಕ್ಕುಪೇಟೆ (14,000 ಚ.ಮೀ), ಸಣ್ಣ ಅಮಾನಿಕೆರೆ (7,340 ಚ.ಮೀ), ಹಿರೇಅಮಾನಿಕೆರೆ (6,969 ಚ.ಮೀ), ಉಪ್ಪಾರಹಳ್ಳಿ (1,504 ಚ.ಮೀ) ಹಾಗೂ ದೇವನಹಳ್ಳಿಯ 1,100 ಚ.ಮೀ ಪ್ರದೇಶ ಈ ವ್ಯಾಪ್ತಿಯಲ್ಲಿ ಬರಲಿದೆ. ಈ ಜಾಗದಲ್ಲಿ ರೈಲುಗಳ ನಿರ್ವಹಣೆಗಾಗಿ ಸುಸಜ್ಜಿತ ಡಿಪೋ ನಿರ್ಮಿಸಲು ಉದ್ದೇಶಿಸಲಾಗಿದೆ.

ಪಾರದರ್ಶಕ ಪರಿಹಾರದ ಭರವಸೆ: ಈ ಭೂಸ್ವಾಧೀನ ಪ್ರಕ್ರಿಯೆಯಿಂದ ಸುಮಾರು 50ಕ್ಕೂ ಹೆಚ್ಚು ಖಾಸಗಿ ಹಾಗೂ ಸರ್ಕಾರಿ ಸ್ವತ್ತುಗಳಿಗೆ ಬಾಧೆಯಾಗಲಿದೆ. ಆದರೆ, 2013ರ ಭೂಸ್ವಾಧೀನ ಕಾಯ್ದೆಯಡಿ ಸಂತ್ರಸ್ತರಿಗೆ ನ್ಯಾಯಯುತ ಹಾಗೂ ಪಾರದರ್ಶಕ ಪರಿಹಾರ ನೀಡಲಾಗುವುದು ಎಂದು ಅಧಿಕಾರಿಗಳು ಭರವಸೆ ನೀಡಿದ್ದಾರೆ. ಅಧಿಸೂಚನೆ ಹೊರಡಿಸಿದ ಜಮೀನುಗಳಲ್ಲಿ ಯಾವುದೇ ರೀತಿಯ ಹೊಸ ನಿರ್ಮಾಣ ಅಥವಾ ಮಾರಾಟ ಪ್ರಕ್ರಿಯೆ ನಡೆಸದಂತೆ ಮಾಲೀಕರಿಗೆ ಸೂಚನೆ ನೀಡಲಾಗಿದೆ.



ವಿಮಾನ ನಿಲ್ದಾಣ ಸಂಪರ್ಕಕ್ಕೆ ಬಲ: ಸದ್ಯ ಬೆಂಗಳೂರಿನ ಸಂಚಾರ ದಟ್ಟಣೆಗೆ ಉಪನಗರ ರೈಲು ಅತ್ಯುತ್ತಮ ಪರ್ಯಾಯ ಎನಿಸಿದೆ. ದೇವನಹಳ್ಳಿ ಡಿಪೋ ನಿರ್ಮಾಣವಾದರೆ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರೈಲುಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಸುಗಮವಾಗಲಿದೆ. ಇದು ಕೇವಲ ಬೆಂಗಳೂರಿನ ಸಾರಿಗೆ ವ್ಯವಸ್ಥೆಯಷ್ಟೇ ಅಲ್ಲದೆ, ಈ ಭಾಗದ ಆರ್ಥಿಕ ಚಟುವಟಿಕೆಗಳಿಗೂ ಹೊಸ ಆಯಾಮ ನೀಡಲಿದೆ ಎಂದು ಹೇಳಲಾಗುತ್ತಿದೆ.

ಮೇ 26ರಿಂದ ಉಪನ್ಯಾಸಕರ ಅರ್ಹತಾ ಪರೀಕ್ಷೆ

ಬೆಂಗಳೂರು: ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕ ವೃಂದದಿಂದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕ ವೃಂದಕ್ಕೆ ಬಡ್ತಿ ನೀಡುವ ಅರ್ಹತಾ ಪರೀಕ್ಷೆಯನ್ನು ಮೇ 26ರಿಂದ ನಡೆಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಆಯುಕ್ತರು ತೀರ್ಮಾನಿಸಿದ್ದಾರೆ. ಮೇ 26ರಂದು ಮೊದಲ ಅಧಿವೇಶನದಲ್ಲಿ ಕನ್ನಡ, ಉರ್ದು, ಜೀವಶಾಸ್ತ್ರ ಮತ್ತು ಗಣಿತ ಹಾಗೂ ಎರಡನೇ ಅಧಿವೇಶನದಲ್ಲಿ ಇಂಗ್ಲೀಷ್ ಮತ್ತು ಸಂಸ್ಕೃತ, ಮೇ 27ರಂದು ಮೊದಲ ಅಧಿವೇಶನದಲ್ಲಿ ಇತಿಹಾಸ, ಎರಡನೇ ಅಧಿವೇಶನದಲ್ಲಿ ಹಿಂದಿ, ಮೇ 28ರಂದು ಮೊದಲ ಅಧಿವೇಶನದಲ್ಲಿ ಅರ್ಥಶಾಸ್ತ್ರ ಮತ್ತು ಎರಡನೇ ಅಧಿವೇಶನದಲ್ಲಿ ರಾಜಕೀಯ ಶಾಸ್ತ್ರ, ಮೇ 29 ರಂದು ಮೊದಲ ಅಧಿವೇಶನದಲ್ಲಿ ಸಮಾಜಶಾಸ್ತ್ರ ಮತ್ತು ಎರಡನೇ ಅಧಿವೇಶನದಲ್ಲಿ ಭೂಗೋಳಶಾಸ್ತ್ರ ಪರೀಕ್ಷೆ, ಮೊದಲ ಅಧಿವೇಶನ ಬೆಳಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ ಮತ್ತು ಎರಡನೇ ಅಧಿವೇಶನ ಮಧ್ಯಾಹ್ನ 2 ರಿಂದ ಸಂಜೆ 5ರವರೆಗೆ ನಡೆಯಲಿದೆ. ಅರ್ಹತಾ ಪರೀಕ್ಷೆ ಹಿಂದೆಯೇ ನಡೆಸಲು ತೀರ್ಮಾನಿಸಲಾಗಿತ್ತು. ಜನಗಣತಿ ಕಾರ್ಯದಲ್ಲಿ ಶಿಕ್ಷಕರು ವ್ಯಸ್ತರಾಗಿರುವುದರಿಂದ ಹೊಸ ವೇಳಾಪಟ್ಟಿಯನ್ನು ಇಲಾಖೆ ಪ್ರಕಟಿಸಿದೆ.

ದೊಡ್ಡದಿನ್ನಹಳ್ಳಿ-ಚಿಕ್ಕದಿನ್ನಹಳ್ಳಿ ಗ್ರಾಮದೇವತೆ ಉತ್ಸವ| ತಂಬಿಟ್ಟಿನ ಮೆರವಣಿಗೆ

ಗ್ರಾಮೀಣರ ಒಗ್ಗೂಡಿಸುವ ಹಬ್ಬ ಹರಿದಿನ

ತಾವರೆಕೆರೆ: ಹಬ್ಬಹರಿದಿನಗಳು ನಾಡಿನ ಸಂಸ್ಕೃತಿಕ ಅವಿಭಾಜ್ಯ ಅಂಗ. ಇದು ಕೇವಲ ಧಾರ್ಮಿಕ ಆಚರಣೆಯಲ್ಲ, ಬದಲಾಗಿ ಇಡೀ ಗ್ರಾಮದ ಜನರನ್ನು ಒಂದೆಡೆ ಸೇರಿಸುವ, ಸಾಂಸ್ಕೃತಿಕ ಪರಂಪರೆ ಎತ್ತಿಹಿಡಿಯುವ ಹಬ್ಬವಾಗಿದೆಂದು ದೊಡ್ಡದಿನ್ನಳ್ಳಿ ಮುಖಂಡರಾದ ನಾರಾಯಣಪ್ಪ ಹೇಳಿದರು.

ದೊಡ್ಡದಿನ್ನಹಳ್ಳಿ ಚಿಕ್ಕದಿನ್ನಹಳ್ಳಿ ಗ್ರಾಮದಲ್ಲಿ ನಡೆದ 11 ದೇವರಾದ ಶ್ರೀವೇಣುಗೋಪಾಲಸ್ವಾಮಿ, ಗಂಗಮ್ಮ , ಕಾಟೇರಮ್ಮ, ಆಂಜನೇಯಸ್ವಾಮಿ, ವೆಂಕಟರಮಣಸ್ವಾಮಿ, ಚನ್ನರಾಯಸ್ವಾಮಿ, ಚೌಡೇಶ್ವರಮ್ಮ, ಕೆರೆಕಟ್ಟೆ ಮಾರಮ್ಮ, ಮುತ್ಯಾಲಮ್ಮ, ಸುಗ್ಗಮ್ಮ ಮತ್ತು ಮನೆದೇವರುದೀಪೋತ್ಸವ ಮತ್ತು ಊರ ಹಬ್ಬ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಳಿಕ ಮಾತನಾಡಿ, ಊರ ಹಬ್ಬ ಗ್ರಾಮದ ಸುಖ, ಶಾಂತಿ ಮತ್ತು ಸಮೃದ್ಧಿಗಾಗಿ ಮಾಡುವ ಪೂಜೆಯಾಗಿದೆಂದರು. ಇದು ಹಳ್ಳಿಯ ಬದುಕಿಗೆ ಹೊಸ ಚೈತನ್ಯವನ್ನು ನೀಡುತ್ತದೆ. ಹಾಗಾಗಿ ದಿನ್ನಳ್ಳಿ ಗ್ರಾಮಗಳಲ್ಲಿ ಹತ್ತು ಹದಿನೈದು ವರ್ಷಕೊಮ್ಮೆ ಆಚರಣೆ ಮಾಡುತ್ತಿದ್ದ ಊರ ಹಬ್ಬ ಗ್ರಾಮದ ಯುವಕರು ಎಲ್ಲರೂ ಸೇರಿ ಈ ಬಾರಿ ಏಳು ವರ್ಷದಲ್ಲಿ ದಿಪೋತ್ಸವ ಮತ್ತು ಊರು ಹಬ್ಬ ಮಾಡುತ್ತಿರುವುದು ಸಂತೋಷ ತಂದಿದೆ ಎಂದು ತಿಳಿಸಿದರು. ದೊಡ್ಡದಿನ್ನಳ್ಳಿ ಚಿಕ್ಕದಿನ್ನಳ್ಳಿ ಗ್ರಾಮದ ದೇಗುಲಗಳಲ್ಲಿ ದೀಪೋತ್ಸವ ಅಂಗವಾಗಿ ವಿಶೇಷ ಪೂಜಾ ಕೈಂಕರ್ಯ ನಡೆಯಿತು. ದೀಪೋತ್ಸವದ ಅಂಗವಾಗಿ ದೇಗುಲಗಳಿಗೆ ವಿಶೇಷ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ದೇವಾಲಯದಲ್ಲಿ ಮೂಲ ವಿಗ್ರಹಗಳಿಗೆ ಅಭಿಷೇಕ, ಮಹಾಮಂಗಳಾರತಿ, ತೀರ್ಥಪ್ರಸಾದ ವಿತರಿಸಲಾಯಿತು.



ಗ್ರಾಮದಲ್ಲಿಗ್ರಾಮ ದೇವತೆಗಳಿಗೆ ಹಮ್ಮಿಕೊಂಡಿದ್ದ ದೀಪೋತ್ಸವದ ಅಂಗವಾಗಿ ಮಹಿಳೆಯರು ಗ್ರಾಮ ದೇವತೆಗಳಿಗೆ ಆರತಿ ತಂಬಿಟ್ಟು ದೀಪಗಳನ್ನು ತಲೆಯಮೇಲೆ ಹೊತ್ತು.ದೊಡ್ಡದಿನ್ನಳ್ಳಿ ಚಿಕ್ಕದಿನ್ನಹಳ್ಳಿ ಮತ್ತು ಪಕ್ಕದ ಹೋಬಳಿ ಕೇಂದ್ರವಾಗಿರುವ ನಂದುಗುಡಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿದರು. ಗ್ರಾಮದ ಮುಖಂಡರಾದ ಚಿನ್ನಪ್ಪ, ಕೃಷ್ಣಪ್ಪ, ಓಬಣ್ಣ, ಶ್ರೀರಾಮಪ್ಪ, ಚನ್ನಕೃಷ್ಣಪ್ಪ, ಶಿವಗಂಗಾಧರ್, ಜಿಲೇಬಿ ವೆಂಕಟೇಶ್, ಕೆ. ಮಂಜುನಾಥ್, ನಾಗರಾಜ್, ರಾಜೇಶ್, ಮುನಿರಾಜು, ಚನ್ನಕೇಶವ, ಡ್ರೈವರ್ ಮಂಜುನಾಥ್, ಗಣೇಶ್, ಆಟೋ ವೆಂಕಟೇಶ್, ಸಾಗರ್, ಮಧು, ಹೇಮಂತ್, ಹರೀಶ್, ಜಿ.ಶ್ರೀನಿವಾಸ್, ಎನ್. ವೆಂಕಟೇಶ್. ನಾರಾಯಣಪ್ಪ, ಗಂಗಾಧರ್, ವೇಣುಗೋಪಾಲ್, ಸಿ.ಮಂಜುನಾಥ ಇನ್ನೂ ಅನೇಕ ಯುವಕರು ಹಾಜರಿದ್ದರು.

ಉಜ್ಜನಿ ಹೊಸಹಳ್ಳಿಯಲ್ಲಿ ವಿಜೃಂಭಣೆಯ ಬ್ರಹ್ಮರಥೋತ್ಸವ

ಲಕ್ಷ್ಮೀನರಸಿಂಹ ಸ್ವಾಮಿಗೆ ವಿಶೇಷ ಪೂಜೆ

ದೊಡ್ಡಬಳ್ಳಾಪುರ: ತಾಲೂಕಿನ ಸಾಸಲು ಹೋಬಳಿಯ ಹೊಸಹಳ್ಳಿಯಲ್ಲಿರುವ ಇತಿಹಾಸ ಪ್ರಸಿದ್ಧ ಶ್ರೀಲಕ್ಷ್ಮೀನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಬುಧವಾರ ಮಧ್ಯಾಹ್ನ ಬಹಳ ವಿಜೃಂಭಣೆಯಿಂದ ನೆರವೇರಿತು.

ಬ್ರಹ್ಮರಥೋತ್ಸವದ ಪ್ರಯುಕ್ತ ದೇವಾಲಯದಲ್ಲಿ ಬೆಳಗ್ಗಿನಿಂದಲೂ ಅಭಿಷೇಕ, ಅರ್ಚನೆ ನಡೆದು ಶ್ರೀಲಕ್ಷ್ಮೀನರಸಿಂಹಸ್ವಾಮಿಯನ್ನು ದೇವಾಲಯದಿಂದ ತಂದು ಪಂಚ ಕಳಸ ಊಡಿದ ರಥದಲ್ಲಿ ಪ್ರತಿಷ್ಠಾಪಿಸಲಾಯಿತು.

ವಿವಿಧ ಧಾರ್ಮಿಕ ಕಾರ್ಯಗಳ ಬಳಿಕ ಮಧ್ಯಾಹ್ನ 3ಕ್ಕೆ ವೇದಬ್ರಹ್ಮರ ಮಂತ್ರ ಘೋಷದೊಂದಿಗೆ ರಥ ಮುಂದೆ ಸಾಗುತಿದ್ದಂತೆ, ಜಯಘೋಷ ಹಾಕುವ ಮೂಲಕ ಹರಕೆ ಹೊತ್ತ ಭಕ್ತರು, ಭಕ್ತಿ ಭಾವದಿಂದ ಬಾಳೆಹಣ್ಣು, ದವನ ಎಸೆದು ಹರಕೆ ತೀರಿಸಿದರು.

ರಥೋತ್ಸವದಲ್ಲಿ ಭಕ್ತರ ಜೈಕಾರ, ತಮಟೆ ವಾದ್ಯಗಳ ಸದ್ದು ಮುಗಿಲುಮುಟ್ಟುವಂತಿತ್ತು. ರಥವನ್ನು ಗ್ರಾಮದ ಮುಖ್ಯ ಬೀದಿಯಿಂದ ಗೊಡ್ಡರಾಯಿಕಲ್ಲಿನವರೆಗೆ ಎಳೆದು ತಂದರು. ಬ್ರಹ್ಮರಥೋತ್ಸವದ ಅಂಗವಾಗಿ ರಥ ಹಾಗೂ ಗರ್ಭಗುಡಿಯಲ್ಲಿನ ದೇವರಿಗೆ ವಿಶೇಷವಾಗಿ ಅಲಂಕಾರ ಮಾಡಿ ವಿಶೇಷ ಪೂಜೆ ಸಲ್ಲಿಸಲಾಯಿತು. ವಿವಿಧ ಸಮುದಾಯದವತಿಯಿಂದ ಬ್ರಹ್ಮರಥೋತ್ಸವದ ಬರುವ ಭಕ್ತಾದಿಗಳಿಗೆ ಪಾನಕ, ಮಜ್ಜಿಗೆ, ಹೆಸರುಬೇಳೆ ಹಾಗೂ ಪ್ರಸಾದ ವಿತರಿಸಲು ರಸ್ತೆ ಬದಿಗಳಲ್ಲಿ ಶಾಮಿಯಾನ, ಟೆಂಟ್ ಮತ್ತು ಅರವಂಟಿಕೆಗಳ ವ್ಯವಸ್ಥೆ ಮಾಡಲಾಗಿತ್ತು. ಶ್ರೀ ಲಕ್ಷ್ಮೀನರಸಿಂಹ ಸ್ವಾಮಿಯ ಜಾತ್ರಾ ಮಹೋತ್ಸವ ಮೇ 4ರಂದು ಆರಂಭವಾಗಿ ಮೇ 8ರ ವರೆಗೆ ನಡೆಯಲಿದೆ. ಐದು ದಿನಗಳ ಕಾಲ ನಡೆಯುವ ಜಾತ್ರಾ ಮಹೋತ್ಸವದ ಅಂಗವಾಗಿ ಕಲ್ಯಾಣೋತ್ಸವ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮದಲ್ಲಿ ದೇವರಿಗೆ ವಿಶೇಷ ಅಲಂಕಾರ, ಅಭಿಷೇಕ, ಪೂಜೆ, ಆರತಿ ಕಾರ್ಯಕ್ರಮ ನೆರವೇರಿಸಲಾಗಿದೆ.



ಲಕ್ಷ್ಮೀನರಸಿಂಹಸ್ವಾಮಿ ಕಲಾತಂಡದವರಿಂದ 'ಕುರುಕ್ಷೇತ್ರ' ಅಥವಾ 'ಶ್ರೀಕೃಷ್ಣ ಸಂಧಾನ' ಎಂಬ ಪೌರಾಣಿಕ ನಾಟಕ ಪ್ರದರ್ಶನ ನಡೆಯಲಿದೆ.

ಕಿರುಸುದ್ದಿ

ಸೌತ್ ಇಂಡಿಯನ್ ಬ್ಯಾಂಕ್‌ಗೆ ನಿವ್ವಳ ಲಾಭ

• **ಬೆಂಗಳೂರು:** ಸೌತ್ ಇಂಡಿಯನ್ ಬ್ಯಾಂಕ್ 2025–26ರ ಹಣಕಾಸು ವರ್ಷದಲ್ಲಿ ಇತಿಹಾಸದಲ್ಲೇ ಅತ್ಯಧಿಕ ನಿವ್ವಳ ಲಾಭವನ್ನು ದಾಖಲಿಸಿದ್ದು, 1,455.14 ಕೋಟಿ ರೂ. ಲಾಭ ಏರಿಕೆ ಕಂಡಿದೆ. ಇದು ಕಳೆದ ಹಣಕಾಸು ವರ್ಷದ 1,302.88 ಕೋಟಿಗೆ ಹೋಲಿಸಿದರೆ ಶೇ.11.69 ರಷ್ಟು ಬೆಳವಣಿಗೆಯಾಗಿದೆ. ಈ ಸಾಧನೆಯ ಹಿನ್ನೆಲೆಯಲ್ಲಿ ಬ್ಯಾಂಕಿನ ಆಡಳಿತ ಮಂಡಳಿ ಷೇರುದಾರರಿಗೆ ಶೇ.45ರಷ್ಟು ಡಿವಿಡೆಂಡ್ ಘೋಷಿಸಲು ಶಿಫಾರಸು ಮಾಡಿದೆ. 2025–26ರ ನಾಲ್ಕನೇ ತ್ರೈಮಾಸಿಕದಲ್ಲಿಯೂ ಬ್ಯಾಂಕ್ ಉತ್ತಮ ಫಲಿತಾಂಶ ದಾಖಲಿಸಿದ್ದು, ನಿವ್ವಳ ಲಾಭ 408 ಕೋಟಿಗೆ ತಲುಪಿದೆ. ಇದು ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ.19ರಷ್ಟು ಏರಿಕೆಯಾಗಿದೆ. ಬ್ಯಾಂಕ್ ಈ ಅವಧಿಯಲ್ಲಿ ಒಟ್ಟು ವ್ಯವಹಾರದಲ್ಲಿ ಮಹತ್ವದ ಮೈಲಿಗಲ್ಲು ತಲುಪಿದ್ದು, 2,23,620 ಕೋಟಿಗಳ ವ್ಯವಹಾರವನ್ನು ದಾಖಲಿಸಿದೆ. ಕಾರ್ಯಾಚರಣಾ ಲಾಭ 2,373 ಕೋಟಿಗಳಿಗೆ ಏರಿಕೆಯಾಗಿದೆ. ಬಡ್ಡಿಯೇತರ ಆದಾಯ 2,009 ಕೋಟಿಗೆ ತಲುಪಿದೆ.

ಕೊಲೆ ಆರೋಪಿ ಬಂಧನ

• **ತಾವರೆಕೆರೆ:** ಕಳೆದ ತಿಂಗಳು ದಬ್ಬಗುಂಟೆ ಗ್ರಾಮದಲ್ಲಿ ನಡೆದ ಕೊಲೆ ಪ್ರಕರಣ ಆರೋಪಿಯನ್ನು ಬಂಧಿಸಿರುವುದಾಗಿ ಎಸ್‌ಪಿ ಚಂದ್ರಕಾಂತ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗ್ರಾಮದ ಶಿವಶಂಕರ್ ಎಂಬುವರನ್ನು ಮನೆ ಮುಂದೆಯೇ ಆರೋಪಿ ನಕ್ಕನಹಳ್ಳಿ ಅನಿಲ್ ಕುಮಾರ್ ಹರಿತವಾದ ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿದ್ದರು. ಆರೋಪಿ ಬಂಧನಕ್ಕೆ ಮೂರು ತಂಡ ರಚಿಸಲಾಗಿತ್ತು. ಹೊಸಕೋಟೆ ಟೌನ್ ನೈಟ್ ಹೋಟೆಲ್‌ಬಳಿ ಆರೋಪಿಯನ್ನು ಘಟನೆ ನಡೆದ ಎರಡು ಗಂಟೆ ಸಮಯದಲ್ಲಿ ಬಂಧಿಸಲಾಗಿದೆಂದರು. ಕೊಲೆಗೆ ಬಳಸಿದ ಆಯುಧ ಸೇರಿದಂತೆ ಹಲವು ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ. ಆದರೆ. ಕೊಲೆ ಕುರಿತು ನಿಖರ ಕಾರಣ ತಿಳಿದು ಬಂದಿಲ್ಲ, ಆರೋಪಿ ಪತ್ತೆಗೆ ಏ.ಕೆ. ಮಂಜುನಾಥ್, ದತ್ತಾತ್ರೇಯ, ಧನಶೇಖರ್, ನಾಗರಾಜ್, ರಮೇಶ್, ಮಂಜುನಾಥ್, ಅಂಬರೀಶ್, ನಾರಾಯಣ್, ಗೋಪಾಲಕೃಷ್ಣ ಅವರನ್ನು ಜಿಲ್ಲಾ ಎಸ್.ಪಿ ಚಂದ್ರಕಾಂತ್ ಅಭಿನಂಧಿಸಿದ್ದಾರೆ.

ನಗ್ನ ದೃಶ್ಯ ಸೆರೆಹಿಡಿದ ವಿಕೃತನ ಬಂಧನ

• **ಬೆಂಗಳೂರು:** ಮನೆಯಲ್ಲಿ ಮಹಿಳಾ ಸಾಫ್ಟ್‌ವೇರ್ ಇಂಜಿನಿಯರ್ ಒಬ್ಬರು ಸ್ನಾನ ಮಾಡುತ್ತಿದ್ದ ದೃಶ್ಯವನ್ನು ಮೊಬೈಲ್‌ನಲ್ಲಿ ವಿಡಿಯೋ ಮಾಡುತ್ತಿದ್ದ ವಿಕೃತ ವ್ಯಕ್ತಿಯನ್ನು ಮಹದೇವಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ. ತಮಿಳುನಾಡು ಮೂಲದ ಕಾರ್ತಿಕ್ (30) ಬಂಧಿತ ಆರೋಪಿ. ಈತ ನಗರದ ಖಾಸಗಿ ಕಂಪನಿಯೊಂದರಲ್ಲಿ ಉದ್ಯೋಗಿಯಾಗಿದ್ದಾನೆ. ಗರುಡಾಚಾರ್ ಪಾಳ್ಯಕ್ಕೆ ಕೆಲ ತಿಂಗಳ ಹಿಂದೆಯಷ್ಟೇ ಬಾಡಿಗೆ ಮನೆಗೆ ಬಂದಿದ್ದ 23 ವರ್ಷದ ಮಹಿಳಾ ಸಾಫ್ಟ್‌ವೇರ್ ಇಂಜಿನಿಯರ್ ಅವರು ಸ್ನಾನ ಮಾಡುತ್ತಿದ್ದಾಗ, ಪಕ್ಕದ ಕಟ್ಟಡದಿಂದ ಯಾರೋ ಮೊಬೈಲ್ ಮೂಲಕ ವಿಡಿಯೋ ಮಾಡುತ್ತಿರುವುದನ್ನು ಗಮನಿಸಿ ಗಾಬರಿಗೊಂಡಿದ್ದಾರೆ. ಈ ವಿಡಿಯೋವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡಬಹುದು ಎಂಬ ಆತಂಕದಿಂದ ಅವರು ತಕ್ಷಣವೇ ಪೊಲೀಸರಿಗೆ ದೂರು ನೀಡಿದ್ದಾರೆ. ದೂರು ದಾಖಲಿಸಿಕೊಂಡ ಮಹದೇವಪುರ ಪೊಲೀಸರು ಕೂಡಲೇ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದಾರೆ. ಕ್ಷಿಪ್ರ ಕಾರ್ಯಾಚರಣೆ ನಡೆಸಿದ ಪೊಲೀಸರು ಕೆಲವೇ ಗಂಟೆಗಳಲ್ಲಿ ಆರೋಪಿಯನ್ನು ಪತ್ತೆಹಚ್ಚಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮೊಬೈಲ್ ಕಳೆದು ಹೋದ ಕ್ಷಣದಲ್ಲೇ ಪತ್ತೆ

• **ಬೆಂಗಳೂರು:** ಮೊಬೈಲ್ ಫೋನ್ ಕಳೆದು ಹೋದ ಕೇವಲ ಹದಿನೈದು ನಿಮಿಷಗಳಲ್ಲಿ ಫೈಂಡ್ ಮೈ ಡಿವೈಸ್ ಆ್ಯಪ್ ಬಳಸಿ ಅದನ್ನು ಪತ್ತೆ ಹಚ್ಚುವಲ್ಲಿ ರಾಮಮೂರ್ತಿನಗರ ಠಾಣೆಯ ಪೊಲೀಸರು ಯಶಸ್ವಿಯಾಗಿದ್ದಾರೆ. ರಾಮಮೂರ್ತಿನಗರ ಪೊಲೀಸ್ ಠಾಣೆ ವ್ಯಾಪ್ತಿಯ ಚಂದ್ರವದನ ಲೇಔಟ್‌ನ ನಿವಾಸಿಯೊಬ್ಬರ ಮನೆಯ ಸಮೀಪ ಪ್ರವೀಣ್ ಎಂಬವರ ಮೊಬೈಲ್ ಫೋನ್ ಕಳುವಾಗಿತ್ತು. ತಕ್ಷಣವೇ ಪೊಲೀಸ್ ಸಹಾಯವಾಣಿ ಸಂಖ್ಯೆ 112 ಕ್ಕೆ ಕರೆ ಮಾಡಿ ದೂರು ನೀಡಿದ್ದಾರೆ. ದೂರು ಸ್ವೀಕರಿಸಿದ ಕೂಡಲೇ 112 ಸಿಬ್ಬಂದಿಯವರು ರಾಮಮೂರ್ತಿನಗರ ಪೊಲೀಸ್ ಠಾಣೆಯ ಹೊಯ್ಸಳ–49 ರಲ್ಲಿದ್ದ ಎಎಸ್‌ಐ ಚೌಡಪ್ಪ ಮತ್ತು ಎಪಿಸಿ ಬಸವರಾಜ್ ಅವರಿಗೆ ಮಾಹಿತಿ ರವಾನಿಸಿದ್ದಾರೆ. ಮಾಹಿತಿ ತಲುಪಿದ ಹದಿನೈದು ನಿಮಿಷದೊಳಗೆ ಸ್ಥಳಕ್ಕೆ ಧಾವಿಸಿದ ಪೊಲೀಸರು, ತಾಂತ್ರಿಕವಾಗಿ ಮೊಬೈಲ್ ಇರುವ ಸ್ಥಳವನ್ನು ಪತ್ತೆಹಚ್ಚಿದ್ದಾರೆ. ಪೊಲೀಸರು ಆಧುನಿಕ ಆ್ಯಪ್ ಸಹಾಯದಿಂದ ಮೊಬೈಲ್ ಇರುವ ನಿಖರ ಸ್ಥಳವನ್ನು ಪತ್ತೆಹಚ್ಚಿ, ಅದನ್ನು ವಶಪಡಿಸಿಕೊಂಡು ವಾರಸುದಾರರಿಗೆ ಹಸ್ತಾಂತರಿಸಿದ್ದಾರೆ.

ಮಾನಸಿಕ ಖಿನ್ನತೆ ಗುಣಪಡಿಸಲು ಚಿಕಿತ್ಸೆ | ಮನೋವೈದ್ಯೆ ಪದ್ಮರೇಖಾ ಸಮಾಲೋಚನೆ

ಕೈದಿಗಳ ಮಾನಸಿಕ ಕಾಯಿಲೆಗೆ ಮದ್ದು

▸ ಎಸ್. ರುದ್ರೇಶ್ವರ

• **ರಾಮನಗರ:** ಕಾರಾಗೃಹದಲ್ಲಿರುವ ಕೈದಿಗಳು ಮಾನಸಿಕ ಖಿನ್ನತೆಯಿಂದ ಬಳಲುತ್ತಿರುವುದು ಇತ್ತೀಚಿನ ಮನೋವೈದ್ಯರ ವರದಿ ಪ್ರಕಾರವಾಗಿ ತಿಳಿದು ಬಂದಿದೆ.

ಮನೋವೈದ್ಯಕೀಯ ಸಾಮಾಜಿಕ ಕಾರ್ಯಕರ್ತೆ ಪದ್ಮರೇಖಾ ಅವರು ಕೈದಿಗಳ ಜತೆ ಆಪ್ತಸಮಾಲೋಚನೆ ನಡೆಸುತ್ತಿದ್ದಾರೆ. ಇದರಿಂದಾಗಿ ಕೈದಿಗಳಲ್ಲಿರುವ ಮಾನಸಿಕ ಖಿನ್ನತೆ ಹೋಗಲಾಡಿಸಲು ಹಲವಾರು ವಿಧದಲ್ಲಿ ಸಮಾಲೋಚನೆ ಮೂಲಕ ಗುಣಪಡಿಸುವ ಕಾರ್ಯದಲ್ಲಿ ಮುಂದಾಗಿದ್ದಾರೆ. ಹೀಗೆ ಆಪ್ತಸಮಾಲೋಚನೆ ವೇಳೆ ವಿಚಾರಣಾಧೀನ ಕೈದಿಯಾಗಿ ಜೈಲು ಸೇರಿರುವ ಹೊರರಾಜ್ಯದ ವ್ಯಕ್ತಿ ಸಾಕಷ್ಟು ಮಂದಿ ಇದ್ದಾರೆ. ಇವರೆಲ್ಲರಲ್ಲೂ ಬಹುತೇಕವಾಗಿ ಮಾನಸಿಕ ಖಿನ್ನತೆ ಕಾಡುತ್ತಿದೆ. ಇವರನ್ನು ಕುಟುಂಬ ಮತ್ತು ತಮ್ಮ ಸ್ಥಿತಿ ಕುರಿತು ಆಲೋಚಿಸುವ ಮೂಲಕ ಸಾಮಾಜಿಕವಾಗಿ ಮುಂದೆ ನೆಲೆ ನಿಲ್ಲುವ, ಕುಟುಂಬದ ಜತೆ ಸೇರಿ ಸಹಬಾಳ್ವೆ ನಡೆಸುವ ಕುರಿತು ಹಲವು ಬಗೆಯ ಚಿಂತೆ ಕಾಡುತ್ತಿದೆ. ಇಂತಹ ಕೈದಿಗಳನ್ನು ಪ್ರಶ್ನಿಸಿದಾಗ ಹೆಂಡತಿ ಮಕ್ಕಳನ್ನು ನೆನೆದು ಕಣ್ಣೀರು ಹಾಕುವರು. ಇದೇ ಅವರ ಮಾನಸಿಕ ಖಿನ್ನತೆಗೆ ಬಹುಮುಖ್ಯವಾದ ಕಾರಣವಾಗಿದೆ. ಕಾರಾಗೃಹದಲ್ಲಿ ಬಂಧಿತರಾಗಿರುವ ಕೈದಿಗಳ ಮಾನಸಿಕ ತಳಮಳ ಮತ್ತು ಖಿನ್ನತೆ ಹೋಗಲಾಡಿಸುವ ಕುರಿತು ಮನೋವೈದ್ಯರು, ಸಾಮಾಜಿಕ ಕಾರ್ಯಕರ್ತರಾದ ಪದ್ಮರೇಖಾ ಅವರು ಕೈದಿಗಳ ಕುಟುಂಬದವರನ್ನು ಸಂಪರ್ಕಿಸಿ ಅವರ ಸ್ಥಿತಿಗತಿಯನ್ನು ಕುರಿತು ಸಾಕಷ್ಟು ಮಾಹಿತಿ ಕಲೆ ಹಾಕಿದ್ದಾರೆ.

ಕೈದಿಯೋರ್ವನ ಮನೆಗೆ ಹೋಗಿ ಪರಿಶೀಲಿಸಿದಾಗ ಆತನ ಹೆಂಡತಿ ಮಕ್ಕಳು ಸಂಕಷ್ಟದಲ್ಲಿರುವುದು ಕಂಡು ಬಂದಿತು. ಮಾನವನ ಕನಿಷ್ಠ ಅಗತ್ಯತೆಯಾದ ಊಟ, ಬಟ್ಟೆ, ವಸತಿಗೂ ಪರದಾಡುತ್ತಿರುವ ಸ್ಥಿತಿ ಕಂಡು ಬಂದಿದೆ. ತಕ್ಷಣ ಕೈದಿಗಳ ಕುಟುಂಬಕ್ಕೆ ಪಡಿತರ ಧಾನ್ಯ ಕೊಡಿಸಿ, ಚಿಕ್ಕಮಕ್ಕಳಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮೂಲಕ ಊಟ ಮತ್ತು ಇನ್ನಿತರ ಸೌಲಭ್ಯ ದೊರೆಯುವಂತೆ ಮಾಡಲಾಗಿದೆ.



ಮಕ್ಕಳಿಗೆ ಹೃದಯ ಸಂಬಂಧಿ ಕಾಯಿಲೆ

ಕಾರಾಗೃಹ ಇಲಾಖೆ ಮತ್ತು ಜಿಲ್ಲಾಸ್ಪತ್ರೆ, ಮನೋವೈದ್ಯಕೀಯ ವಿಭಾಗದ ಸಿಬ್ಬಂದಿ ದಾನಿಗಳನ್ನು ಸಂಪರ್ಕಿಸಿ ಒಂದಿಷ್ಟು ಹಣಕಾಸಿನ ನೆರವು ಕೊಡಿಸಿದ್ದಾರೆ. ಇನ್ನು ಎಂಟು ತಿಂಗಳ ಚಿಕ್ಕಮಗುವಿಗೆ ಹೃದಯ ಸಂಬಂಧಿ ಕಾಯಿಲೆ ಇದೆ. ಮಗುವಿನ ಚಿಕಿತ್ಸೆಗೆ ನೆರವು ನೀಡುವ ಕೆಲಸವನ್ನು ಮಾಡಿದ್ದಾರೆ.

ಪ್ರತಿ ತಿಂಗಳು ಆಪ್ತ ಸಮಾಲೋಚನೆ

ಪ್ರತಿ ತಿಂಗಳು ಜಿಲ್ಲಾ ಕಾರಾಗೃಹದಲ್ಲಿ ಆಪ್ತಸಮಾಲೋಚನೆ ನಡೆಸಲಾಗುವುದು. ಈ ಸಮಯದಲ್ಲಿ ಖಿನ್ನತೆಗೆ ಒಳಗಾಗಿದ್ದ ವ್ಯಕ್ತಿಯನ್ನು ವಿಚಾರಿಸಿದಾಗ ಆತನ ಹೆಂಡತಿ ಮತ್ತು ಮಕ್ಕಳು ಸಂಕಷ್ಟದಲ್ಲಿರುವುದು ಬೆಳಕಿಗೆ ಬಂದಿತು. ಮಾನವೀಯ ನೆಲೆಗಟ್ಟಿನಲ್ಲಿ ಕಾರಾಗೃಹ ಇಲಾಖೆ ಅಧಿಕಾರಿಗಳು, ಆರೋಗ್ಯ ಇಲಾಖೆ ಮತ್ತು ದಾನಿಗಳ ನೆರವಿನೊಂದಿಗೆ ವಿಚಾರಣಾಧೀನ ಕೈದಿಯ ಹೆಂಡತಿ ಮತ್ತು ಮಗುವಿಗೆ ನೆರವು ನೀಡಲಾಗಿದೆಂದು ರಾಮನಗರ ಜಿಲ್ಲಾಸ್ಪತ್ರೆ, ಮನೋವೈದ್ಯಕೀಯ ಸಾಮಾಜಿಕ ಕಾರ್ಯಕರ್ತೆಯಾದ ಎಸ್. ಪದ್ಮರೇಖಾ ತಿಳಿಸಿದರು.

ಸಂಕಷ್ಟದಲ್ಲಿ ಕೈದಿಗಳ ಕುಟುಂಬ

ತಿಳಿದೋ ತಿಳಿಯದೆಯೋ ಮಾಡಿದ ತಪ್ಪಿನಿಂದಾಗಿ ಕೊಲೆ ಆರೋಪದ ಮೇಲೆ ಆತ ಜೈಲು ಸೇರಿದ ಹಿನ್ನೆಲೆಯಲ್ಲಿ ಈತನ ಪತ್ನಿ ಮತ್ತು ಮಕ್ಕಳು ಅತಂತ್ರವಾಗಿದ್ದರು. ವಿಚಾರಣಾಧೀನ ಕೈದಿಯ ಪತ್ನಿ ಹೊರರಾಜ್ಯದವಳಾಗಿರುವ ಹಿನ್ನೆಲೆಯಲ್ಲಿ ಆಕೆಗೆ ಕನ್ನಡ ಮಾತನಾಡಲು ಬರುತ್ತಿಲ್ಲ, ಇಲ್ಲಿ ಯಾವುದೇ ಕೆಲಸವನ್ನು ಹುಡುಕಿಕೊಳ್ಳಲು ಸಾಧ್ಯವಾಗಿರಲಿಲ್ಲ, ಇನ್ನು ಎಂಟು ತಿಂಗಳ ಹಸುಗೂಸನ್ನು ನೋಡಿಕೊಂಡು ಶ್ರಮದಾಯಕ ಕೆಲಸ ಮಾಡುವುದು ಆಕೆಗೆ ಸಾಧ್ಯವಾಗದ ಹಿನ್ನೆಲೆಯಲ್ಲಿ, ತನ್ನ ಪತಿ ಮಾಡಿದ ತಪ್ಪಿಗೆ ಈಕೆ ಮತ್ತು ಈಕೆಯ ಚಿಕ್ಕಮಕ್ಕಳು ಶಿಕ್ಷೆ ಅನುಭವಿಸುವಂತಾಗಿತ್ತು.

ದುಡುಕಿನ ನಿರ್ಧಾರಕ್ಕೆ ಜೀವನವೇ ನಾಶ

ಯಾವುದೇ ವ್ಯಕ್ತಿ ಪೂರ್ವಪರ ಆಲೋಚನೆ ಮಾಡದೆ ಕೋಪದ ಕೈಗೆ ಬುದ್ಧಿಕೊಟ್ಟು ದುಡುಕಿದರೆ, ಆತನ ಜತೆಗೆ ಇಡೀ ಕುಟುಂಬ ಶಿಕ್ಷೆ ಅನುಭವಿಸಬೇಕಾಗುತ್ತದೆ. ಎಂಬುದಕ್ಕೆ ಈ ಘಟನೆ ಸಾಕ್ಷಿಯಾಗಿದೆ.

ಕೂಲಿಗೆ ಬಂದವನು ಕೊಲೆಗಾರನಾದ

ಕಳೆದ 18 ವರ್ಷದ ಹಿಂದೆ ಬಿಹಾರ ಮೂಲದ ವ್ಯಕ್ತಿ ಕೆಲಸ ಹುಡುಕಿಕೊಂಡು ರಾಜ್ಯಕ್ಕೆ ಬಂದು ಜಿಲ್ಲೆಯಲ್ಲಿ ನೆಲೆಸಿದ್ದನು. ಮರಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದನು. ಈತ ವಿವಾಹವಾದ ಬಳಿಕ ಪತ್ನಿಯನ್ನು ಇಲ್ಲಿಗೆ ಕರೆಸಿಕೊಂಡು ವಾಸಿಸುತ್ತಿದ್ದನು. ದಂಪತಿಗೆ ಎಂಟು ತಿಂಗಳ ಹಸುಗೂಸು ಸೇರಿದಂತೆ ಮೂರು ಮಕ್ಕಳಿವೆ. ಕಳೆದ ನಾಲ್ಕು ತಿಂಗಳ ಹಿಂದೆ ಕೊಲೆ ಪ್ರಕರಣವೊಂದರಲ್ಲಿ ಭಾಗಿಯಾಗಿದ್ದ ಆರೋಪದ ಮೇಲೆ ಈತನನ್ನು ರಾಮನಗರದ ಜಿಲ್ಲಾ ಕಾರಾಗೃಹಕ್ಕೆ ಹಾಕಲಾಗಿದೆ.

ಮೂತ್ರ ವಿಸರ್ಜಿಸುವವರ ಮುಂದೆ ನಿಲುಗನ್ನಡಿ

» ಮೈಸೂರಿನ ಗ್ರಾಮೀಣ ಬಸ್ ನಿಲ್ದಾಣದಲ್ಲಿ ಅಳವಡಿಕೆ
» ಪರಿಸರ ಸಂರಕ್ಷಣೆಗೆ ಪಾಲಿಕೆಯಿಂದ ಕ್ರಮ

• **ಮೈಸೂರು:** ಇಲ್ಲಿನ ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರು ಕಂಡ, ಕಂಡಲ್ಲಿ ಮೂತ್ರ ವಿಸರ್ಜನೆ ಮಾಡುವುದನ್ನು ತಡೆಯುವುದಕ್ಕಾಗಿ ಇದೀಗ ಮಹಾನಗರ ಪಾಲಿಕೆ ಹೊಸ ಐಡಿಯಾ ಜಾರಿಗೆ ತಂದಿದೆ. ಇದರಿಂದಾಗಿ ಇನ್ಮುಂದೆ ಖಾಲಿ ಕಾಂಪೌಂಡ್‌ಗಳ ಮುಂದೆ ನಿಂತು ಮೂತ್ರ ವಿಸರ್ಜನೆ ಮಾಡುವವರು ಎಚ್ಚರಿಕೆಯಿಂದ ಇರಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಮೈಸೂರು ಕೇಂದ್ರ ಬಸ್ ನಿಲ್ದಾಣದ ಮುಂಭಾಗದ ಸುಮಾರು 80 ಮೀಟರ್ ಉದ್ದದ ಕಾಂಪೌಂಡ್‌ಗೆ ಸ್ಟೇನ್ ಲೆಸ್ ಸ್ಟೀಲ್ ರಿಫ್ಲೆಕ್ಟ್ ಶೀಟ್‌ಗಳನ್ನು ಅಳವಡಿಸಲಾಗಿದ್ದು, ಕನ್ನಡಿಯ ಮಾದರಿಯಲ್ಲಿ ಪ್ರತಿಬಿಂಬ ಕಾಣುವಂತೆ ವ್ಯವಸ್ಥೆ ಮಾಡಲಾಗಿದೆ. ಅದರ ಮುಂದೆ ನಿಂತವರ ಸಂಪೂರ್ಣ ಚಿತ್ರಣ ಹಿಂಬದಿಯವರಿಗೆ ಕಾಣುವಂತೆ ವಿನ್ಯಾಸಗೊಳಿಸಲಾಗಿದೆ.

ಕನ್ನಡಿಗಳ ಸುತ್ತ ಎಲ್ ಇಡಿ ಲೈಟ್‌ಗಳನ್ನು ಅಳವಡಿಸಲಾಗಿದ್ದು, ಸಂಜೆ ವೇಳೆ ಸ್ಟ್ರೀಟ್ ಲೈಟ್ ಆನ್ ಆದಾಗ ಅವು ಸಹ ಬೆಳಗುವಂತೆ ವ್ಯವಸ್ಥೆ ಮಾಡಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಮೂತ್ರ ವಿಸರ್ಜನೆ ಮಾಡುವ ಮೂಲಕ ಗಬ್ಬು ವಾಸನೆ ಸೃಷ್ಟಿಸುತ್ತಿದ್ದವರನ್ನು ತಡೆಯುವ ಉದ್ದೇಶದಿಂದ ಸುಮಾರು 9.5 ಲಕ್ಷ ವೆಚ್ಚದಲ್ಲಿ ಈ ಯೋಜನೆ ಜಾರಿಗೆ ತರಲಾಗಿದೆ. ರಾಜ್ಯದಲ್ಲೇ ಮೊದಲ ಬಾರಿಗೆ ಜಾರಿಯಾಗಿರುವ ಈ ಯೋಜನೆಯನ್ನು ಪ್ರಾಯೋಗಿಕವಾಗಿ ಮೈಸೂರು ಗ್ರಾಮಾಂತರ ಬಸ್ ನಿಲ್ದಾಣದ ಮುಂಭಾಗದ ಕಾಂಪೌಂಡ್‌ನಲ್ಲಿ ಅಳವಡಿಸಲಾಗಿದೆ.

ಇದರಿಂದಾಗಿ ಕಂಡ, ಕಂಡಲ್ಲಿ ಮೂತ್ರ ವಿಸರ್ಜನೆ ಮಾಡುವವರಿಗೆ ಅವರ ಪ್ರತಿಬಿಂಬ ಕನ್ನಡಿಯಲ್ಲಿ ಕಾಣಲಿದೆ. ಅಲ್ಲದೇ ಕನ್ನಡಿ ಮೂಲಕ ಯಾರು ಮೂತ್ರ ವಿಸರ್ಜನೆ ಮಾಡುತ್ತಾರೆ ಎಂಬುದು ಅವರ ಹಿಂಭಾಗದಲ್ಲಿ ಹಾದು ಹೋಗುವ ಜನರಿಗೆ ಗೊತ್ತಾಗಲಿದೆ. ಅವರು ಮೂತ್ರ ವಿಸರ್ಜನೆ ಮಾಡುವವರನ್ನು, ಮಾಡಲು ನಿಂತವರನ್ನು ಪ್ರಶ್ನಿಸಬಹುದು. ಇದರಿಂದಾಗಿ ಮೂತ್ರ ವಿಸರ್ಜನೆ ಮಾಡುವವರಿಗೆ ಮುಜುಗರ ವಾತ್ಸಾಂಟು ಮಾಡಬಹುದು. ಅಲ್ಲದೇ ಕನ್ನಡಿ ಮುಂದೆ ನಿಂತು ಮೂತ್ರ ವಿಸರ್ಜನೆ ಮಾಡುವುದಕ್ಕೆ ಯಾರೂ ಕೂಡ ಮನಸ್ಸು ಮಾಡಲಾರರು. ಹಾಗಾಗಿ ಮೂತ್ರ ವಿಸರ್ಜನೆ ಮಾಡುವುದನ್ನು ತಡೆಯಲು ಈ ಐಡಿಯಾ ವನ್ನು ಪ್ರಯೋಗಿಸಲಾಗಿದೆ. ಅದೇನು ಸರಿ, ಆದರೆ ಸಾರ್ವಜನಿಕರು, ಪ್ರವಾಸಿಗರು ಮೂತ್ರ ವಿಸರ್ಜನೆ ಮಾಡಲೆಂದು ಆಯಾ ಸ್ಥಳಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಲಾಗಿದೆಯೇ, ಅವುಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲಾಗುತ್ತಿದೆಯೇ ಎಂದು ಸಾರ್ವಜನಿಕರು ನಗರ ಪಾಲಿಕೆಯ ಅಧಿಕಾರಿಗಳನ್ನು ಪ್ರಶ್ನಿಸುತ್ತಿದ್ದಾರೆ. ಇದಕ್ಕೆ ಪಾಲಿಕೆಯ ಅಧಿಕಾರಿಗಳು ಉತ್ತರ ನೀಡಬೇಕಾಗಿದೆ.

ಹವಾಮಾನಕ್ಕೆ ತಕ್ಕಂತೆ ಜನರ ಸಜ್ಜಾಗಿಸಿ



• **ಯಲಹಂಕ:** ಬದಲಾಗುವ ಹವಾಮಾನವೊಡ್ಡುವ ಅಪಾಯದಿಂದ ತಪ್ಪಿಸಿಕೊಳ್ಳಲು ಹೊಂದಾಣಿಕೆಯೇ ಏಕೈಕ ಮಾರ್ಗ ಎಂದು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್‌ನ ನಿರ್ದೇಶಕ ಡಾ. ಶೈಲೇಶ್ ನಾಯಕ್ ಅಭಿಪ್ರಾಯಪಟ್ಟರು.

ಯಲಹಂಕದ ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ವಿನೂತನ ಅನ್ವೇಷಣೆಗಳ ಓಪನ್ ಹೌಸ್ ಎಕ್ಸ್ಪೋ ಸಮನ್ವಯ–2026ರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಹವಾಮಾನ ವೈಪರೀತ್ಯಗಳಿಗೆ ಸಿಲುಕಿ ಮನುಷ್ಯ ಕಂಗಾಲಾಗುವ ಬದಲು ಬದಲಾಗುವ ಹವಾಮಾನಕ್ಕೆ ಸಮರ್ಥ ರೀತಿಯಲ್ಲಿ ಹೊಂದಿಕೊಳ್ಳುವಂತೆ ನಮ್ಮ ಸಮಾಜದ ಜನರನ್ನು ಸಜ್ಜುಗೊಳಿಸಬೇಕು ಎಂದರು.

ಇದು ನಮ್ಮ ಅನ್ವೇಷಣೆ, ಸಂಶೋಧನೆಗಳ ಆಧಾರ ಸೂತ್ರವಾಗಬೇಕು. ನಾವು ಕ್ಷಾಮದ ಸ್ಥಿತಿಯಲ್ಲಿಯೂ ಬೆಳೆಯಬಹುದಾದ ಆಹಾರ ಧಾನ್ಯಗಳ ಬಗ್ಗೆ, ಸುಧಾರಿತ ನೀರಾವರಿ ವ್ಯವಸ್ಥೆಗಳ ಬಗ್ಗೆ ಮತ್ತು ಪುನರ್ ಉತ್ಪಾದಕ ಕೃಷಿ ಪದ್ಧತಿಯ ಬಗ್ಗೆ ಹೆಚ್ಚು ಗಮನಹರಿಸಬೇಕಿದೆ ಎಂದು ಹೇಳಿದರು.

ಎಕ್ಸ್ಪೋನಲ್ಲಿ ಅಂತಿಮ ವರ್ಷದ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಸಾದರಪಡಿಸಿದ 373 ತಾಂತ್ರಿಕ ಪ್ರತ್ಯಕ್ಷಿಕೆಗಳು ನೋಡುಗರ ಗಮನ ಸೆಳೆಯುವಂತಿದ್ದವು.

ಈ ವೇಳೆ ನಿಟ್ಟೆ ಶಿಕ್ಷಣ ಸಂಸ್ಥೆಗಳ ಟ್ರಸ್ಟಿ ರೋಹಿತ್ ಪೂಂಜ, ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಎಚ್.ಸಿ. ನಾಗರಾಜ್, ಸಮನ್ವಯ 2026 ಎಕ್ಸ್ಪೋ ಪ್ರಧಾನ ಸಂಯೋಜಕ ಡಾ. ಪ್ರಶಾಂತ್ ನಾಗರಾಜ್ ಸೇರಿದಂತೆ ಇತರರಿದ್ದರು.

ಗಂಗಾದೇವಿ ಜಾತ್ರೋತ್ಸವ



• **ವಿಜಯಪುರ:** ಪಟ್ಟಣದ ಇತಿಹಾಸ ಪ್ರಸಿದ್ಧ ಗಂಗಾದೇವಿ ಅಮ್ಮನವರ ಜಾತ್ರೆ ಹಾಗೂ ದೀಪಾರತಿ ಮಹೋತ್ಸವದ ಧಾರ್ಮಿಕ ಕಾರ್ಯಕ್ರಮಗಳಿಗೆ ಸಾಟ ಇಡುವ (ಘೋಷಣೆ ಮಾಡುವ) ಮೂಲಕ ಚಾಲನೆ ನೀಡಲಾಯಿತು.

ಮಂಗಳವಾರ ಬೆಳಿಗ್ಗೆ ದೇವಾಲಯದಲ್ಲಿ ಧ್ವಜಾರೋಹಣ ಹಾಗೂ ವಿಶೇಷ ಪೂಜೆಯನ್ನು ನೆರವೇರಿದ ನಂತರ, ಪಟ್ಟಣದ ಪ್ರಮುಖ ಬೀದಿಯಲ್ಲಿ ಸಾಟಿಡುವ ಕಾರ್ಯಕ್ರಮ ನಡೆಯಿತು. ಭಕ್ತರಿಂದ ವಿಶೇಷ ಪೊಂಗಲ್ ಸೇವೆ ಏರ್ಪಡಿಸಲಾಗಿತ್ತು. ಜಾತ್ರೆಯ ಅಂಗವಾಗಿ ದೇವಾಲಯದಲ್ಲಿ ಪ್ರತಿದಿನ ವಿಶೇಷ ಅಲಂಕಾರ, ಪೂಜೆ, ಭಜನೆ, ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ವಿಶೇಷವಾಗಿ ಮೇ 10 ರಂದು ರಾತ್ರಿ 108 ಕಳಸಗಳ ಹೋಮ, ಮಹಾಭಿಷೇಕ, ಸಹಸ್ರ ನಾಮಾರ್ಚನೆ, ಮೇ 11 ರಂದು ಬಾವಿಯಿಂದ ಜಲಗಂಗಮ್ಮ ಕರೆತಂದು ಪ್ರತಿಷ್ಠಾಪನೆ ಹಾಗೂ ಬಳೆ ತೊಡಿಸುವ ಕಾರ್ಯಕ್ರಮ ನಡೆಯಲಿದೆ. ಮೇ 12 ರಂದು ಬೆಳಿಗ್ಗೆ 8 ರಿಂದ ರಾತ್ರಿ 9 ಗಂಟೆಯವರೆಗೆ ಸಾರ್ವಜನಿಕರಿಂದ 'ದೀಪಾರತಿ' ಬೆಳಗುವ ಮಹೋತ್ಸವ, ಮೇ 13 ರಂದು ಮಧ್ಯಾಹ್ನ ಅನ್ನಸಂತರ್ಪಣೆ, ಸಂಜೆ ಜಲಗಂಗಮ್ಮನವರ ವಿಸರ್ಜನೆ ಹಾಗೂ ಬೆಳ್ಳಿರಥದಲ್ಲಿ ಪಲ್ಲಕ್ಕಿ ಉತ್ಸವ ಹಮ್ಮಿಕೊಳ್ಳಲಾಗಿದೆ.

ಮುಂದಿನ ಮಂಗಳವಾರ ನಡೆಯಲಿರುವ ಗಂಗಾ ತಾಯಿ ಜಾತ್ರೆಯನ್ನು ಊರಿನ ಎಲ್ಲಾ ಸಾರ್ವಜನಿಕರು ಸೇರಿ ಭಕ್ತಿ–ಶ್ರದ್ಧೆಯಿಂದ ಯಶಸ್ವಿಗೊಳಿಸಬೇಕು ಎಂದು ಪುರಸಭೆ ಸದಸ್ಯ ಎಂ.ಸತೀಶ್ ಕುಮಾರ್ ಮನವಿ ಮಾಡಿದರು. ಗಂಗಾದೇವಿ ಅಮ್ಮನವರ ಜಾತ್ರೆ, ದೀಪಾರತಿ ಸೇವಾ ಟ್ರಸ್ಟ್ ಅಧ್ಯಕ್ಷ ಎಂ.ನಾಗರಾಜ್, ಗೌರವಾಧ್ಯಕ್ಷೆ ಅನ್ನಪೂರ್ಣಮ್ಮ, ಪಿ.ಸಂಪತ್ತು ಕುಮಾರ್, ಕೆ.ಮುನಿರಾಜು, ವೆಂಕಟೇಶ್, ವಕೀಲ ವೆಂಕಟಗಿರಿಯಪ್ಪ, ಕೆ.ಎಂ.ಮಧು, ಮುನಿರಾಜು, ಅಂಜನಪ್ಪ, ಎಸ್.ನಾರಾಯಣಸ್ವಾಮಿ, ಸುಧಾಕರ್, ಎಸ್.ನರಸಿಂಹಮೂರ್ತಿ ಪ್ರಮುಖರಿದ್ದರು.

ಕರ್ತವ್ಯ ಲೋಪ: ಇಬ್ಬರು ವೈದ್ಯರ ಅಮಾನತು

• **ಬೆಂಗಳೂರು:** ಕರ್ತವ್ಯಲೋಪ ಮತ್ತು ದುರ್ನಡತೆ ಆರೋಪದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಇಬ್ಬರು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ಸರ್ಕಾರಿ ಸೇವೆಯಿಂದ ಅಮಾನತುಗೊಳಿಸಿ ಆರೋಗ್ಯ ಇಲಾಖೆ ಆದೇಶಿಸಿದೆ. ಚಿತ್ರದುರ್ಗ ಜಿಲ್ಲೆಯ ವೈದ್ಯಾಧಿಕಾರಿ ಡಾ. ಚಂದ್ರಮೌಳಿ ಎಸ್. ಅವರು ಸಮುದಾಯ ಆರೋಗ್ಯ ಕೇಂದ್ರದ ಅಡುಗೆ ಕೋಣೆಯಲ್ಲಿ ಮಾದಕದ್ರವ್ಯ ಮತ್ತು ಮದ್ಯಪಾನಗಳಂತಹ ಚಟುವಟಿಕೆ ಕಂಡುಬಂದಿದೆ. ಹಗಲು–ರಾತ್ರಿ ಮದ್ಯಪಾನ ಮಾಡಿ ಹಾಗೂ ಗುಟ್ಕ ಸೇವಿಸಿ ಕರ್ತವ್ಯ ವೇಳೆಯಲ್ಲಿ ಬರುತ್ತಾರೆ ಎಂದು ಆಸ್ಪತ್ರೆ ಸಿಬ್ಬಂದಿ ಲಿಖಿತ ಹೇಳಿಕೆ ನೀಡಿದ್ದಾರೆ. ಆದ್ದರಿಂದ ಅವರ ವಿರುದ್ಧದ ಕರ್ತವ್ಯ ಲೋಪ, ದುರ್ನಡತೆ ಹಾಗೂ ನಿರ್ಲಕ್ಷ್ಯತೆ ತೋರಿದ್ದು, ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಅವರನ್ನು ಅಮಾನತುಗೊಳಿಸಲಾಗಿದೆ. ಅದರಂತೆ, ಮೈಸೂರು ತಾಲೂಕಿನ ಮೆಲ್ಲಹಳ್ಳಿಯ ವೈದ್ಯಾಧಿಕಾರಿ ಡಾ. ಅನಿಲ್ ಕುಮಾರ್ ಕರ್ತವ್ಯದ ವೇಳೆ ಮದ್ಯಪಾನ ಮಾಡಿ, ಸಾರ್ವಜನಿಕರೊಂದಿಗೆ ಜಗಳವಾಡುವುದು, ಅಸಭ್ಯವಾಗಿ ಮಾತನಾಡಿರುವ ಹಿನ್ನೆಲೆ ಕರ್ತವ್ಯಲೋಪ ಎಸಗಿರುವುದು ಕಂಡುಬಂದಿದೆ. ಆದ್ದರಿಂದ ಅಮಾನತುಗೊಳಿಸಲಾಗಿದೆ ಎಂದು ಆರೋಗ್ಯ ಇಲಾಖೆಯ ಶಿಸ್ತು ಪ್ರಾಧಿಕಾರಿ ಮತ್ತು ಆಯುಕ್ತ ಗುರುದತ್ತ ಹೆಗಡೆ ತಿಳಿಸಿದ್ದಾರೆ.

ಬೇಳೆ ಕಾಳು ಉತ್ಪಾದನೆ ಹೆಚ್ಚಾಗಲಿ



» ಮುಂಗಾರಿನ ಬೇಳೆ ಕಾಳು ರಾಷ್ಟ್ರೀಯ ವಾರ್ಷಿಕ ಕಾರ್ಯಾಗಾರ

• **ಬೆಂಗಳೂರು:** ದೇಶದಲ್ಲಿ ಬೇಳೆ ಕಾಳುಗಳ ಉತ್ಪಾದನೆ, ಬೆಳೆ ಪ್ರದೇಶ ಹಾಗೂ ಉತ್ಪಾದಕತೆ ಹೆಚ್ಚಿಸುವ ಅಗತ್ಯವಿದೆ ಎಂದು ಹೊಸದಿಲ್ಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಮಹಾ ನಿರ್ದೇಶಕ ಡಾ. ಎಂ. ಎಲ್. ಜಾಟ್ ಅಭಿಪ್ರಾಯಪಟ್ಟರು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಹಾಗೂ ಭಾರತೀಯ ಕೃಷಿ ಅನುಸಂಧಾನ ಪರಿಷತ್ ಸಹಯೋಗದಲ್ಲಿ ಆಯೋಜಿಸಿದ್ದ ಮುಂಗಾರಿನ ಬೇಳೆ ಕಾಳು ಬೆಳೆಗಳ ಮೂರು ದಿನಗಳ ರಾಷ್ಟ್ರೀಯ ವಾರ್ಷಿಕ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿ ಅವರು, ಪ್ರಸ್ತುತ ಭಾರತ ಉತ್ಪಾದನೆ ಮತ್ತು ಬಳಕೆಯಲ್ಲಿ ಮುಂಚೂಣಿಯಲ್ಲಿದ್ದರೂ, ಸುಮಾರು ಶೇ.15 ಬೇಳೆ ಕಾಳುಗಳನ್ನು ಆಮದು ಮಾಡಿಕೊಳ್ಳುತ್ತಿರುವುದು ಸವಾಲಾಗಿದೆ. ಬೇಳೆ ಕಾಳು ಆಧಾರಿತ ಕೃಷಿ ಆಹಾರ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಅಗತ್ಯವಿದೆ ಎಂದು ಅವರು ಹೇಳಿದರು.

ವಿವಿ ಕುಲಪತಿ ಡಾ.ಎಸ್.ವಿ.ಸುರೇಶ್ ಮಾತನಾಡಿದ ಅವರು, ದ್ವಿದಳ ಧಾನ್ಯಗಳ ಕೃಷಿಯನ್ನು ಲಾಭದಾಯಕಗೊಳಿಸಲು ಹೆಚ್ಚಿನ ಇಳುವರಿ ನೀಡುವ ಹೊಸ ತಳಿಗಳ ಅಭಿವೃದ್ಧಿ ಅಗತ್ಯವಿದೆ. ಸ್ಪೀಡ್ ಬ್ರೀಡಿಂಗ್ ತಂತ್ರಜ್ಞಾನವನ್ನು ಅಳವಡಿಸಿಕೊಂಡು ತಳಿ ಅಭಿವೃದ್ಧಿಯನ್ನು ವೇಗಗೊಳಿಸುವುದು ಕೃಷಿ ಕ್ಷೇತ್ರಕ್ಕೆ ಮಹತ್ವದ ಹೆಜ್ಜೆಯಾಗಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಷ್ಟ್ರೀಯ ದ್ವಿದಳ ಧಾನ್ಯ ಮಿಷನ್‌ನ ಜಂಟಿ ಕಾರ್ಯದರ್ಶಿ ಸಂಜಯ್ ಅಗರವಾಲ್, ಐಸಿಎಆರ್ ಸಹಾಯಕ ಮಹಾ ನಿರ್ದೇಶಕ ಡಾ.ಸಂಜೀವ್, ಐಐಪಿಆರ್ ನಿರ್ದೇಶಕ ಡಾ. ಜಿ.ಪಿ.ದೀಕ್ಷಿತ್ ಸೇರಿದಂತೆ, ದೇಶದ ವಿವಿಧ ರಾಜ್ಯಗಳಿಂದ ಆಗಮಿಸಿದ್ದ 250ಕ್ಕೂ ಹೆಚ್ಚು ವಿಜ್ಞಾನಿಗಳು ಭಾಗವಹಿಸಿದ್ದರು.

ವಿಜಯಪುರದಲ್ಲಿ ಬಿಜೆಪಿ ಕಾರ್ಯಕರ್ತರ ವಿಜಯೋತ್ಸವ

ಮಮತಾ ಬ್ಯಾನರ್ಜಿ ದುರಾಡಳಿತಕ್ಕೆ ಸಿಕ್ಕ ಫಲ



• **ವಿಜಯಪುರ:** ಪಂಚರಾಜ್ಯಗಳ ಚುನಾವಣಾ ಫಲಿತಾಂಶದಲ್ಲಿ ಬಿಜೆಪಿ ಸಾಧನೆಗೆ ಹಾಗೂ ಶೃಂಗೇರಿ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆಯಲ್ಲಿ ಬಿಜೆಪಿಯ ಡಿ.ಎನ್.ಜೀವರಾಜ್ ಅವರ ಗೆಲುವು ಸಂಭ್ರಮಿಸಿ ಪಟ್ಟಣದ ಶಿವಗಣೇಶ ಸರ್ಕಲ್‌ನಲ್ಲಿ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.

ವಿಜಯಪುರ ಟೌನ್ ಬಿಜೆಪಿ ಅಧ್ಯಕ್ಷ ವೆಂಕಟೇಶ್ ಪ್ರಭು ಮಾತನಾಡಿ, ಧರ್ಮವನ್ನು ತುಳಿಯಲು ಹೊರಟವರಿಗೆ ಕರ್ಮ ಕಾಡದೆ ಬಿಡದು. ಪಶ್ಚಿಮ ಬಂಗಾಳದಲ್ಲಿ ಹಿಂದೂ ಸಂಸ್ಕೃತಿಯನ್ನು ಹತ್ತಿಕ್ಕಲು ಯತ್ನಿಸಿದ ಮಮತಾ ಬ್ಯಾನರ್ಜಿ ಅವರಿಗೆ ಇಂದು ಕರ್ಮದ ರೂಪದಲ್ಲಿ ಪ್ರತಿಫಲ ಸಿಕ್ಕಿದೆ ಎಂದು ತಿಳಿಸಿದರು. ಬಿಜೆಪಿ ಒಬಿಸಿ ಮಾಜಿ ಜಿಲ್ಲಾಧ್ಯಕ್ಷ ಕನಕರಾಜು ಮಾತನಾಡಿ, ಅಸ್ಸಾಂ, ಪುದುಚೇರಿ, ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಬಿಜೆಪಿ ಅಧಿಕಾರಕ್ಕೇರಿದ್ದಲ್ಲದೇ, ತಮಿಳುನಾಡು ಮತ್ತು ಕೇರಳ ರಾಜ್ಯದಲ್ಲಿ ಬಿಜೆಪಿ ಖಾತೆ ತೆರೆಯುವ ಮೂಲಕ ಪಕ್ಷದ ವರ್ಚಸ್ಸು ವಿಸ್ತಾರಗೊಂಡಿರುವುದು ಸಂತಸದ ವಿಚಾರ ಎಂದು ಹೇಳಿದರು. ಅಂಚೆ ಮತ ಪತ್ರಗಳ ಮತ ಎಣಿಕೆಯಲ್ಲಿ ಶೃಂಗೇರಿ ಕ್ಷೇತ್ರದ ಬಿಜೆಪಿಯ ಡಿ.ಎನ್.ಜೀವರಾಜ್ ಅವರ ಗೆಲುವು ಪಕ್ಷದ ಕಾರ್ಯಕರ್ತರ ಶ್ರಮಕ್ಕೆ ಸಂದ ಜಯ ಎಂದು ಹೇಳಿದರು.

ಬಿಜೆಪಿ ತಾಲೂಕು ಉಪಾಧ್ಯಕ್ಷ ರಾಮಕೃಷ್ಣ ಹೆಗಡೆ ಮಾತನಾಡಿ, ಪಶ್ಚಿಮ ಬಂಗಾಳದ ಈ ಗೆಲುವು ಪಕ್ಷದ ಸಂಸ್ಥಾಪಕರಾದ ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ಆತ್ಮಕ್ಕೆ ಶಾಂತಿ ನೀಡಿದೆ. ಇದು ಅವರ ಸಿದ್ಧಾಂತಕ್ಕೆ ಸಂದ ಜಯ ಎಂದು ತಿಳಿಸಿದರು.

ಮಾಜಿ ಪ್ರಧಾನ ಕಾರ್ಯದರ್ಶಿ ರವಿಕುಮಾರ್ ಮಾತನಾಡಿ, ಪಶ್ಚಿಮ ಬಂಗಾಳದಲ್ಲಿ ದೌರ್ಜನ್ಯದಿಂದ ನಕಲಿ ಮತದಾರರನ್ನು ಇಟ್ಟುಕೊಂಡು ಚುನಾವಣೆ ಗೆಲ್ಲುತ್ತಿದ್ದ ಕಾಲ ಮುಗಿದಿದೆ. ಈಗ ಪಾರದರ್ಶಕ ರಾಜಕಾರಣ ಆರಂಭವಾಗಿದೆ ಎಂದು ತಿಳಿಸಿದರು. ಬಿಜೆಪಿ ತಾಲ್ಲೂಕು ಉಪಾಧ್ಯಕ್ಷ ಭಗವಾನ್, ಮುಖಂಡರಾದ ರವಿಕುಮಾರ್, ಮುನೀಂದ್ರ, ಬುಲೆಟ್ ರಾಮಚಂದ್ರಪ್ಪ, ಆಟೋ ಮೊಬೈಲ್ ನಾರಾಯಣಸ್ವಾಮಿ, ಮಂಜುನಾಥ್, ಶಾಮಣ್ಣ, ರಕ್ಷಿತ್, ವರದರಾಜು, ಪವನ್, ಸುಪ್ರೀತ್, ಮುನಿಕೃಷ್ಣಪ್ಪ, ಚಂದ್ರಣ್ಣ, ಅಜಿತ್, ಚಂದ್ರಶೇಖರ್, ಸೃಜನ್, ನಟರಾಜ್, ಶ್ರೀಕಾಂತ್, ಮಹಿಳಾ ಮೋರ್ಚಾದ ವೀಣಾ, ತಾಯಮ್ಮ, ಪ್ರೇಮಾ, ಭಾಗ್ಯಮ್ಮ, ದಿವ್ಯಾಶ್ರೀ ಇದ್ದರು.

ಪೋಷಕರಲ್ಲಿ ಶಾಸಕ ಧೀರಜ್ ಮುನಿರಾಜು ಮನವಿ

ಸರಕಾರಿ ಕಾಲೇಜಿಗೆ ಮಕ್ಕಳನ್ನು ದಾಖಲಿಸಿ

• **ದೊಡ್ಡಬಳ್ಳಾಪುರ:** ತಾಲೂಕಿನ ಕೊನಘಟ್ಟ, ಮಾದಗೊಂಡನಹಳ್ಳಿ, ಮಧುರೆ ಮತ್ತು ದೊಡ್ಡಬೆಳವಂಗಲದಲ್ಲಿನ ಸರ್ಕಾರಿ ಪಿಯು ಕಾಲೇಜುಗಳಿಗೆ ಉತ್ತಮ ಸೌಕರ್ಯ ಲಭ್ಯ ಒದಗಿಸಲಾಗಿದೆ. ಪೋಷಕರು ತಮ್ಮ ಮಕ್ಕಳನ್ನು ದಾಖಲಿಸಬೇಕೆಂದು ಶಾಸಕ ಧೀರಜ್ ಮುನಿರಾಜು ಮನವಿ ಮಾಡಿದರು.

ಕಾಲೇಜಿಗೆ ಭೇಟಿ ನೀಡಿದ ಅವರು ಮಾತನಾಡಿ, ಸಾಸಲು ಹೋಬಳಿ ತಾಲೂಕು ಕೇಂದ್ರದಿಂದ ಸುಮಾರು 28 ಕಿಮೀ ದೂರದಲ್ಲಿದೆ. ಈ ಹೋಬಳಿಯಲ್ಲಿ ಸುಮಾರು 58 ಹಳ್ಳಿಗಳಿವೆ. ಇಲ್ಲಿ ಯಾವುದೇ ಖಾಸಗಿ, ಸರ್ಕಾರಿ, ಸರ್ಕಾರ ಅನುದಾನಿತ ಪಿಯು ಕಾಲೇಜುಗಳು ಇರಲಿಲ್ಲ ಎಂದರು. ಪಿಯು ಕಾಲೇಜು ಆರಂಭಕ್ಕೆ ಹಲವು ಮನವಿಯನ್ನು ಸಂಬಂಧಪಟ್ಟವರಿಗೆ ನೀಡಲಾಗಿತ್ತು. ಈ ಗ್ರಾಮಗಳ ವಿದ್ಯಾರ್ಥಿಗಳು ಪ್ರೌಢ ಶಾಲೆ ಮುಗಿಸಿ ಪಿಯು ವಿದ್ಯಾಭ್ಯಾಸಕ್ಕಾಗಿ ದೂರದ ಊರುಗಳಿಗೆ ಹೋಗಬೇಕಾಗಿತ್ತು. ಇದೀಗ ಚನ್ನವೀರನಹಳ್ಳಿಯಲ್ಲಿ ಪಿಯು ಕಾಲೇಜು ಆರಂಭದಿಂದ ಎಲ್ಲರಿಗೂ ಅನುಕೂಲವಾಗಲಿದೆ ಎಂದು ಸ್ಥಳೀಯ ಜನರು ಸಂತಸ ವ್ಯಕ್ತಪಡಿಸಿದರು. ಶ್ರೀ ರಾಮನಹಳ್ಳಿ ಗ್ರಾಮಸ್ಥರು 2020ನೇ ಸಾಲಿನಲ್ಲೇ ಪದವಿ ಪೂರ್ವ ಕಾಲೇಜು ಬೇಕೆಂದು ಮನವಿ ಕೊಟ್ಟಿದ್ದರು



ಹಲವಾರು ವರ್ಷದ ಸತತ ಪ್ರಯತ್ನದಿಂದ ಸಾಸಲು ಹೋಬಳಿಯಲ್ಲಿ ಪಿಯು ಕಾಲೇಜು ಪ್ರಾರಂಭವಾಗಿದೆ. ಇದಕ್ಕೆ ಸಹಕಾರ ನೀಡಲಾಗಿದೆಂದರು. ವಿದ್ಯಾರ್ಥಿ ರಂಜಿತ್ ಮಾತನಾಡಿ, ಸದ್ಯ ವಾಣಿಜ್ಯ ವಿಭಾಗ ಮಾತ್ರ ಪ್ರಾರಂಭ ಮಾಡಲಾಗಿದೆ. ಮುಂದಿನ ದಿನದಲ್ಲಿ ವಿಜ್ಞಾನ ಮತ್ತು ಕಲಾ ವಿಭಾಗವನ್ನು ಆರಂಭಿಸಿದರೆ ವಿದ್ಯಾರ್ಥಿಗಳಿಗೆ ಉಪಯೋಗವಾಗುತ್ತದೆ ಎಂದು ಹೇಳಿದರು. ಪ್ರಾಂಶುಪಾಲ ಕೇಶವಮೂರ್ತಿ ಮಾತನಾಡಿ, ಕಾಲೇಜು ಪ್ರಾರಂಭವಾಗಿರುವುದರಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಸಾಕಷ್ಟು ಅನುಕೂಲವಾಗಲಿದೆ. ಇಂದಿನಿಂದ ದಾಖಲಾತಿಗಳು ಪ್ರಾರಂಭವಾಗಿವೆ. ನುರಿತ ಉಪನ್ಯಾಸಕರಿದ್ದಾರೆ. ವಾಣಿಜ್ಯ ಕೋರ್ಸ್ ಅರ್ಥಶಾಸ್ತ್ರ, ವ್ಯವಹಾರಿಕ ಅಧ್ಯಯನ, ಲೆಕ್ಕಶಾಸ್ತ್ರ, ಗಣಕ ವಿಜ್ಞಾನ ಪ್ರಾರಂಭಿಸಲಾಗಿದೆ. ಮುಂದಿನ ದಿನದಲ್ಲಿ ಕಲಾವಿಭಾಗ, ವಿಜ್ಞಾನ ಕೋರ್ಸ್ ಪ್ರಾರಂಭಕ್ಕೆ ಅವಕಾಶ ಮಾಡಿಕೊಡಲಾಗುವುದು ಎಂದು ಶಿಕ್ಷಣ ಇಲಾಖೆ ತಿಳಿಸಿದೆ ಎಂದು ತಿಳಿಸಿದರು.

ಕಿರುಸುದ್ದಿ

ಬಿಡಿಎಗೆ ಪ್ರವೀಣ್ ಲಿಂಗಯ್ಯ ನೇಮಕ

• **ಬೆಂಗಳೂರು:** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಮಹತ್ವದ ಹುದ್ದೆಯಾದ ಎಂಜಿನಿಯರ್ ಸದಸ್ಯ ಸ್ಥಾನಕ್ಕೆ ರಾಜ್ಯ ಸರ್ಕಾರ ಪ್ರವೀಣ್ ಲಿಂಗಯ್ಯ ಅವರನ್ನು ನೇಮಕ ಮಾಡಿ ಆದೇಶ ಹೊರಡಿಸಿದೆ. ನಗರಾಭಿವೃದ್ಧಿ ಇಲಾಖೆಯ ಈ ನಿರ್ಧಾರದಿಂದಾಗಿ ಬಿಡಿಎನ ಪ್ರಮುಖ ಮೂಲಸೌಕರ್ಯ ಯೋಜನೆಗಳಿಗೆ ಈಗ ಹೊಸ ವೇಗ ದೊರೆಯುವ ನಿರೀಕ್ಷೆ ಮೂಡಿದೆ. ಬೆಂಗಳೂರಿನ ಸಂಚಾರ ದಟ್ಟಣೆ ನಿವಾರಣೆಗೆ ಪೂರಕವಾದ ಪೆರಿಫೆರಲ್ ರಿಂಗ್ ರೋಡ್, ದೀರ್ಘಕಾಲದಿಂದ ಬಾಕಿ ಉಳಿದಿರುವ ವಸತಿ ಬಡಾವಣೆಗಳ ಅಭಿವೃದ್ಧಿ ಹಾಗೂ ಸ್ಮಾರ್ಟ್ ಸಿಟಿ ಮಾದರಿಯ ಮೂಲಸೌಕರ್ಯಗಳನ್ನು ರೂಪಿಸುವ ಹೊಣೆಗಾರಿಕೆ ಈಗ ಪ್ರವೀಣ್ ಲಿಂಗಯ್ಯ ಅವರ ಹೆಗಲ ಮೇಲಿದೆ. ನಗರದ ಬೆಳೆಯುತ್ತಿರುವ ಬೇಡಿಕೆಗಳಿಗೆ ಅನುಗುಣವಾಗಿ ತಾಂತ್ರಿಕ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು ಇವರ ಮುಂದಿರುವ ದೊಡ್ಡ ಸವಾಲಾಗಿದೆ. ಈ ಹಿಂದೆ ವಿವಿಧ ಇಲಾಖೆಗಳಲ್ಲಿ ಪ್ರಮುಖ ಜವಾಬ್ದಾರಿಗಳನ್ನು ನಿಭಾಯಿಸಿರುವ ಪ್ರವೀಣ್ ಲಿಂಗಯ್ಯ ಪಾರದರ್ಶಕತೆ ಮತ್ತು ಕಾಲಮಿತಿಯೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ಹೆಸರುವಾಸಿಯಾಗಿದ್ದು, ಭ್ರಷ್ಟಾಚಾರ ಮುಕ್ತ ಆಡಳಿತಕ್ಕೆ ಆದ್ಯತೆ ನೀಡುವ ನಿರೀಕ್ಷೆಯಿದೆ.

4 ಕೋಟಿ ರೂ. ಮೌಲ್ಯದ ಗಾಂಜಾ ವಶ: ಸೆರೆ

• **ಬೆಂಗಳೂರು:** ವಿದೇಶದಿಂದ ಅಕ್ರಮವಾಗಿ ಹೈಡ್ರೋಪೋನಿಕ್ ಗಾಂಜಾವನ್ನು ಸಾಗಿಸುತ್ತಿದ್ದ ಮೂವರು ಅಂತರಾಷ್ಟ್ರೀಯ ಪೆಡ್ಲರ್‌ಗಳನ್ನು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ಬಂಧಿಸಿದ್ದಾರೆ. ಬಂಧಿತರಿಂದ ಅಂದಾಜು 4ಕೋಟಿ ರೂ. ಮೌಲ್ಯದ ಗಾಂಜಾವನ್ನು ಜಪ್ತಿ ಮಾಡಲಾಗಿದೆ. ಬ್ಯಾಂಕಾಕ್‌ನಿಂದ ಬೆಂಗಳೂರಿಗೆ ಆಗಮಿಸಿದ ಮೂವರು ಪ್ರಯಾಣಿಕರ ಮೇಲೆ ಅನುಮಾನಗೊಂಡ ಕಸ್ಟಮ್ಸ್ ಅಧಿಕಾರಿಗಳು ತಪಾಸಣೆಗೆ ಒಳಪಡಿಸಿದಾಗ ಈ ಅಕ್ರಮ ದಂಧೆ ಬೆಳಕಿಗೆ ಬಂದಿದೆ. ಆರೋಪಿಗಳು ತಮ್ಮ ಚೆಕ್-ಇನ್ ಬ್ಯಾಗೇಜ್‌ಗಳಲ್ಲಿ ಚಾಣಾಕ್ಷತನದಿಂದ ಗಾಂಜಾವನ್ನು ಅಡಗಿಟ್ಟು ಸಾಗಿಸುತ್ತಿದ್ದರು. ಬಂಧಿತ ಪ್ರಯಾಣಿಕರಿಂದ ಅಧಿಕಾರಿಗಳು ಒಟ್ಟು 12.96 ಕೆ.ಜಿ. ತೂಕದ ಹೈಡ್ರೋಪೋನಿಕ್ ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ. ಇದರ ಒಟ್ಟು ಮೌಲ್ಯ ಸುಮಾರು 4 ಕೋಟಿ ರೂ. ಎಂದು ಅಂದಾಜಿಸಲಾಗಿದೆ. ಆರೋಪಿಗಳ ಮೇಲೆ ಮಾದಕ ದ್ರವ್ಯ ವಿರೋಧಿ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದ್ದು, ಈ ಜಾಲದ ಹಿಂದೆ ಯಾರಿದ್ದಾರೆ ಎಂಬ ಬಗ್ಗೆ ಹೆಚ್ಚಿನ ತನಿಖೆ ಮುಂದುವರಿದಿದೆ. ಇತ್ತೀಚಿನ ದಿನದಲ್ಲಿ ಬ್ಯಾಂಕಾಕ್ ಮಾರ್ಗವಾಗಿ ಬೆಂಗಳೂರಿಗೆ ಹೈಡ್ರೋಪೋನಿಕ್ ಗಾಂಜಾ ಸರಬರಾಜು ಮಾಡುವ ಜಾಲ ಸಕ್ರಿಯವಾಗಿದ್ದು, ಅಧಿಕಾರಿಗಳು ವಿಮಾನ ನಿಲ್ದಾಣದಲ್ಲಿ ಬಿಗಿ ಕಾವಲು ಮತ್ತು ತಪಾಸಣೆಯನ್ನು ತೀವ್ರಗೊಳಿಸಿದ್ದಾರೆ.

ಶಾಂತಿ ಹೆಸರಲ್ಲಿ ಬಂಧನ ಕಾನೂನುಬಾಹಿರ

• **ಬೆಂಗಳೂರು:** ಸಾರ್ವಜನಿಕ ಶಾಂತಿ ಕಾಪಾಡುವ ನೆಪದಲ್ಲಿ ಸೂಕ್ತ ಕಾರಣಗಳಿಲ್ಲದೇ ಮತ್ತು ಕಾನೂನು ಪ್ರಕ್ರಿಯೆಗಳನ್ನು ಅನುಸರಿಸದೆ ವ್ಯಕ್ತಿಯನ್ನು ಬಂಧಿಸುವುದು ಸಂವಿಧಾನ ಬಾಹಿರ ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ಉಡುಪಿ ಜಿಲ್ಲಾಧಿಕಾರಿಗಳು ವ್ಯಕ್ತಿಯೊಬ್ಬರ ವಿರುದ್ಧ ಗೂಂಡಾ ಕಾಯ್ದೆಯಲ್ಲಿ ಹೊರಡಿಸಿದ್ದ ಬಂಧನ ಆದೇಶವನ್ನು ರದ್ದುಪಡಿಸಿ ಆದೇಶಿಸಿದೆ. ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಕಬೀರ್(46) ಎಂಬವರನ್ನು ಗೂಂಡಾ ಕಾಯ್ದೆಯಲ್ಲಿ ಬಂಧಿಸಿದ್ದ ಕ್ರಮ ಪ್ರಶ್ನಿಸಿ ಆತನ ಪತ್ನಿ ದಿಲ್ ಶಾದ್ ಎಂಬುವರು ಹೈಕೋರ್ಟ್‌ಗೆ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾ.ಅನು ಶಿವರಾಮನ್ ಮತ್ತು ನ್ಯಾ.ತಾರಾ ವಿತಸ್ತ ಗಂಜು ಅವರಿದ್ದ ವಿಭಾಗೀಯ ಈ ಆದೇಶ ನೀಡಿದೆ. 2025ರ ಜು.10ರಂದು ಅರ್ಜಿದಾರಳ ಪತಿಯನ್ನು ಗೂಂಡಾ ಕಾಯ್ದೆಯಡಿ ಬಂಧಿಸಲಾಗಿದೆ. ಆದರೆ, ಕಾಯ್ದೆಯ ಯಾವ ನಿಯಮಗಳ ಅಡಿ ಬಂಧನ ಮಾಡಲಾಗಿದೆ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲವಾಗಿದೆ. ಈ ಅಂಶ ಅಧಿಕಾರಿಗಳ ವಿವೇಚನಾ ಶಕ್ತಿಯ ಕೊರತೆಯನ್ನು ತೋರಿಸಲಿದೆ ಎಂದು ಪೀಠ ಹೇಳಿದೆ. ಬಂಧಿತ ಕಬೀರ್ ವಿರುದ್ಧ 17 ಪ್ರಕರಣಗಳಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಆದರೆ, ಅವುಗಳಲ್ಲಿ ಬಹುತೇಕ ಹಾಗೂ ಶೇ.50 ಕ್ಕಿಂತ ಹೆಚ್ಚು ಪ್ರಕರಣಗಳಲ್ಲಿ ಖುಲಾಸೆಯಾಗಿದ್ದಾರೆ. ಮೂರು ಪ್ರಕರಣಗಳಲ್ಲಿ ರಾಜಿ ಸಂದಾನ ಮಾಡಿಕೊಂಡಿದ್ದಾರೆ. ಇನ್ನುಳಿದ ನಾಲ್ಕು ಪ್ರಕರಣಗಳು ತನಿಖಾ ಹಂತದಲ್ಲಿವೆ. ಅಲ್ಲದೆ, ಬಂಧಿತ ಆರೋಪಿ ವಿರುದ್ಧದ ಹೆಚ್ಚಿನ ಪ್ರಕರಣಗಳು ಹಸುಗಳ ಕಳ್ಳತನ ಮತ್ತು ದನಗಳ ಅಕ್ರಮ ಸಾಗಣೆಗೆ ಸಂಬಂಧಿಸಿದ್ದಾಗಿವೆ. ಈ ನೈಜ ಸ್ಥಿತಿಯನ್ನು ಗಮನಿಸದೆ ಕೇವಲ ಪ್ರಕರಣಗಳ ಪಟ್ಟಿ ನೋಡಿ ಬಂಧನಕ್ಕೆ ಆದೇಶಿಸಿರುವುದು ಸರಿಯಾದ ಕ್ರಮವಲ್ಲ ಎಂದು ಪೀಠ ತನ್ನ ಆದೇಶದಲ್ಲಿ ತಿಳಿಸಿದೆ. ಆರೋಪಿಗಳ ವಿರುದ್ಧದ ಆರೋಪಗಳನ್ನು ಸಾಮಾನ್ಯ ಕ್ರಿಮಿನಲ್ ತಡೆಗಟ್ಟಬಹುದಾಗಿದ್ದಲ್ಲಿ ಗೂಂಡಾ ಕಾಯ್ದೆಯಡಿ ಬಂಧಿಸುವುದಕ್ಕೆ ಅವಕಾಶವಿಲ್ಲ ಎಂಬುದಾಗಿ ಮಲ್ಲಾಡ ಕೆ.ಶ್ರೀರಾಮ್ ವಿರುದ್ಧದ ತೆಲಂಗಾಣ ಸರ್ಕಾರ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನೀಡಿರುವ ಆದೇಶ ಉಲ್ಲೇಖಿಸಿರುವ ಪೀಠ ಜಿಲ್ಲಾಧಿಕಾರಿಗಳ ಆದೇಶವನ್ನು ರದ್ದುಪಡಿಸಿದೆ.

ಹುತಾತ್ಮ ಅರ್ಜುನ ಆನೆ ಪ್ರತಿಮೆ ಉದ್ಘಾಟನೆ: ಅರಣ್ಯ ಸಚಿವ ಈಶ್ವರ ಖಂಡ್ರೆ ಗುಣಗಾನ

ಅರ್ಜುನ ಆನೆ ನೆನಪು ಚಿರಸ್ಥಾಯಿ



• **ಹಾಸನ:** ಪ್ರವಾಸಿಗರ ಸುರಕ್ಷತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಹುತಾತ್ಮ ಅರ್ಜುನನ ಸ್ಮಾರಕ ಸ್ಥಳಕ್ಕೆ ಹೋಗಲು ಈಗ ನಿರ್ಮಿಸಿರುವ ಕಚ್ಚಾ ರಸ್ತೆಯಲ್ಲಿ ಪಕ್ಕಾ ರಸ್ತೆ ಮಾಡುವ ಬಗ್ಗೆ ಕ್ರಮ ವಹಿಸಲಾಗುವುದು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಹೇಳಿದರು.

ಸಕಲೇಶಪುರ ತಾಲೂಕಿನ ಯಸಳೂರಿನ ದಬ್ಬಳಕಟ್ಟೆ ನೆಡುತೋಪಿನಲ್ಲಿ ನಿರ್ಮಿಸಿರುವ ಹುತಾತ್ಮ ಅರ್ಜುನ ಆನೆಯ 650 ಕೆ.ಜಿ. ತೂಕದ ಸುಂದರ ಪ್ರತಿಮೆಯ ಉದ್ಘಾಟನೆ ನೆರವೇರಿಸಿದ ಬಳಿಕ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿ, ಸ್ಮಾರಕ ಪ್ರದೇಶ ಆನೆ ಸಂಚರಿಸುವ ಸ್ಥಳವಾಗಿದ್ದು, ಇಲ್ಲಿಗೆ ಬರುವ ಪ್ರವಾಸಿಗರ ಸುರಕ್ಷತೆಯೂ ನಮಗೆ ಪ್ರಥಮ ಆದ್ಯತೆಯಾಗಿದೆ ಎಂದರು. 8 ಬಾರಿ 750 ಕೆ.ಜಿ. ತೂಕದ ಚಿನ್ನದ ಅಂಬಾರಿ ಹೊತ್ತು ಗಜ ಗಾಂಭೀರ್ಯದಿಂದ ಹೆಜ್ಜೆಹಾಕಿದ್ದ ಅರ್ಜುನ, ಅರಣ್ಯ ಇಲಾಖೆಯ ನೆಚ್ಚಿನ ಆನೆಯಾಗಿತ್ತು. ಯಾವುದೇ ಪುಂಡಾನೆ ಸೆರೆ ಕಾರ್ಯಾಚರಣೆ ಅಥವಾ ಹುಲಿ ಸೆರೆ ಕಾರ್ಯಾಚರಣೆ ಎಂದೊಡನೆ ಮೊದಲು ನೆನಪಿಗೆ ಬರುತ್ತಿದ್ದುದೇ ಅರ್ಜುನ ಎಂದರು.

ಅರ್ಜುನ ಆನೆ ಚಿನ್ನದ ಅಂಬಾರಿ ಹೊತ್ತು ಸಾಗುತ್ತಿದ್ದ ಚಿತ್ರಗಳು, ಹುಲಿ, ಆನೆ ಸೆರೆ ಕಾರ್ಯಾಚರಣೆಯ ಅಪರೂಪದ ಚಿತ್ರಗಳನ್ನು ಫಲಕಗಳಲ್ಲಿ ಹಾಕುವ ಮೂಲಕ ಅರ್ಜುನನ ಸಾಹಸ ಅಭಿಮಾನಿಗಳಿಗೆ ತಿಳಿಯುವಂತೆ ಮಾಡಿ ಎಂದರು. ಕಾಡಿನ ಹೊರಗೆ ಇರುವ ಆನೆಗಳನ್ನು ಒಂದು ಕಡೆ ಕಳೆ ಹಾಕಲು ಆನೆ ಧಾಮ ಮಾಡಲು ಸರ್ಕಾರ ತೀರ್ಮಾನಿಸಿದ್ದು, ಇದಕ್ಕೆ 2 ಸಾವಿರ ಹೆಕ್ಟೇರ್ ಜಮೀನು ಗುರುತಿಸಲಾಗಿದೆ. ಶೀಘ್ರವೇ ಈ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದರು.

ವನ್ಯಜೀವಿ ದಾಳಿಯಿಂದ ಮೃತಪಟ್ಟವರ ಕುಟುಂಬಕ್ಕೆ ಈ ಹಿಂದೆ 15 ಲಕ್ಷ ಪರಿಹಾರ ನೀಡಲಾಗುತ್ತಿತ್ತು. ಅದನ್ನು 20 ಲಕ್ಷಕ್ಕೆ ಈಗ ಹೆಚ್ಚಿಸಲಾಗಿದೆ. ಪರಿಹಾರದ ಮೊತ್ತವನ್ನು ಕೆಲವೇ ದಿನಗಳಲ್ಲಿ ಪಾವತಿಸಲು ವ್ಯವಸ್ಥೆ ಮಾಡಲಾಗಿದೆ. ನಾವು ನೀಡುವ ಪರಿಹಾರದಿಂದ ಹೋದ ಜೀವವನ್ನು ಮರಳಿ ತರಲು ಸಾಧ್ಯವಿಲ್ಲ, ಆದರೆ ಆ ಕುಟುಂಬಕ್ಕೆ ಬದುಕು ಕಟ್ಟಿಕೊಳ್ಳಲು ಆಸರೆಯಾಗಬಹುದು ಎಂದರು.

ಸಫಾರಿಯಿಂದ ನಮ್ಮ ಇಲಾಖೆಯ ವಿವಿಧ ಪ್ರತಿಷ್ಠಾನಕ್ಕೆ ಬರುವ ಆದಾಯದಲ್ಲಿ ಶೇ.33ರಷ್ಟು ಹಣವನ್ನು ಕಾಡಿನಂಚಿನ ಜನರ ಜೀವನಮಟ್ಟ ಉತ್ತಮಪಡಿಸಲು ವಿನಿಯೋಗಿಸಲು ಸೂಚಿಸಲಾಗಿದೆ. ಇಂದು ಕೊಡಗಿನಲ್ಲಿ ಫಲಾನುಭವಿಗಳಿಗೆ ಹೊಲಿಗೆಯಂತ್ರ, ಜೇನುಪೆಟ್ಟಿಗೆಗಳನ್ನು ನೀಡಿದ್ದಾಗಿ ತಿಳಿಸಿದರು.

ಹಾಸನಕ್ಕೆ ಅರಣ್ಯ ಸಚಿವನಾಗಿ ತಾವು 8 ಬಾರಿ ಆಗಮಿಸಿರುವುದಾಗಿ ಹೇಳಿದ ಅವರು, ಜಿಲ್ಲೆಯ ಜನರ ಸಮಸ್ಯೆ ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುವ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಸಂಸತ್ ಸದಸ್ಯ ಶ್ರೇಯಸ್ ಪಟೇಲ್, ಶಾಸಕ ಸಿಮೆಂಟ್ ಮಂಜು, ಗ್ಯಾರಂಟಿ ಸಮಿತಿಯ ಅಧ್ಯಕ್ಷರಾದ ಮುರಳಿ ಮೋಹನ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಪಡೆ ಮುಖ್ಯಸ್ಥರಾದ ಮೀನಾಕ್ಷಿ ನೇಗಿ, ಮುಖ್ಯ ವನ್ಯಜೀವಿ ಪರಿಪಾಲಕರಾದ ಕುಮಾರ್ ಪುಷ್ಕರ್, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಏಳುಕುಂಡಲು ಮೊದಲಾದವರು ಪಾಲ್ಗೊಂಡಿದ್ದರು.

ವನ್ಯಜೀವಿ ಸಂಖ್ಯೆಯಲ್ಲಿ ಹೆಚ್ಚಳ



1972ರಲ್ಲಿ ಬಂಡೀಪುರದಲ್ಲಿ ಕೇವಲ 110 ಆನೆ ಇತ್ತು. ಇಂದು 1100 ಆನೆ ಇದೆ. ರಾಜ್ಯದಲ್ಲಿ 6395 ಆನೆಗಳಿವೆ. ಹೀಗಾಗಿ 1970ರ ದಶಕದಲ್ಲಿ ಕುಟುಂಬಯೋಜನೆ ಜಾರಿಗೆ ತಂದು ನಾವಿಬ್ಬರು, ನಮಗಿಬ್ಬರು ಎಂಬ ಸಂದೇಶವನ್ನು ಜನರಿಗೆ ತಲುಪಿಸಿದ ರೀತಿಯಲ್ಲೇ ಕೆಲವು ಆಯ್ದ ಪ್ರದೇಶದಲ್ಲಿ, ಆಯ್ದ ವನ್ಯಜೀವಿಗಳಿಗೆ ಸಂತಾನ ನಿಯಂತ್ರಣ ಮಾಡುವ ಅಗತ್ಯವಿದೆ, ಈ ಬಗ್ಗೆ ಚರ್ಚೆ ಆಗಬೇಕು ಎಂಬ ಹೇಳಿಕೆ ನೀಡಿದ್ದೇನೆ, ಈ ಬಗ್ಗೆ ಜನಾಭಿಪ್ರಾಯ ಮೂಡಬೇಕು ಎಂದು ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಅರಣ್ಯದ ಹೊರಗಿವೆ ನೂರಾರು ಆನೆಗಳು

ಒಂದು ವಾರದ ಮಳೆ ಒಂದು ದಿನದಲ್ಲಿ, ಒಂದು ದಿನವಿಡೀ ಬೀಳುವ ಮಳೆ ಒಂದು ಗಂಟೆಯಲ್ಲಿ ಬೀಳುತ್ತಿದ್ದು, ಇದರಿಂದ ಅನಾಹುತಗಳು ಸಂಭವಿಸುತ್ತಿವೆ. ನೂರಾರು ಆನೆಗಳು ಅರಣ್ಯದ ಹೊರಗೆ ಇದ್ದು, ತೋಟದ ಆನೆಗಳಾಗಿವೆ. ಈ ಆನೆಗಳು ತೆನೆ ಒಡೆಯುವ ಸಮಯದಲ್ಲಿ ಹೆಚ್ಚಾಗಿ ನಾಡಿಗೆ ಬರುತ್ತವೆ. ಆಗ ಸಂಘರ್ಷ ಹೆಚ್ಚುತ್ತದೆ ಎಂದು ತಜ್ಞರು ಹೇಳುತ್ತಾರೆಂದು ಸಚಿವರು ಹೇಳಿದರು.

ನಿಯಂತ್ರಣ ಕೊಠಡಿ ಸ್ಥಾಪಿಸಿ



• **ಬೆಂಗಳೂರು:** ಪಶ್ಚಿಮ ನಗರ ಪಾಲಿಕೆಯಲ್ಲಿ ಉಪ ವಿಭಾಗವಾರು ನಿಯಂತ್ರಣ ಕೊಠಡಿಗಳನ್ನು ವ್ಯವಸ್ಥಿತವಾಗಿ ಸ್ಥಾಪಿಸಿ ಕಾರ್ಯನಿರ್ವಹಿಸಲು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ರಾಜೇಂದ್ರ.ಕೆ.ವಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಶ್ಚಿಮ ನಗರ ಪಾಲಿಕೆ ಬಸವನಗುಡಿ ವಿಭಾಗದ ಕಾಮಗಾರಿ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳೊಂದಿಗೆ ಮುಂಗಾರು ಮಳೆ ಮುಂಜಾಗ್ರತೆ, ಜನಗಣತಿ 2027ಕ್ಕೆ ಸಂಬಂಧಿಸಿದಂತೆ ಆಯುಕ್ತರು ಪರಿಶೀಲನೆ ನಡೆಸಿದರು. ಮಳೆ ನೀರು ಸರಾಗವಾಗಿ ಹರಿದುಹೋಗುವಂತೆ ಚರಂಡಿಗಳ ಹೂಳೆತ್ತುವಿಕೆ ಇತ್ಯಾದಿ ಕೆಲಸಗಳನ್ನು ತ್ವರಿತವಾಗಿ ಮುಗಿಸುವಂತೆ ಹಾಗೂ ಉಪ ವಿಭಾಗವಾರು ನಿಯಂತ್ರಣ ಕೊಠಡಿಗಳನ್ನು ತೆರೆದು ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುವಂತೆ ಕ್ರಮಕೈಗೊಳ್ಳಿ ಎಂದು ಸೂಚಿಸಿದರು.

- ಸಹ ಕಂದಾಯ ಅಧಿಕಾರಿ ಕಚೇರಿಗೆ ಭೇಟಿ ನೀಡಿ, ಆಸ್ತಿ ದಾಖಲೆ ಸಂಬಂಧಿಸಿದಂತೆ ಕಚೇರಿಯಲ್ಲಿ ನಿರ್ವಹಣೆ ಮಾಡುತ್ತಿರುವ ಮ್ಯುಟೇಶನ್ ವಹಿ, ಇ-ಖಾತಾ ದಾಖಲಾತಿ ಪರಿಶೀಲಿಸಿದರು.
- ಬಸವನಗುಡಿ ವಿಭಾಗದಲ್ಲಿ ಆಸ್ತಿ ದಾಖಲೆಯೊಂದಿಗೆ ಜಿಪಿಎಸ್ ಟ್ಯಾಗ್ ಲಿಂಕಿಂಗ್ ಪ್ರಕ್ರಿಯೆಯನ್ನು ಜಿಪಿಎಸ್ ಆಪರೇಟರ್ ಜೊತೆಗೆ ಖುದ್ದಾಗಿ ಪರಿಶೀಲಿಸಿದರು.
- ಜನಗಣತಿ ಸಂಬಂಧಿಸಿದಂತೆ ಚಾರ್ಜ್ ಅಧಿಕಾರಿಗಳಿಗೆ ಮನೆಪಟ್ಟಿ ಕಾರ್ಯವನ್ನು ವ್ಯವಸ್ಥಿತವಾಗಿ ಕೈಗೊಳ್ಳಲು ಸೂಚಿಸಿದರು

ಬಿಜೆಪಿ ಒಬಿಸಿ ಮೋರ್ಚಾಗೆ ಪ್ರಧಾನ ಕಾರ್ಯದರ್ಶಿ ನೇಮಕ



• **ಬೆಂಗಳೂರು:** ವಿಜಯನಗರ ಕ್ಷೇತ್ರದ ಬಿಜೆಪಿ ಒಬಿಸಿ ಮೋರ್ಚಾದ ಪ್ರಧಾನ ಕಾರ್ಯದರ್ಶಿಯಾಗಿ ನರಸಿಂಹ ಎಲ್. ಅವರನ್ನು ನೇಮಕ ಮಾಡಲಾಗಿದೆ.

ಕೇಂದ್ರ ಸಚಿವ ವಿ. ಸೋಮಣ್ಣ, ಎಚ್.ರವೀಂದ್ರ, ಮಂಡಲ ಅಧ್ಯಕ್ಷ ವಿ.ರಾಮಾಂಜನಿ, ಎ.ಜಿ.ಆನಂದ್ ಗೌಡ ಮತ್ತು ಸಿದ್ದರಾಜು ಅವರು ನೇಮಕಾತಿ ಪತ್ರವನ್ನು ಹಸ್ತಾಂತರಿಸಿದರು. ನಂತರ ಮಾತನಾಡಿದ ನರಸಿಂಹ ಎಲ್., ಪಕ್ಷವು ನನ್ನನ್ನು ಗುರುತಿಸಿ ಈ ಜವಾಬ್ದಾರಿಯನ್ನು ನೀಡಿದೆ. ಪ್ರಧಾನಿ ನರೇಂದ್ರ ಮೋದಿಯವರು ದೇಶಕ್ಕಾಗಿ ಸತತವಾಗಿ ನಿಸ್ವಾರ್ಥ ಸೇವೆ ಸಲ್ಲಿಸುತ್ತಿದ್ದಾರೆ. ಅವರ ದೇಶಸೇವೆ ಮತ್ತು ದೇಶಪ್ರೇಮದಿಂದ ವಿಕಸಿತ ಭಾರತದ ಕನಸು ನನಸಾಗುತ್ತಿದೆ ಎಂದರು.

ಮುಂಬರುವ ವಿಧಾನಸಭಾ ಚುನಾವಣೆಯವರೆಗೆ ಪಕ್ಷವನ್ನು ತಳಮಟ್ಟದಲ್ಲಿ ಮತ್ತಷ್ಟು ಬಲಪಡಿಸುವುದು ಮತ್ತು ವಿಜಯನಗರ ವಿಧಾನಸಭಾ ಕ್ಷೇತ್ರವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲು ಬಿಜೆಪಿ ಅಭ್ಯರ್ಥಿ ಎಚ್.ರವೀಂದ್ರ ಅವರನ್ನು ಗೆಲ್ಲಿಸುವುದೇ ನಮ್ಮ ಗುರಿಯಾಗಿದೆ. ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸಿದೆ. ತಮಿಳು ನಾಡು ಮತ್ತು ಕೇರಳದಲ್ಲೂ ತನ್ನ ಮತ ಪ್ರಮಾಣವನ್ನು ಹೆಚ್ಚಿಸಿಕೊಂಡಿದೆ ಎಂದರು. ರಾಜ್ಯದಲ್ಲಿ ಬದಲಾವಣೆಯನ್ನು ಬಯಸುತ್ತಿದ್ದಾರೆ. ನಾವೆಲ್ಲರೂ ನಮ್ಮ ನೆಚ್ಚಿನ ಪ್ರಧಾನಿ ನರೇಂದ್ರ ಮೋದಿಯವರ ಆಶಯದಂತೆ ವಿಕಸಿತ ಭಾರತ ನಿರ್ಮಾಣಕ್ಕಾಗಿ ಒಗ್ಗಟ್ಟಾಗಿ ಕೆಲಸ ಮಾಡುತ್ತೇವೆ ಎಂದು ನರಸಿಂಹ ಎಲ್ ತಿಳಿಸಿದರು.

ಎಫ್‌ಆರ್‌ಪಿ ಬಗ್ಗೆ ಕಬ್ಬು ಬೆಳೆಗಾರರ ಅಸಮಾಧಾನ

• **ಬೆಂಗಳೂರು:** ಕೇಂದ್ರ ಸರ್ಕಾರ ಘೋಷಿಸಿರುವ ಕಬ್ಬಿನ ನ್ಯಾಯಸಮ್ಮತ ಹಾಗೂ ಲಾಭದಾಯಕ ದರ (ಎಫ್‌ಆರ್‌ಪಿ) ಕುರಿತು ರಾಜ್ಯ ಕಬ್ಬು ಬೆಳೆಗಾರ ಸಂಘದ ರಾಜ್ಯಾಧ್ಯಕ್ಷ ಕುರುಬೂರ್ ಶಾಂತಕುಮಾರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೇಂದ್ರ ಸಚಿವ ಸಂಪುಟವು 2026-27ನೇ ಸಾಲಿಗೆ ಶೇ.10.25 ಸಕ್ಕರೆ ಇಳುವರಿ ಆಧಾರದಲ್ಲಿ ಪ್ರತಿ ಟನ್ ಕಬ್ಬಿಗೆ 3,650 ರೂ. ಎಫ್‌ಆರ್‌ಪಿ ನಿಗದಿ ಮಾಡಿರುವುದು ಕಬ್ಬು ಬೆಳೆಗಾರ ರೈತರ ಉತ್ಪಾದನಾ ವೆಚ್ಚಕ್ಕೂ ಸರಿಹೊಂದುವುದಿಲ್ಲ. ಕರ್ನಾಟಕ ಸರ್ಕಾರವು ಪ್ರತಿ ಟನ್ ಕಬ್ಬಿಗೆ 4,450 ರೂ. ನಿಗದಿ ಮಾಡುವಂತೆ ವರದಿ ಸಲ್ಲಿಸಿದ್ದರೂ, ಅದನ್ನು ಪರಿಗಣಿಸದೇ ಕಡಿಮೆ ದರ ಘೋಷಿಸಿರುವುದು ರೈತರಿಗೆ ಅನ್ಯಾಯವಾಗಿದೆ ಎಂದು ಆರೋಪಿಸಿದ್ದಾರೆ.

ಈ ರೀತಿಯ ದರ ನಿಗದಿ ರೈತರನ್ನು ಕಬ್ಬು ಬೆಳೆಯಿಂದ ದೂರ ಮಾಡುವಂತದ್ದು. ಆದ್ದರಿಂದ ಕೇಂದ್ರ ಸರ್ಕಾರ ಕೂಡಲೇ ಎಫ್‌ಆರ್‌ಪಿ ದರವನ್ನು ಪುನರ್ಪರಿಶೀಲಿಸಿ, 2026-27ನೇ ಸಾಲಿಗೆ ಪ್ರತಿ ಟನ್ ಕಬ್ಬಿಗೆ ಕನಿಷ್ಠ 4,500 ರೂ. ನಿಗದಿ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ಕಬ್ಬಿನಿಂದ ಸಕ್ಕರೆ, ಎಥನಾಲ್, ವಿದ್ಯುತ್, ಕಾಂಪೋಸ್ಟ್ ಗೊಬ್ಬರ ಸೇರಿದಂತೆ ಹಲವು ಉಪ ಉತ್ಪನ್ನಗಳನ್ನು ತಯಾರಿಸುವ ಸಕ್ಕರೆ ಕಾರ್ಖಾನೆಗಳು ರೈತರಿಗೆ ಸಮರ್ಪಕ ಲಾಭ ಹಂಚಿಕೊಡುವಲ್ಲಿ ವಿಫಲವಾಗುತ್ತಿವೆ. ಕಬ್ಬು ಖರೀದಿಸಿದ ಹಣವನ್ನು ಸಕಾಲದಲ್ಲಿ ಪಾವತಿಸದೇ, ಸರ್ಕಾರದ ಆದೇಶಗಳನ್ನು ಹಲವೆಡೆ ನಿರ್ಲಕ್ಷ್ಯ ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರವು Sugar Control Order, 1966ಗೆ ತಿದ್ದುಪಡಿ ತಂದು, ಕಾನೂನು ಉಲ್ಲಂಘಿಸುವ ಸಕ್ಕರೆ ಕಾರ್ಖಾನೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತ ಕಾನೂನು ಜಾರಿಗೆ ತರಬೇಕು ಎಂದು ಶಾಂತಕುಮಾರ್ ಆಗ್ರಹಿಸಿದ್ದಾರೆ.

ಬಸವಜಯಂತಿಯಲ್ಲಿ ಓಕುಳಿ ಸಂಭ್ರಮ



• **ಕೊಣನೂರು:** ಗ್ರಾಮದ ಶ್ರೀ ಷಡ್ಜವರಹೀಶೇಶ್ವರ ಯುವಕ ಸಂಘದ ವತಿಯಿಂದ 12ನೇ ಶತಮಾನದ ಸಮಾನತೆಯ ಹರಿಕಾರ ಕಾಯಕವೇ ಕೈಲಾಸ ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ಎಂಬ ತತ್ವವನ್ನು ಜಗತ್ತಿಗೆ ಸಾರಿದ ಸಮಾಜಸುಧಾರಕ ಜಗಜ್ಯೋತಿ ಬಸವೇಶ್ವರ ಜಯಂತಿಯನ್ನು ಶ್ರೀ ಷಡ್ಜವರಹೀಶೇಶ್ವರ ಸಂಘದ ವತಿಯಿಂದ ಓಕುಳಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಬಸವೇಶ್ವರ ದೇವಸ್ಥಾನದಲ್ಲಿ ಪೂಜಾದಿ ಕೈಂಕರ್ಯ ಗಳನ್ನು ಜರುಗಿದವು ಬಸವೇಶ್ವರರ ಭಾವಚಿತ್ರ ಮೆರವಣಿಗೆ ನಡೆಸಲಾಯಿತು. ಯುವಕರು, ಮಕ್ಕಳು ಬಣ್ಣದನೀರನ್ನು ಎರಚಿ ಸಂಭ್ರಮಿಸಿದರು. ಶ್ರೀ ಷಡ್ಜವರಹೀಶೇಶ್ವರ ಸಂಘದ ಬಿ.ವಿ.ಬಸವರಾಜು, ಕಾರ್ಯದರ್ಶಿ ವಾಗೀಶ್, ದಿನೇಶ್, ರೀತೇಶ್, ಸದಾನಂದ, ಲೋಕೇಶ್ ಅಬಿ, ಮಧುಕುಮಾರ ಈಶ್ವರಪ್ಪ ಪ್ರಕಾಶ್, ಇನ್ನು ಹಲವಾರು ಪುಟ್ಟಮಕ್ಕಳು ಹಾಜರಿದ್ದರು ಪೂಜಾದಿ ಕೈಂಕರ್ಯಗಳನ್ನು ಅರ್ಚಕರಾದ ನಾಗರಾಜು ಶಾಸ್ತ್ರಿಗಳು ನೆರವೇರಿಸಿದರು. ಆಗಮಿಸಿದ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು.

ಬಿಜೆಪಿ ಸಂಭ್ರಮಾಚರಣೆ



• **ಅರಸೀಕೆರೆ:** ಪಂಚ ರಾಜ್ಯಗಳ ಚುನಾವಣೆ ಫಲಿತಾಂಶ ಪ್ರಕಟವಾದ ಹಿನ್ನೆಲೆಯಲ್ಲಿ ಬಿಜೆಪಿ ಅರಸೀಕೆರೆ ವಿಧಾನಸಭಾ ಕ್ಷೇತ್ರದ ವತಿಯಿಂದ ಸಂಭ್ರಮಾಚರಣೆ ನಡೆಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಬಿಜೆಪಿ ಪರಾಜಿತ ಅಭ್ಯರ್ಥಿ ಜಿ.ವಿ.ಟಿ ಬಸವರಾಜು ಹಾಗೂ ಗ್ರಾಮಾಂತರ ಮಂಡಲ ಅಧ್ಯಕ್ಷ ಯತೀಶ್ ಕುಮಾರ್ ಅವರು ಮಾತನಾಡಿ, ಪ್ರಧಾನಮಂತ್ರಿ ಮೋದಿ ಕೇಂದ್ರ ಗೃಹ ಸಚಿವ ಅಮಿತಾ ಶಾ ಅವರ ಹೋರಾಟದ ಫಲವಾಗಿ ಪಶ್ಚಿಮ ಬಂಗಾಳದಲ್ಲಿ ಪಕ್ಷ ಆಡಳಿತಕ್ಕೆ ಬರಲು ಸಾಧ್ಯವಾಗಿದೆ. ಮುಂದಿನ ದಿನಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಈ ಫಲಿ ತಾಂಶವನ್ನು ತರಲು ಕಾರ್ಯಕರ್ತರು ಸಂಘಟನಾತ್ಮಕವಾಗಿ ಹೋರಾಟ ಮಾಡಲು ಸಂಕಲ್ಪವನ್ನು ಮಾಡಬೇಕೆಂದು ಹೇಳಿದರು.

ಈ ವೇಳೆ ನಗರ ಮಂಡಲದ ಅಧ್ಯಕ್ಷ ಅವಿನಾಶ್ ನಾಯ್ಡು, ಜಿಲ್ಲಾ ಉಪಾಧ್ಯಕ್ಷ ಗಂಗಾಧರ್, ಜಿಲ್ಲಾ ಕಾರ್ಯದರ್ಶಿ ಪುರುಷೋತ್ತಮ್, ನಗರ ಮಂಡಲ ಪ್ರಧಾನ ಕಾರ್ಯದರ್ಶಿ ಸಿಂಧು ಅರುಣ್, ಮಂಜು ಕುಮಾರ್, ಮುಖಂಡರಾದ ಮನೋಜ್ ಕುಮಾರ್, ಚೇತನ್ ಜೈನ್, ದಿನೇಶ್, ಈಶ್ವರ್ ಸಿಂಗ್, ರಮೇಶ್, ನಂಜುಂಡಪ್ಪ ವಿನೋದ್ ಜೈನ್, ಮಧು, ತೇಜಸ್, ಶಿವರಾಜ್, ಚಂದ್ರು, ಚಂದ್ರಕಲಾ, ಗಾಯತ್ರಿ, ಪ್ರಭಾವತಿ ಇದ್ದರು.

ಕಿರಿಯ ಇಂಜಿನಿಯರ್ ಲೋಕಾಯುಕ್ತ ಬಲೆಗೆ

• **ಹಾಸನ:** ಕೊಳವೆಬಾವಿಗೆ ವಿದ್ಯುತ್ ಸಂಪರ್ಕ ನೀಡಲು ಐದು ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಕಿರಿಯ ಇಂಜಿನಿಯರ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ದೇವರಾಜು ಲೋಕಾಯುಕ್ತ ಬಲೆಗೆ ಬಿದ್ದ ಅಧಿಕಾರಿ. ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕಿನ, ನುಗ್ಗೆಹಳ್ಳಿ ಸೆಸ್ಕಾಂ ಬ್ರಾಂಚ್‌ನ ಜ್ಯೂನಿಯರ್ ಇಂಜಿನಿಯರ್ ಆಗಿರುವ ದೇವರಾಜು ಕೊಳವೆಬಾವಿಗೆ ವಿದ್ಯುತ್ ಸಂಪರ್ಕ ನೀಡಲು ಶಶಾಂಕ್ ಎಂಬುವವರಿಂದ ಐದು ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಲಂಚದ ಹಣ ಪಡೆಯುವಾಗ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು ಹಣದ ಸಮೇತ ಜ್ಯೂನಿಯರ್ ಇಂಜಿನಿಯರ್‌ನನ್ನು ವಶಕ್ಕೆ ಪಡೆದಿದ್ದಾರೆ. ಲೋಕಾಯುಕ್ತ ಇನ್‌ಸ್ಪೆಕ್ಟರ್ ಶಿಲ್ಪಾ ಹಾಗೂ ಸಿಬ್ಬಂದಿ ನೇತೃತ್ವದಲ್ಲಿ ಕಾರ್ಯಾಚರಣೆ ನಡೆದಿದೆ.

ಉತ್ತರಹಳ್ಳಿ ಪದವಿ ಕಾಲೇಜಿನ ಪ್ರತಿಭಾನ್ವಿತರಿಗೆ ಸನ್ಮಾನ

ದಾರ್ಶನಿಕರು ವಿದ್ಯಾರ್ಥಿಗಳಿಗೆ ಮಾದರಿ



• **ಬೆಂಗಳೂರು:** ದಕ್ಷಿಣ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪಾಲಿಕೆಯ ಉತ್ತರಹಳ್ಳಿಯ ಪದವಿ ಪೂರ್ವ ಕಾಲೇಜು ಶೇ.85ಕ್ಕಿಂತ ಹೆಚ್ಚಿನ ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಪಾಲಿಕೆ ಆಯುಕ್ತ ಕೆ.ಎನ್.ರಮೇಶ್ ಸನ್ಮಾನಿಸಿದರು.

2024-25ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಫಲಿತಾಂಶವನ್ನು ದಾಖಲಿಸಿರುವ ಪಾಲಿಕೆ ವ್ಯಾಪ್ತಿಯ ಏಕೈಕ ಪದವಿ ಪೂರ್ವ ಕಾಲೇಜು ಆಗಿರುವ ಉತ್ತರಹಳ್ಳಿ ಪದವಿ ಪೂರ್ವ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಎಂಟು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ರೂಪದಲ್ಲಿ ತಲಾ 35,000 ರೂ.ಗಳ ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲೆ ಸರಸ್ವತಿ ನಾಯಕ್, 2024-25ನೇ ಸಾಲಿನಲ್ಲಿ ದ್ವಿತೀಯ ಪಿಯುಸಿಯಲ್ಲಿ ಕಾಲೇಜಿನ ಒಟ್ಟು 134 ವಿದ್ಯಾರ್ಥಿಗಳಲ್ಲಿ 99 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಕಾಲೇಜಿನ ಬಹುತೇಕ ವಿದ್ಯಾರ್ಥಿಗಳು ಬಡ ಕುಟುಂಬದ ಹಿನ್ನೆಲೆಯಿಂದ ಬಂದವರಾಗಿದ್ದಾರೆ. ಆದರೆ ಅವರ ಸಾಧನೆ ಅಪಾರವಾದುದು ಎಂದು ಶ್ಲಾಘಿಸಿದರು.

ಮಾಜಿ ರಾಷ್ಟ್ರಪತಿ ಕೆ. ಆರ್.ನಾರಾಯಣ್ ರವರ ಜೀವನವೇ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಲಿ ಪಾಲಿಕೆ ಆಯುಕ್ತ ಕೆ.ಎನ್.ರಮೇಶ್ ಮಾತನಾಡಿ, ಬಡತನದ ನಡುವೆಯೂ ಶಿಕ್ಷಣ ಪಡೆದು ದೇಶದ ಉನ್ನತ ಸ್ಥಾನಕ್ಕೇರಿದ ಭಾರತದ ಮಾಜಿ ರಾಷ್ಟ್ರಪತಿ ಕೆ.ಆರ್.ನಾರಾಯಣ್ ಅವರ ಜೀವನ ಚರಿತ್ರೆಯನ್ನು ನೆನಪಿಸಿ ಸ್ಫೂರ್ತಿ ತುಂಬಿದರು. ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಪಾಲಿಕೆಯು ಸದಾ ಬೆನ್ನೆಲುಬಾಗಿ ನಿಲ್ಲಲಿದ್ದು, ಕಾಲೇಜಿಗೆ ಅಗತ್ಯವಿರುವ ಯಾವುದೇ ನೆರವು ನೀಡಲು ಪಾಲಿಕೆ ಸಿದ್ಧವಿದೆ ಎಂದು ಭರವಸೆ ನೀಡಿದರು.

ಪರಿಷ್ಕರಣೆ , ಅಭಿವೃದ್ಧಿ ಬಗ್ಗೆ ಅಧಿಕಾರಿಗಳ ಮಾಹಿತಿ ಕಾರ್ಯಾಗಾರ

ಇ-ಖಾತಾ ಅರ್ಜಿ ಹಿಂಪಡೆಯಲು ಅವಕಾಶ

• **ಬೆಂಗಳೂರು:** ತಪ್ಪಾಗಿ ಸಲ್ಲಿಸಲಾದ ಇ-ಖಾತಾ ಅರ್ಜಿಗಳನ್ನು ನಾಗರಿಕರು ಈಗ ಹಿಂತೆಗೆದುಕೊಳ್ಳಲು ಅವಕಾಶ ನೀಡಲಾಗಿದೆ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ಬೆಂಗಳೂರು ನಗರದ ನಾಗರಿಕ ಸೇವೆಗಳ ಸುಧಾರಣೆಯನ್ನು ಉದ್ದೇಶಿಸಿ ಇ-ಖಾತಾ ವ್ಯವಸ್ಥೆಯಲ್ಲಿ ಮಾಡಲಾದ ಇತ್ತೀಚಿನ ಪರಿಷ್ಕರಣೆಗಳು ಮತ್ತು ಅಭಿವೃದ್ಧಿಗಳ ಬಗ್ಗೆ ಅಧಿಕಾರಿಗಳಿಗೆ ಮಾಹಿತಿ ನೀಡಲು ಟೌನ್ ಹಾಲ್‌ನಲ್ಲಿ ನಡೆದ ಕಾರ್ಯಾಗಾರದಲ್ಲಿ ಮಾತನಾಡಿ, ನಗರದಲ್ಲಿ ಸುಮಾರು 13.05 ಲಕ್ಷ ಎಸ್‌ಎಎಸ್ ಐಡಿ ಆಧಾರಿತ ಆಸ್ತಿಗಳೊಂದಿಗೆ ಸಂಬಂಧಿಸಿದ ನಾಗರಿಕರು ಈಗ ಸುಲಭವಾಗಿ ತಮ್ಮ ಇ-ಖಾತಾ ಪ್ರಮಾಣಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಅಂತಿಮ ಇ-ಖಾತಾಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಇದರಿಂದ ಹಸ್ತಚಾಲಿತ ನಡೆ ಯುವ ಪ್ರಕ್ರಿಯೆಗಳ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆ ಎಂದು ಹೇಳಿದರು. ನಾಗರಿಕರು ಕೆಲವು ಆಸ್ತಿ ವಿವರಗಳನ್ನು ಸ್ವಯಂ ಆನ್‌ಲೈನ್‌ನಲ್ಲಿ ತಿದ್ದುಪಡಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಇದರಿಂದ ಸಣ್ಣಪುಟ್ಟ ತಿದ್ದುಪಡಿಗಳಿಗಾಗಿ ಕಚೇರಿಗಳಿಗೆ ಭೇಟಿ ನೀಡುವ ಅಗತ್ಯ ಕಡಿಮೆಯಾಗುತ್ತದೆ. ಜೊತೆಗೆ ತಪ್ಪಾಗಿ ಸಲ್ಲಿಸಿದ ಇ-ಖಾತಾ ಅರ್ಜಿಗಳನ್ನು ಹಿಂತೆಗೆದುಕೊಳ್ಳಲು ಅವಕಾಶ ನೀಡುವ ವ್ಯವಸ್ಥೆಯನ್ನು ಪರಿಚಯಿಸಲಾಗಿದೆ. ಇದರಿಂದ ಪ್ರಕ್ರಿಯೆಯಲ್ಲಿನ ಅಡಚಣೆಗಳು ಕಡಿಮೆಯಾಗುತ್ತವೆ ಮತ್ತು ಹೆಚ್ಚಿನ ಸೌಕರ್ಯ ದೊರೆಯುತ್ತದೆ ಎಂದು ತಿಳಿಸಿದರು.

ಅರ್ಜಿಗಳ ಪ್ರಕ್ರಿಯೆ ಮತ್ತು ಅನುಮೋದನಾ ವಿಧಾನಗಳಲ್ಲಿ ಮಾಡಲಾದ ಪರಿಷ್ಕರಣೆಗಳ ಕುರಿತು ಅಧಿಕಾರಿಗಳಿಗೆ ಸಮಗ್ರವಾಗಿ ಮಾರ್ಗದರ್ಶನ ನೀಡಲಾಯಿತು.



ಸ್ವಯಂ ಮಾನ್ಯತೆ ವ್ಯವಸ್ಥೆ

ವಹಿವಾಟು, ನೋಂದಣಿಗೆ ಸಿದ್ಧ ಎಂದು ಗುರುತಿಸಲಾದ ಆಸ್ತಿಗಳಿಗೆ ಈಗ ವ್ಯವಸ್ಥೆಯಲ್ಲಿ ಸ್ವಯಂ ಮಾನ್ಯತೆ ಮತ್ತು ಅನುಮೋದನೆ ಸೌಲಭ್ಯವನ್ನು ಪರಿಚಯಿಸಲಾಗಿದೆ. ಇದಕ್ಕಾಗಿ ರುಣಭಾರ ಪ್ರಮಾಣ ಪತ್ರ ಅಪ್‌ಲೋಡ್ ಮತ್ತು ಪರಿಶೀಲನೆ ಆಧಾರವಾಗಿರುತ್ತದೆ. ಇದರಿಂದ ಆಸ್ತಿ ವಹಿವಾಟು ಪ್ರಕ್ರಿಯೆ ವೇಗಗೊಳ್ಳುತ್ತದೆ. ಇ-ಖಾತಾ ಅರ್ಜಿ ಮತ್ತು ಅನುಮೋದನಾ ಪ್ರಕ್ರಿಯೆಯನ್ನು ಸರಳ, ಪಾರದರ್ಶಕ ಮತ್ತು ಬಳಕೆದಾರ ಸ್ನೇಹಿಯಾಗಿ ರೂಪಿಸಲಾಗಿದೆ ಎಂದು ಮುನೀಶ್ ಮೌದ್ಗಿಲ್ ತಿಳಿಸಿದರು.



ಭಾರತದ ಶೌರ್ಯಗಾಥೆ

ಭಾರತ ಮತ್ತು ಪಾಕಿಸ್ತಾನದ ನಡುವಿನ ಮಿಲಿಟರಿ ಸಮೀಕರಣವನ್ನೇ ಬದಲಿಸಿದ ಆಪರೇಷನ್ ಸಿಂದೂರ ನಡೆದು ಈಗ ಒಂದು ವರ್ಷ ಕಳೆದಿದೆ. ಈ ಸಂಘರ್ಷದ ಕುರಿತು ಹೊರಬಿದ್ದಿರುವ ಸಮಗ್ರ ಅಂತಾರಾಷ್ಟ್ರೀಯ ವರದಿಯೊಂದು ಭಾರತದ ಅಪ್ರತಿಮ ಯಶಸ್ಸನ್ನು ಎತ್ತಿ ಹಿಡಿದಿದೆ. ಭಾರತದ ನಿಖರ ದಾಳಿಗಳಿಂದ ಪಾಕಿಸ್ತಾನದ ಪ್ರಮುಖ ಸೇನಾ ಮೂಲಸೌಕರ್ಯಗಳು ಧ್ವಂಸಗೊಂಡಿದ್ದವು ಹಾಗೂ ಅಂತಿಮವಾಗಿ ಪಾಕಿಸ್ತಾನವೇ ಕದನ ವಿರಾಮಕ್ಕೆ ಮೊರೆ ಹೋಗುವಂತಾಗಿತ್ತು ಎಂದು ಈ ವರದಿ ಸಾಕ್ಷ್ಯಾಧಾರಿತವಾಗಿ ವಿವರಿಸಿದೆ.

ಬರೀ ಯುದ್ಧವಲ್ಲ

ಒಂದು ವರ್ಷದ ನಂತರ ಹಿಂತಿರುಗಿ ನೋಡಿದಾಗ, ಆಪರೇಷನ್ ಸಿಂದೂರ ಕೇವಲ ಯುದ್ಧ ವಿಮಾನಗಳ ಕಾಳಗವಾಗಿರಲಿಲ್ಲ, ಅದು ಭಾರತದ ತಾಂತ್ರಿಕ ಶಕ್ತಿ, ಸಂಘಟಿತ ಯುದ್ಧತಂತ್ರ ಮತ್ತು ದಕ್ಷ ನಾಯಕತ್ವದ ವಿಜಯವಾಗಿತ್ತು. ಪಾಕಿಸ್ತಾನದ ಸುಳ್ಳು ಸುದ್ದಿಗಳ ಅಬ್ಬರ ಅಂತಿಮವಾಗಿ ಭಾರತದ ನಿಖರ ಕ್ಷಿಪಣಿಗಳ ಅಬ್ಬರದ ಮುಂದೆ ಮಂಕಾಯಿತು. ಇಂದು ಈ ಕಾರ್ಯಾಚರಣೆ, ಆಧುನಿಕ ನೆಟ್‌ವರ್ಕ್ ಕೇಂದ್ರಿತ ಯುದ್ಧತಂತ್ರಕ್ಕೆ ಜಗತ್ತಿನಲ್ಲಿ ಒಂದು ಅತ್ಯುತ್ತಮ ಉದಾಹರಣೆಯಾಗಿ ಉಳಿದಿದೆ. ಇಷ್ಟಾದರೂ ಪಾಕಿಸ್ತಾನ ಭಯೋತ್ಪಾದಕರನ್ನು ಪೋಷಿಸುತ್ತಿರುವುದು ದುರಂತವೇ ಸರಿ.

ಪಾಕಿಸ್ತಾನ ವಿರುದ್ಧದ ಆಪರೇಷನ್ ಸಿಂದೂರಕ್ಕೆ ಒಂದು ವರ್ಷ

ಕಳೆದ ವರ್ಷ ಪಹಲ್ಗಾಮ್ ಉಗ್ರ ದಾಳಿಯ ಬಳಿಕ ಆರಂಭವಾದ ಆಪರೇಷನ್ ಸಿಂದೂರ ಭಾರತದ ರಾಷ್ಟ್ರೀಯ ಭದ್ರತಾ ತಂತ್ರದಲ್ಲಿ ಮಹತ್ವದ ಬದಲಾವಣೆಯ ತಂದಿತು. ಡ್ರೋನ್‌ಗಳು, ನೆಟ್‌ವರ್ಕಿಂಗ್ ಮತ್ತು ಕೃತಕ ಬುದ್ಧಿಮತ್ತೆ(ಎಐ) ಬಳಸಿ ದಾಳಿ ನಡೆಸುವಲ್ಲಿ ಇದು ಹೊಸ ಮಾದರಿಯಾಯಿತು. ಪಾಕಿಸ್ತಾನದ ಗಡಿಯಾಚೆಗಿನ ಭಯೋತ್ಪಾದನೆ ತಡೆಗಟ್ಟಲು ಭಾರತ ತೋರಿದ ರಾಜಕೀಯ ಇಚ್ಛಾಶಕ್ತಿಯ ಸಂಕೇತವಾಗಿ ಈ ಕಾರ್ಯಾಚರಣೆ ಕಂಡುಬಂತು. ಪ್ರಧಾನಿ ನರೇಂದ್ರ ಮೋದಿ ಭಾರತವು ಅಣು ಬೆದರಿಕೆಯನ್ನು ಸಹಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದರು. ಪಹಲ್ಗಾಮ್ ದಾಳಿಯಲ್ಲಿ 26 ಮಂದಿ ಮೃತಪಟ್ಟ ನಂತರ, ಮೇ 7ರಂದು ಭಾರತ ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದ ಒಂಬತ್ತು ಉಗ್ರ ಶಿಬಿರಗಳ ಮೇಲೆ ವಾಯು ದಾಳಿ ನಡೆಸಿ, ಸುಮಾರು 100 ಉಗ್ರರ ಹೆಡೆಮುರಿ ಕಟ್ಟಿತು. ಈ ದಾಳಿಗಳು ಬಹಾವಲ್ಪುರ, ಮುರಿದ್ಕೆ, ಸಿಯಾಲ್ಕೋಟ್, ಮುಜಾಫರಾಬಾದ್ ಸೇರಿದಂತೆ ಹಲವು ಪ್ರದೇಶಗಳನ್ನು ಒಳಗೊಂಡಿದ್ದವು. ಇದರಿಂದ ಉಂಟಾದ ಉದ್ವಿಗ್ನತೆಗೆ ಪಾಕಿಸ್ತಾನ ಪ್ರತಿದಾಳಿ ನಡೆಸಿದರೂ, ಭಾರತವು ಹೆಚ್ಚಿನ ದಾಳಿಗಳನ್ನು ವಿಫಲಗೊಳಿಸಿತು. ಮೇ 10ರಂದು ಹಾಟ್‌ಲೈನ್ ಮಾತುಕತೆ ಬಳಿಕ ಪರಿಸ್ಥಿತಿ ಶಾಂತವಾಯಿತು. ಈ ಕಾರ್ಯಾಚರಣೆಯ ಬಳಿಕ ಭಾರತ ತನ್ನ ಸೇನಾ ಶಕ್ತಿಯನ್ನು ಹೆಚ್ಚಿಸಲು ಮಹತ್ವದ ಕ್ರಮಗಳನ್ನು ಕೈಗೊಂಡಿದೆ. ಹೊಸ ಕ್ಷಿಪಣಿಗಳು, ಡ್ರೋನ್‌ಗಳು, ಎಸ್-400 ವ್ಯವಸ್ಥೆಗಳು, ರಾಫೆಲ್ ಯುದ್ಧ ವಿಮಾನಗಳು ಮತ್ತು ಐಎನ್‌ಎಸ್ ಅರಿಧಮನ್ ಸೇರಿದಂತೆ ಹಲವು ಅಸ್ತ್ರಗಳನ್ನು ಸೇನೆಗೆ ಸೇರ್ಪಡೆಗೊಳಿಸಿದೆ.

ಏನಿದು ವರದಿ?: ಸ್ವಿಜರ್ಲೆಂಡ್ ಮೂಲದ ಸೆಂಟರ್ ಡಿ ಹಿಸ್ಟೋಯಿರ್ ಎಟ್ ಡಿ ಪ್ರೊಸ್ಪೆಕ್ಟಿವ್ ಮಿಲಿಟೈರ್ಸ್ (ಸಿಎಚ್‌ಪಿಎಂ) ಜನವರಿ 15, 2026ರಂದು ಬಿಡುಗಡೆ ಮಾಡಿದ ಈ ವರದಿ, ಯುದ್ಧದ ಆರಂಭಿಕ ಹಂತದ ಬಗ್ಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿದ್ದ ಭ್ರಮೆಯನ್ನು ಹೊಡೆದೋಡಿಸಿದೆ. ಮಿಲಿಟರಿ ಇತಿಹಾಸಕಾರ ಆಡ್ರಿಯನ್ ಫಾಂಟನೆಲ್ಲಾಜ್ ಸಿದ್ಧಪಡಿಸಿದ ಈ ವರದಿ, 2025ರ ಮೇ 7 ರಿಂದ 10ರವರೆಗೆ ನಡೆದ 88 ಗಂಟೆಗಳ ವಾಯು ಸಮರದಲ್ಲಿ ಭಾರತ ಹೇಗೆ ಪಾಕಿಸ್ತಾನದ ವಾಯುಪ್ರದೇಶದ ಮೇಲೆ ಸಂಪೂರ್ಣ ಹಿಡಿತ ಸಾಧಿಸಿತು ಎಂಬುದನ್ನು ಉಪಗ್ರಹ ಚಿತ್ರಗಳ ಸಮೇತ ವಿವರಿಸಿದೆ.



ಕಾರ್ಯಾಚರಣೆಯ ಕೇಂದ್ರಬಿಂದುವಾದ ಮಹಿಳಾ ಅಧಿಕಾರಿಗಳು

ಈ ಕಾರ್ಯಾಚರಣೆಯಲ್ಲಿ ಭಾರತೀಯ ಸಶಸ್ತ್ರ ಪಡೆಗಳ ಮಹಿಳಾ ಅಧಿಕಾರಿಗಳ ಪಾತ್ರ ದೇಶಕ್ಕೆ ಹೆಮ್ಮೆ ತಂದಿತು. ದಾಳಿಯ ನಂತರದ ಅಧಿಕೃತ ಸುದ್ದಿಗೋಷ್ಠಿಗಳಲ್ಲಿ ಭೂಸೇನೆ ಮತ್ತು ವಾಯುಸೇನೆಯ ಮಹಿಳಾ ಅಧಿಕಾರಿಗಳೇ ಮುಂಚೂಣಿಯಲ್ಲಿದ್ದು, ಸಂಕೀರ್ಣ ಮಿಲಿಟರಿ ವಿವರಗಳನ್ನು ಸಮಾಧಾನಚಿತ್ತದಿಂದ ಜಗತ್ತಿಗೆ ವಿವರಿಸಿದರು. ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ವಾಯುಸೇನೆಯ ಪರವಾಗಿ ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿದರೆ, ಕರ್ನಲ್ ಸೋಫಿಯಾ ಖುರೇಷಿ ಭೂಸೇನೆಯ ಪರವಾಗಿ ಕಾರ್ಯಾಚರಣೆಯ ಬಗ್ಗೆ ಮಾಹಿತಿ ನೀಡಿದರು. ಇದು ಭಾರತೀಯ ಸೇನೆಯ ಆಧುನೀಕರಣ ಮತ್ತು ಸ್ತ್ರೀ ಶಕ್ತಿಯ ಸಬಲೀಕರಣದ ಸಂಕೇತವಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮೆಚ್ಚುಗೆಗೆ ಪಾತ್ರವಾಯಿತು. ಯುದ್ಧದಂತಹ ತುರ್ತು ಪರಿಸ್ಥಿತಿಯಲ್ಲೂ ಭಾರತದ ಸಾಂಸ್ಕೃತಿಕ ಬದಲಾವಣೆ ಮತ್ತು ವೃತ್ತಿಪರತೆಯನ್ನು ಈ ಅಧಿಕಾರಿಗಳು ಜಗತ್ತಿಗೆ ತೋರಿಸಿಕೊಟ್ಟರು.

ಪಹಲ್ಗಾಮ್ ದಾಳಿಗೆ ತಕ್ಕ ಪ್ರತ್ಯುತ್ತರ

2025ರ ಏಪ್ರಿಲ್ 22ರಂದು ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪಾಕ್ ಪ್ರೇರಿತ ಉಗ್ರರು ನಡೆಸಿದ ಭೀಕರ ದಾಳಿಗೆ ಪ್ರತೀಕಾರವಾಗಿ ಭಾರತ ಈ ಆಪರೇಷನ್ ಸಿಂದೂರ ಆರಂಭಿಸಿತ್ತು. ಮೇ 7ರಂದು ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿರುವ ಒಂಬತ್ತು ಪ್ರಮುಖ ಉಗ್ರಗಾಮಿ ನೆಲೆಗಳ ಮೇಲೆ ಭಾರತೀಯ ಪಡೆಗಳು ಏಕಕಾಲಕ್ಕೆ ದಾಳಿ ನಡೆಸಿದವು. ಇದಕ್ಕೆ ಪ್ರತಿಯಾಗಿ ಪಾಕಿಸ್ತಾನವೂ ವಾಯುದಾಳಿ ನಡೆಸಿದಾಗ ನಡೆದ ಸಂಘರ್ಷದಲ್ಲಿ ಭಾರತ ಮೊದಲು ಒಂದು ರಾಫೆಲ್, ಒಂದು ಮಿರಾಜ್-2000 ಮತ್ತು ಮಿಗ್-29 ಅಥವಾ ಸುಖೋಯ್-30 ವಿಮಾನಗಳನ್ನು ಕಳೆದುಕೊಂಡಿತು. ಇದನ್ನೇ ಪಾಕಿಸ್ತಾನ ದೊಡ್ಡದಾಗಿ ಬಿಂಬಿಸಿತ್ತು. ಆದರೆ, ಭಾರತದ ಅಸಲಿ ತಂತ್ರಗಾರಿಕೆ ಆರಂಭವಾಗಿದ್ದೇ ಅಲ್ಲಿಂದ.

ಉಪಗ್ರಹ ಸಾಕ್ಷ್ಯಗಳು ಮತ್ತು ಹಾನಿಯ ಅಂದಾಜು

ಪಾಕಿಸ್ತಾನದ ನೂರ್ ಖಾನ್, ಭೋಲಾರಿ, ಜಾಕೋಬಾಬಾದ್ ಮತ್ತು ಸರ್ಗೋಧ ವಾಯುನೆಲೆಗಳಲ್ಲಿ ಭಾರಿ ಹಾನಿಯಾಗಿರುವುದನ್ನು ಉಪಗ್ರಹ ಚಿತ್ರಗಳು ಖಚಿತಪಡಿಸಿವೆ. ಸ್ವತಂತ್ರ ಭೌಗೋಳಿಕ ವಿಶ್ಲೇಷಕರು ಕೂಡ ಈ ದಾಳಿಗಳು ನಡೆದಿರುವುದನ್ನು ಸಮರ್ಥಿಸಿದ್ದಾರೆ. ಅಲ್ಲದೆ, ಭೋಲಾರಿ ವಾಯುನೆಲೆಯಲ್ಲಿ ಪಾಕಿಸ್ತಾನ ವಾಯುಸೇನೆಯ ಸಿಬ್ಬಂದಿ ಮೃತಪಟ್ಟಿರುವುದನ್ನು ಸಿಂಧ್ ಪ್ರಾಂತ್ಯದ ಮುಖ್ಯಮಂತ್ರಿ ಮುರಾದ್ ಅಲಿ ಶಾ ಒಪ್ಪಿಕೊಂಡಿದ್ದಾರೆ. ದಾಳಿ ನಡೆದ ಹಲವು ತಿಂಗಳುಗಳ ನಂತರವೂ ಅಲ್ಲಿ ದುರಸ್ತಿ ಕಾರ್ಯಗಳು ನಡೆಯುತ್ತಿರುವುದು ಈ ಹಾನಿಯ ಅಂದಾಜಿಗೆ ಮತ್ತಷ್ಟು ಸಾಕ್ಷ್ಯ ಒದಗಿಸಿದೆ.

ಭಾರತದ ಅಭೇದ್ಯ ರಕ್ಷಾ ಕವಚ

ಪಾಕಿಸ್ತಾನ ನೂರಾರು ಡ್ರೋನ್‌ಗಳು ಮತ್ತು ಹತ್ತು ಕ್ಷಿಪಣಿಗಳ ಮೂಲಕ ಭಾರತದ ಮೇಲೆ ದಾಳಿಗೆ ಯತ್ನಿಸಿತು. ಆದರೆ ಭಾರತದ ಆಕಾಶ್‌ತೀರ್ ಮತ್ತು ಐಎಸಿಸಿಎಸ್ ಎಂಬ ಆಧುನಿಕ ರಕ್ಷಣಾ ಜಾಲ ಶತ್ರುವಿನ ದಾಳಿಯನ್ನು ಗಾಳಿಯಲ್ಲೇ ಹೊಡೆದುರುಳಿಸಿತು. ಅರ್ಧಕ್ಕಿಂತ ಹೆಚ್ಚು ಡ್ರೋನ್‌ಗಳನ್ನು ಭಾರತದ ಗನ್ ವ್ಯವಸ್ಥೆಗಳು ಪತ್ತೆಹಚ್ಚಿ ನಾಶಪಡಿಸಿದರೆ, ಉಳಿದವುಗಳನ್ನು ಎಲೆಕ್ಟ್ರಾನಿಕ್ ವಾರ್‌ಫೇರ್ ಮೂಲಕ ಹಾದಿ ತಪ್ಪಿಸಲಾಯಿತು.

ಪಾಕಿಸ್ತಾನದ ಗರ್ಭದೊಳಗೆ ಬ್ರಹ್ಮೋಸ್ ಗುಡುಗು

ಮೇ 10ರಂದು ಬೆಳಗಿನ ಜಾವ 2 ರಿಂದ 5 ಗಂಟೆಯ ನಡುವೆ ಭಾರತ ಅತ್ಯಂತ ನಿರ್ಣಾಯಕ ದಾಳಿ ನಡೆಸಿತು. ಭಾರತದ ನೆಲದಿಂದಲೇ ಉಡಾವಣೆಯಾದ ಬ್ರಹ್ಮೋಸ್, ಸ್ಕಾಲ್ಪ್-ಇಜಿ ಮತ್ತು ರಾಂಪೇಜ್ ಕ್ಷಿಪಣಿಗಳು ಪಾಕಿಸ್ತಾನದ ಒಳಗಿರುವ ಪ್ರಮುಖ ವಾಯುನೆಲೆಗಳನ್ನು ಧ್ವಂಸಗೊಳಿಸಿದವು.

- **ನೂರ್ ಖಾನ್ ವಾಯುನೆಲೆ: ಇಸ್ಲಾಮಾಬಾದ್ ಸಮೀಪದ ಈ ಪ್ರಮುಖ ನೆಲೆಯಲ್ಲಿದ್ದ ಕಮಾಂಡ್ ಸೆಂಟರ್ ಅನ್ನು ಬ್ರಹ್ಮೋಸ್ ಕ್ಷಿಪಣಿಗಳು ಪುಡಿಗಟ್ಟಿದವು.**
- **ಮುರೀದ್ ಮತ್ತು ರಹೀಮ್ ಯಾರ್ ಖಾನ್: ಇಲ್ಲಿನ ಡ್ರೋನ್ ನಿಯಂತ್ರಣ ಕೇಂದ್ರಗಳು ಮತ್ತು ರನ್-ವೇಗಳು ಹಾನಿಗೊಳಗಾದವು.**
- **ಸರ್ಗೋಧ ಮತ್ತು ಭೋಲಾರಿ: ಈ ನೆಲೆಗಳಲ್ಲಿದ್ದ ಪಾಕಿಸ್ತಾನದ ಯುದ್ಧ ವಿಮಾನಗಳು ಹಾರುವ ಮೊದಲೇ ನೆಲದ ಮೇಲೆಯೇ ನಾಶವಾದವು.**

ಒಟ್ಟು 50ಕ್ಕೂ ಹೆಚ್ಚು ನಿಖರ ಕ್ಷಿಪಣಿಗಳನ್ನು ಭಾರತ ಬಳಸಿದ್ದು, ಇದರಿಂದ ಕಂಗೆಟ್ಟ ಪಾಕಿಸ್ತಾನ ಮೇ 10ರ ಮಧ್ಯಾಹ್ನದ ವೇಳೆಗೆ ಕದನ ವಿರಾಮಕ್ಕೆ ಮೊರೆ ಹೋಯಿತು.

ಶತ್ರುವಿನ ಕಣ್ಣು ಸೀಳಿದ ಭಾರತ: ಸೀಡ್ ಕಾರ್ಯಾಚರಣೆ



ಮೇ 8 ಮತ್ತು 9ರಂದು ಭಾರತ ಪಾಕಿಸ್ತಾನದ ವಾಯು ರಕ್ಷಣಾ ವ್ಯವಸ್ಥೆಯನ್ನು ಪೂರ್ಣವಾಗಿ ನಿಷ್ಕ್ರಿಯಗೊಳಿಸುವ ಸೀಡ್ ಕಾರ್ಯಾಚರಣೆ ಕೈಗೆತ್ತಿಕೊಂಡಿತು. ಚುನಿಯಾನ್ ಮತ್ತು ಪಸ್ರೂರ್‌ನಲ್ಲಿರುವ ಪಾಕಿಸ್ತಾನದ ರಡಾರ್‌ಗಳು ಮತ್ತು ಎಚ್‌ಕ್ಯೂ-9 ಕ್ಷಿಪಣಿ ಬ್ಯಾಟರಿಗಳನ್ನು ಇಸ್ರೇಲಿ ತಂತ್ರಜ್ಞಾನದ ಹ್ಯಾರೋಪ್ ಮತ್ತು ಹಾರ್ಪಿ ಲೊಯಿಟರಿಂಗ್ ಮುನಿಷನ್(ಆತ್ಮಹತ್ಯಾ ಡ್ರೋನ್) ಮೂಲಕ ಧ್ವಂಸಗೊಳಿಸಲಾಯಿತು. ಭಾರತದ ಎಸ್-400 ಕ್ಷಿಪಣಿ ವ್ಯವಸ್ಥೆ, ಸುಮಾರು 300 ಕಿ.ಮೀ ದೂರದಲ್ಲೇ ಶತ್ರು ವಿಮಾನಗಳನ್ನು ಪತ್ತೆಹಚ್ಚಿ ಹಿಮ್ಮೆಟ್ಟಿಸಿತು. ಇದರಿಂದ ಪಾಕಿಸ್ತಾನದ ಎಫ್-16 ಮತ್ತು ಜೆಎಫ್-17 ಯುದ್ಧ ವಿಮಾನಗಳಿಗೆ ತನ್ನದೇ ವಾಯುಪ್ರದೇಶದಲ್ಲಿ ಹಾರಾಡಲು ಭಯವಾಗುವಂತಹ ಸ್ಥಿತಿ ನಿರ್ಮಾಣವಾಯಿತು.

ಕಿರುಸುದ್ದಿ

ಕೇರಳ ಬಿಜೆಪಿಗೆ 3 ಸ್ಥಾನ, ಗಂಭೀರ ಎಚ್ಚರಿಕೆ: ಸಿಪಿಐ

• **ತಿರುವನಂತಪುರ:** ಕೇರಳದ ವಿಧಾನಸಭಾ ಚುನಾವಣೆಯಲ್ಲಿ ಈ ಬಾರಿ ಯುಡಿಎಫ್ ಭರ್ಜರಿ ಗೆಲುವು ಸಾಧಿಸಿದೆ. ಈ ಮಧ್ಯೆ ಎಲ್ಲರ ಚಿತ್ತ ಕೇರಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆದ್ದ ಮೂರು ಸ್ಥಾನಗಳ ಮೇಲೆ ಹರಿದಿದೆ. ಈ ಮೂರು ಅಭ್ಯರ್ಥಿಗಳ ಗೆಲುವಿನ ಬಗ್ಗೆ ಎಲ್ಲಾ ಪಕ್ಷಗಳು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಇದು ರಾಜ್ಯದ ರಾಜಕೀಯಕ್ಕೆ ಅಪಾಯವನ್ನುಂಟುಮಾಡುತ್ತದೆ ಎಂದು ಸಿಪಿಐ ರಾಜ್ಯ ಕಾರ್ಯದರ್ಶಿ ಬಿನೋಯ್ ವಿಶ್ವಂ ಬುಧವಾರ ಹೇಳುವ ಮೂಲಕ ಸಣ್ಣ ಗೆಲುವು ಮುಂದೆ ದೊಡ್ಡ ಬದಲಾವಣೆ ತರಲಿದೆ ಎಂಬುದರ ಬಗ್ಗೆ ಸೂಚನೆ ನೀಡಿದ್ದಾರೆ.

ಹಿಂಸಾಚಾರಗಳಲ್ಲಿ ಭಾಗಿ ಆದವರನ್ನು ಬಂಧಿಸಿ: ಇಸಿ

• **ಕೋಲ್ಕತ್ತಾ:** ಪಶ್ಚಿಮ ಬಂಗಾಳದಲ್ಲಿ ಮತದಾನದ ನಂತರದ ಹಿಂಸಾಚಾರ ಮತ್ತು ವಿಧ್ವಂಸಕ ಕೃತ್ಯಗಳಲ್ಲಿ ಭಾಗಿಯಾಗಿರುವವರನ್ನು ತಕ್ಷಣ ಬಂಧಿಸುವಂತೆ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ರಾಜ್ಯದಲ್ಲಿ ನಡೆದ ಮತದಾನದ ನಂತರದ ಹಿಂಸಾಚಾರದ ಘಟನೆಗಳಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ವಿಯೆಟ್ನಾಂ ಜತೆಗೆ ಭಾರತ ವ್ಯಾಪಾರ ಗುರಿ ದುಪ್ಪಟ್ಟು

• **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿ ಮತ್ತು ವಿಯೆಟ್ನಾಂ ಅಧ್ಯಕ್ಷ ಟೋ ಲಾಮ್ ಬುಧವಾರ ಹೊಸದಿಲ್ಲಿಯಲ್ಲಿ ನಡೆದ ಮಾತುಕತೆಯ ವೇಳೆ ಉಭಯ ದೇಶಗಳ ಬಾಂಧವ್ಯವನ್ನು ವರ್ಧಿತ ಸಮಗ್ರ ವ್ಯೂಹಾತ್ಮಕ ಪಾಲುದಾರಿಕೆ ಹಂತಕ್ಕೆ ಏರಿಸಿದ್ದಾರೆ.

ಉಭಯ ರಾಷ್ಟ್ರಗಳು 2030ರ ವೇಳೆಗೆ ವಾರ್ಷಿಕ 25 ಬಿಲಿಯನ್ ಅಮೆರಿಕನ್ ಡಾಲರ್ ವ್ಯಾಪಾರ ಗುರಿ ನಿಗದಿಪಡಿಸಿವೆ. ಕಳೆದ ದಶಕದಲ್ಲಿ ದ್ವಿಪಕ್ಷೀಯ ವ್ಯಾಪಾರ ದುಪ್ಪಟ್ಟಾಗಿದ್ದು, ಪ್ರಸ್ತುತ 16 ಬಿಲಿಯನ್ ಡಾಲರ್ ತಲುಪಿದೆ. ಡಿಜಿಟಲ್ ಪಾವತಿ, ಅಪರೂಪದ ಭೂಖನಿಜಗಳು, ಔಷಧೀಯ ವಸ್ತುಗಳು, ಶಿಕ್ಷಣ, ಬ್ಯಾಂಕಿಂಗ್ ಮತ್ತು ಸಂಸ್ಕೃತಿ ಸೇರಿದಂತೆ ಒಟ್ಟು 13 ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ಔಷಧ ಪ್ರಾಧಿಕಾರಗಳ ನಡುವಿನ ಒಪ್ಪಂದ ವಿಯೆಟ್ನಾಂನಲ್ಲಿ ಭಾರತೀಯ ಔಷಧಿಗಳ ಲಭ್ಯತೆಯನ್ನು ಹೆಚ್ಚಿಸಲಿದೆ ಮತ್ತು ಕೃಷಿ ರಫ್ತು ಪ್ರಕ್ರಿಯೆಗಳನ್ನು ಸುಗಮಗೊಳಿಸಲಿದೆ.

ಎರಡೂ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಪರಸ್ಪರ ಸಹಕಾರವನ್ನು ಹೆಚ್ಚಿಸಲಿವೆ. ಭಾರತದ ಯುಪಿಐ ಮತ್ತು ವಿಯೆಟ್ನಾಂನ ವೇಗದ ಪಾವತಿ ವ್ಯವಸ್ಥೆಗಳನ್ನು ಶೀಘ್ರದಲ್ಲೇ ಪರಸ್ಪರ ಜೋಡಿಸಲಾಗುವುದು. ಇಂಡೋ-ಪೆಸಿಫಿಕ್ ಮತ್ತು ದಕ್ಷಿಣ ಚೀನಾ ಸಮುದ್ರದ ಪರಿಸ್ಥಿತಿಯ ಕುರಿತು ಚರ್ಚಿಸಿದ ನಾಯಕರು, ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಗೆ ಬದ್ಧತೆ ವ್ಯಕ್ತಪಡಿಸಿದರು.

ಈ ವರ್ಷದ ಅಂತ್ಯದೊಳಗೆ ಭಾರತ-ಆಸಿಯಾನ್ ವ್ಯಾಪಾರ ಒಪ್ಪಂದವನ್ನು ನವೀಕರಿಸಲು ನಾಯಕರು ಒಪ್ಪಿಕೊಂಡರು. ಅಧ್ಯಕ್ಷ ಲಾಮ್, ಮಂಗಳವಾರ ಮೂರು ದಿನಗಳ ಅಧಿಕೃತ ಭೇಟಿಗಾಗಿ ಭಾರತಕ್ಕೆ ಆಗಮಿಸಿದ್ದರು.

ಪಂಜಾಬ್‌ನಲ್ಲಿ ಎರಡು ಕಡೆ ಬಾಂಬ್ ಸ್ಫೋಟ!

• **ಚಂಡೀಗಢ:** ಪಂಜಾಬ್‌ನಲ್ಲಿ ಕೆಲವೇ ಗಂಟೆಗಳ ಅಂತರದಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ಸ್ಫೋಟ ಘಟನೆಗಳು ಭಾರೀ ಭೀತಿ ಸೃಷ್ಟಿಸಿದೆ. ಜಲಂಧರ್‌ನ ಗಡಿ ಭದ್ರತಾ ಪಡೆಯ ಪಂಜಾಬ್ ಗಡಿನಾಡಿನ ಪ್ರಧಾನ ಕಚೇರಿಯ ಹೊರಗೆ ಮಂಗಳವಾರ ರಾತ್ರಿ 8 ಗಂಟೆ ಸುಮಾರಿಗೆ ಮೊದಲ ಸ್ಫೋಟ ಸಂಭವಿಸಿದ್ದು, ಎರಡನೇ ಘಟನೆಯು ಅಮೃತಸರದ ಖಾಸಾ ಕಂಟೋನ್ಮೆಂಟ್ ಪ್ರದೇಶದ ಬಳಿ ಮಂಗಳವಾರ ರಾತ್ರಿ 11 ಗಂಟೆ ಸುಮಾರಿಗೆ ಸಂಭವಿಸಿದೆ.



ಘಟನೆಗಳಲ್ಲಿ ಯಾವುದೇ ಸಾವು-ನೋವು ವರದಿಯಾಗಿಲ್ಲ, ಸುಮಾರು 1 ಕಿಮೀ ದೂರದವರೆಗೆ ಸ್ಫೋಟದಂತಹ ಶಬ್ದ ಕೇಳಿಬಂದಿದೆ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದು, ಜಲಂಧರ್ ನಿಲ್ಲಿಸಿದ್ದ ಆಕ್ಟಿವಾಗೆ(ಸ್ಕೂಟರ್) ಬೆಂಕಿ ಹೊತ್ತಿಕೊಂಡಿದೆ. ತನಿಖೆ ನಡೆಸುತ್ತಿದ್ದೇವೆ ಎಂದು ಜಲಂಧರ್ ಪೊಲೀಸ್ ಆಯುಕ್ತ ಧನ್‌ಪ್ರೀತ್ ಕೌರ್ ಹೇಳಿದರು. ಈ ನಡುವೆ ಖಲಿಸ್ತಾನಿ ಲಿಬರೇಷನ್ ಆರ್ಮಿ ದಾಳಿಯ ಹೊಣೆ ಹೊತ್ತುಕೊಂಡಿರುವ ಪೋಸ್ಟ್ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಇತ್ತೀಚೆಗೆ ಶಂಭು ರೈಲ್ವೆ ಹಳಿಯಲ್ಲೂ ಸ್ಫೋಟ ನಡೆದಿದ್ದು, ಈಗಿನ ಎರಡೂ ಘಟನೆಗಳೊಂದಿಗೆ ಯಾವುದೇ ಸಂಬಂಧವಿದೆಯೇ ಎಂದು ಭದ್ರತಾ ಸಂಸ್ಥೆಗಳು ಪರಿಶೀಲಿಸುತ್ತಿವೆ. ಯಾವುದೇ ಸಂಘಟನೆ ಈ ಸ್ಫೋಟಗಳ ಹೊಣೆ ಹೊತ್ತಿಲ್ಲ.

ರಾಜೀನಾಮೆ ನೀಡಲ್ಲ, ವಜಾಗೊಳಿಸಲಿ: ದೀದಿ

• **ಕೋಲ್ಕತ್ತಾ:** ನಾನು ನನ್ನ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡುವುದಿಲ್ಲ, ಕೇಂದ್ರವು ನನ್ನನ್ನು ವಜಾಗೊಳಿಸಬಹುದು ಎಂದು ಪಶ್ಚಿಮಬಂಗಾಳದ ನಿರ್ಗಮಿತ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಪಶ್ಚಿಮ ಬಂಗಾಳದ ನಿರ್ಗಮಿತ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ತಮ್ಮ ಪಕ್ಷದ ಹೊಸದಾಗಿ ಆಯ್ಕೆಯಾದ ಶಾಸಕರ ಸಭೆಯನ್ನುದ್ದೇಶಿಸಿ ಭಾಷಣದಲ್ಲಿ, ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಬಲವಂತವಾಗಿ ಸೋಲಿಸಲಾಗಿದೆ ಎಂದು ಹೇಳಿದ್ದಾರೆ. 1500 ಕ್ಕೂ ಹೆಚ್ಚು ತೃಣಮೂಲ ಕಾಂಗ್ರೆಸ್ ಕಚೇರಿಗಳನ್ನು ಹೈಜಾಕ್ ಮಾಡಲಾಗಿದೆ ಎಂದು ಅವರು ಆರೋಪಿಸಿದ್ದಾರೆ. ಬಂಗಾಳ ಚುನಾವಣಾ ಫಲಿತಾಂಶದ ನಂತರ ಇಂಡಿ ಕೂಟದಲ್ಲಿ ಹೆಚ್ಚಿನ ಒಗ್ಗಟ್ಟು ಇದೆ ಎಂದು ಅವರು ಹೇಳಿದರು. ರಾಜ್ಯವು ಚುನಾವಣೆಗೆ ಸಾಕ್ಷಿಯಾಗಿಲ್ಲ, ಆದರೆ ದೌರ್ಜನ್ಯಕ್ಕೆ ಸಾಕ್ಷಿಯಾಗಿದೆ ಎಂದು ಆರೋಪಿಸಿದ ಅವರು, ಚುನಾವಣೆಯಲ್ಲಿ ತೃಣಮೂಲ ಕಾಂಗ್ರೆಸ್ ಬಿಜೆಪಿಯನ್ನು ನೈತಿಕವಾಗಿ ಸೋಲಿಸಿದೆ ಎಂದು ಹೇಳಿದ್ದಾರೆ.

ಹತ್ತು ಶಾಸಕರು ಗೈರು: ಚುನಾವಣೆಯ ಸೋಲಿನ ನಂತರ ಪಕ್ಷದ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಮಂಗಳವಾರ ಕರೆದಿದ್ದ ಪ್ರಮುಖ ಕಾರ್ಯತಂತ್ರದ ಸಭೆಗೆ ನೂತನವಾಗಿ ಆಯ್ಕೆಯಾದ 80 ಶಾಸಕರ ಪೈಕಿ ಸುಮಾರು 10 ಶಾಸಕರು ಗೈರುಹಾಜರಾಗಿದ್ದಾರೆ. ಮಮತಾ ಬ್ಯಾನರ್ಜಿ ನಿವಾಸದಲ್ಲಿ ನಡೆದ ಈ ಸಭೆಯಲ್ಲಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಮತ್ತು ಹಿರಿಯ ಪದಾಧಿಕಾರಿಗಳು ಭಾಗವಹಿಸಿದ್ದರು. ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡಲು ಮತ್ತು ಚುನಾವಣೋತ್ತರ ಕಾರ್ಯತಂತ್ರಗಳ ಬಗ್ಗೆ ಚರ್ಚಿಸಲು ಈ ಸಭೆ ಆಯೋಜಿಸಲಾಗಿತ್ತು.

ಬಂಗಾಳಕ್ಕೆ ಬಿಜೆಪಿ ಸಿಎಂ ಪ್ರಮಾಣ ಸ್ವೀಕಾರ ಮೇ 9ಕ್ಕೆ

• **ಕೋಲ್ಕತ್ತಾ:** ಪಶ್ಚಿಮ ಬಂಗಾಳದ ಮೊದಲ ಬಿಜೆಪಿ ಸರ್ಕಾರದ ಪ್ರಮಾಣ ವಚನ ಸಮಾರಂಭವು ಇಲ್ಲಿನ ಬ್ರಿಗೇಡ್ ಪರೇಡ್ ಮೈದಾನದಲ್ಲಿ ನಡೆಯಲಿದೆ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಸಮಿಕ್ ಭಟ್ಟಾಚಾರ್ಯ ಬುಧವಾರ ಘೋಷಿಸಿದ್ದಾರೆ. ರಾಜ್ಯದಲ್ಲಿ ಟಿಎಂಸಿಯ 15 ವರ್ಷಗಳ ಆಡಳಿತವನ್ನು ಅಂತ್ಯಗೊಳಿಸಿದ ಬಿಜೆಪಿ ರಾಜ್ಯದಲ್ಲಿ ಔಪಚಾರಿಕವಾಗಿ ಅಧಿಕಾರ ವಹಿಸಿಕೊಳ್ಳಲು ಸಿದ್ಧವಾಗಿದೆ. ಬೆಳಗ್ಗೆ 10 ಗಂಟೆಗೆ ಆರಂಭವಾಗಲಿರುವ ಈ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ಅಧ್ಯಕ್ಷ ನಿತಿನ್ ನವೀನ್ ಮತ್ತು ಹಲವಾರು ಕೇಂದ್ರ ಸಚಿವರು ಭಾಗವಹಿಸುವ ನಿರೀಕ್ಷೆಯಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಹೊಸ ಬಿಜೆಪಿ ಸರ್ಕಾರವು ಬ್ರಿಗೇಡ್ ಪರೇಡ್ ಮೈದಾನದಲ್ಲಿ ಬೆಳಗ್ಗೆ 10 ಗಂಟೆಗೆ ಪ್ರಮಾಣ ವಚನ ಸ್ವೀಕರಿಸುತ್ತದೆ ಎಂದು ಭಟ್ಟಾಚಾರ್ಯ ಸುದ್ದಿಗಾರರಿಗೆ ತಿಳಿಸಿದರು.



ಡಿಎಂಕೆ, ಎಐಎಡಿಎಂಕೆಯನ್ನು ಪ್ರಮುಖ ಕ್ಷೇತ್ರಗಳಲ್ಲೇ ಸೋಲಿಸಿದ ಟಿವಿಕೆ

ಚೊಚ್ಚಲ ಪ್ರವೇಶದಲ್ಲೇ ಅಪೂರ್ವ ಸಾಧನೆ

• **ಚೆನ್ನೈ:** ತೃತೀಯ ಶಕ್ತಿಯಾಗಿಯೂ ಸ್ಥಾನ ಸಿಗುವುದೋ ಇಲ್ಲವೋ ಎಂದು ಮತ ಎಣಿಕೆ ದಿನದಂದೂ ಬಹುಶಃ ಲೆಕ್ಕಾಚಾರ ಹಾಕಿರಬಹುದಾದ, ಚುನಾವಣಾ ಕಣದ ಪ್ರಪ್ರಥಮ ಸ್ಪರ್ಧಿ ಟಿವಿಕೆ, 2026ರ ವಿಧಾನಸಭಾ ಚುನಾವಣೆಯಲ್ಲಿ ಅತ್ಯಂತ ಪ್ರಮುಖ ರಾಜಕೀಯ ಶಕ್ತಿಯಾಗಿ ಒಡಮೂಡಿರುವುದು ನಿಜಕ್ಕೂ ಅಚ್ಚರಿಯ ಸಂಗತಿ. ಪಕ್ಷದ ಸಾಧನೆ ಅದೆಷ್ಟು ಪರಿಣಾಮಕಾರಿಯಾಗಿದೆಯೆಂದರೆ ಡಿಎಂಕೆ ಮತ್ತು ಎಐಎಡಿಎಂಕೆಯನ್ನು ಹಲವು ಪ್ರಮುಖ ಕ್ಷೇತ್ರಗಳಲ್ಲೇ ಟಿವಿಕೆ ಪರಾಭವಗೊಳಿಸಿದೆ. ಎರಡು ದ್ರಾವಿಡ ದೈತ್ಯರ ಸಂಯುಕ್ತ ಬಲವನ್ನು ಮುಚ್ಚಿಬಿಡುವ ಟಿವಿಕೆ ಸಾಮರ್ಥ್ಯವನ್ನು 2026ರ ಚುನಾವಣಾ ಡೇಟಾ ಬಯಲುಗೊಳಿಸಿದೆ.



ನಾಲ್ಕು ಪ್ರಮುಖ ಕ್ಷೇತ್ರಗಳಲ್ಲಿ ಟಿವಿಕೆ ಗಳಿಸಿರುವ ಮತಗಳ ಪ್ರಮಾಣ ಡಿಎಂಕೆ, ಎಡಿಎಂಕೆಗಳ ಒಟ್ಟು ಮತಗಳ ಪ್ರಮಾಣಕ್ಕಿಂತ ಅತ್ಯಧಿಕವಿದೆ ಮತ್ತು ತಮಿಳುನಾಡಿನ ಆಧುನಿಕ ಚರಿತ್ರೆಯಲ್ಲಿ ರಾಜಕೀಯ ರಂಗಕ್ಕೆ ಚೊಚ್ಚಲ ಪ್ರವೇಶ ಮಾಡಿದ ಪಕ್ಷವೊಂದು ಈ ಪರಿ ಅತ್ಯಧಿಕ ಮತಗಳಿಸಿದ್ದಿಲ್ಲ. ಡಾ.ರಾಧಾಕೃಷ್ಣನ್ ನಗರದಲ್ಲಿ ಟಿವಿಕೆ ಅಭ್ಯರ್ಥಿ ಎನ್.ಮೇರಿ ವಿಲ್ಸನ್ ಶೇ.53.97 ಮತಗಳಿಸಿದ್ದಾರೆ. ಇಲ್ಲಿ ಡಿಎಂಕೆ ಅಭ್ಯರ್ಥಿ ಶೇ.26.56, ಎಐಎಡಿಎಂಕೆ ಅಭ್ಯರ್ಥಿ ಶೇ.14.8 ಮತಗಳಿಸಿದ್ದಾರೆ. ಎರಡೂ ಪಕ್ಷಗಳ ಅಭ್ಯರ್ಥಿಗಳು ಗಳಿಸಿದ ಮತಗಳ ಒಟ್ಟು ಪ್ರಮಾಣ ಕೂಡ ಶೇ.41.4. ವಿಲ್ಸನ್ ಅವರ ಗೆಲುವಿನ ಅಂತರ (ಶೇ.27.41)ಕೂಡ ಡಿಎಂಕೆ, ಎಡಿಎಂಕೆ ಅಭ್ಯರ್ಥಿಗಳು ಪಡೆದ ಒಟ್ಟು ಮತಗಳಿಗಿಂತ ಅತ್ಯಧಿಕವಾಗಿದೆ.

ಮಾಡವರಂನಲ್ಲಿ ಟಿವಿಕೆ ಅಭ್ಯರ್ಥಿ ಎಂ.ಎಲ್. ವಿಜಯಪ್ರಭು ಗಳಿಸಿರುವ ಮತಗಳ ಪ್ರಮಾಣ ಎದುರಾಳಿಗಳ ಒಟ್ಟು ಮತಗಳಿಂದ ದುಪ್ಪಟ್ಟು, ಇಂತಹ ವಿದ್ಯಮಾನಗಳು ಶೋಳಿಂಗನಲ್ಲೂರು, ಮದುರಾವೋಯಲ್ ಕ್ಷೇತ್ರಗಳಲ್ಲೂ ಘಟಿಸಿವೆ. ಇವೆರಡು ಕ್ಷೇತ್ರಗಳಲ್ಲಿ ಟಿವಿಕೆ ಅಭ್ಯರ್ಥಿಗಳಾದ ಇಸಿಆರ್ ಪಿ. ಶರವಣನ್ ಮತ್ತು ರೇವಂತ್ ಚರಣ್ ಅತ್ಯಧಿಕ ಮತಗಳಿಕೆಯೊಂದಿಗೆ ಸಾಂಪ್ರದಾಯಿಕ ದ್ರಾವಿಡ ಪಕ್ಷಗಳ ಅಭ್ಯರ್ಥಿಗಳನ್ನು ದ್ವಿತೀಯ ಮತ್ತು ತೃತೀಯ ಸ್ಥಾನಗಳಿಗೆ ತಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಡಿಎಂಕೆಯ ಉದಯನಿಧಿ ಸ್ಟಾಲಿನ್ ಮತ್ತು ಪಿ.ಕೆ. ಸೇಕರ್‌ಬಾಬು ಛೇಪಾಕ್-ತಿರುವಲ್ಲಿಕೇಣಿ ಮತ್ತು ಬಂದರು ಕ್ಷೇತ್ರಗಳಲ್ಲಿ ಜಯ ಗಳಿಸಿದ್ದಾರೆ. ಇದರ ಹೊರತು ಡಿಎಂಕೆಯ ಭದ್ರಕೋಟೆ ಖ್ಯಾತಿಯ ಚೆನ್ನೈ ಮತ್ತು ಇದರ ಆರೆನಗರಗಳಲ್ಲಿ ಟಿವಿಕೆ ಹಿಡಿತ ಸಾಧಿಸಿದೆ. ಚೆನ್ನೈಯ ಎಲ್ಲಾ ಕ್ಷೇತ್ರಗಳಲ್ಲೂ ಪಕ್ಷವು ಶೇ. 45ಮೀರಿ ಮತ ಗಳಿಸಿದೆ. ಪೆರಂಬೂರು, ತಿರುವೊಟ್ಟಿಯೂರ್, ಪೂಣಮಲ್ಲಿ, ಅವಡಿ, ಅಂಬತ್ತೂರು ಕ್ಷೇತ್ರಗಳಲ್ಲಿ ಶೇ.50 ಮೀರಿ ಹಿಡಿತ ಸಾಧಿಸಿದೆ.

ಬ್ರೆಜಿಲ್ ಹೈನುಗಾರಿಕೆ ಕ್ರಾಂತಿಗೆ ಭಾರತದ ಕೊಡುಗೆ

ಗುಜರಾತ್‌ನ ಕೃಷ್ಣ ಹೆಸರಿನ ಹೋರಿ ಸಹಕಾರ

• **ಭಾವನಗರ:** 1960ರಲ್ಲಿ ಭಾವನಗರದ ಮಹಾರಾಜರು ಬ್ರೆಜಿಲ್‌ನ ಜಾನುವಾರು ಮಾಲೀಕರೊಬ್ಬರಿಗೆ ಉಡುಗೊರೆಯಾಗಿ ನೀಡಿದ್ದ ಕೃಷ್ಣ ಹೆಸರಿನ ಗಿರ್ ತಳಿಯ ಹೋರಿ, ಇಂದು ಬ್ರೆಜಿಲ್‌ನ ಒಟ್ಟು ಹಾಲು ಉತ್ಪಾದನೆಯ ಶೇ.80ರಷ್ಟು ಪಾಲಿಗೆ ತನ್ನ ವಂಶಾವಳಿಯ ಮೂಲಕ ಕಾರಣವಾಗಿದೆ ಎಂದು ಗುರುತಿಸಲಾಗಿದೆ. ದಕ್ಷಿಣ ಅಮೆರಿಕದ ಜಾನುವಾರುಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ 1958ರಲ್ಲಿ ಬ್ರೆಜಿಲ್‌ನ ಜಾನುವಾರು ಉದ್ಯಮಿ ಸೆಲ್ಸೊ ಗಾರ್ಸಿಯಾ ಸಿಡ್ ಪರವಾಗಿ ಕೌಬಾಯ್ ಇಲ್ಡೆಫೊನ್ಸೊ ದೊಸ್ ಸಾಂಟೋಸ್ ಅವರು ಕೃಷ್ಣನನ್ನು ಆಯ್ಕೆ ಮಾಡಿದ್ದರು. 1960ರಲ್ಲಿ ಬ್ರೆಜಿಲ್ ತಲುಪಿದ ಈ ಹೋರಿಯ ವಂಶವಾಹಿನಿ ಅಲ್ಲಿನ ಹೈನುಗಾರಿಕೆಯ ರಕ್ತಗತ ಗುಣಲಕ್ಷಣಗಳನ್ನು ನವೀಕರಿಸಿತು. ಅತಿಯಾದ ಅಂತರ್-ತಳಿ ಸಂವರ್ಧನೆಯಿಂದ ಉಂಟಾಗಿದ್ದ ಉತ್ಪಾದಕತೆಯ ಸಮಸ್ಯೆಗಳನ್ನು ಇದು ಯಶಸ್ವಿಯಾಗಿ ನಿವಾರಿಸಿತು. ಇಂದು ಬ್ರೆಜಿಲ್‌ನ ಒಂದು ಗಿರ್ ಹಸು ದಿನಕ್ಕೆ 20 ಲೀಟರ್ ಹಾಲು ನೀಡುತ್ತಿದ್ದು, ಇದು ಅಲ್ಲಿನ ಸ್ಥಳೀಯ ತಳಿಗಳ ಮೂಲ ಉತ್ಪಾದನೆಗಿಂತ ಹತ್ತು ಪಟ್ಟು ಹೆಚ್ಚಾಗಿದೆ. ಈ ತಳಿಶಾಸ್ತ್ರೀಯ ಬದಲಾವಣೆ, ಬ್ರೆಜಿಲ್ ಜಾಗತಿಕ ಹೈನುಗಾರಿಕಾ ಕ್ಷೇತ್ರದಲ್ಲಿ ಮುಂಚೂಣಿಗೆ ಬರಲು ಮತ್ತು ಬೃಹತ್ ವಾಣಿಜ್ಯ ಕೃಷಿ ಬೇಡಿಕೆಗಳನ್ನು ಪೂರೈಸಲು ಸಹಾಯ ಮಾಡಿದೆ.

ಐತಿಹಾಸಿಕ ಹಸ್ತಾಂತರ: ಮದ್ರಾಸ್‌ನ ಮೊದಲ ಭಾರತೀಯ ಗವರ್ನರ್ ಮತ್ತು ಭಾವನಗರದ ಮಹಾರಾಜರಾಗಿದ್ದ ಕೃಷ್ಣಕುಮಾರಸಿಂಹಜಿ ಭಾವಸಿಂಹಜಿ, ಕೃಷ್ಣನನ್ನು ದೊಸ್ ಸಾಂಟೋಸ್ ಅವರಿಗೆ ಉಡುಗೊರೆಯಾಗಿ ನೀಡಿದ್ದರು. ಈ ಕೊಡುಗೆ, ಎರಡೂ ದೇಶಗಳ ನಡುವೆ ಇಂದಿಗೂ ಮುಂದುವರಿಯುತ್ತಿರುವ ಸುದೀರ್ಘ



ಹೈನುಗಾರಿಕಾ ಪಾಲುದಾರಿಕೆ ಸ್ಥಾಪಿಸಿತು. ಭಾರತದಲ್ಲಿ ಇತರ ತಳಿಗಳೊಂದಿಗೆ ಅತಿಯಾಗಿ ಮಿಶ್ರತಳಿ ಸಂವರ್ಧನೆ ನಡೆಸಿದ ಕಾರಣ ಗಿರ್ ತಳಿ ಕ್ಷೀಣಿಸಿದೆ. ಇದನ್ನು ಸರಿಪಡಿಸಲು ಮತ್ತು ಭಾರತೀಯ ಮೂಲ ತಳಿಯನ್ನು ಪುನಃಸ್ಥಾಪಿಸಲು ಬ್ರೆಜಿಲ್‌ನಿಂದ ಇದೇ ಗಿರ್ ತಳಿಯನ್ನು ಮರಳಿ ಆಮದು ಮಾಡಿಕೊಳ್ಳಲು ಭಾರತ ಸರ್ಕಾರ ಇತ್ತೀಚೆಗೆ ನಿರ್ಧರಿಸಿದೆ.

ಅಂತಿಮ ಗೌರವ: ಕೃಷ್ಣನ ಮರಣದ ನಂತರ, ಅದರ ದೇಹವನ್ನು ಸಂರಕ್ಷಿಸಿ ಸಿಡ್ ಅವರ ತೋಟದ ಮನೆಯಲ್ಲಿ ಗಾಜಿನ ಪೆಟ್ಟಿಗೆಯಲ್ಲಿ ಇರಿಸಲಾಗಿದೆ. ಹೈನುಗಾರಿಕಾ ಕ್ಷೇತ್ರಕ್ಕೆ ಈ ಹೋರಿ ನೀಡಿದ ಕೊಡುಗೆಯನ್ನು ಗೌರವಿಸಲು ಬ್ರೆಜಿಲ್ ಸರ್ಕಾರ ಅದರ ನೆನಪಿನಲ್ಲಿ ವಿಶೇಷ ಅಂಚೆ ಚೀಟಿಗಳು ಮತ್ತು ನಾಣ್ಯಗಳನ್ನು ಹೊರತಂದಿದೆ.

IN THE COURT OF THE I ADDL. DISTRICT AND SESSIONS JUDGE AT KOLAR

Mis.No.40/2025

Petitioner: G.Chandramouli

V/S

Respondents: Sunera Sulthana & others

NOTICE TO RESPONDENT No.4 UNDER ORDER 5 RULE 20 READ WITH SECTION 151 OF CPC

T.Anzeela Samad S/o Late Abdul Samad, Major, R/at No.16, Sy.No.38, Sulthan Thippasandra Kolar.

WHEREAS, the petitioner had filed this petition against the respondents to set aside the judgment and award passed on 27.2.2023 in MVC. No.280/2019 on dt:27.2.2023 on the file of I Addl. District and Sessions issued Judge at Kolar. This Hon'ble court issued notice to the respondent No.4 but it was not served. Hence this notice published in paper intimating you the respondent No.4 to appear in the court in person or through advocate on dated: 18.6.2026 failing which case will be proceeded in your absence.

Given under my hand and seal of this court, this the 4th day of May 2026.

BY ORDER THE COURT
The Chief Administrative Officer, 1 Addl. District and Sessions Judge, Kolar ADVOCATE FOR PETITIONER:
Y.A.Sarvesh
Advocate, Kolar

ಮಾನ್ಯ ಸಿವಿಲ್ ನ್ಯಾಯಾಧೀಶರ ... ನ್ಯಾಯಾಲಯ, ಬೆಂಗಳೂರು

ಕ್ರಿಮಿನಲ್ ಮಿಸ್ ನಂ. 5457/2026

[illegible]

ಸಾರ್ವಜನಿಕ ಪ್ರಕಟಣೆ

[illegible]

ದಿನಾಂಕ 02/06/2026

IN THE COURT OF THE HONORABLE SMALL CAUSE JUDGE AND MACT AT BENGALURU

MVC 7775 OF 2025 (SCCH-11)

BETWEEN : Mr. Kiran Kumar ...Petitioner

AND : SBI General Insurance Com. Ltd. & another ...Respondents

NOTICE TO RESPONDENT No. 02

Mr. Venu muttukadahalli Sadananda Reddy S/o Sadanandareddy, No 03, 1st Floor, East Facing 1st Cross Road, Udayanagar, Chikkdlasandra, Bengaluru-560085.

Take Notice that, the above petition filed by the petitioner against you for seeking a compensation of Rs. 15,00,000/- for which the petitioner was met an accident on dated 19/09/2025 at about 08:30 to 08:31 pm Near Anagha Grand Hotel, Uttarahalli Main Road, Bengaluru City and you are a owner of the vehicle car bearing Reg. No. KA 05 NH 1370.

The hearing of the said case is fixed to be held **on 02.06.2026** you are hereby directed to appear on that day before the court personally or through your counsel (Advocate) failing which is the matter will be determined ex-parte.

Given under my hand and seal of the court on 28.04.2026.

By Order of the Court, Assistant Registrar, Court of Small Causes, Bengaluru.

Advocate for petitioner :
Bhavya C.S., SanneGowda .S
No. 712, 11th Cross, Basaveswaranagara, Kengeri, Bangalore-560060.
Mobile: 9945262860

ಸಾರ್ವಜನಿಕ ಪ್ರಕಟಣೆ

[illegible]

ಶ್ರೀ ... ಕೆ.ಪಿ.

ವಕೀಲರು ಮತ್ತು ನೋಟರಿ ... ನಂ.326/327, ... ಬೆಂಗಳೂರು-560 009. ಮೊ: 9916504340

IN THE COURT OF CCH 28 XIV ADDL. CITY CIVIL AND SESSION JUDGE AT BANGALORE

EXECUTION PETITION (EX.P) No. 896/2025

Between : **Smt. Shama,** W/o Salim Khan, Aged about 59 years, House # 35/36, Ramasandra Main Road, Chikka basti, Ullala Post, Bangalore-560056. ...Decree-Holder

V/s

Sri. Seetharam, Father's name not known, Aged about 58 years, R/at House list No. 565, Malathahalli Village, Yeshwanthapura Hobli, Bangalore North Taluk, Bangalore-560 022. & others ...Judgment Debtors

NOTICE TO THE JUDGMENT DEBTOR No. 1 & 3

JDR 1. Sri. Seetharam, Father's name not known, Aged about 58 years, R/at House list No. 565, Malathahalli Village, Yeshwanthapura Hobli, Bangalore North Taluk, Bangalore-560 022.

JDR 3. Sri. N. Venkatesh, S/o Late Sri. A. Nagaraj, Aged about 48 years, R/at No. 14/1A, 4th Cross, Left Side, Magadi Main Road, Bangalore 560023.

WHEREAS, the above Named Decree Holder have instituted a suit against you for the Declaration of title and Vacant possession and Relief of Schedule Property. You are hereby Summoned to Appear before the Addl. City Civil and Session Judge at Bangalore, (CCH-28), **On 20/06/2026 at 11.00 A.M.** in person OR through Advocate / Pleader to answer the Question at the same, Failing which the suit will be heard and determined Ex Parte.

SCHEDULE PROPERTY

All that piece and parcel of the property bearing Site. No. 74, formed out of Sy.Nos. 23/8 and 22/8, Khatha No. 534, House List. No. 565 with constructed RCC sheet: House, measuring 1 square, Yeshwanthapura bounded on:- **East by:** Property No. 95, **West by:** 30 feet Road, **North by:** Property No. 73, **South by:** Property No. 75.

Measuring East to West 40 feet and North to South 30 feet.

Given under my hand and the seal of the court on 05/05/2026.

By Order of the Court, Senior Sheristedar, City Civil Court, Bengaluru.

Advocate for Decree holder **Micheal Chinnappa**
MAITHRI LAW CHAMBER
3049, New No. 26/1, 8th A Cross, 14th Main RPC Layout, Opposite Metro Pillar 369, Bangalore-560 040.

IN THE COURT OF THE HONBLE II ADDITIONAL CIVIL JUDGE AND JMFC AT HOSAKOTE

Crl. Miss. No. 45/2024

Between:

Petitioner: 1) Smt. Pushpalatha, W/o Dakshinamurthy, D/o Late Appadorechinnaiah @Perumal @ R Perumal, Aged about 51 years, R/at No 16/1, Raja Street, Vaniyambadi, Ambatur, Vellor, Tamilnadu-635801

2) **Vanishree K,** W/o Kumar A, D/o Late Appadorechinnaiah @ Perumal @ R. Perumal, Aged about 49 years, R/at No 248/3, Vasavi Mahal Road, 2nd Cross, Near New Police Station Krishnarajapuram, Bangalore East Taluk

3) **Smt. Lakshmi A,** W/o Arunkumar K, D/o Late Appadorechinnaiah @Perumal @ R Perumal, Aged about 47 years, R/at No.12 Ramaiah Layout, Kalkere Main Road, Kowdenahalli, Opp More mall, Rammurthinagara, Bangalore-560016

4) **Sri. Venkatesh P,** S/o Late Appadorechinnaiah @ Perumal alis R Perumal, Aged about 43 years, R/at No 12/45, 2nd Cross, Near Shanimahathma Temple, Rammurthy Nagara, Duravani Nagara, Bangalore-560016

5) **Smt. Kumudha P,** D/o Late Appadorechinnaiaha Perumal @ R Perumal, Aged about 40 years, R/at Basavasamiti Layout, Thindlu, Vidyaranyapura, Bangalore North-560097

AND:

RESPONDENT: 1) The Tahasidar, Birth and death Registrar Hoskote Taluk, Office Bangalore Rural Dist.,

2) **Sri. Srinivas T,** S/o Late Appadorechinnaiah @ Perumal @ R Perumal, Aged about 53 years, R/at Munibairappa, Building, No. 5264/8, 5th Block, D.B. Sandra, Subbanna Street, Vidyaranyapura, Bangalore-560097

GENERAL NOTICE TO PUBLIC

Where as the petitioner named above have filed the above petitions seeking direction to the Respondent to register the date of death of Late Ramaswamipille S/o Perumalpille who is the grand Father of the Petitioner No.1 to 5 and also 2nd Respondent, who died on dated 10/12/1935 at Koraluru Village, Kasaba Hobli, Hoskote Taluk Bangalore Rural Dist. The case is posted on **30/06/2026** for appearance of interested persons or Advocate may appear before the Honble court **at 11.00 A.M** Bangalore

Either in person or through Advocate duly interested persons failing which the matter will be disposed taking as no objections.

Given under my hand and seal of this Court dated this the 5th day of May 2026.

By Order of the Court
Sdl-Sheristedar
Civil Judge & J.M.F.C. Hosakote
T.C.Narayanaswamy, Advocate

ಮಾನ್ಯ ... ನ್ಯಾಯಾಲಯ

[illegible]

ನ್ಯಾಯಾಲಯದ ಆದೇಶದ ಮೇರೆಗೆ,
ಸಹಾಯಕ ಕಮೀಷನರ್,
ಕೋಲಾರ ಉಪ ವಿಭಾಗ, ಕೋಲಾರ.
ಮೇಲ್ಮನವಿದಾರರ ಪರ ವಕೀಲರು.
ಶ್ರೀ. ಕೆ.ಆರ್. ಶ್ರೀನಿವಾಸಯ್ಯ,
ಶ್ರೀ. ಕೆ.ವಿ. ... , ಕೋಲಾರ.

[illegible] ... 110/1, 110/2, 110/3, 110/4, 110/5, 110/6, 110/7, 110/8, 110/9, 110/10, 110/11, 110/12, 110/13 ... ದಿನಾಂಕ 05.06.2026 ... [illegible]

ನ್ಯಾಯಾಲಯದ ಮೊಹರು ...

ಸ್ಥಳ : ... ದಿನಾಂಕ : 24.04.2026

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಕೆ.ಹೊನ್ನಲಗೆರೆ ಗ್ರಾಮ ಪಂಚಾಯಿತಿ ಕಾರ್ಯಾಲಯ
ಕಸಬಾ ಹೋಬಳಿ, ಮದ್ದೂರು ತಾಲ್ಲೂಕು,
ಮಂಡ್ಯ ಜಿಲ್ಲೆ-571433, Mob:9480872253
e-mail:k.honnalagere.mdr.mdy@gmail.com

ಸಂಖ್ಯೆ:ಮಮದೂ.ಕೆ.ಹೊ./ಟೆ.ಪ್ರ/2026-27 ದಿ:30.04.2026

ಟೆಂಡರ್ ಪ್ರಕಟಣೆ

(1) ಟೆಂಡರ್ ಪ್ರಕಟಣೆ ಸಂಖ್ಯೆ & ಟೆಂಡರ್ ಅಂದಾಜು ಮೊತ್ತ : RDPR/2026-27/IND13988, 10 ಲಕ್ಷ. (2) ಟೆಂಡರ್ ಪ್ರಕಟಣೆ ಸಂಖ್ಯೆ & ಟೆಂಡರ್ ಅಂದಾಜು ಮೊತ್ತ : RDPR/2026-27/IND14008, 10 ಲಕ್ಷ. (3) ಟೆಂಡರ್ ಪ್ರಕಟಣೆ ಸಂಖ್ಯೆ & ಟೆಂಡರ್ ಅಂದಾಜು ಮೊತ್ತ : RDPR/2026-27/IND14144, 2.40 ಲಕ್ಷ. (4) ಟೆಂಡರ್ ಫಾರಂ ಬೆಲೆ : As per KPPP Portal. (5) ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ : 18.05.2026 ಸಂಜೆ 5.00 ಗಂಟೆ. (6) ತಾಂತ್ರಿಕ ಲಕೋಟೆಯನ್ನು ತೆರೆಯುವ ದಿನಾಂಕ ಮತ್ತು ವೇಳೆ (ಬದಲಾವಣೆಗೆ ಒಳಪಟ್ಟಿರುತ್ತದೆ) : 20.05.2026 ಸಂಜೆ 5.00 ಗಂಟೆ. (7) ಆರ್ಥಿಕ ಲಕೋಟೆಯನ್ನು ತೆರೆಯುವ ದಿನಾಂಕ ಮತ್ತು ವೇಳೆ (ಬದಲಾವಣೆಗೆ ಒಳಪಟ್ಟಿರುತ್ತದೆ) : 22.05.2026 ಬೆಳಿಗ್ಗೆ 5.00 ಗಂಟೆ. (8) ಬಿಡ್ ತೆರೆಯುವ ಸ್ಥಳ : ಕೆ.ಹೊನ್ನಲಗೆರೆ ಗ್ರಾಮ ಪಂಚಾಯಿತಿ ಕಾರ್ಯಾಲಯ ಮದ್ದೂರು ತಾಲ್ಲೂಕು. (9) ಹೆಚ್ಚಿನ ಮಾಹಿತಿಗೆ ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ ದೂರವಾಣಿ ಸಂಖ್ಯೆ : ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕೆ.ಹೊನ್ನಲಗೆರೆ ಗ್ರಾಮಪಂಚಾಯಿತಿ ಮದ್ದೂರು ತಾಲ್ಲೂಕು 9480872253

ಸಹಿ/-ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೆ.ಹೊನ್ನಲಗೆರೆ ಗ್ರಾಮ ಪಂಚಾಯಿತಿ, ಮದ್ದೂರು ತಾಲ್ಲೂಕು

ವಾಸಾಸಂ/ಓಪಿ-ಮಂ/ಕೆಸ್ಎಂಸಿಎ/999/2026-27

ಕರ್ನಾಟಕ ಸರ್ಕಾರ

ಆಯನೂರು ಉಪ ಅರಣ್ಯ ವಿಭಾಗ, ಶಿವಮೊಗ್ಗ.

ಸಂಖ್ಯೆ: ಸಆಸಂ/ಟೆಂಡರ್-ಕಾಂಪಾ/ಸಿಆರ್-3/25-26 ದಿನಾಂಕ: 05.05.2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ.
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2026-27 ನೇ ಸಾಲಿನಲ್ಲಿ ಕಾಂಪಾ ಲೆಕ್ಕ ಶೀರ್ಷಿಕೆಯಡಿ ಶಿವಮೊಗ್ಗ ಪ್ರಾದೇಶಿಕ ಅರಣ್ಯ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶಗಳಲ್ಲಿ ಅನುಬಂಧದಲ್ಲಿ ನಮೂದಿಸಲಾದ, ನೆಡುತೋಪು ರಚನೆ ಮತ್ತು ನಿರ್ವಹಣೆ" ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000 ರ ಅನ್ವಯ 2026-27 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು, ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರದಲ್ಲಿ ಸಸಿಗಳನ್ನು ಬೆಳೆಸಲು ಅಗತ್ಯ ಸೌಕರ್ಯ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಕಾಲ್-3 ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

1. ಇ-ಟೆಂಡರು ಸಲ್ಲಿಸಲು ಕೊನೆಯ ದಿ:13.05.2026 ಅಪರಾಹ್ನ 4.00 ಗಂಟೆಯವರೆಗೆ 2. ಟೆಂಡರು ತೆರೆಯುವ ದಿ:14.05.2026 ಅಪರಾಹ್ನ 4.30ಗಂಟೆ

ಸಹಿ/-ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಆಯನೂರು ಉಪ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್ಎಂಸಿಎ/ಶಿ/26-27/16/05/187

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರು, ಎಚ್.ಬಿ.ಸಿ ವಿಭಾಗ ಅಥಣಿ-591304, ಕಾರ್ಯಾಲಯ,ತಾ:ಅಥಣಿ ಜಿ:ಬೆಳಗಾವಿ(ಕರ್ನಾಟಕ)

ಸಂ.ಕನೀನಿನಿ/ಎಚ್.ಬಿ.ಸಿ/ವಿವಿ/ಟೆಂಡರ್/2026-27/410 ದಿನಾಂಕ: 05.05.2026

ಅಲ್ಪಾವಧಿ ಟೆಂಡರ ಅಧಿಸೂಚನೆ
(ಕೆ.ಪಿ.ಪಿ.-ಸಂಗ್ರಹಣಾ ಕೋಶದ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಎಚ್.ಬಿ.ಸಿ ವಿಭಾಗ ಅಥಣಿ ತಾ:ಅಥಣಿ ಜಿ:ಬೆಳಗಾವಿ ಇವರು ಕಾಮಗಾರಿಯನ್ನು ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-4 ನಿಯಮದನ್ವಯ ಮೊದಲನೇ ಹಾಗೂ ಎರಡನೇ ಲಕೋಟೆಯನ್ನು ಈ ಸಂಗ್ರಹಣಾ ಕೋಶದ ಮುಖಾಂತರ ಶೇಕಡಾವಾರು ಟೆಂಡರನ್ನು, ಪಿ.ಡಬ್ಲ್ಯೂಡಿ ಕ್ಲಾಸ್-I ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಿರುತ್ತಾರೆ.

ಸದರಿ ಕಾಮಗಾರಿಗಳಿಗೆ ಮೊದಲನೇ ಹಾಗೂ ಎರಡನೇ ಕವರಿನ ವಿಧಾನದಲ್ಲಿ (as per KTPP act 2000) ಅನುಸರಿಸಬೇಕು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ www.kpp-portal.karnataka.gov.in ಮೂಲಕ ಪಡೆದುಕೊಳ್ಳಬಹುದು ಮತ್ತು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸಲ್ಲಿಸಬಹುದು.

ಟೆಂಡರಗಿಟ್ಟ ಅಂದಾಜು ಮೊತ್ತ ರೂ. 422.00 ಲಕ್ಷ

1. ಇ ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ:07.05.2026 ರ 10.30 ಬೆಳಿಗ್ಗೆ ರಿಂದ 15.05.2026 ರ 4.00 ಸಾಯಂಕಾಲ. 2.ಪ್ರಿ ಬಿಡ್ ಮೀಟಿಂಗ್ ದಿನಾಂಕ: (ಕಾ.ನಿ.ಇಂ. ಕನೀನಿನಿ ಎಚ್.ಬಿ.ಸಿ. ವಿಭಾಗ ಅಥಣಿ):ದಿನಾಂಕ 12.05.2026 ರ 11.00 ಬೆಳಿಗ್ಗೆ , 3. ಟೆಂಡರ್ ಪ್ರಶ್ನೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ: 13.05.2026 ರ 4.00 ಸಾಯಂಕಾಲ. 4.ಪೂರ್ಣವಾಗಿ ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ:07.05.2026 ರ 10.30 ಬೆಳಿಗ್ಗೆ ರಿಂದ 15.05.2026 ರ 4.00 ಸಾಯಂಕಾಲ. 5. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (ಎಚ್.ಬಿ.ಸಿ ವಿಭಾಗ ಕಛೇರಿ ಅಥಣಿಯಲ್ಲಿ): 18.05.2026 ರ 11.00 ಬೆಳಿಗ್ಗೆ, 6. ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ (ಎಚ್.ಬಿ.ಸಿ ವಿಭಾಗ ಕಛೇರಿ ಅಥಣಿಯಲ್ಲಿ):20.05.2026 ರ ಬೆಳ್ಳಿಗ್ಗೆ 11.00 ಗಂಟೆಗೆ (ತಾಂತ್ರಿಕ ಬಿಡ್ ಅನುಮೋದನೆ ನಂತರ)

ಇನ್ನೂಳಿದಂತೆ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇ ಸಂಗ್ರಹಣಾ ಕೋಶ ವೆಬ್ ಸೈಟ್ http//:www.kppp. karnataka.gov.in/kpp-protal/index. seam link ಮುಖಾಂತರ ಹಾಗೂ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಕನೀನಿನಿ ಎಚ್.ಬಿ.ಸಿ ವಿಭಾಗ, ಅಥಣಿ

DIPR/BGM/RO-NO-399/KSMCA/2026-27

CHANGE OF NAME

I, **KRUTHI CHANDRASHEKAR,** Daughter of Sri.C. Chandrashekar, aged about 40 years, Residing at No. BA-1503, Salarpuria Greenage Apartment, Hosur Main Road, Bommanahalli, Next to Oxford College, Bengaluru - 560 068.

I have change my name from **"SMT. KRUTHI BALAJI"** to **"MS. KRUTHI CHANDRASHEKAR."** vide Affidavit dated 06.05.2026 sworn to before Notary Sivakumara.M.N, Bangalore.

ಜಾಹೀರಾತಿಗಾಗಿ ಸಂಪರ್ಕಿಸಿ:
9845438807, 9611755391

ನಗರಸಭಾ ಕಾರ್ಯಾಲಯ, ಹೂಟಗಳ್ಳಿ

... ಹೂಟಗಳ್ಳಿ, ಮೈಸೂರು ಜಿಲ್ಲೆ-570018
ದೂರವಾಣಿ ಸಂಖ್ಯೆ : 0821-2001737, E-Mail: ka.hootagalli.cmc@gmail.com

ಸಂಖ್ಯೆ: ನಸಹೂ/ತಾಂತ್ರಿಕ/ಮರು ಟೆಂಡರ್ ಪ್ರಕಟಣೆ/ಇಆರ್.01/2026-27 ದಿನಾಂಕ: 05.05.2026

ಮರು ಟೆಂಡರ್ ಪ್ರಕಟಣೆ

ಹೂಟಗಳ್ಳಿ ನಗರಸಭೆ ವ್ಯಾಪ್ತಿಯಲ್ಲಿ 2026-27ನೇ ಸಾಲಿನ ನಗರಸಭಾ ನಿಧಿಯಡಿ ನೀರು ಸರಬರಾಜು, ಬೀದಿ ದೀಪ ನಿರ್ವಹಣೆ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ವಾಹನಗಳ ಸೇವೆಯನ್ನು ಪಡೆಯುವ ಟೆಂಡರ್‌ಗಳನ್ನು ಕೆ.ಟಿ.ಪಿ.ಪಿ. ಕಾಯ್ದೆ 2000ರ ಪ್ರಕಾರ Standard Bid Document ನಿಯಮದಂತೆ KPP ಪೋರ್ಟಲ್ ಮೂಲಕ ಮರು ಟೆಂಡರ್ ಕರೆಯಲಾಗಿದ್ದು, ಲೋಕೋಪಯೋಗಿ ಇಲಾಖೆಯ ಅರ್ಹ ನೋಂದಾಯಿತ ಸಿವಿಲ್ ಹಾಗೂ ವಿದ್ಯುತ್ ಗುತ್ತಿಗೆದಾರರು ಮತ್ತು ನೋಂದಾಯಿತ ಏಜೆನ್ಸಿದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.ಟೆಂಡರ್‌ಗಳನ್ನು https://kppp.karnataka.gov.in ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. **ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:20.05.2026 ಸಂಜೆ 5.30 ಗಂಟೆಯವರೆಗೆ.** ಟೆಂಡರ್ ತೆರೆಯುವ ದಿನಾಂಕ:22.05.2026ರ ಬೆಳಿಗ್ಗೆ 10.30 ಗಂಟೆಗೆ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ತಾಂತ್ರಿಕ ಶಾಖೆ ಅಭಿಯಂತರರನ್ನು ಸಂಪರ್ಕಿಸಬಹುದಾಗಿದೆ. ಟೆಂಡರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ ಹಾಗೂ ಜಿ.ಎಸ್.ಟಿ.ಯನ್ನು ಪ್ರತ್ಯೇಕವಾಗಿ ಪಾವತಿಸಲಾಗುವುದು.

ಕ್ರ. ಸಂ.	ಇಂಡೆಂಟ್ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ.ಮೊತ್ತ (ರೂ.ಗಳಲ್ಲಿ)
01	DMA/2025-26/SE7540/CALL-2	45.00	76,500/-
02	DMA/2025-26/SE7541/CALL-2	26.00	50,000/-
03	DMA/2025-26/SE7542/CALL-2	46.00	77,800/-
04	DMA/2025-26/SE7543/CALL-2	40.00	68,000/-
05	DMA/2025-26/SE7544/CALL-2	47.37	80,300/-
06	DMA/2025-26/SE7545/CALL-2	47.20	80,000/-
07	DMA/2025-26/SE7546/CALL-2	44.90	76,000/-
08	DMA/2025-26/SE7549/CALL-2	10.10	25,250/-

ಸಹಿ/- ಪೌರಾಯುಕ್ತರು
ನಗರಸಭೆ, ಹೂಟಗಳ್ಳಿ

ವಾಸಾಸಂ/ಮೈಸೂರು/ಪಿಎಸ್ಎಂಸಿಎ/142/2026-27

ನಮೂನೆ ಸಂಖ್ಯೆ URC-2

ಕಂಪನಿಗಳ ಕಾಯ್ದೆ, 2013ರ ಅಧ್ಯಾಯ XXI ರ ಭಾಗ I ರ ಅಡಿಯಲ್ಲಿ ನೋಂದಣಿಯ ಬಗ್ಗೆ ನೋಟೀಸ್ ನೀಡುವ ಜಾಹೀರಾತು

(ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 374 (ಬಿ) ಮತ್ತು ಕಂಪನಿಗಳ (ನೋಂದಣಿ ಮಾಡಲು ಅಧಿಕಾರ) ನಿಯಮಗಳು, 2014ರ ನಿಯಮ 4 (1) ರ ಅನುಸಾರವಾಗಿ)

[illegible]

ದಿನಾಂಕ: ಮೇ 07, 2026.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರ

CHANGE OF NAME

I, **Mr. MUNGAMURU SHARMILA,** W/o Mungamuru Sivakumar Reddy, age 59 years, R/at No. S1, 2nd Floor, Sai Residency, Site No. 134/135, 1st Cross, Bhuvaneshwari Nagar, Bengaluru-560 092 do hereby declare that both the names i.e. **MUNGAMURI SHARMILA** and **MUNGAMURU SHARMILA** are one and the same and refers to me only, but my correct name is **MUNGAMURU SHARMILA,** vide affidavit dated 05-05-2026, sworn before Advocate and Notary **L.B. ANASUYAMMA** at Bangalore.

ತೋಟ ಉತ್ಪನ್ನಗಳ ಮಾರಾಟ ಸಹಕಾರ ಸಂಘ ನಿ., ಚನ್ನಗಿರಿ
ಎಪಿಎಂಸಿ ಆವರಣ ಚನ್ನಗಿರಿ, ದಾವಣಗೆರೆ ಜಿಲ್ಲೆ,-577213,
Email:tumcoscng@gmail.com, info@tumcos.com Mo:7349033006

R.NO.:2026-27/128 DATE: 06-05-2026

ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಪ್ರಕಟಣೆ

ಸಂಘದ ಸಾಗರಪೇಟೆ ಶಾಖೆಯ ಕಟ್ಟಡಕ್ಕೆ ಹವಾ ನಿಯಂತ್ರಣ ವ್ಯವಸ್ಥೆ (ಏರ್ ಕಂಡೀಷನ್ ಸಿಸ್ಟಮ್) ಅಳವಡಿಸಲು ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದೆ. ಇ.ಎಂ.ಡಿ.ಮೊತ್ತ:50,000/-ರೂ.ಗಳು ಟೆಂಡರ್ ನಂಬರ್ :TUMCOSL/2026-27/OW/WORK_INDENT3, ಟೆಂಡರ್ ಟೈಟಲ್ :SUPPLY AND INSTALLATION OF AIR CONDITION SYSTEM FOR TUMCOS LTD AT SAGARA-PETE. ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ರಲ್ಲಿ 22/05/2026 ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿ ಮೇಲ್ಕಂಡ ಅಂತರ್ಜಾಲ ಅಥವಾ https://www.tumcos.com ನೋಡಿರಿ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು, ತುಮ್‌ಕೋಸ್ ಲಿ.,ಚನ್ನಗಿರಿ

ಮಾನ್ಯ ... ನ್ಯಾಯಾಲಯ ...

ಸಿ.ಎಂ.ಎಸ್.ನಂ. 305/2023

[illegible]

IN THE COURT OF THE HON'BLE PRL. SENIOR CIVIL JUDGE, BENGALURU RURAL, AT BANGALORE

P & SC NO. 12/2026

BETWEEN:

1. **Smt. Bhavitha,** Aged about 56 years, W/o Late Bhaskar Reddy, 2. **Sri Gaurav Reddy K.B,** Aged about 33 years, S/o Late Bhaskar Reddy, 3. **Kum. Ganavi K.B,** Aged about 26 years, D/o Late Bhaskar Reddy. The above Petitioners are residing at No.401, 4th Floor, Aadhya's square, Owners Court East, Kasavanahalli Main Road, Junnasandra, Bangalore. Also R/at No.21, M Kothur Village, K.G.F. Andersinpet Post, Marikuppa, Kolar, Karnataka-563113 ...Petitioners

AND:

Hindustan Aeronautics Limited
Facilities Management Division, Office at 15/1, Cubbon Road, Bangalore-560001 ...Respondent

Suit summons to respondent
Hindustan Aeronautics Limited
Facilities Management Division, Office at 15/1, Cubbon Road, Bangalore - 560001

PUBLIC NOTICE - PAPER PUBLICATION

(Under Section 372 of the Indian Succession Act, 1925) Whereas the above-named Petitioners has filed a Petition before this Hon'ble Court seeking grant of a Succession Certificate in respect of the debts and securities of the deceased Late Sri Bhaskar Reddy, who expired on 08.02.2026, and who was residing at No.401, 4th Floor, Aadhya's square, Owners Court East, Kasavanahalli Main Road, Junnasandra, Bangalore within the Jurisdiction of this Hon'ble Court, this summoned published as per the orders of this Hon'ble Court, dated 16.04.2026. The said Petition has been posted on **29.06.2026 at 11:00A.M.** All persons having any claim, Objection, or Interest in the estate of the deceased are hereby required to appear before this Hon'ble Court, either in person or through an Advocate, on the above-mentioned date and time, and to file their objections, if any. Please take further notice that, failing to file objections, the matter will proceed ex parte and be decided in accordance with law.

Given under my hand and the seal of the court this 28th Day of April 2026.

SCHEDULE 'A' PROPERTY: Bills receivable of Rs 6,00,000/- from HAL for a contract under Contract No. HAL/FMD/R-118/23-24.

SCHEDULE 'B' PROPERTY: FDR from Union Bank of India, Airport Road branch vide loan account No. 221813030001111 for Rs. 3,58,182/- (Rupees Three Lakhs Fifty Eight thousand one hundred and eighty Two Only)

SCHEDULE 'C' PROPERTY: FDR from Union Bank of India, Kempapura branch vide loan account No. 043523030000056 for Rs. 51,412/- (Rs. Fifty one Thousand four hundred and Twelve only)

SCHEDULE 'D' PROPERTY: Bank overdraft from Union bank of India, Kempapura branch vide loan account No. 565101000041455 for Rs.30,00,000/- (Rupees Thirty Lakhs only) **By Order of the Court**

Sd/- Chief Ministerial Officer
Senior Civil Judge Court,
Bengaluru Rural Dist., Bengaluru

Advocate for Petitioners:
Srushti. S.B, Advocate
No.410-B2, Krishna Block, NGV, Koramangala, Bengaluru -560047

IN THE COURT OF THE XXII ADDL. CITY CIVIL & SESSIONS (CCH-7) JUDGE, AT BENGALURU

P & SC No. 647/2026

BETWEEN : 1. MR. Somil Mittal S/o Late Mahendra Kumar Mittal, Aged about 54 years, R/at No. 1102, 13th Cross, Near Cauvery School, 2nd Stage, Indiranagar, Bengaluru-560038.

2. MS. Mekhla Mittal, D/o Late Mahendra Kumar Mittal, Aged about 49 years, R/at A-008, Natasha Golf View Apartments, Domlur, Bangalore-560071. **...Petitioners AND : Nil ...Respondent**

PUBLIC NOTICE

Whereas the above-named petitioners have presented a petition before this Hon'ble Court under Section 372 and 278 of the Indian Succession Act, 1925, seeking the grant of Succession Certificate in their favour in respect of the debts and securities mentioned in the schedule hereunder.

The said debts and securities were held by Late Sri. Mahendra Kumar Mittal, who expired on 28/06/1998. The petitioners herein are the legal heirs of the said deceased Late Mahendra Kumar Mittal.

Therefore, Interest Parties having any claim, objection or interest in the said petition are hereby required to appear before this Hon'ble Court either in person or through a duly authorized pleader **on 12.06.2026 at 11.00 A.M.,** and file their objections, if any, to the grant of the said Succession Certificate in favour of the petitioners. Failing which, the petition shall be heard and disposed of ex-parte.

SCHEDULE PROPERTIES

FIRST SCHEDULE : All that piece and parcel of land and building being immovable property bearing No.1102, 13th Cross Road, 2nd Stage, Indiranagar, Bengaluru 560038, measuring East to West 80 sq.ft and North to South 50 Sq.ft, totally admeasuring 4000 square feet, registered in Shivajinagar Sub-register office as Document No: 4374/89-90, and bounded as follows, that is to say:-

On or towards **East** : Private Land, On or towards **West** : Road, On or towards **North** : Property No: 1103, On or towards **South** : Property No: 1101

SECOND SCHEDULE : All that parcel and piece of immovable property of Flat bearing No: A008, Ground Floor, A- Block, Natasha Golfview Apartments, Domlur, Bengaluru 560 071, measuring 1330 square feet, registered as Document No:2394/97-98, entered in Book No:1, Volume No:4072 in Page No: 33-40 in Shivajinagar Sub-registered Office and bounded as follows, that is to say:

On or towards **East** : BWSSB property/drains, On or towards, **West** : Lands held by Indian Space Research Organisation and access to 100ft. Ring Road, On or towards **North** : Lands held by Indian Space Research Organisation, On or towards **South** : Lands held by Indian Space Research Organisation, held by Amara Jyothi House Building Cooperation Society Limited.

THIRD SCHEDULE : All that parcel and piece of immovable property of Shop bearing No- S-1, Basement Floor, Natasha Golfview Apartments, Domlur, Bengaluru 560 071, measuring 300 square feet, registered as Document No:2395/97-98, entered in Book No:1, Volume No:4072 in Page No: 41-48 in Shivajinagar Sub-registered Office and bounded as follows, that is to say:

On or towards **East** : BWSSB property/drains, On or towards **West** : Lands held by Indian Space Research Organisation and access to 100ft. Ring Road, On or towards North : Lands held by Indian Space Research Organisation, On or towards **South** : Lands held by Indian Space Research Organisation, held by Amara Jyothi House Building Co-operation Society Limited.

FOURTH SCHEDULE :

Company: JINDAL IRON & STEEL COMPANY LIMITED

FOLIO NO	DISTINCTIVE NO START NO	DISTINCTIVE NO END NO	CERTIFICATE NO	NO OF SHARES	NO OF SCRIPS
M01827	7629919	7629968	119629	50	1
M01828	7629969	7630018	119630	50	1
	TOTAL			100	

Company: JINDAL IRON & STEEL COMPANY LIMITED

FOLIO NO	DISTINCTIVE NO START NO	DISTINCTIVE NO END NO	CERTIFICATE NO	NO OF SHARES	NO OF SCRIPS
M01827	4532676	4532725	19629	50	1
M01828	4532726	4532775	19630	50	1
	TOTAL			100	

Company: JINDAL STEEL & POWER LIMITED

FOLIO NO	DISTINCTIVE NO START NO	DISTINCTIVE NO END NO	CERTIFICATE NO	NO OF SHARES	NO OF SCRIPS
8329	157561207	157572306	500394	11100	1
	TOTAL			11100	

Company: JINDAL STAINLESS LIMITED

FOLIO NO	DISTINCTIVE NO START NO	DISTINCTIVE NO END NO	CERTIFICATE NO	NO OF SHARES	NO OF SCRIPS
8329	20902825	20902915	201006	91	1
	TOTAL			91	

Company: JINDAL STRIPS LIMITED

FOLIO NO	DISTINCTIVE NO START NO	DISTINCTIVE NO END NO	CERTIFICATE NO	NO OF SHARES	NO OF SCRIPS
J18329	3220801	3220900	15191	100	1
8329	4947301	4947100	23167	100	1
24674	7418203	7418302	59482	100	1
24674	14085548	14085632	167051	85	1
8329	12411155	12411254	153705	100	1
8329	12411255	12411324	153706	70	1
	TOTAL			555	

Company: CONSOLIDATED FINVEST & HOLDINGS LIMITED (formerly Jindal Photo Limited)

FOLIO NO	DISTINCTIVE NO START NO	DISTINCTIVE NO END NO	CERTIFICATE NO	NO OF SHARES	NO OF SCRIPS
JP0013812	1277602	1277673	647	71	1
CF0013812	3887439	3887666	651	228	1
	TOTAL			300	

Company: JINDAL PHOTO FILMS LIMITED

FOLIO NO	DISTINCTIVE NO START NO	DISTINCTIVE NO END NO	CERTIFICATE NO	NO OF SHARES	NO OF SCRIPS
13812	17103265	17103364	79993	100	1
13812	17103365	17103464	79994	100	1
13812	17103465	17103564	79995	100	1
13812	3120401	3120500	31205	100	1
13812	3120501	3120600	31206	100	1
13812	3120601	3120700	31207	100	1
	TOTAL			600	

Company: MAHARASHTRA SEAMLESS LIMITED

FOLIO NO	DISTINCTIVE NO START NO	DISTINCTIVE NO END NO	CERTIFICATE NO	NO OF SHARES	NO OF SCRIPS
MS93051	11306701	11306800	103883	100	1
MS93051	11306801	11306900	103884	100	1
MS93051	11306901	11307000	103885	100	1
MS93051	11307001	11307100	103886	100	1
MS93051	11307101	11307200	103887	100	1
512748	708036	708285	12748	250	1
	TOTAL			750	

Company: JINDAL DRILLING & INDUSTRIES LIMITED

FOLIO NO	DISTINCTIVE NO START NO	DISTINCTIVE NO END NO	CERTIFICATE NO	NO OF SHARES	NO OF SCRIPS
3505	5620875	5621374	48946	500	1
3505	318028	318527	360	500	1
	TOTAL			1000	

Company: JINDAL LEASING LIMITED

FOLIO NO	DISTINCTIVE NO START NO	DISTINCTIVE NO END NO	CERTIFICATE NO	NO OF SHARES	NO OF SCRIPS
3505	918951	919000	12460	50	1
3505	919001	919050	12461	50	1
3505	919051	919100	12462	50	1
3505	919101	919150	12463	50	1
3505	919151	919200	12464	50	1
3505	919201	919250	12465	50	1
3505	919251	919300	12466	50	1
3505	919301	919350	12467	50	1
3505	919351	919400	12468	50	1
3505	919401	919450	12469	50	1
	TOTAL			500	

Company: JASWAL GRANITES LIMITED

FOLIO NO	DISTINCTIVE NO START NO	DISTINCTIVE NO END NO	CERTIFICATE NO	NO OF SHARES	NO OF SCRIPS
218	2230901	2231400	269	500	1
	TOTAL			500	

Company: KIRLOSKAR COMPUTER SERVICES LIMITED

FOLIO NO	DISTINCTIVE NO START NO	DISTINCTIVE NO END NO	CERTIFICATE NO	NO OF SHARES	NO OF SCRIPS
M0336	749916	749965	8432	50	1
M0336	749966	750015	8433	50	1
M0336	750016	750065	8434	50	1
M0336	750066	750115	8435	50	1
M0336	750116	750165	8436	50	1
	TOTAL			250	

Company: THE TATA ENGINEERING & LOCOMOTIVE COMPANY LIMITED

FOLIO NO	DISTINCTIVE NO START NO	DISTINCTIVE NO END NO	CERTIFICATE NO	NO OF SHARES	NO OF SCRIPS
EM2032341	4871685	4871688	59375	4	1
EM2032341	5971476	5971479	136022	4	1
EM2032341	7013385	7013388	382621	4	1
EM2032341	10422668	10422669	696289	2	1
EM2032341	211339368	211339417	4838222	50	1
EM2032341	211339418	211339427	4838223	10	1
EM2032341	211-339428	211339437	4838224	10	1
EM2032341	211339438	211339447	4838225	10	1
EM2032341	211339448	211339451	4838226	4	1
	TOTAL			98	1

Company: TEGA INDIA LIMITED

FOLIO NO	DISTINCTIVE NO START NO	DISTINCTIVE NO END NO	CERTIFICATE NO	NO OF SHARES	NO OF SCRIPS
	184358	184457	289	100	1
	184458	184557	290	100	1
	184558	184657	291	100	1
	TOTAL			300	

Company: HOUSING DEVELOPMENT FINANCE CORPORATION LIMITED

FOLIO NO	DISTINCTIVE NO START NO	DISTINCTIVE NO END NO	CERTIFICATE NO	NO OF SHARES	NO OF SCRIPS
M000825	5354184	5354188	615424	5	1
M000825	7716684	7716688	925256	5	1
M000825	816556	816560	9128	5	1
M000825	816561	816565	9129	5	1
M000825	126395858	126396057	2377686	200	1
M0000825	0012838336	001284033	00009733	2000	1
	TOTAL			2200	

Company: HDFC BANK LIMITED

FOLIO NO	DISTINCTIVE NO START NO	DISTINCTIVE NO END NO	CERTIFICATE NO	NO OF SHARES	NO OF SCRIPS
HB15560	2146731	2147730	3000740	1000	1
HB15560	72527471	72527570	28275	100	1
HB15560	72527571	72527670	28276	100	1
	TOTAL			1200	

Company: TATA MOTORS LIMITED

FOLIO NO	DISTINCTIVE NO START NO	DISTINCTIVE NO END NO	CERTIFICATE NO	NO OF SHARES	NO OF SCRIPS
E2M2032341	34309621	34310740	47182	1120	1
	TOTAL			1120	

Company: HARYANA CAPFIN LIMITED

FOLIO NO	DISTINCTIVE NO START NO	DISTINCTIVE NO END NO	CERTIFICATE NO	NO OF SHARES	NO OF SCRIPS
3505	437045	437614	368	570	1
	TOTAL			570	

Company: JSW STEEL LIMITED

FOLIO NO	DISTINCTIVE NO START NO	DISTINCTIVE NO END NO	CERTIFICATE NO	NO OF SHARES	NO OF SCRIPS
JSW0242616	2400253551	24002533590	2629211	40	1
JSW0242617	24002533591	2400253630	2629212	40	1
JSW0242614	2400253471	2400253510	2629209	40	1
JSW0242615	2400253511	2400253550	2629210	40	1
JSW0724044	2400271531	2400272030	2629281	500	1
JSW0724043	2400271031	2400271530	2629280	500	1
JSW0426108	2400260071	2400262250	2629247	2180	1
	TOTAL			3340	

FIFTH SCHEDULE : A Saving Bank Account, in the name of Mahendra Kumar Mittal, bearing Account Number 02072010000690 with Punjab National Bank, Richmond Road Branch, Bengaluru.

SIXTH SCHEDULE : A Bank Locker, in the name of Mahendra Kumar Mittal, bearing Locker No. AA64 in Punjab National Bank, Richmond Road Branch, Bengaluru.

SEVENTH SCHEDULE : A Savings Account, in the name of Bimla Mittal, bearing Account No. 02072010000660, with Punjab National Bank

EIGHTH SCHEDULE : A Savings Account, in the name of Bimla Mittal, bearing Account No 00751000146552 with HDFC Bank

NINTH SCHEDULE : A Demat Account in the name of Bimla Mittal, bearing Account No 30927828 with HDFC Bank

TENTH SCHEDULE : Loan Against Shares Account with HDFC Bank bearing Account No. 17522100000025 taken by Bimla Mittal.

Given under my hand and seal of the Court on this 28th day of April 2026.

Address for Service : **Sri Anupam Agarwal,** Advocate for Petitioners
Address : RAMNIWAS SURAJMAL, # 511, 'A' Wing, 5th Floor, Mittal Tower, M.G. Road, Bangalore - 560001. Ph. : 9740645762

By Order of the Court,
Senior Sheristedar
City Civil Court, Bengaluru.

ಐಒಸಿ ಜಂಕ್ಷನ್ ಮೇಲ್ಸೇತುವೆ ನೆಲಸಮ

ಸಂಚಾರ ದಟ್ಟಣೆ ತಗ್ಗಿಸಲು ಜಿಬಿಎ ನಿರ್ಧಾರ

ಬೆಂಗಳೂರು: ನಗರದ ಹೃದಯಭಾಗದಲ್ಲಿ ಸಂಚಾರ ದಟ್ಟಣೆಯ ಸುಳಿಗೆ ಸಿಲುಕಿ ಹೈರಾಣಾಗುತ್ತಿರುವ ಪ್ರಯಾಣಿಕರಿಗೆ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವ ಉದ್ದೇಶದಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಮಹತ್ವದ ತೀರ್ಮಾನ ಕೈಗೊಂಡಿದೆ. ನಗರದ ಪ್ರಮುಖ ಸಂಪರ್ಕಕೊಂಡಿಯಾದ ಐಒಸಿ ಜಂಕ್ಷನ್ ಮೇಲ್ಸೇತುವೆ ನೆಲಸಮಗೊಳಿಸಲು ಸಿದ್ಧವಾಗಿದೆ. ಪ್ರಸ್ತುತ ಇರುವ ಐಒಸಿ ಜಂಕ್ಷನ್ ಮೇಲ್ಸೇತುವೆಯು ಹಳೆಯ ವಿನ್ಯಾಸದಿಂದ ಕೂಡಿದ್ದು, ಹೆಚ್ಚುತ್ತಿರುವ ವಾಹನಗಳ ಒತ್ತಡವನ್ನು ತಡೆದುಕೊಳ್ಳಲು ವಿಫಲ ವಾಗಿದೆ.ಈ ಈ ಜಂಕ್ಷನ್‌ನಲ್ಲಿ ಪ್ರತಿನಿತ್ಯ ಉಂಟಾಗುವ ಟ್ರಾಫಿಕ್ ಜಾಮ್‌ಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಹಾಗೂ ಮೆಟ್ರೋ ಕಾಮಗಾರಿಗೆ ಪೂರಕವಾಗಿ ಹೊಸ ಪ್ಲಾನ್ ರೂಪಿಸಲಾಗಿದೆ.ಆದ್ದರಿಂದ ಐಒಸಿ ಜಂಕ್ಷನ್ ತೆರವಿಗೆ ಸಿದ್ಧತೆ ನಡೆದಿದೆ.



ಸಿಗ್ನಲ್ ಮುಕ್ತ ಸಂಚಾರ

ಹಳೆಯ ಮೇಲ್ಸೇತುವೆ ತೆರವುಗೊಳಿಸಿ, ಆ ಜಾಗದಲ್ಲಿ ಅತ್ಯಾಧುನಿಕ ಮಾದರಿಯ ಹೊಸ ಫ್ಲೈಓವರ್ ಅಥವಾ ಅಂಡರ್‌ಪಾಸ್ ನಿರ್ಮಿಸುವ ಮೂಲಕ ಸುಗಮ ಸಂಚಾರಕ್ಕೆ ಹಾದಿ ಸುಗಮಗೊಳಿಸಲಾಗುವುದು. ಮೆಟ್ರೋ ರೈಲು ಯೋಜನೆಯ ವಿಸ್ತರಣೆಯ ಭಾಗವಾಗಿಯೂ ಈ ತೆರವು ಪ್ರಕ್ರಿಯೆ ಅನಿವಾರ್ಯವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈಗಾಗಲೇ ರಸ್ತೆ ಗುಂಡಿ ಹಾಗೂ ಟ್ರಾಫಿಕ್‌ನಿಂದ ಹೈರಾಣಾಗಿರುವ ಬೆಂಗಳೂರು ಜನತೆಗೆ, ಈ ಮೇಲ್ಸೇತುವೆ ತೆರವು ಪ್ರಕ್ರಿಯೆ ಮತ್ತಷ್ಟು ತಲೆನೋವು ತರುವ ಸಾಧ್ಯತೆಯಿದೆ. ಕಾಮಗಾರಿ ವಿಳಂಬವಾದರೆ ಈ ಭಾಗದಲ್ಲಿ ಸಂಚಾರ ನರಕಸದೃಶವಾಗಲಿದೆ ಎಂಬ ಆತಂಕ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗಿದೆ. ನಗರ ಸಂಚಾರ ಪೊಲೀಸರು ಈ ಸಂಬಂಧ ಈಗಾಗಲೇ ಸಮಗ್ರ ಟ್ರಾಫಿಕ್ ನಿರ್ವಹಣೆ ಯೋಜನೆ ಸಿದ್ಧಪಡಿಸುತ್ತಿದ್ದು, ಶೀಘ್ರದಲ್ಲೇ ಅಧಿಕೃತ ಅಧಿಸೂಚನೆ ಹೊರಬೀಳಲಿದೆ.

ಇ-ಸ್ವತ್ತು ಅರ್ಜಿ ತ್ವರಿತ ವಿಲೇವಾರಿಗೆ ಸೂಚನೆ

ಬೆಂಗಳೂರು: ರಾಜ್ಯದ ಇತರ ಜಿಲ್ಲೆಗಳಿಗೆ ಹೋಲಿಸಿದರೆ, ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಅತಿ ಹೆಚ್ಚು ಅರ್ಜಿಗಳು ಸ್ವೀಕೃತಗೊಂಡಿದ್ದು, ಕೆಲವು ತಾಂತ್ರಿಕ ತೊಂದರೆಗಳಿಂದ ಬಹಳಷ್ಟು ಅರ್ಜಿಗಳು ವಿಲೇವಾರಿ ಆಗದೆ ಉಳಿದಿವೆ, ತೊಡಕುಗಳನ್ನು ನಿವಾರಿಸುವ ಮೂಲಕ ಅರ್ಜಿಯನ್ನು ತ್ವರಿತ ಗತಿಯಲ್ಲಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಬೇಕೆಂದು ಎರಡೂ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸಚಿವ ಪ್ರಿಯಾಂಕ್ ಖರ್ಗೆ ಸೂಚಿಸಿದರು.

ತಮ್ಮ ಕಚೇರಿಯಲ್ಲಿ ಬುಧವಾರ ಸಭೆ ನಡೆಸಿದ ಸಚಿವರು, ಸಾರ್ವಜನಿಕರು ಇ-ಸ್ವತ್ತು ಸೇವೆಯನ್ನು ಪಡೆಯುವ ಸಂದರ್ಭದಲ್ಲಿ ಎದುರಿಸುತ್ತಿರುವ ತಾಂತ್ರಿಕ ಮತ್ತು ಆಡಳಿತಾತ್ಮಕ ತೊಂದರೆಗಳ ಬಗ್ಗೆ ಗಮನ ಹರಿಸಿದ ಸಚಿವರು, ಪ್ರಕ್ರಿಯೆಯನ್ನು ಜನಸ್ನೇಹಿಗೊಳಿಸಲು ಅಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನಗಳನ್ನು ನೀಡಿದರು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿ, ವಿವಿಧ ಸಮಸ್ಯೆಗಳ ಬಗ್ಗೆ ವಿವರಿಸಿದರು.

ಅಭಿನಂದನೆ



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಪಕ್ಷದ ಗೆಲುವಿನ ಹಿನ್ನೆಲೆಯಲ್ಲಿ ಸಾದಿಕ್ ಪೈಲ್ವಾನ್ ಮತ್ತವರ ತಂಡ ಶಾಸಕ ರಿಜ್ವಾನ್ ಅರ್ಷದ್ ನೇತೃತ್ವದಲ್ಲಿ ಕಾವೇರಿ ನಿವಾಸದಲ್ಲಿ ಬುಧವಾರ ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಅಭಿನಂದಿಸಿದರು.

ಕಿರುಸುದ್ದಿ

ವೈದ್ಯೆಯಿಂದ ಸರಗಳವು: ಸೆರೆ

ಬೆಂಗಳೂರು: ವಾಯುವಿಹಾರ ಮಾಡುತ್ತಿದ್ದ ವೈದ್ಯೆಯೊಬ್ಬರನ್ನು ಹಿಂಬಾಲಿಸಿ ಚಿನ್ನದ ಸರ ಎಗರಿಸಿ ಪರಾರಿಯಾಗಿದ್ದ ಸರಗಳ್ಳನನ್ನು ಬಾಣಸವಾಡಿ ಠಾಣೆ ಪೊಲೀಸರು ಬಂಧಿಸಿ, ಆತನಿಂದ ಸುಮಾರು 2.10 ಲಕ್ಷ ರೂ. ಮೌಲ್ಯದ 16 ಗ್ರಾಂ ಚಿನ್ನದ ಸರವನ್ನು ವಶಪಡಿಸಿಕೊಂಡಿದ್ದಾರೆ. ಚಿಕ್ಕಬಾಣಸವಾಡಿಯ ನಿವಾಸಿಯೊಬ್ಬರು ಬೆಳಗ್ಗೆ ತಮ್ಮ ತಾಯಿಯನ್ನು ಬಾಲಾಜಿ ಲೇಔಟ್ ಮುಖ್ಯರಸ್ತೆಯಲ್ಲಿರುವ ಪಾರ್ಕ್ ಬಳಿ ವಾಯುವಿಹಾರಕ್ಕಾಗಿ ಬಿಟ್ಟು ಹೋಗಿದ್ದರು. ಈ ಸಮಯದಲ್ಲಿ ವೈದ್ಯೆ ಪಾರ್ಕ್ ಗೇಟ್ ಒಳಗೆ ಹೋಗುವುದನ್ನೇ ಹೊಂಚು ಹಾಕುತ್ತಿದ್ದ ಸರಗಳ್ಳ, ಹೆಲ್ಮೆಟ್ ಧರಿಸಿ ದ್ವಿಚಕ್ರ ವಾಹನದಲ್ಲಿ ಹಿಂಬಾಲಿಸಿಕೊಂಡು ಬಂದು ಕ್ಷಣಾರ್ಧದಲ್ಲಿ ಅವರ ಕೊರಳಿನಲ್ಲಿದ್ದ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದನು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡ ಬಾಣಸವಾಡಿ ಪೊಲೀಸರು ತನಿಖೆ ಚುರುಕುಗೊಳಿಸಿದ್ದರು. ಆರೋಪಿಯು ತಾನು ಕಳವು ಮಾಡಿದ್ದ ಸರವನ್ನು ಮಾರಾಟ ಮಾಡಿದ್ದ ಬಗ್ಗೆ ಮಾಹಿತಿ ನೀಡಿದ್ದು, ಆತನಿಂದ 16 ಗ್ರಾಂ ಚಿನ್ನದ ಸರವನ್ನು ಇನ್‌ಸ್ಪೆಕ್ಟರ್ ಅರುಣ್ ಸಾಳುಂಕೆ ಮತ್ತು ಸಿಬ್ಬಂದಿ ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಮಿಕ್ಸರ್ ಲಾರಿಗೆ ಬೈಕ್ ಡಿಕ್ಕಿ: ಯುವಕ ಸಾವು

ಬೆಂಗಳೂರು: ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಸಿಮೆಂಟ್ ಮಿಕ್ಸರ್ ಲಾರಿಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ, ಖಾಸಗಿ ಕಂಪನಿಯ ಉದ್ಯೋಗಿಯೊಬ್ಬರು ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಮಹದೇವಪುರ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬುಧವಾರ ಬೆಳಗಿನ ಜಾವ ನಡೆದಿದೆ. ಚಂಡೀಗಢ ಮೂಲದ ರೋಷನ್ ಕಪೂರ್ (26) ಮೃತಪಟ್ಟ ದುರ್ದೈವಿ. ನಗರದ ಕಗ್ಗದಾಸಪುರದಲ್ಲಿ ವಾಸವಾಗಿದ್ದ ಇವರು ಖಾಸಗಿ ಕಂಪನಿಯೊಂದರಲ್ಲಿ ಉದ್ಯೋಗಿಯಾಗಿದ್ದರು. ಮಧ್ಯರಾತ್ರಿ ಸುಮಾರು 1.15ರ ಸಮಯದಲ್ಲಿ ರೋಷನ್ ಅವರು ತಮ್ಮ ಬೈಕ್‌ನಲ್ಲಿ ಹೊರ ವರ್ತುಲ ರಸ್ತೆಯ ದೊಡ್ಡನೆಕ್ಕುಂದಿ ಭಗಿನಿ ಹೋಟೆಲ್ ಹತ್ತಿರದ ಸರ್ವೀಸ್ ರಸ್ತೆಯಲ್ಲಿ ಬರುತ್ತಿದ್ದಾಗ ಈ ಅಪಘಾತ ಸಂಭವಿಸಿದೆ. ಸರ್ವೀಸ್ ರಸ್ತೆಯಲ್ಲಿ ಯಾವುದೇ ಮುನ್ನೆಚ್ಚರಿಕೆ ಸೂಚನಾ ಫಲಕಗಳನ್ನು ಹಾಕದೆ, ಸುಗಮ ಸಂಚಾರಕ್ಕೆ ಅಡ್ಡಿಯಾಗುವಂತೆ ಅಜಾಗರೂಕತೆಯಿಂದ ಸಿಮೆಂಟ್ ಮಿಕ್ಸರ್ ಲಾರಿಯನ್ನು ನಿಲ್ಲಿಸಲಾಗಿತ್ತು. ಲಾರಿ ಚಾಲಕ ರಾಮಾನುಜಕುಮಾರ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ.

ಚೇತನ್ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹ

ಬೆಂಗಳೂರು: ನಟ ಅಹಿಂಸಾ ಚೇತನ್ ಡಾ. ರಾಜ್ ಕುಮಾರ್ ಅವರ ಸ್ಮಾರಕದ ಕುರಿತಾಗಿ ನೀಡಿರುವ ವಿವಾದಾತ್ಮಕ ಹೇಳಿಕೆಯನ್ನು ಖಂಡಿಸಿರುವ ಕನ್ನಡಪರ ಹೋರಾಟಗಾರ ಹಾಗೂ ಡಾ. ರಾಜ್ ಕುಮಾರ್ ಅಭಿಮಾನಿಗಳ ಸಂಘದ ರಾಜ್ಯಾಧ್ಯಕ್ಷ ಸಾ.ರಾ. ಗೋವಿಂದು ಅವರು, ಚೇತನ್ ವಿರುದ್ಧ ತಕ್ಷಣವೇ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಶೇಷಾದ್ರಿಪುರಂ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಡಾ. ರಾಜ್ ಕುಮಾರ್ ಅವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುವ ಮೂಲಕ ಚೇತನ್ ಸಮಾಜದಲ್ಲಿ ಅಶಾಂತಿ ಮೂಡಿಸಲು ಯತ್ನಿಸುತ್ತಿದ್ದಾರೆ ಎಂದು ಸಾ.ರಾ. ಗೋವಿಂದು ಗಂಭೀರವಾಗಿ ಆರೋಪಿಸಿದ್ದಾರೆ. ಕನ್ನಡಿಗರ ಭಾವನೆಗಳಿಗೆ ಧಕ್ಕೆ ತರುತ್ತಿರುವ ಇಂತಹ ವ್ಯಕ್ತಿಗಳ ವಿರುದ್ಧ ಸರ್ಕಾರ ಮುಲಾಜಿಲ್ಲದೆ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದ್ದಾರೆ. ಏ.24 ರಂದು ಅಹಿಂಸಾ ಚೇತನ್ ತಮ್ಮ ಸಾಮಾಜಿಕ ಜಾಲತಾಣದಲ್ಲಿ ಪುಣ್ಯಭೂಮಿಯ ಸ್ಮಾರಕದ ಬಗ್ಗೆ ಆಕ್ಷೇಪಾರ್ಹ ಪೋಸ್ಟ್ ಹಂಚಿಕೊಂಡಿದ್ದರು.

ಮಳೆ, ಚರಂಡಿ ನೀರು ಕೆರೆಗೆ ನೇರವಾಗಿ ಸೇರ್ಪಡೆ | ಅವನತಿ ಹಾದಿಯಲ್ಲಿ ಬೆಂಗಳೂರಿನ ಕೆರೆಗಳು

ಕಸದ ತೊಟ್ಟಿಯಾದ ಉತ್ತರಹಳ್ಳಿ ಕೆರೆ

ಮಹೇಶ್ ಹೆಗಡೆ

ಬೆಂಗಳೂರು: ನಗರದ ಉತ್ತರಹಳ್ಳಿ ಭಾಗದಲ್ಲಿರುವ ಪ್ರಮುಖವಾದ ಉತ್ತರಹಳ್ಳಿ ಕೆರೆ ಕಸದ ತೊಟ್ಟಿಯಾಗುತ್ತಿದೆ. ಕಳೆದ ವಾರದ ಮಳೆಯಿಂದಾಗಿ ಚರಂಡಿ ನೀರು ನೇರವಾಗಿ ಕೆರೆ ಸೇರುತ್ತಿದ್ದು, ಇಡೀ ಪರಿಸರ ಮಲಿನಗೊಂಡಿದೆ. ಪರಿಹಾರ ಕಣ್ಣೆದುರೇ ಇದ್ದರೂ, ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ದಕ್ಷಿಣ ನಗರ ಪಾಲಿಕೆ ಅಧಿಕಾರಿಗಳ ಇಚ್ಛಾಶಕ್ತಿಯ ಕೊರತೆಯಿಂದ ಕೆರೆ ಅವನತಿಯ ಹಾದಿ ಹಿಡಿಯುತ್ತಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಗೆ ಬರುವ ಉತ್ತರಹಳ್ಳಿ ಕೆರೆಯು ಹೂಳು, ಪ್ಲಾಸ್ಟಿಕ್ ತ್ಯಾಜ್ಯ ಮತ್ತು ಸಂಸ್ಕರಿಸದ ಚರಂಡಿ ನೀರಿನಿಂದ ತುಂಬಿಹೋಗಿದ್ದು, ದುರ್ನಾತ ಬೀರುತ್ತಿದೆ. ಪ್ರಸ್ತುತ ಕೆರೆಯ ಎಸ್‌ಟಿಪಿ ಘಟಕವು ಕಾರ್ಯನಿರ್ವಹಿಸುತ್ತಿಲ್ಲ, ಅಲ್ಲದೆ ಇತ್ತೀಚೆಗೆ ಸುರಿದ ಭಾರಿ ಮಳೆಯಿಂದ ಕೆರೆಗೆ ಕಲುಷಿತ ನೀರು ಸೇರುತ್ತಿದೆ ಎಂದು ಉತ್ತರಹಳ್ಳಿ ಭಾಗದ ಕೆರೆ ಸ್ವಯಂ ಸೇವಕರು ಬೇಸರ ವ್ಯಕ್ತಪಡಿಸಿದ್ದಾರೆ.





ಪುನರುಜ್ಜೀವನಕ್ಕೆ ಸಿದ್ಧ

ಕೆರೆಯನ್ನು ಪುನರುಜ್ಜೀವನಗೊಳಿಸಲು ಪರಿಸರವಾದಿ ರೇವತಿ ಕಾಮತ್ ಅವರು ಸಿದ್ಧರಿದ್ದು, ಪಾಲಿಕೆಯಿಂದ ಅಧಿಕೃತ ಅನುಮತಿಗಾಗಿ ಕಾಯಲಾಗುತ್ತಿದೆ. ಆದರೆ ಅಧಿಕಾರಿಗಳು ಅನುಮತಿ ನೀಡಲು ಆಸಕ್ತಿವಹಿಸುತ್ತಿಲ್ಲ, ಈ ಬಗ್ಗೆ ಸ್ಥಳೀಯ ಶಾಸಕರು ಮತ್ತು ಸಂಸದರನ್ನು ಭೇಟಿ ಮಾಡಿ ಚರ್ಚಿಸಲಾಗಿದ್ದು, ಸಕಾರಾತ್ಮಕವಾಗಿ ಸ್ಪಂದನೆ ದೊರೆತಿದೆ. ಆದಷ್ಟು ಬೇಗ ಕೆರೆಯನ್ನು ಪುನರುಜ್ಜೀವನಗೊಳಿಸಲು ಅನುಮತಿ ಸಿಗುವ ಭರವಸೆ ಇದೆ ಎಂದು ಸ್ಥಳೀಯ ನಿವಾಸಿ ಮತ್ತು ರೇವತಿ ಕಾಮತ್ ಟೀಂ ನ ಸದಸ್ಯ ನಿಶ್ಚಿತ್ ಅಶೋಕ್ ಕುಮಾರ್ ತಿಳಿಸಿದ್ದಾರೆ.

> ಕೆರೆ ಪುನರುಜ್ಜೀವನಗೊಳಿಸದಿದ್ದರೆ ಮುಂದಿನ ತಲೆಮಾರಿಗೆ ಕಲುಷಿತ ಹೊಂಡವನ್ನಷ್ಟೇ ಬಿಟ್ಟು ಹೋಗಬೇಕಾಗುತ್ತದೆ. ಆದ್ದರಿಂದ ನಮ್ಮ ಕೆರೆ ಮಾತನಾಡಲಾರದು, ಹಾಗಾಗಿ ನಾವೇ ಅದರ ಧ್ವನಿಯಾಗಬೇಕು ಎನ್ನುವ ಸಾಮಾಜಿಕ ಅಭಿಯಾನ ಆರಂಭಿಸಿದ್ದೇವೆ.
> ■ **ನಿಶ್ಚಿತ್ ಅಶೋಕ್ ಕುಮಾರ್,** ಉತ್ತರಹಳ್ಳಿ ಸ್ಥಳೀಯ ನಿವಾಸಿ

ಯಾವೆಲ್ಲ ಅನುಮತಿ ಬೇಕು?

ಉತ್ತರಹಳ್ಳಿ ಕೆರೆಯಲ್ಲಿನ ತ್ಯಾಜ್ಯ ಮತ್ತು ಒಳಚರಂಡಿ ಸೇರ್ಪಡೆ ಪಾಯಿಂಟ್‌ಗಳನ್ನು ಗುರುತಿಸಲು ಡ್ರೋನ್ ಸಮೀಕ್ಷೆ ನಡೆಸಲು ಒಪ್ಪಿಗೆ. ಸ್ವಯಂಸೇವಕರ ನೆರವಿನೊಂದಿಗೆ ಕೆರೆ ಮತ್ತು ಅದರ ಸುತ್ತಮುತ್ತಲಿನ ಘನತ್ಯಾಜ್ಯ ಹಾಗೂ ಹೂಳನ್ನು ತೆಗೆಯುವುದಕ್ಕೆ ಅನುಮತಿ. ಕೆರೆಗೆ ಕೊಳಚೆ ನೀರು ಸೇರದಂತೆ ತಡೆಯಲು, ನಿಯೋಜಿತ ಕೊಳಚೆನೀರು ಸಂಸ್ಕರಣಾ ಘಟಕವನ್ನು ತಕ್ಷಣವೇ ಕಾರ್ಯಗತಗೊಳಿಸಲು ಬಿಡಬ್ಲ್ಯುಎಸ್‌ಎಸ್‌ಬಿ ಜತೆ ಪತ್ರವ್ಯವಹಾರ ಮಾಡುವುದು. ಜೀವವೈವಿಧ್ಯಕ್ಕೆ ತೊಂದರೆಯಾಗದಂತೆ ನೈಸರ್ಗಿಕ ಸೌಂದರ್ಯವನ್ನು ಹೆಚ್ಚಿಸುವುದಕ್ಕೆ ಮತ್ತು ಪ್ಲಾಸ್ಟಿಕ್, ಕಟ್ಟಡದ ಅವಶೇಷಗಳನ್ನು ತೆರವುಗೊಳಿಸುವುದು ಸೇರಿದಂತೆ ನೀರಿನ ಗುಣಮಟ್ಟ ಸುಧಾರಿಸಲು ಕಳೆಗಳನ್ನು ಪರಿಸರ ಸ್ನೇಹಿ ವಿಧಾನಗಳ ಮೂಲಕ ತೆಗೆದುಹಾಕುವುದಕ್ಕೆ ತಾಂತ್ರಿಕ ಒಪ್ಪಿಗೆಯನ್ನು ರೇವತಿ ಕಾಮತ್ ಮತ್ತು ಟೀಂ ಪಾಲಿಕೆಯನ್ನು ಕೇಳಿದೆ.

ಹಲ್ಲೆ ನಡೆಸಿ ಯುವಕನಿಂದ ಹಣ ಸುಲಿಗೆ: ಬಂಧನ

ಬೆಂಗಳೂರು: ಡೇಟಿಂಗ್ ಆ್ಯಪ್ ಮೂಲಕ ಪರಿಚಯವಾಗಿ, ಭೇಟಿಯಾಗುವ ನೆಪದಲ್ಲಿ ಕರೆಸಿಕೊಂಡು ಯುವಕನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ಹಣ ಸುಲಿಗೆ ಮಾಡಿದ್ದ ಇಬ್ಬರು ಆರೋಪಿ ಗಳನ್ನು ಯಲಹಂಕ ಪೊಲೀಸರು ಬಂಧಿಸಿದ್ದಾರೆ.

ಈ ಘಟನೆಗೆ ಸಂಬಂಧಿಸಿದಂತೆ 27 ವರ್ಷದ ಸಿವಿಲ್ ಇಂಜಿನಿಯರ್ ನೀಡಿದ ದೂರಿನನ್ವಯ ಪೊಲೀಸರು ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿ, ಕೃತ್ಯದಲ್ಲಿ ಭಾಗಿಯಾಗಿದ್ದ ಇಬ್ಬರು ಕಾನೂನು ಸಂಘರ್ಷ ಕ್ಕೊಳಗಾದ ಬಾಲಕರ ವಿರುದ್ಧವೂ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕಳೆದ ಮೂರು ವರ್ಷಗಳಿಂದ ಡೇಟಿಂಗ್ ಆ್ಯಪ್ ಬಳಸುತ್ತಿದ್ದ ದೂರುದಾರ ಇಂಜಿನಿಯರ್‌ಗೆ ಆರೋಪಿಗಳ ಪರಿಚಯವಾಗಿತ್ತು. ಸ್ನೇಹ ಬೆಳೆದು ಮೊಬೈಲ್ ಸಂಖ್ಯೆ ವಿನಿಮಯ ಮಾಡಿಕೊಂಡಿದ್ದ ಇವರು, ಮೇ1 ಭೇಟಿಯಾಗಲು ನಿರ್ಧರಿಸಿದ್ದರು.

ಕಾರಿನಲ್ಲಿ ಕರೆದೊಯ್ದು ಚಾಕು ಇರಿತ

ಸ್ಥಳಕ್ಕೆ ಬಂದ ಇಂಜಿನಿಯರ್ ಅನ್ನು ಕಾರಿನಲ್ಲಿ ಕರೆದೊಯ್ದ ಆರೋಪಿಗಳು, ನಿರ್ಜನ ಪ್ರದೇಶಕ್ಕೆ ತಲುಪುತ್ತಿದ್ದಂತೆ ತಮ್ಮ ಅಸಲಿ ರೂಪ ತೋರಿಸಿದ್ದಾರೆ. ಅವಾಚ್ಯವಾಗಿ ನಿಂದಿಸಿ ಬೆದರಿಕೆ ಹಾಕಿದ ಕಿರಾತಕರು, ಸಂತ್ರಸ್ತನ ಮೊಬೈಲ್ ಕಿತ್ತುಕೊಂಡು ಪಾಸ್‌ವರ್ಡ್ ನೀಡುವಂತೆ ಒತ್ತಾಯಿಸಿದ್ದಾರೆ. ಇದಕ್ಕೆ ನಿರಾಕರಿಸಿದಾಗ ಸಂತ್ರಸ್ತನ ತೊಡೆಗೆ ನಾಲ್ಕೈದು ಬಾರಿ ಚಾಕುವಿನಿಂದ ಇರಿದು ಗಂಭೀರವಾಗಿ ಗಾಯಗೊಳಿಸಿದ್ದಾರೆ. ಬಳಿಕ ಬಲವಂತವಾಗಿ ಮೊಬೈಲ್ ಮೂಲಕ 16 ಸಾವಿರ ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡು, ಸಂತ್ರಸ್ತನನ್ನು ಅಲ್ಲೇ ಬಿಟ್ಟು ಪರಾರಿಯಾಗಿದ್ದಾರೆ.

ಎಂಟು ಮಂದಿಗೆ ಟೋಪಿ

ಗಾಯಗೊಂಡಿದ್ದ ಇಂಜಿನಿಯರ್ ಕೂಡಲೇ ಸ್ನೇಹಿತನಿಗೆ ಕರೆ ಮಾಡಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದ ನಂತರ ಪೊಲೀಸರಿಗೆ ದೂರು ನೀಡಿದ್ದಾರೆ. ತನಿಖೆ ಕೈಗೆತ್ತಿಕೊಂಡ ಯಲಹಂಕ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದು, ವಿಚಾರಣೆ ವೇಳೆ ಇದೇ ಡೇಟಿಂಗ್ ಆ್ಯಪ್ ಬಳಸಿ ಆರೋಪಿಗಳು ಈ ಹಿಂದೆ ಎಂಟು ಜನರಿಗೂ ಅಧಿಕ ಮಂದಿಯನ್ನು ಇದೇ ರೀತಿ ಸುಲಿಗೆ ಮಾಡಿರುವುದು ಪತ್ತೆಯಾಗಿದೆ.

ಸುಳ್ಳು ದಾಖಲೆ ಸೃಷ್ಟಿಸಿ ನಿವೇಶನ ಕಬಳಿಕೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಗ್ರೂಪ್ ಸಿ ಮತ್ತು ಡಿ ವರ್ಗದ ನೌಕರರಿಗೆ ಮಾತ್ರ ಮೀಸಲಿರಿಸಿದ್ದ ನಿವೇಶನವನ್ನು, ಸುಳ್ಳು ದಾಖಲೆ ನೀಡಿ ಅಕ್ರಮವಾಗಿ ಪಡೆದ ಆರೋಪದ ಮೇಲೆ ಖಾಸಗಿ ವ್ಯಕ್ತಿ ಹಾಗೂ ಇತರರ ವಿರುದ್ಧ ಶೇಷಾದ್ರಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘದಿಂದ ದೊಡ್ಡಕಲ್ಲಸಂದ್ರ ಮತ್ತು ಲಿಂಗಧೀರನಹಳ್ಳಿ ಬಡಾವಣೆಗಳಲ್ಲಿ ಪ್ರಾಧಿಕಾರದ ಕೆಳಹಂತದ ನೌಕರರಿಗಾಗಿ ನಿವೇಶನಗಳನ್ನು ಮೀಸಲಿಡಲಾಗಿತ್ತು. ಆದರೆ, ಈ ನಿವೇಶನವನ್ನು ನೌಕರರಲ್ಲದ ಖಾಸಗಿ ವ್ಯಕ್ತಿಗಳು ತಾವು ಬಿಡಿಎ ನೌಕರರೆಂದು ಸುಳ್ಳು ಮಾಹಿತಿ ನೀಡಿ ಅಕ್ರಮವಾಗಿ ಹಂಚಿಕೆ ಮಾಡಿಸಿಕೊಂಡಿರುವುದು ಪ್ರಾಥಮಿಕ ವಿಚಾರಣೆಯಲ್ಲಿ ಬೆಳಕಿಗೆ ಬಂದಿದೆ.

ಬಿಡಿಎ ಜಾಗೃತ ದಳದ ಡಿವೈಎಸ್ಪಿ ಹನುಮಂತರಾಯ ಬಿ. ಅವರು ಈ ಕುರಿತು ದೂರು ನೀಡಿದ್ದಾರೆ. ತನಿಖೆಯ ವೇಳೆ ಎಚ್. ನಾಗರಾಜ್ ಎಂಬವರು ತಾವು ಬಿಡಿಎ ನೌಕರನೆಂದು ಬಿಂಬಿಸಿ, ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಲಿಂಗಧೀರನಹಳ್ಳಿಯಲ್ಲಿ ನಿವೇಶನವನ್ನು ಅಕ್ರಮವಾಗಿ ನೋಂದಾಯಿಸಿಕೊಂಡಿರುವುದು ಪತ್ತೆಯಾಗಿದೆ. ವಾಸ್ತವವಾಗಿ ನಾಗರಾಜ್ ಅವರು ಬಿಡಿಎ ನೌಕರರಲ್ಲ ಎಂದು ಪ್ರಾಧಿಕಾರದ ಸಿಬ್ಬಂದಿ ವಿಭಾಗ ದೃಢಪಡಿಸಿದೆ.

ಅಧಿಕಾರಿಗಳ ಶಾಮೀಲು ಶಂಕೆ

ಈ ಅಕ್ರಮ ಕಾರ್ಯಕ್ಕೆ ಬಿಡಿಎನ ಕೆಲವು ಅಧಿಕಾರಿಗಳು ಮತ್ತು ಸಿಬ್ಬಂದಿಯವರ ಸಹಕಾರ ಹಾಗೂ ಒಳಸಂಚು ಇರುವುದು ದಾಖಲೆಗಳ ಪರಿಶೀಲನೆಯಿಂದ ತಿಳಿದುಬಂದಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಆರೋಪಿಗಳ ವಿರುದ್ಧ ಬಿಎನ್ಎಸ್‌ನ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶೇಷಾದ್ರಿಪುರಂ ಪೊಲೀಸರಿಂದ ಪ್ರಕರಣ ದಾಖಲು

2 ಹೊಸ ಸೆಮಿಕಂಡಕ್ಟರ್‌ಗೆ ಸಂಪುಟ ಅಸ್ತು

ಬೆಂಗಳೂರು: ಭಾರತದ ಸೆಮಿಕಂಡಕ್ಟರ್ ಮಿಷನ್ (ಐಎಸ್‌ಎಂ)ಯಲ್ಲಿ ಎರಡು ಹೊಸ ಸೆಮಿಕಂಡಕ್ಟರ್ ಯೋಜನೆಗಳಿಗೆ ಸಂಪುಟ ಅನುಮೋದನೆ ನೀಡಿರುವುದನ್ನು ಐಇಎಸ್‌ಎ ಸ್ವಾಗತಿಸುತ್ತದೆ. ಇದು ಭಾರತದ ವೇಗವಾಗಿ ಬೆಳೆಯುತ್ತಿರುವ ಸೆಮಿಕಂಡಕ್ಟರ್ ಪರಿಸರ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುತ್ತದೆ. ಭಾರತದ ಸೆಮಿಕಂಡಕ್ಟರ್ ಮಹತ್ವಾಕಾಂಕ್ಷೆಯನ್ನು ವೇಗಗೊಳಿಸುವಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ನಿರಂತರ ದೃಷ್ಟಿಕೋನ ಮತ್ತು ಬದ್ಧತೆ ಶ್ಲಾಘನೀಯವಾದದ್ದು ಎಂದು ಐಇಎಸ್‌ಎ ಮತ್ತು ಎಸ್‌ಇಎಂಐ ಇಂಡಿಯಾ ಅಧ್ಯಕ್ಷ ಅಶೋಕ್ ಚಂದಕ್ ಹೇಳಿದ್ದಾರೆ.

ಮಾಧ್ಯಮ ಪ್ರಕಟಣೆ ನೀಡಿರುವ ಅವರು, ಈ ಅನುಮೋದನೆಗಳೊಂದಿಗೆ ಐಎಸ್‌ಎಂಯಲ್ಲಿ ಒಟ್ಟು ಸೆಮಿಕಂಡಕ್ಟರ್ ಯೋಜನೆಗಳ ಸಂಖ್ಯೆ 12ಕ್ಕೆ ತಲುಪಿದೆ. ಇದು ಜಾಗತಿಕವಾಗಿ ಸ್ಪರ್ಧಾತ್ಮಕ ಮತ್ತು ಸ್ವಾವಲಂಬಿ ಸೆಮಿಕಂಡಕ್ಟರ್ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವಲ್ಲಿನ ಬಲವಾದ ವೇಗವನ್ನು ಪ್ರತಿಬಿಂಬಿಸುತ್ತದೆ. ಕಾಂಪೌಂಡ್ ಸೆಮಿಕಂಡಕ್ಟರ್ ಆಧಾರಿತ ಮಿನಿ, ಮೈಕ್ರೋ-ಎಲ್‌ಇಡಿ ಉತ್ಪಾದನೆ ಮತ್ತು ಒಎಸ್‌ಎಟಿ ಸಾಮರ್ಥ್ಯಗಳಂತಹ ಸುಧಾರಿತ ಕ್ಷೇತ್ರಗಳ ಸೇರ್ಪಡೆಯು ಮುಂದಿನ ಪೀಳಿಗೆಯ ತಂತ್ರಜ್ಞಾನಗಳು, ಪೂರೈಕೆ ಸರಪಳಿ ಸ್ಥಿತಿಸ್ಥಾಪಕತ್ವ, ನಾವೀನ್ಯತೆ ಮತ್ತು ನುರಿತ ಉದ್ಯೋಗ ಸೃಷ್ಟಿಯಲ್ಲಿ ಭಾರತದ ಸ್ಥಾನವನ್ನು ಹೆಚ್ಚಿಸುತ್ತದೆ ಎಂದು ತಿಳಿಸಿದ್ದಾರೆ. ಮುಖ್ಯವಾಗಿ, ಮಿನಿ, ಮೈಕ್ರೋ-ಎಲ್‌ಇಡಿ ಡಿಸ್‌ಪ್ಲೇ ಮಾಡ್ಯೂಲ್ ಮತ್ತು ಎಪಿಟಾಕ್ಸಿ ಆಧಾರಿತ ಆರು ಇಂಚಿನ ವೇಫರ್ ಉತ್ಪಾದನೆಯು ಭಾರತದ ಎಲೆಕ್ಟ್ರಾನಿಕ್ಸ್ ಕ್ಷೇತ್ರಕ್ಕೆ ಕಾರ್ಯತಂತ್ರದ ದೃಷ್ಟಿಯಿಂದ ಮಹತ್ವದ್ದಾಗಿದೆ.

ಮಕ್ಕಳಲ್ಲಿ ಸಾಂಸ್ಕೃತಿಕ ಪ್ರಜ್ಞೆ ಮೂಡಿಸಲಿ



ಬೆಂಗಳೂರು: ಮಕ್ಕಳಲ್ಲಿ ಇತಿಹಾಸದ ಅರಿವು ಮತ್ತು ಸಾಂಸ್ಕೃತಿಕ ಪ್ರಜ್ಞೆ ಬೆಳೆಸುವ ಉದ್ದೇಶದಿಂದ ಪರಮ್ ಹಿಸ್ಟರಿ ಸೆಂಟರ್ ವತಿಯಿಂದ ವಿಶಿಷ್ಟ ಬೇಸಿಗೆ ಶಿಬಿರ ಅನ್ವೇಷಣಾ 2026 ಆಯೋಜಿಸಲಾಗಿದೆ.

ಯುವಕ ಸಂಘದ ಸಹಯೋಗದಲ್ಲಿ ನಡೆಯುವ ಈ ಶಿಬಿರವು ಮೇ.11ರಿಂದ ಮೇ17ರವರೆಗೆ ಜಯನಗರ 4ನೇ ಬ್ಲಾಕ್‌ನ 'ಯುವಪಥ'ದಲ್ಲಿ ನಡೆಯಲಿದೆ. ಪಠ್ಯಪುಸ್ತಕಗಳಿಗೆ ಸೀಮಿತವಾಗದೆ, ಇತಿಹಾಸವನ್ನು ಅನುಭವಾತ್ಮಕವಾಗಿ ಕಲಿಯುವ ಅವಕಾಶ ಒದಗಿಸುವುದು ಶಿಬಿರದ ಪ್ರಮುಖ ಉದ್ದೇಶವಾಗಿದೆ. ಪುರಾತತ್ವ ಉತ್ಖನನದ ಅನುಕರಣೆ, ಪ್ರಾಚೀನ ಕಲೆ-ಕರಕುಶಲ ಚಟುವಟಿಕೆಗಳು, ವೀರರ ಕಥೆಗಳ ನಿರೂಪಣೆ, ಡಿಜಿಟಲ್ ತಂತ್ರಜ್ಞಾನಗಳ ಮೂಲಕ ಐತಿಹಾಸಿಕ ತಾಣಗಳ ವರ್ಚುವಲ್ ಭೇಟಿ ಸೇರಿದಂತೆ ಹಲವು ವಿನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಶಿಬಿರವು ಪ್ರತಿದಿನ ಬೆಳಗ್ಗೆ 10ರಿಂದ ಮಧ್ಯಾಹ್ನ 1.20ರವರೆಗೆ ನಡೆಯಲಿದ್ದು, 6ರಿಂದ 16 ವರ್ಷದ ಮಕ್ಕಳು ಭಾಗವಹಿಸಬಹುದು. ಆಟ-ಪಾಠಗಳ ಸಂಯೋಜನೆಯ ಮೂಲಕ ಮಕ್ಕಳಲ್ಲಿ ಇತಿಹಾಸದ ಕುತೂಹಲ ಮತ್ತು ಸೃಜನಶೀಲತೆ ಬೆಳೆಸುವತ್ತ ಈ ಕಾರ್ಯಕ್ರಮ ಒತ್ತು ನೀಡಲಿದೆ.

ಹೆಚ್ಚಿನ ಮಾಹಿತಿಗಾಗಿ 90350-34728 ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಬಹುದು ಅಥವಾ events@paramexp.org ಇಮೇಲ್ ಮೂಲಕ ನೋಂದಣಿ ಮಾಡಬಹುದು.

ಭಾವನೆಗಳ ಮಿಶ್ರಣ ನಮ್ಮ ಆರ್ಟ್ ಬೆಂಗಳೂರು ಹಬ್ಬ

ಬಣ್ಣದ ಹೊಳಪಿನಲ್ಲಿ ನಗರ ಜೀವನ

ಬೆಂಗಳೂರು: ಬಣ್ಣಗಳ ಹೊಳಪಿನಲ್ಲಿ ನಗರ ಜೀವನದ ಚಟುವಟಿಕೆ ಕಾಣಿಸಿದರೆ, ಕೆಲವು ಕೃತಿಯಲ್ಲಿ ಹಳ್ಳಿಯ ನಿಸರ್ಗದ ಸೌಂದರ್ಯ ಉಸಿರಾಡುತ್ತದೆ. ಪ್ರತಿಯೊಂದು ಕಲಾಕೃತಿ ಒಂದೊಂದು ಕಥೆ ಹೇಳುತ್ತಿದೆ. ಕಾಲ, ಸಂಸ್ಕೃತಿ, ಭಾವನೆಗಳ ಮಿಶ್ರಣದ ಹಬ್ಬವಾಗಿ ನಮ್ಮ ಆರ್ಟ್ ಬೆಂಗಳೂರು ಹಬ್ಬ ಪರಿವರ್ತನೆಯಾಗಿದೆ.

ನಗರದ ಚಿತ್ರಕಲಾ ಪರಿಷತ್ತಿನಲ್ಲಿ ನಡೆಯುತ್ತಿರುವ ನಮ್ಮ ಆರ್ಟ್ ಬೆಂಗಳೂರು ರಾಷ್ಟ್ರೀಯ ಕಲಾ ಉತ್ಸವದ 2ನೇ ಆವೃತ್ತಿಯಲ್ಲಿ, ದೇಶದ ವಿವಿಧ ಭಾಗಗಳ ಕಲಾವಿದರು ರಚಿಸಿರುವ ವಿವಿಧ ಬಗೆಯ ಕಲಾ ಕೃತಿಗಳನ್ನು ಒಂದೇ ಸೂರಿನಡಿಯಲ್ಲಿ ಕಾಣಬಹುದಾಗಿದೆ. ಪ್ರದರ್ಶನದಲ್ಲಿ ಚಿತ್ರಕಲೆ, ಶಿಲ್ಪಕಲೆ, ಸಮಕಾಲೀನ ಕಲಾ ಶೈಲಿಗಳು ಸೇರಿದಂತೆ ವಿಭಿನ್ನ ಪ್ರಕಾರದ ಕಲಾಕೃತಿಗಳನ್ನು ವೀಕ್ಷಣೆಗೆ ಇಡಲಾಗಿದೆ. ವಿಶೇಷವಾಗಿ ಯುವ ಕಲಾವಿದರ ಸೃಜನಶೀಲ, ರಚನಾತ್ಮಕ ಚಿತ್ರಗಳನ್ನು ನೋಡುಗರನ್ನು ಸೆಳೆಯುತ್ತಿವೆ.

ಬುಧವಾರ ನಗರದ ಚಿತ್ರಕಲಾ ಪರಿಷತ್ತಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಿರ್ಲೋಸ್ಕರ್ ಸಿಸ್ಟಮ್ಸ್ ಪ್ರೈವೇಟ್ ಲಿ.ಅಧ್ಯಕ್ಷೆ ಮತ್ತು ವ್ಯವಸ್ಥಾಪಕ ನಿರ್ದೇಶಕಿ ಗೀತಾಂಜಲಿ ವಿಕ್ರಮ್ ಕಿರ್ಲೋಸ್ಕರ್ ಅವರು ನಮ್ಮ ಆರ್ಟ್ ಬೆಂಗಳೂರು ರಾಷ್ಟ್ರೀಯ ಕಲಾ ಉತ್ಸವಕ್ಕೆ ಚಾಲನೆ ನೀಡಿದರು. ಭಾರತೀಯ ವಿದ್ಯಾಭವನ ಬೆಂಗಳೂರು ಕೇಂದ್ರದ ಅಧ್ಯಕ್ಷ ಕೆ.ಜಿ.ರಾಘವನ್, ಕಲಾ ಇತಿಹಾಸಕಾರ ಅಶ್ರಫಿ ಎಸ್. ಭಗತ್ ಹಾಗೂ ಅಧ್ಯಕ್ಷ ಡಾ.ಬಿ.ಎಲ್.ಶಂಕರ್ ಉಪಸ್ಥಿತರಿದ್ದರು.



150ಕ್ಕೂ ಕಲಾವಿದರು ಭಾಗಿ

ಭಾರತದಾದ್ಯಂತದ ಸುಮಾರು 150ಕ್ಕೂ ಹೆಚ್ಚು ಕಲಾವಿದರು ತಮ್ಮ ಸಮಕಾಲೀನ ಮತ್ತು ಸಾಂಪ್ರದಾಯಿಕ ಕಲಾಕೃತಿಗಳನ್ನು ಈ ಕಾಲಹಬ್ಬದಲ್ಲಿ ಪ್ರದರ್ಶಿಸುತ್ತಿದ್ದಾರೆ. ಇದರೊಂದಿಗೆ 70ಕ್ಕೂ ಹೆಚ್ಚು ಹಿರಿಯ ಅನುಭವಿ ಕಲಾವಿದರ ಕೃತಿಯನ್ನು ಕಾಣಬಹುದಾಗಿದೆ.

> ಕಲಾವಿದರಿಗೆ ಉತ್ತಮ ಅವಕಾಶಗಳನ್ನು ಒದಗಿಸುವ ಉದ್ದೇಶದಿಂದ ಇದನ್ನು ನಿರಂತರವಾಗಿ ಮುಂದುವರಿಸಲಾಗುತ್ತಿದೆ. ಕಲಾವಿದರ ಪ್ರತಿಭೆಗೆ ವೇದಿಕೆ ನೀಡುವುದು, ಹೊಸ ಪ್ರತಿಭೆಗಳನ್ನು ಪ್ರೋತ್ಸಾಹಿಸುವುದು ಹಾಗೂ ಕಲಾ ಸಂಸ್ಕೃತಿಯನ್ನು ನಗರದಲ್ಲಿ ಮತ್ತಷ್ಟು ವಿಸ್ತರಿಸುವುದು ನಮ್ಮ ಮುಖ್ಯ ಗುರಿಯಾಗಿದೆ.
> ■ **ಡಾ.ಬಿ.ಎಲ್.ಶಂಕರ್,** ಅಧ್ಯಕ್ಷ ಕರ್ನಾಟಕ ಚಿತ್ರಕಲಾ ಪರಿಷತ್

> ಕಲೆಯು ಸಮಾಜದ ಸಂಸ್ಕೃತಿ, ಭಾವನೆ ಮತ್ತು ಚಿಂತನೆಗಳನ್ನು ಪ್ರತಿಬಿಂಬಿಸುವ ಶಕ್ತಿಶಾಲಿ ಮಾಧ್ಯಮವಾಗಿದೆ. ಯುವ ಕಲಾವಿದರಿಗೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಇಂತಹ ವೇದಿಕೆಗಳು ಅತ್ಯಂತ ಅಗತ್ಯ.
> ■ **ಗೀತಾಂಜಲಿ ವಿಕ್ರಮ್ ಕಿರ್ಲೋಸ್ಕರ್,** ಕಿರ್ಲೋಸ್ಕರ್ ಸಿಸ್ಟಮ್ಸ್ ಪ್ರೈವೇಟ್ ಲಿ. ಅಧ್ಯಕ್ಷೆ

ಶಾಸಕರಿಂದ ಉಚಿತ ಟಿಕೆಟ್ ವ್ಯಾಮೋಹ

ಫೈನಲ್ ಪಂದ್ಯ ಸ್ಥಳಾಂತರ

ಬೆಂಗಳೂರು: ವಿವಿಐಪಿ ಪಾಸ್‌ಗಳ ಹಪಾಹಪಿ ಹಾಗೂ ಶಾಸಕರ ಉಚಿತ ಟಿಕೆಟ್ ವ್ಯಾಮೋಹದಿಂದಾಗಿ ಬೆಂಗಳೂರಿನಲ್ಲಿ ನಡೆಯಬೇಕಿದ್ದ ಐಪಿಎಲ್ ಫೈನಲ್ ಪಂದ್ಯ ಅಹಮದಾಬಾದ್ ಪಾಲಾಗಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆರೋಪ ಮಾಡಿದ್ದಾರೆ.

ಈ ಬಗ್ಗೆ ಮಾಧ್ಯಮ ಹೇಳಿಕೆ ನೀಡಿರುವ ಅವರು, ನಮ್ಮ ರಾಜ್ಯದ ನಾಯಕರಿಗೆ "ಅಭಿನಂದನೆಗಳು" ಕೇವಲ ತಮ್ಮ ವಿವಿಐಪಿ ಪಾಸ್‌ಗಳ ಹಪಾಹಪಿಯಿಂದಾಗಿ ನಮ್ಮೂರಿನಲ್ಲಿ ನಡೆಯಬೇಕಿದ್ದ ಫೈನಲ್ ಪಂದ್ಯವನ್ನು ಅಹಮದಾಬಾದ್‌ಗೆ ಉಡುಗೊರೆಯಾಗಿ ನೀಡಿದ್ದೀರಿ ವ್ಯಂಗ್ಯವಾಡಿದ್ದಾರೆ. ನಾನು ಅಂದೇ ಹೇಳಿದ್ದೆ, ಇಂದೂ ಅದನ್ನೇ ಪುನರುಚ್ಚರಿಸುತ್ತಿದ್ದೇನೆ, ಕ್ರೀಡಾಂಗಣ ಇರುವುದು ಕ್ರಿಕೆಟ್ ಅಭಿಮಾನಿಗಳಿಗಾಗಿ ಹೊರತು ವಿಐಪಿಗಳಿಗಾಗಿ ಅಲ್ಲ, ನಮ್ಮ ಕೆಲವು ಶಾಸಕರ ಉಚಿತ ಟಿಕೆಟ್ ವ್ಯಾಮೋಹದಿಂದಾಗಿ ಇಂದು ಐಪಿಎಲ್ ಫೈನಲ್ ಬೆಂಗಳೂರಿನಿಂದ ಕೈತಪ್ಪಿ ಹೋಗಿದೆ ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ.

ಚಿನ್ನಸ್ವಾಮಿ ಕ್ರೀಡಾಂಗಣವನ್ನು ತಮ್ಮ ವೈಯಕ್ತಿಕ ಟಿಕೆಟ್ ಕೌಂಟರ್ ಮಾಡಿಕೊಂಡವರ ಬೇಜವಾಬ್ದಾರಿ ವರ್ತನೆಯಿಂದಾಗಿ, ಇಂದು ನಾವು ಕೇವಲ ಒಂದು ಪಂದ್ಯವನ್ನಷ್ಟೇ ಅಲ್ಲ, ರಾಷ್ಟ್ರಮಟ್ಟದಲ್ಲಿ ಬೆಂಗಳೂರಿನ ಘನತೆಯನ್ನೂ ಕಳೆದುಕೊಂಡಿದ್ದೇವೆ, ಎಂದು ಆಕ್ರೋಶ ಹೊರಹಾಕಿದರು.

> ಶಾಸಕರಿಗೆ ಟಿಕೆಟ್ ವಿತರಣೆಗೂ ಐಪಿಎಲ್ ಅಂತಿಮ ಪಂದ್ಯ ಸ್ಥಳಾಂತರಕ್ಕೂ ಸಂಬಂಧವಿಲ್ಲ. ಅಹಮದಾಬಾದ್‌ನಲ್ಲಿ ದೊಡ್ಡ ಕ್ರೀಡಾಂಗಣವಿದೆ. ಹೆಚ್ಚು ಜನ ಸೇರುತ್ತಾರೆ ಎಂಬ ಉದ್ದೇಶದಿಂದ ಸ್ಥಳಾಂತರ ಮಾಡಿರಬಹುದು.
> ■ **ಡಿ.ಕೆ ಶಿವಕುಮಾರ್,** ಉಪ ಮುಖ್ಯಮಂತ್ರಿ

ಇಂದು ನಗರದಲ್ಲಿ...

- ಆರೋಗ್ಯ ಇಲಾಖೆ : ಆರೋಗ್ಯ ಸೇವೆಯ ತುರ್ತು ನಿರ್ವಹಣೆಯ ಅತ್ಯಾಧುನಿಕ ಕಮಾಂಡ್ ಕಂಟ್ರೋಲ್ ರೂಂ ಉದ್ಘಾಟನೆ.
- ಸ್ಥಳ: ಆರೋಗ್ಯ ಸೌಧ, 5 ನೇ ಮಹಡಿ, (ಮಾಗಡಿ ರಸ್ತೆ)
- ಬೆಳಗ್ಗೆ 8.30

- ಕಾಂಚನ್ ಚಂದರ್ ಅವರೊಂದಿಗೆ ಮಾಸ್ಟರ್ ಕ್ಲಾಸ್ ಕುರಿತು ಸಂವಾದ ಹಾಗೂ ಕಾರ್ಯಾಗಾರ.
- ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ ಆವರಣ
- ಬೆಳಗ್ಗೆ 11

- ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ: ಹರಿದಾಸ ವೈಭವ.
- ಸ್ಥಳ: ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ
- ಸಂಜೆ 5.15



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	9	6	2	1	13	+0.855
ಆರ್‌ಸಿಬಿ	9	6	3	0	12	+1.420
ಹೈದರಾಬಾದ್	10	6	4	0	12	+0.644
ರಾಜಸ್ಥಾನ	10	6	4	0	12	+0.510
ಗುಜರಾತ್	10	6	4	0	12	-0.147
ಚೆನ್ನೈ	10	5	5	0	10	+0.151
ದಿಲ್ಲಿ	10	4	6	0	8	-0.949
ಕೆಕೆಆರ್	9	3	5	1	7	-0.539
ಮುಂಬೈ	10	3	7	0	6	-0.649
ಲಖನೌ	9	2	7	0	4	-1.076

ಕಿರುಸುದ್ದಿ

ಭಾರತ-ಪಾಕ್ ದ್ವಿಪಕ್ಷೀಯ ಸರಣಿಗಳಿಗೆ ನಿರ್ಬಂಧ



• ಹೊಸದಿಲ್ಲಿ: ಭಾರತ ಆಯೋಜಿಸುವ ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಪಾಕಿಸ್ತಾನ ಕ್ರೀಡಾಪಟುಗಳಿಗೆ ಅವಕಾಶ ನೀಡಿರುವ ಭಾರತ ಸರ್ಕಾರ, ಯಾವುದೇ ಕಾರಣಕ್ಕೂ ಭಾರತೀಯ ಕ್ರೀಡಾಪಟುಗಳು ಪಾಕಿಸ್ತಾನಕ್ಕೆ ಬರುವುದಿಲ್ಲ ಎಂದಿದೆ. ಆಪರೇಷನ್ ಸಿಂದೂರ ನಂತರ ತನ್ನ ಎಲ್ಲಾ ಕ್ರೀಡಾ ಸಂಸ್ಥೆಗಳಿಗೆ ಪಾಕಿಸ್ತಾನದೊಂದಿಗೆ ಸಂಬಂಧಗಳನ್ನು ಮುರಿದುಕೊಳ್ಳಲು ಹೇಳಿತ್ತು. ಇಷ್ಟು ದಿನ ಭಾರತದಲ್ಲಿ ಮತ್ತು ಪಾಕಿಸ್ತಾನದಲ್ಲಿ ನಡೆದಿದ್ದ ಕ್ರೀಡಾಕೂಟಗಳಲ್ಲಿ ಭಾರತ ಮತ್ತು ಪಾಕಿಸ್ತಾನ ಮುಖಾಮುಖಿಯಾಗಿರಲಿಲ್ಲ. ಬುಧವಾರ ಕ್ರೀಡಾ ಪ್ರಾಧಿಕಾರದಿಂದ ಪ್ರಕಟವಾಗಿರುವ ಪ್ರಕಟಣೆ ಪ್ರಕಾರ, ಭಾರತದಲ್ಲಿ ನಡೆಯುವ ಅಂತಾರಾಷ್ಟ್ರೀಯ ಕೂಟಗಳಲ್ಲಿ ಪಾಕಿಸ್ತಾನ ಕ್ರೀಡಾಪಟುಗಳು ಭಾಗವಹಿಸಬಹುದು. ಆದರೆ ಯಾವುದೇ ಕಾರಣಕ್ಕೂ ಭಾರತದ ಕ್ರೀಡಾಪಟುಗಳು ಪಾಕಿಸ್ತಾನಕ್ಕೆ ಹೋಗಬಾರದು. ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ಉಭಯ ದೇಶಗಳ ನಡುವಿನ ಯಾವುದೇ ಕ್ರೀಡೆಯ ದ್ವಿಪಕ್ಷೀಯ ಸರಣಿಗಳು ಭಾರತದಲ್ಲಾಗಲಿ, ಪಾಕಿಸ್ತಾನದಲ್ಲಾಗಲಿ ನಡೆಯುವುದಿಲ್ಲ. ಆದರೆ ಅಂತಾರಾಷ್ಟ್ರೀಯ ಕ್ರೀಡಾಕೂಟಗಳ ಬದ್ಧತೆ ಗಮನದಲ್ಲಿಟ್ಟುಕೊಂಡು ನಾವು ಪಾಕಿಸ್ತಾನಿ ಕ್ರೀಡಾಪಟುಗಳಿಗೆ ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಮಾತ್ರ ಭಾಗವಹಿಸಲು ಅವಕಾಶ ಕೊಡುತ್ತೇವೆ ಎಂದಿದೆ. ಕ್ರಿಕೆಟ್ ವಿಚಾರದಲ್ಲೂ ದ್ವಿಪಕ್ಷೀಯ ಸರಣಿಗೆ ಅವಕಾಶ ನೀಡಿಲ್ಲ. ಆದರೆ ಐಸಿಸಿ, ಎಸಿಸಿ ಕೂಟಗಳನ್ನು ಭಾರತ ಆಯೋಜಿಸಿದರೆ, ಪಾಕಿಸ್ತಾನಿ ಆಟಗಾರರಿಗೆ ಭಾರತಕ್ಕೆ ಪ್ರಯಾಣಿಸಲು ಅವಕಾಶ ನೀಡಲಾಗುವುದು. ಆದರೆ, ಭಾರತ ಪಾಕಿಸ್ತಾನಕ್ಕೆ ತೆರಳ್ಳಿದ ನಂತರ ಪಾಕಿಸ್ತಾನ ತನ್ನ ಎಲ್ಲಾ ಪಂದ್ಯಗಳನ್ನು ತಟಸ್ಥ ಸ್ಥಳದಲ್ಲಿ ನಡೆಸುವಂತೆ ಒಪ್ಪಂದ ಮಾಡಿಕೊಂಡಿದೆ.

- ಅಂತಾರಾಷ್ಟ್ರೀಯ ಕೂಟಗಳಲ್ಲಿ ಪಾಕಿಸ್ತಾನಿ ಪಟುಗಳಿಗೆ ಅನುಮತಿ
- ನಮ್ಮ ಕ್ರೀಡಾಪಟುಗಳು ಪಾಕ್‌ಗೆ ಕಾಲೂ ಇಡಲ್ಲ: ಕ್ರೀಡಾ ಪ್ರಾಧಿಕಾರ

ಟಿಟಿ: ಭಾರತಕ್ಕೆ ಸೋಲು

• ಲಂಡನ್: ವಿಶ್ವ ತಂಡ ಟೇಬಲ್ ಟೆನಿಸ್ ಚಾಂಪಿಯನ್‌ಶಿಪ್ ಫೈನಲ್‌ನಲ್ಲಿ 32ನೇ ಸುತ್ತಿನ ಪಂದ್ಯದಲ್ಲಿ ಆಸ್ಟ್ರಿಯಾ ವಿರುದ್ಧ 0-3 ಅಂತರದಲ್ಲಿ ಸೋತ ನಂತರ ಭಾರತೀಯ ಪುರುಷರ ತಂಡವು ಹೊರಬಿತ್ತು. ಮಾನವ್ ಠಕ್ಕರ್ ಮತ್ತು ಸತ್ಯನ್ ಜ್ಞಾನಶೇಖರನ್ ತಮ್ಮ ಎದುರಾಳಿಗಳ ವಿರುದ್ಧ ಸೌಮ್ಯವಾಗಿ ಶರಣಾದರೆ, ಮನುಷ್ ಶಾ ಒಂದು ಗಂಟೆ 34 ನಿಮಿಷಗಳ ಕಾಲ ನಡೆದ ಟೈನಲ್ಲಿ ಸೋತರು. ರಾಬರ್ಟ್ ಗಾರ್ಡೋಸ್ ವಿರುದ್ಧದ ಟೈನಲ್ಲಿ ಮೊದಲು ಮೈದಾನಕ್ಕಿಳಿದವರು ಮನುಷ್ ಶಾ. ಮೊದಲ ಗೇಮ್ ಅನ್ನು 11-6 ಅಂತರದಿಂದ ಗೆದ್ದರು ಆದರೆ ಮುಂದಿನ ಎರಡು ಗೇಮ್‌ಗಳನ್ನು 7-11 ಮತ್ತು 3-11 ಅಂತರದಿಂದ ಸೋತು ನಾಲ್ಕನೇ ಗೇಮ್ ಅನ್ನು 11-8 ಅಂತರದಿಂದ ಗೆದ್ದರು. ಆದರೆ ನಿರ್ಣಾಯಕ ಪಂದ್ಯದಲ್ಲಿ, ಭಾರತೀಯ ಆಟಗಾರ 11-13 ಅಂತರದಿಂದ ಸೋತರು. 32 ರ ಸುತ್ತಿನಲ್ಲಿ ಯುಎಸ್‌ಎ ವಿರುದ್ಧ 3-1 ಅಂತರದಲ್ಲಿ ಸೋತ ನಂತರ ಭಾರತೀಯ ಮಹಿಳಾ ತಂಡವೂ ಹೊರಬಿತ್ತು. ಯಶಸ್ವಿನಿ ಘೋರ್ಪಡೆ ಸ್ಯಾಲಿ ಮೊಯ್ಲ್ಯಾಂಡ್ ವಿರುದ್ಧ 8-11, 8-11, 7-11 ಅಂತರದಲ್ಲಿ ಸೋತರು, ಆದರೆ ಮಣಿಕಾ ಬಾತ್ರಾ ಜೆಸ್ಸಿಕಾ ರೆಯೆಸ್ ಲೈ ಅವರನ್ನು 11-2, 11-7, 8-11, 11-4 ಅಂತರದಲ್ಲಿ ಸೋಲಿಸುವ ಮೂಲಕ ಒಂದು ಹಿನ್ನಡೆ ಅನುಭವಿಸಿದರು. ಆದಾಗ್ಯೂ, ದಿಯಾ ಚಿತಾಲೆ ಮತ್ತು ಮಣಿಕಾ ಕ್ರಮವಾಗಿ ಲಿಲಿ ಜಾಂಗ್ ಮತ್ತು ಮೊಯ್ಲ್ಯಾಂಡ್ ಅವರ ಕೈಯಲ್ಲಿ ಸತತ ಸೋಲುಗಳನ್ನು ಅನುಭವಿಸಿದರು.

ಅಹಮದಾಬಾದ್‌ನಲ್ಲಿ ಫೈನಲ್ | ಚಂಡೀಗಢದಲ್ಲಿ 2 ಕ್ವಾಲಿಫೈಯರ್ | ಚೆನ್ನಸ್ವಾಮಿಗಿಲ್ಲ ಪ್ಲೇಆಫ್ ಭಾಗ್ಯ

ಬೆಂಗಳೂರಿನಿಂದ ಫೈನಲ್ ಸ್ಥಳಾಂತರ!

• ಬೆಂಗಳೂರು: ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿ ಕ್ವಾಲಿಫೈಯರ್ ಹಾಗೂ ಫೈನಲ್ ಪಂದ್ಯಗಳನ್ನು ಸ್ಥಳಾಂತರಿಸಲಾಗಿದೆ. ಬದಲಾಗಿ ಕಳೆದ ಬಾರಿ ಫೈನಲ್‌ಗೆ ಆತಿಥ್ಯ ನೀಡಿದ್ದ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣ ಫೈನಲ್ ಪಂದ್ಯವನ್ನು ಸತತ ಎರಡನೇ ಬಾರಿ ಆಯೋಜಿಸಲು ಸಿದ್ಧವಾಗಿದೆ.

ಹಿಂದಿನ ಟೂರ್ನಿ ಗೆದ್ದ ತಂಡದ ತವರಲ್ಲಿ ಫೈನಲ್ ಮತ್ತು ಒಂದು ಕ್ವಾಲಿಫೈಯರ್ ಪಂದ್ಯ ನಡೆಸುವುದು ಬಿಸಿಸಿಐನ ವಾಡಿಕೆ. ಆದರೆ ವಿವಿಧ ಕಾರಣಗಳಿಂದ ಪಂದ್ಯಗಳನ್ನು ಸ್ಥಳಾಂತರಿಸಲಾಗಿದ್ದು, ಬೆಂಗಳೂರಿನಿಂದ ಪಂದ್ಯಗಳು ಕೈತಪ್ಪಿವೆ. ಧರ್ಮಶಾಲಾದಲ್ಲಿ ಮೊದಲ ಪ್ಲೇಆಫ್ ಪಂದ್ಯ ನಡೆಯಲಿದ್ದರೆ, ಚಂಡೀಗಢದ ಹೊಸ ಕ್ರೀಡಾಂಗಣ ಎಲಿಮಿನೇಟರ್ ಮತ್ತು ಒಂದು ಕ್ವಾಲಿಫೈಯರ್ ಪಂದ್ಯಕ್ಕೆ ಆತಿಥ್ಯ ನೀಡಲಿದೆ. ಫೈನಲ್ ಪಂದ್ಯ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿದೆ ಎಂದು ಬಿಸಿಸಿಐ ಬುಧವಾರ ಪ್ರಕಟಣೆಯಲ್ಲಿ ತಿಳಿಸಿದೆ.

ಮೂರು ಕ್ರೀಡಾಂಗಣದಲ್ಲಿ ಪ್ಲೇಆಫ್: ಬಿಸಿಸಿಐ ತನ್ನ ಹೇಳಿಕೆಯಲ್ಲಿ ಅಂಕಪಟ್ಟಿಯಲ್ಲಿ ಅಗ್ರ ಎರಡು ತಂಡಗಳನ್ನು ಒಳಗೊಂಡ ಕ್ವಾಲಿಫೈಯರ್ 1, ಮೇ 26 ರಂದು ಧರ್ಮಶಾಲಾದಲ್ಲಿ ನಡೆಯಲಿದ್ದು, ಎರಡು ತಂಡಗಳಿಗೆ ಫೈನಲ್‌ಗೆ ನೇರ ಸ್ಥಾನ ಪಡೆಯುವ ಅವಕಾಶವಿದೆ. ನಂತರ ನ್ಯೂ ಚಂಡೀಗಢದ ನ್ಯೂ ಇಂಟರ್‌ನ್ಯಾಷನಲ್ ಕ್ರಿಕೆಟ್ ಕ್ರೀಡಾಂಗಣಕ್ಕೆ ವಿಸ್ತಾರಗೊಳ್ಳಲಿದೆ. ಮೇ 27 ರಂದು ಮೂರನೇ ಮತ್ತು ನಾಲ್ಕನೇ ಸ್ಥಾನದಲ್ಲಿರುವ ತಂಡಗಳ ನಡುವೆ ಎಲಿಮಿನೇಟರ್ ಅನ್ನು ಆಯೋಜಿಸುತ್ತದೆ. ಅದೇ ಸ್ಥಳವು ಮೇ 29 ರಂದು ಕ್ವಾಲಿಫೈಯರ್ 2 ಅನ್ನು ಸಹ ಆಯೋಜಿಸುತ್ತದೆ, ಅಲ್ಲಿ ಕ್ವಾಲಿಫೈಯರ್ 1 ರಲ್ಲಿ ಸೋತವರು ಎರಡನೇ ಫೈನಲಿಸ್ಟ್ ಅನ್ನು ನಿರ್ಧರಿಸಲು ಎಲಿಮಿನೇಟರ್‌ನ ವಿಜೇತರನ್ನು ಎದುರಿಸುತ್ತಾರೆ. ಸೀಸನ್ ಮೇ 31 ರಂದು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯುವ ಗ್ರ್ಯಾಂಡ್ ಫೈನಲ್‌ನೊಂದಿಗೆ ಕೊನೆಗೊಳ್ಳುತ್ತದೆ. ವಿಶ್ವದ ಅತಿದೊಡ್ಡ ಕ್ರಿಕೆಟ್ ಕ್ರೀಡಾಂಗಣ- ಅದ್ಭುತವಾದ ಅಂತಿಮ ಪಂದ್ಯಕ್ಕೆ ವೇದಿಕೆ ಸಜ್ಜಾಗಿದೆ.



ಸ್ಥಳಾಂತರಕ್ಕೆ ಕಾರಣವೇನು?

ಕೆಲವು ಕಾರ್ಯಾಚರಣೆ ಮತ್ತು ವ್ಯವಸ್ಥಾಪನಾ ಪರಿಗಣನೆಗಳಿಂದಾಗಿ, ಈ ಋತುವಿನಲ್ಲಿ ಟಾಟಾ ಐಪಿಎಲ್ 2026 ಪ್ಲೇಆಫ್‌ಗಳನ್ನು ವಿಶೇಷ ಪ್ರಕರಣವಾಗಿ ಮೂರು ಸ್ಥಳಗಳಲ್ಲಿ ನಡೆಸಲಾಗುವುದು ಎಂದು ಬಿಸಿಸಿಐ ಉಲ್ಲೇಖಿಸಿದೆ. ಫೈನಲ್ ಪಂದ್ಯವನ್ನು ಬೆಂಗಳೂರು ಆಯೋಜಿಸಬೇಕಿತ್ತು. ಆದಾಗ್ಯೂ, ಬಿಸಿಸಿಐನ ಸ್ಥಾಪಿತ ಮಾರ್ಗಸೂಚಿಗಳು ಮತ್ತು ಪ್ರೋಟೋಕಾಲ್‌ಗಳ ವ್ಯಾಪ್ತಿಯನ್ನು ಮೀರಿದ ಸ್ಥಳೀಯ ಸಂಘ ಮತ್ತು ಅಧಿಕಾರಿಗಳ ಕೆಲವು ಅವಶ್ಯಕತೆಗಳಿಂದಾಗಿ, ಸ್ಥಳವನ್ನು ಸ್ಥಳಾಂತರಿಸಲಾಗಿದೆ ಎನ್ನಲಾಗಿದೆ.

ಅಹಮದಾಬಾದ್‌ನಲ್ಲಿ ಫೈನಲ್

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣವು ಸತತ ಎರಡನೇ ಬಾರಿ ಫೈನಲ್‌ಗೆ ಆತಿಥ್ಯ ನೀಡಲಿದೆ. ವಾಡಿಯ ಪ್ರಕಾರ 2025ರ ಐಪಿಎಲ್ ಫೈನಲ್ ಕೂಡ ಕೋಲ್ಕತ್ತಾದ ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ನಡೆಯಬೇಕಿತ್ತು. ಆದರೆ ಪ್ರತಿಕೂಲ ಹವಾಮಾನದಿಂದಾಗಿ ಪಂದ್ಯವನ್ನು ಅಹಮದಾಬಾದ್‌ಗೆ ಸ್ಥಳಾಂತರಿಸಲಾಗಿತ್ತು.

ಪ್ಲೇಆಫ್ ವೇಳಾಪಟ್ಟಿ

- ಕ್ವಾಲಿಫೈಯರ್ 1 - ಮೇ 26 - ಎಚ್‌ಪಿಸಿಎ ಕ್ರೀಡಾಂಗಣ, ಧರ್ಮಶಾಲಾ
- ಎಲಿಮಿನೇಟರ್ - ಮೇ 27 - ಹೊಸ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ, ಚಂಡೀಗಢ
- ಕ್ವಾಲಿಫೈಯರ್ 2 - ಮೇ 29 - ಹೊಸ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ, ಚಂಡೀಗಢ
- ಫೈನಲ್ - ಮೇ 31 - ನರೇಂದ್ರ ಮೋದಿ ಕ್ರೀಡಾಂಗಣ, ಅಹಮದಾಬಾದ್



ಅಹಮದಾಬಾದ್‌ನಲ್ಲಿ ದೊಡ್ಡ ಕ್ರಿಕೆಟ್ ಕ್ರೀಡಾಂಗಣವಿದೆ. ಅಲ್ಲಿ ಪಂದ್ಯ ನಡೆದರೆ ಲಕ್ಷ ಜನರು ವೀಕ್ಷಿಸಬಹುದು ಅದಕ್ಕಾಗೇ ಬೆಂಗಳೂರಿನಿಂದ ಸ್ಥಳಾಂತರಗೊಂಡಿರಬಹುದು. ಶಾಸಕರು, ಟಿಕೆಟ್ ಕೇಳಿರುವುದಕ್ಕೂ ಇದಕ್ಕೂ ಯಾವುದೇ ಸಂಬಂಧವಿಲ್ಲ.

■ ಡಿ. ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

ಐಪಿಎಲ್ ಪ್ಲೇಆಫ್ ಆತಿಥ್ಯ: ಕೆಎಸ್‌ಸಿಎ ಸ್ಪಷ್ಟೀಕರಣ

ಪ್ಲೇಆಫ್ ಪಂದ್ಯಗಳ ಸ್ಥಳಾಂತರ ಕುರಿತಂತೆ ಕೆಎಸ್‌ಸಿಎ ನಿರಾಸೆ ವ್ಯಕ್ತಪಡಿಸಿದ್ದು, ಅಧ್ಯಕ್ಷ ಹಾಗೂ ಮಾಜಿ ಭಾರತೀಯ ಕ್ರಿಕೆಟಿಗ ವೆಂಕಟೇಶ್ ಪ್ರಸಾದ್ ಬಿಸಿಸಿಐ ಜೊತೆ ನೇರ ಸಂಪರ್ಕದಲ್ಲಿದ್ದರು. ಬೆಂಗಳೂರಿನಲ್ಲಿ ಪಂದ್ಯಗಳನ್ನು ಆಯೋಜಿಸಲು ಸಿದ್ಧತೆ ಹಾಗೂ ಆಸಕ್ತಿಯನ್ನು ತಿಳಿಸಿದ್ದರು, ಬಿಸಿಸಿಐ ನಿರ್ಧಾರ ನಾವು ಗೌರವಿಸುತ್ತೇವೆ. ನಮಗೆ ಇನ್ನೂ ಅಧಿಕೃತ ಕಾರಣ ತಿಳಿದುಬಂದಿಲ್ಲ ಎಂದಿದೆ. ಈ ಸೀಸನ್‌ನಲ್ಲಿ ಬೆಂಗಳೂರಿನಲ್ಲಿ ನಡೆದ ಐಪಿಎಲ್ ಪಂದ್ಯಗಳು ಸುಗಮ ನಿರ್ವಹಣೆ, ಜನಸ್ತೋಮ ನಿಯಂತ್ರಣ ಮತ್ತು ಉತ್ತಮ ಪ್ರೇಕ್ಷಕ ಅನುಭವಕ್ಕಾಗಿ ಮೆಚ್ಚುಗೆ ಪಡೆದಿವೆ ಎಂದು ಸಂಘ ಹೇಳಿದೆ. ಇದರಿಂದ ದೊಡ್ಡ ಮಟ್ಟದ ಪಂದ್ಯಗಳನ್ನು ಯಶಸ್ವಿಯಾಗಿ ನಡೆಸುವ ಸಾಮರ್ಥ್ಯ ನಮ್ಮಲ್ಲಿದೆ ಎಂಬುದನ್ನು ಮತ್ತೊಮ್ಮೆ ಸಾಬೀತಾಗಿದೆ ಎಂದು ಕೆಎಸ್‌ಸಿಎ ತಿಳಿಸಿದೆ. ಆದರೆ, ಎಲ್ಲಾ ಸಿದ್ಧತೆಗಳಿದ್ದರೂ ಪ್ಲೇಆಫ್ ಪಂದ್ಯಗಳನ್ನು ಇತರ ಕೇಂದ್ರಗಳಿಗೆ ನೀಡಿರುವ ಬಿಸಿಸಿಐ ತೀರ್ಮಾನವನ್ನು ನಾವು ಗೌರವಿಸುತ್ತೇವೆ. ಇದರ ಹಿಂದಿನ ಕಾರಣಗಳನ್ನು ಅಧಿಕೃತವಾಗಿ ತಿಳಿಸಲಾಗಿಲ್ಲವಾದರೂ, ಬಿಸಿಸಿಐಗೆ ಇರುವ ಅಧಿಕಾರವನ್ನು ನಾವು ಸಂಪೂರ್ಣವಾಗಿ ಒಪ್ಪುತ್ತೇವೆ ಎಂದು ಸಂಘ ಸ್ಪಷ್ಟಪಡಿಸಿದೆ. ಮುಂದೆಯೂ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಪಂದ್ಯಗಳನ್ನು ಆಯೋಜಿಸಲು ನಾವು ಸಿದ್ಧರಾಗಿದ್ದು, ಬಿಸಿಸಿಐ, ಫ್ರಾಂಚೈಸಿಗಳು ಹಾಗೂ ಇತರೆ ಎಲ್ಲ ಹಿತಾಸಕ್ತಿಪಕ್ಷಗಳಿಗೆ ಪೂರ್ಣ ಸಹಕಾರ ನೀಡುತ್ತೇವೆ ಎಂದು ಕೆಎಸ್‌ಸಿಎ ಭರವಸೆ ನೀಡಿದೆ.

ಲಯಕ್ಕೆ ಮರಳುವ ಭರವಸೆಯಲ್ಲಿ ಪಾಟಿದಾರ್ ಪಡೆ

ಇಂದು ಲಖನೌ V/S ಬೆಂಗಳೂರು

• ಲಖನೌ: ಎರಡನೇ ಸ್ಥಾನದಲ್ಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತನ್ನ ಪ್ಲೇಆಫ್ ಮತ್ತು ಟಾಪ್ ಎರಡರ ಸ್ಥಾನ ಭದ್ರಗೊಳಿಸಲು ಲಖನೌ ಜತೆಗಿನ ಪಂದ್ಯದಲ್ಲಿ ಪ್ರಾಬಲ್ಯ ಸಾಧಿಸಲು ಸಿದ್ಧವಾಗಿದೆ.

ಪಂದ್ಯಾವಳಿಯ ಗುರುವಾರದ ಪಂದ್ಯದಲ್ಲಿ ಬೆಂಗಳೂರು ಮತ್ತು ಲಖನೌ ತಂಡಗಳು ಮುಖಾಮುಖಿಯಾಗಲಿವೆ. ಹಿಂದಿನ ಪಂದ್ಯದಲ್ಲಿ ಸೋತಿರುವ ಆರ್‌ಸಿಬಿ ಒಂದು ವಾರದ ನಂತರ ಮೈದಾನಕ್ಕೆ ಕಾಲಿಡುತ್ತಿದೆ. ಇತ್ತ ಲಖನೌ ಆಡಿರುವ ಬಹುತೇಕ ಪಂದ್ಯಗಳಲ್ಲಿ ಸೋತು ಕಂಗೆಟ್ಟಿದೆ. ಅಳಿವು-ಉಳಿವು ಹೋರಾಟದಲ್ಲಿರುವ ಲಖನೌ ಸೋತರೆ ಮನೆ ಹಾದಿ ಹಿಡಿಯಬೇಕಿದೆ. ಬೆಂಗಳೂರು 12 ಅಂಕ ಗಳಿಸಿ ಎರಡನೇ ಸ್ಥಾನದಲ್ಲಿದ್ದರೂ, 3 ಮತ್ತು 4ನೇ ಸ್ಥಾನದಲ್ಲಿರುವ ರಾಜಸ್ಥಾನ ಮತ್ತು ಹೈದರಾಬಾದ್ ತಂಡಗಳು ಸುಭದ್ರ ಫೈಟ್ ಕೊಡುತ್ತಿವೆ. ಕೆಳಗಿರುವ ಗುಜರಾತ್ ಮತ್ತು ಚೆನ್ನೈ ತಂಡಗಳು ಕೂಡ ಗೆಲುವುಗಳೊಂದಿಗೆ ಮಿಂಚುತ್ತಿವೆ. ಹೀಗಿರುವಾಗ ಬೆಂಗಳೂರು ಕೂಡ ಗೆಲುವು ಸಾಧಿಸಬೇಕಾದ ಒತ್ತಡದೊಂದಿಗೆ ಮೈದಾನಕ್ಕಿಳಿಯಬೇಕಿದೆ. ಲಖನೌ ಬೆಂಗಳೂರಿನಲ್ಲಿ ಆಡುವಾಗ ಆರ್‌ಸಿಬಿಯೊಂದಿಗೆ ಹೀನಾಯ ಸೋಲು ಕಂಡಿತ್ತು. ವಾಡಿಕೆಯಂತೆ ಎರಡನೇ ಮುಖಾಮುಖಿಯು ಲಖನೌನ ಏಕಾನಾ ಕ್ರೀಡಾಂಗಣದಲ್ಲಿ ನಡೆಯಲಿದೆ.

ಪಿಚ್: ಏಕಾನಾ ಕ್ರೀಡಾಂಗಣದ ಪಂದ್ಯ ಬ್ಯಾಟರ್‌ಗಳಿಗೆ ಕಾಟ ಕೊಡಲಿದೆ. ದೊಡ್ಡ ಸ್ಕೋರ್ ನಿರ್ಮಿಸಲಾಗಲ್ಲ, ಬೌನ್ಸ್, ಇಬ್ಬನಿ ಮತ್ತು ಸ್ವಿಂಗ್ ಬೌಲರ್‌ಗಳಿಗೆ ಲಾಭವಿತ್ತಿದೆ. ಸ್ಪಿನ್ನರ್‌ಗಳಿಗೆ ಹೇಳಿ ಮಾಡಿಸಿದ ಪಿಚ್. 180ಕ್ಕೆ ಮುಟ್ಟಿದರೆ ಅದು ದೊಡ್ಡ ಸ್ಕೋರ್, ಹೀಗಿರುವಾಗ ಚೇಸಿಂಗ್ ಮಾಡಿದವರು ಹೆಚ್ಚಿನ ಲಾಭ ಗಳಿಸಲಿದ್ದಾರೆ.



ಲಖನೌಗೆ ಗೆಲ್ಲಬೇಕಾದ ಒತ್ತಡ

ಬ್ಯಾಟರ್‌ಗಳೊಮ್ಮೆ ಬೌಲರ್‌ಗಳೊಮ್ಮೆ ಕೈಕೊಡುತ್ತಿದ್ದಾರೆ. ಚಿಂತೆಗೀಡಾಗಿದ್ದ ನಿಕೋಲಸ್ ಪೂರನ್ ಬ್ಯಾಟಿಂಗ್ ಸುಧಾರಣೆ ಕಂಡಿದೆ. ಕಳೆದ ಪಂದ್ಯದಲ್ಲಿ ಅವರು ಸ್ಫೋಟಕ ಬ್ಯಾಟಿಂಗ್ ಮಾಡಿರುವುದು ವಿಶ್ವಾಸ ಹಿಗ್ಗಿಸಿದೆ. ತಂಡಕ್ಕೆ ಜೋಶ್ ಇಂಗ್ಲಿಸ್ ಕೂಡ ಬಲ ತಂದಿದ್ದಾರೆ. ಪಂತ್, ಮಾರ್ಕ್ರಾಂ ಲಯಕ್ಕೆ ಬರಬೇಕಿದೆ. ಬೌಲಿಂಗ್ ವಿಚಾರಕ್ಕೆ ಬಂದರೆ ಮೋಹ್ಸಿನ್, ಶಮಿ ಬಿಟ್ಟರೆ ಇನ್ನುಳಿದವರು ದುಬಾರಿಯಾಗಿದ್ದಾರೆ. ಪ್ರಿನ್ಸ್ ಉತ್ತಮ ಬೌಲಿಂಗ್ ಮಾಡಿದ್ದರೂ ಕಳೆದ ಪಂದ್ಯಗಳಲ್ಲಿ ವಿಕೆಟ್ ಸಿಕ್ಕಿಲ್ಲ.

ಆರ್‌ಸಿಬಿಗೆ ಆತ್ಮವಿಶ್ವಾಸ

ತವರಿನ ಎಲ್ಲಾ ಪಂದ್ಯಗಳನ್ನು ಮುಗಿಸಿಕೊಂಡಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಕಳೆದ ಪಂದ್ಯದಲ್ಲಿ ಸೋತರೂ ಬಲಿಷ್ಠ ಬ್ಯಾಟಿಂಗ್ ಮತ್ತು ಬೌಲಿಂಗ್ ಪಡೆಯನ್ನು ರಜತ್ ಪಡೆ ಹೊಂದಿದೆ. ಮುಖ್ಯವಾಗಿ ವಿರಾಟ್ ಕೊಹ್ಲಿ ಲಯದಲ್ಲಿದ್ದಾರೆ. ಸಾಲ್ಟ್ ಗಾಯದಿಂದಾಗಿ ಲಂಡನ್‌ಗೆ ತೆರಳಿರುವುದು ತಂಡಕ್ಕಾದ ಹಿನ್ನಡೆ. ಅವರ ಬದಲಿಗೆ ಆಡುತ್ತಿರುವ ಬೆಥೆಲ್ ಲಯ ಕಂಡುಕೊಳ್ಳಬೇಕಿದೆ. ಮಧ್ಯಮ ಕ್ರಮಾಂಕದಲ್ಲಿ ಪಡಿಕ್ಕಲ್, ರಜತ್, ಡೇವಿಡ್ ಮತ್ತು ಕೃನಾಲ್ ಉತ್ತಮ ಪ್ರದರ್ಶನವನ್ನೇ ನೀಡಿದ್ದಾರೆ. ಬೌಲಿಂಗ್‌ನಲ್ಲಿ ಭುವನೇಶ್ವರ್ ಮತ್ತು ಹ್ಯಾಜಲ್‌ವುಡ್ ವಿಶ್ವಾಸ ಹೆಚ್ಚಿಸಿದರೆ, ಶೆಫರ್ಡ್, ಕೃನಾಲ್ ಕೂಡ ಉತ್ತಮ ಪ್ರದರ್ಶನ ನೀಡುವ ಭರವಸೆಯಲ್ಲಿದ್ದಾರೆ.

ಪಂದ್ಯದ ವಿವರ

ಯಾವಾಗ: ಗುರುವಾರ, **ಎಲ್ಲಿ:** ಏಕಾನಾ, ಲಖನೌ. **ಸಮಯ:** ಸಂಜೆ 7:30, **ಪ್ರಸಾರ:** ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಪಂಜಾಬ್‌ಗೆ ಕಠಿಣ ಸವಾಲು

• ಹೈದರಾಬಾದ್: ಅಗ್ರ ನಾಲ್ಕು ಬ್ಯಾಟರ್‌ಗಳ ಅಬ್ಬರದ ನಡುವೆ ಕಳಪೆ ಫೀಲ್ಡಿಂಗ್‌ನಿಂದ ಕಂಗೆಟ್ಟ ಪಂಜಾಬ್ ಮಹತ್ವದ ಪಂದ್ಯದಲ್ಲಿ ದೊಡ್ಡ ಗುರಿ ಪಡೆಯಿತು. ಅಭಿಷೇಕ್ ಹಾಗೂ ಹೆಡ್ ನೀಡಿದ ಅಬ್ಬರದ ಆರಂಭದ ನಂತರ ಕ್ಲಾಸೆನ್, ಕಿಶನ್ ಮತ್ತು ರೆಡ್ಡಿ ಮಿಂಚಿದ್ದು, ಹೈದರಾಬಾದ್ ತನ್ನ ಅಸಲು ಆಟವಾಡಲು ಶಕ್ಯವಾಯಿತು.

ಪ್ಲೇಆಫ್ ಫೈಟ್ ನಡೆಯುತ್ತಿರುವ ನಡುವೆ ಪಂಜಾಬ್ ಹಾಗೂ ಹೈದರಾಬಾದ್ ತಂಡಗಳು ಬುಧವಾರದ ಪಂದ್ಯದಲ್ಲಿ ಮುಖಾಮುಖಿಯಾಗಿದ್ದವು. ಈ ಪಂದ್ಯದಲ್ಲಿ ಟಾಸ್ ಸೋತು ಬ್ಯಾಟಿಂಗ್‌ಗಿಳಿದ ಹೈದರಾಬಾದ್ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 235 ರನ್ ಗಳಿಸಿದೆ.

ಅಬ್ಬರದ ಆರಂಭ: ಬ್ಯಾಟಿಂಗ್‌ಗಿಳಿದ ಸನ್‌ಗೆ ಅಭಿ ಮತ್ತು ಹೆಡ್ ಯಥಾಪ್ರಕಾರ ಸ್ಫೋಟಕ ಆರಂಭ ಕೊಟ್ಟರು. ಮೊದಲನೇ ಓವರ್‌ನಿಂದಲೂ ದಂಡಿಸುವ ನೀತಿ ಗೋಚರಿಸಿತು. ನಾನ್‌ಸ್ಟ್ರೈಕ್‌ನಲ್ಲಿ ನಿಂತ ಹೆಡ್ ಸೆಟ್ ಆದರೆ, ಅಭಿ 4 ಸಿಕ್ಸರ್ 2 ಬೌಂಡರಿಯೊಂದಿಗೆ 35 ರನ್ ಚಚ್ಚಿ 13ನೇ ಬಾಲ್‌ನಲ್ಲಿ ಔಟಾದರು. ಮುಂದೆ ಬಂದ ಕಿಶನ್ ಸಿಂಗಲ್‌ಗಳ ಮೂಲಕ ಸಾಥ್ ಕೊಟ್ಟರೆ, ಹೆಡ್ ದಂಡಿಸುವ ಜವಾಬ್ದಾರಿ ಹೊತ್ತರು. ಪವರ್‌ಪ್ಲೇ ಅಂತ್ಯಕ್ಕೆ ಹೈದರಾಬಾದ್ 79 ರನ್ ಗಳಿಸಿತು. ಮಧ್ಯಮ ಓವರ್‌ಗಳ ಆರಂಭದಲ್ಲಿ ಹೆಡ್ ಜತೆಗೆ ಕಿಶನ್ ಕೂಡ ಕೈಚಳಕ ತೋರಿಸಿದರು. ಅಬ್ಬರದ ಬ್ಯಾಟಿಂಗ್ ಮಾಡುತ್ತಿದ್ದ ಹೆಡ್ (38; 19, 3ಬೌ, 3ಸಿ) ಔಟಾದರು. ಕಿಶನ್ ಹಾಗೂ ಕ್ಲಾಸೆನ್ ನಿಂತರು. ನಿಧಾನವಾಗಿ ಸ್ಕೋರ್ ಹೆಚ್ಚಿಸುತ್ತಾ ಬಂದ ಈ ಜೋಡಿ ಮಧ್ಯದಲ್ಲಿ ಬಿರುಸಿನ ಬ್ಯಾಟಿಂಗ್ ಕೂಡ ಮಾಡಿತು. ಮಧ್ಯಮ ಓವರ್‌ಗಳಲ್ಲಿ ಈ ಜೋಡಿ ಉತ್ತಮ ಬ್ಯಾಟಿಂಗ್ ಮಾಡಿತು. ಅಲ್ಲಿ ಹೈದರಾಬಾದ್ 103 ರನ್ ಗಳಿಸಿತು. ಕಿಶನ್ ಅರ್ಧಶತಕ ಬಾರಿಸುತ್ತಿದ್ದಂತೆ ವಿಕೆಟ್ ಒಪ್ಪಿಸಿದರು. ಕ್ಲಾಸೆನ್ ಸೆಟ್ ಆದರು. ಡೆತ್ ಓವರ್‌ಗಳಲ್ಲಿ ಕ್ಲಾಸೆನ ಅಬ್ಬರಿಸಿದರು. ಒಂದು ಹಂತದಲ್ಲಿ ನಿಧಾನ ಬ್ಯಾಟಿಂಗ್ ಮಾಡುತ್ತಿದ್ದ ಅವರು, 4 ಸಿಕ್ಸರ್ 3 ಬೌಂಡರಿಯೊಂದಿಗೆ ಒಟ್ಟು 69★ ರನ್ ಗಳಿಸಿದರು. ಅಂತಿಮದಲ್ಲಿ ರೆಡ್ಡಿ ಕೂಡ ಬಿರುಸಿನ ಬ್ಯಾಟಿಂಗ್ ಮೂಲಕ 29★ ರನ್‌ಗಳಿಸಿದರು. ಡೆತ್‌ನಲ್ಲಿ ಹೈದರಾಬಾದ್ 53 ರನ್ ಚಚ್ಚಿತು.



ಕಳಪೆ ಫೀಲ್ಡಿಂಗ್: ಪಂಜಾಬ್ ತೀರಾ ಕಳಪೆ ಫೀಲ್ಡಿಂಗ್ ಪ್ರದರ್ಶಿಸಿತು. ಕಿಶನ್ ಅವರಿಗೆ 2, ಕ್ಲಾಸೆನ್‌ಗೆ 2 ಜೀವದಾನಗಳು ಸಿಕ್ಕವು. ಕೊನೊಲಿ, ಶಶಾಂಕ್ ಕ್ಯಾಚ್ ಕೈಚೆಲ್ಲಿದರೆ, ಪ್ರಭುಸಿಮ್ರನ್ ಸ್ಟಂಪಿಂಗ್ ಬಿಟ್ಟರು. ಇದಲ್ಲದೆ ಪಂಜಾಬ್ ಬೌಂಡರಿ ತಡೆಯುವಲ್ಲಿಯೂ ಹಿನ್ನಡೆ ಅನುಭವಿಸಿತು.

ಸಂಜು ಅಬ್ಬರಕ್ಕೆ ಬಸವಳಿದ ದಿಲ್ಲಿ

• ಹೊಸದಿಲ್ಲಿ: ಸಂಜು ಸ್ಯಾಮ್ಸನ್ ಅವರ ಸಮಯೋಚಿತ ಬ್ಯಾಟಿಂಗ್ ನೆರವಿನಿಂದ ದಿಲ್ಲಿ ಕ್ಯಾಪಿಟಲ್ಸ್ ತಂಡವನ್ನು ಮಣಿಸಿರುವ ಚೆನ್ನೈ ಸೂಪರ್ ಕಿಂಗ್ಸ್ ಪ್ಲೇಆಫ್ ರೇಸ್‌ನಲ್ಲಿ ತನ್ನ ಸ್ಪರ್ಧೆ ಇನ್ನಷ್ಟು ಗಟ್ಟಿಯಾಗಿಸಿದೆ.

- ಪ್ಲೇಆಫ್ ಕನಸು ಭದ್ರ
- ಸಂಕಷ್ಟದಲ್ಲಿ ದಿಲ್ಲಿ

ಮಹತ್ವದ ಪಂದ್ಯದಲ್ಲಿ ದಿಲ್ಲಿ ಹಾಗೂ ಚೆನ್ನೈ ಮುಖಾಮುಖಿಯಾಗಿದ್ದವು. ದಿಲ್ಲಿಯಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕ್ಯಾಪಿಟಲ್ಸ್ 20 ಓವರ್‌ಗಳಲ್ಲಿ 155 ರನ್‌ಗಳಿಸಿತು. ಚೆನ್ನೈ ಪರ ಪ್ರಖರ ದಾಳಿ ಸಂಘಟಿಸಿದ ನೂರ್ 2 ವಿಕೆಟ್ ಪಡೆದರೆ, ಅಕೀಲ್ 14 ಬಾಲ್ ಡಾಟ್ ಮಾಡಿ ಮಿಂಚಿದರು. ದಿಲ್ಲಿ ಪರ ರಿಜ್ವಿ(40★), ಸ್ಟಬ್ಸ್(38) ರನ್ ಗಳಿಸಿದರು. ಗುರಿ ಬೆನ್ನತ್ತಿದ ಚೆನ್ನೈ 17.1 ಓವರ್‌ಗಳಲ್ಲಿ ಗುರಿ ಮುಟ್ಟಿತು. ಸಂಜು ಸ್ಯಾಮ್ಸನ್(87★), ಕಾರ್ತಿಕ್(41★) ರನ್ ಗಳಿಸಿದರು.

ಸಂಜು ಮಿಂಚಿನಾಟ: ಗುರಿ ಬೆನ್ನತ್ತುವಾಗ ಚೆನ್ನೈಗೂ ನಿಧಾನ ಆರಂಭ ಸಿಕ್ಕಿತು. ರುತುರಾಜ್ ಗಾಯಕ್ವಾಡ್ ಪರದಾಡಿದರು. ಸಂಜು ಸೆಟ್ ಆಗುವತ್ತ ಸಾಗಿದರು. ರುತುರಾಜ್ ಗಾಯಕ್ವಾಡ್ 6 ರನ್‌ಗೆ ಔಟಾದರು. ಮೂರನೇ ಕ್ರಮಾಂಕದಲ್ಲಿ ಬಂದ ಉರ್ವಿಲ್ ಪಟೇಲ್ ಯಥಾಪ್ರಕಾರ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾದರು. ಪವರ್ ಪ್ಲೇ ಮುಕ್ತಾಯಕ್ಕೆ ಚೆನ್ನೈ 44 ರನ್ ಗಳಿಸಿತು. ಉರ್ವಿಲ್ 2 ಸಿಕ್ಸರ್ ಬಾರಿಸಿದರೂ ಅವರ ಇನ್ನಿಂಗ್ಸ್ 17 ರನ್‌ಗೆ ಮಾತ್ರ ಸೀಮಿತವಾಗಿತ್ತು. ಬಳಿಕ ಬಂದ ಕಾರ್ತಿಕ್ ಕೂಡ ನಿಧಾನ ಆರಂಭ ಮಾಡಿದರು. ಅಷ್ಟೊತ್ತಿಗಾಗಲೇ ಸೆಟ್ ಆಗಿದ್ದ ಸಂಜು ಸ್ಫೋಟಕ ಬ್ಯಾಟಿಂಗ್‌ನತ್ತ ಸಾಗಿದರು. ಯಾದವ್ ಎಸೆದ ಓವರ್‌ನಲ್ಲಿ 2 ಸಿಕ್ಸರ್, ಒಂದು ಬೌಂಡರಿ ಬಾರಿಸಿ ಪಂದ್ಯ ಸಡಿಲುಗೊಳಿಸಿದರು. ಇತ್ತ ಕಾರ್ತಿಕ್ ಪಿಚ್‌ಗೆ ಅಂಟಿಕೊಂಡು ನಿಂತರು. ಸಂಜು ಸಿಕ್ಸರ್‌ಗಳ ಅಬ್ಬರಕ್ಕೆ ಚೆನ್ನೈ ಪಂದ್ಯ ಬಾಚಿಕೊಂಡಿತು. ಕಾರ್ತಿಕ್ ನಾನ್‌ಸ್ಟ್ರೈಕ್‌ನಲ್ಲಿ ನಿಲ್ಲುತ್ತಿದ್ದಂತೆ ನಿಧಾನವಾಗಿ ಪಂದ್ಯ ಗೆಲ್ಲಿಸಿದರು. ನಟರಾಜನ್ ಓವರ್‌ನಲ್ಲಿ ಮತ್ತೆ 2 ಸಿಕ್ಸರ್ ಬಾರಿಸಿದರು. 15ನೇ ಓವರ್‌ನಲ್ಲಿ ಚೆನ್ನೈ ಗೆಲುವು ಖಚಿತಪಡಿಸಿಕೊಂಡಿತು. ಜವಾಬ್ದಾರಿಕತೆಯಲ್ಲಿ ಕಾರ್ತಿಕ್ ಕೂಡ ಉತ್ತಮ ಬ್ಯಾಟಿಂಗ್ ಮಾಡಿದರು. ಈ ಜೋಡಿ 111 ರನ್‌ಗಳ ಜೊತೆಯಾಟ ನಿರ್ಮಿಸಿತು.

ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ದಿಲ್ಲಿ 155 ರನ್ ಗಳಿಸುವಷ್ಟರಲ್ಲಿ 7 ವಿಕೆಟ್ ಕಳೆದುಕೊಂಡಿತು. ಚೆನ್ನೈ ಸಂಘಟಿತ ಬೌಲಿಂಗ್ ದಾಳಿಗೆ ತತ್ತರಿಸಿದ ನಂತರ ಸ್ಟಬ್ ಆಸರೆಯಾದರು. ಅಂತಿಮದಲ್ಲಿ ಸಮೀರ್ 40★ ರನ್ ಗಳಿಸಿ ಸ್ಕೋರ್ ಹಿಗ್ಗಿಸಿದರು.

ಆರ್ಚರಿ ವಿಶ್ವಕಪ್: ಭಾರತ ತಂಡಕ್ಕೆ ಭಾರೀ ನಿರಾಸೆ

• ಶಾಂಘೈ: ಪದಕದ ಭರವಸೆ ಮೂಡಿಸಿದ್ದ ಭಾರತದ ಕಾಂಪೌಂಡ್ ಪುರುಷ ಹಾಗೂ ಮಹಿಳಾ ತಂಡಗಳು ಆರ್ಚರಿ ವಿಶ್ವಕಪ್ ಹಂತ-2ರಲ್ಲಿ ನಿರೀಕ್ಷಿತ ಪ್ರದರ್ಶನ ನೀಡಲು ವಿಫಲವಾಗಿವೆ. ನಿರ್ಣಾಯಕ ಕ್ಷಣಗಳಲ್ಲಿ ಒತ್ತಡ ನಿಭಾಯಿಸಲು ಸಾಧ್ಯವಾಗದೇ ಭಾರತ ಕಾಂಪೌಂಡ್ ವಿಭಾಗದ ಅಭಿಯಾನ ಅಂತ್ಯಗೊಳಿಸಿತು.

ಮಹಿಳಾ ತಂಡದಿಂದ ದೊಡ್ಡ ಹಿನ್ನಡೆ ಉಂಟಾಯಿತು. ಜ್ಯೋತಿ ಸುರೇಖಾ ವೆನ್ನಂ, ಪ್ರಗತಿ ಮತ್ತು ಅದಿತಿ ಸ್ವಾಮಿ ಹೊಂದಿದ್ದ ತಂಡ ಕ್ವಾರ್ಟರ್ ಫೈನಲ್‌ನಲ್ಲಿ ಟರ್ಕಿ ವಿರುದ್ಧ 227-233 ಅಂತರದಲ್ಲಿ ಸೋತು ಹೊರಬಿತ್ತು. ಹಜಲ್ ಬುರುನ್, ಡೆಫ್ನೆ ಚಾಕ್ಮಾಕ್ ಮತ್ತು ಎಮಿನೆ ರಾಬಿಯಾ ಒಗುಜ್ ಹೊಂದಿದ್ದ ಟರ್ಕಿ ತಂಡ ಎರಡನೇ ಅಂತ್ಯದಿಂದಲೇ ನಿಯಂತ್ರಣ ಸಾಧಿಸಿ ಸುಲಭ ಗೆಲುವು ಪಡೆದಿತು. ಮೊದಲ ಹಂತದಲ್ಲಿ ಮೆಕ್ಸಿಕೋದಲ್ಲಿ ಭಾರತಕ್ಕೆ ಏಕೈಕ ಚಿನ್ನ ತಂದುಕೊಟ್ಟಿದ್ದ ಇದೇ ತಂಡದಿಂದ ಈ ಬಾರಿ ನಿರೀಕ್ಷೆ ಹೆಚ್ಚು ಇತ್ತು.

ಪುರುಷರಲ್ಲಿ: ಪುರುಷರ ವಿಭಾಗದಲ್ಲಿ, ಓಜಸ್ ದಿಯೋತಲೆ, ಸಾಹಿಲ್ ಜಾಧವ್ ಮತ್ತು ಕುಶಾಲ್ ದಲಾಲ್ ತಂಡ ಸೆಮಿಫೈನಲ್ ತಲುಪಿ ನಿರೀಕ್ಷೆ ಮೂಡಿಸಿತು. ಆದರೆ ನಿರ್ಣಾಯಕ ಹಂತದಲ್ಲಿ ಎರಡು ಸತತ ಸೋಲುಗಳಿಂದ ಪದಕವಿಲ್ಲದೆ ಹಿಂದಿರುಗಬೇಕಾಯಿತು. ಕಂಚಿನ ಪದಕ ಪಂದ್ಯದಲ್ಲಿ ಚೀನಾ ವಿರುದ್ಧ 234-234 ಸಮಬಲದ ಬಳಿಕ ಶೂಟ್ ಆಫ್‌ನಲ್ಲಿ ಸೋಲು ಕಂಡಿತು. ಎರಡೂ ತಂಡಗಳು ಸಮಾನ ಅಚ್ಚುಕಟ್ಟಾದ ಮೂರು ಬಾಣಗಳನ್ನು ಹೊಡೆದರೂ, ಚೀನಾದ ಎರಡು ಬಾಣಗಳು ಕೇಂದ್ರಕ್ಕೆ ಹೆಚ್ಚು ಸಮೀಪವಾಗಿದ್ದರಿಂದ ಭಾರತ ಸೋತಿತು. ಸೆಮಿಫೈನಲ್‌ನಲ್ಲಿ ಅಮೆರಿಕ ವಿರುದ್ಧ 234-235 ಅಂತರದಲ್ಲಿ ಸೋಲು ಕಂಡುದು ಇನ್ನಷ್ಟು ನೋವು ತಂದಿತು. ಮೊದಲ ಮೂರು ಅಂತ್ಯಗಳವರೆಗೆ ಮುನ್ನಡೆ ಕಾಯ್ದುಕೊಂಡಿದ್ದರೂ ಕೊನೆಯ ಕ್ಷಣದಲ್ಲಿ ಕೇವಲ ಮೂರು ಬಾರಿ ದಶ ಅಂಕ ಗಳಿಸಿದರೆ, ಎದುರಾಳಿ ಐದು ಬಾರಿ ದಶ ಅಂಕ ಗಳಿಸಿತು.




ವೈಯಕ್ತಿಕ ವಿಭಾಗದಲ್ಲಿ ಸಮಾಧಾನ: ಆದರೆ ವೈಯಕ್ತಿಕ ವಿಭಾಗದಲ್ಲಿ ಸ್ವಲ್ಪ ಸಮಾಧಾನಕರ ಫಲಿತಾಂಶ ಕಂಡುಬಂದಿದೆ. ಎಲ್ಲಾ ಭಾರತೀಯ ಆಟಗಾರರು ಮೂವತ್ತೆರಡರ ಸುತ್ತಿಗೆ ಪ್ರವೇಶಿಸಿದ್ದಾರೆ. ಪುರುಷರ ವಿಭಾಗದಲ್ಲಿ ಅಭಿಷೇಕ್ ವರ್ಮಾ, ಜಾಧವ್, ಕುಶಾಲ್ ಮತ್ತು ದಿಯೋತಲೆ ಮುಂದಿನ ಹಂತ ತಲುಪಿದ್ದು, ವರ್ಮಾ ಮತ್ತು ಜಾಧವ್ ನಡುವೆ ದೇಶೀಯ ಪೈಪೋಟಿ ನಡೆಯಲಿದೆ. ಮಹಿಳಾ ವಿಭಾಗದಲ್ಲಿ ಮಧುರಾ ಚೀನಾದ ವಾಂಗ್ ಯುಯೆ ವಿರುದ್ಧ ಕಠಿಣ ಗೆಲುವು ಸಾಧಿಸಿದರೆ, ಜ್ಯೋತಿ ಪರಿಪೂರ್ಣ ಪ್ರದರ್ಶನ ನೀಡಿ ಗೆಲುವು ಸಾಧಿಸಿದರು. ಅದಿತಿ ಸ್ವಾಮಿ ಹಾಗೂ ಪ್ರಗತಿ ಕೂಡ ತಮ್ಮ ಪಂದ್ಯಗಳಲ್ಲಿ ಜಯ ಸಾಧಿಸಿ ಮುಂದಿನ ಹಂತಕ್ಕೆ ಅರ್ಹತೆ ಪಡೆದಿದ್ದಾರೆ.

ಇದೀಗ ಮಿಶ್ರ ತಂಡದಲ್ಲಿ ದಿಯೋತಲೆ ಮತ್ತು ಅದಿತಿ ಜೋಡಿ ಮಾತ್ರ ಪದಕದ ಭರವಸೆಯಾಗಿ ಉಳಿದಿದೆ.

ಪದಬಂಧ

ರಾಜು ಸಂಗಮೇಶ ಹಿರೇಮಠ



5976

ಎಡದಿಂದ ಬಲಕ್ಕೆ
1. ಮರದಿಂದ ಸಿಕ್ಕಿದ ಫಲ (2)
4. ಅಹಂಕಾರದ ಸಮಾನಪದ (2)
6. ರಾತ್ರಿಯ ಅಧಿಪತಿ ಈ ಚಂದ್ರ (4)
8. ಇದು ಹಸಿರು ಕಚ್ಚಾ ಮಾವು (4)
10. ಕಲೆ-ಸೌಂದರ್ಯವನ್ನು ಆಸ್ವಾದಿಸುವವನು (3)
11. ಕೃಷ್ಣನ ಮಾವನಾದ ಮಥುರೆಯ ರಾಜ (2)
12. ದಾಖಲೆ-ನೋಂದಣಿಯಿದು (3)
14. ಕಿರೀಟದ ಅಲಂಕಾರವಾದ ಹಕ್ಕಿಯ ಪುಕ್ಕ (2)
16. ದಾರಿಗನನ್ನು ಹೀಗೂ ಹೇಳಬಹುದು (4)
17. ನೆಲಕ್ಕುರುಳುವುದು (4)

ಮೇಲಿನಿಂದ ಕೆಳಕ್ಕೆ
1. ತೂಕ ಅಥವಾ ಭಾರವಿಲ್ಲದಿರುವುದು(3)
2. ವೇದವ್ಯಾಸರ ತಂದೆ ಈ ಮುನಿ (4)
3. ಪ್ರಾಥಮಿಕ-ಪ್ರೌಢದ ನಡುವಿನ ವ್ಯಾಸಂಗ (4)
5. ಒಣಜಂಬ-ಅತಿಯಾದ ಮೆರೆತವಿದು (3)
7. ಮಂದಿ ನೆಲೆಸಿರುವ ಸ್ಥಳ (4)
9. ಮಾಯಾವಿದ್ಯೆ ತಿಳಿದವನು (4)
11. ಅಫಘಾನಿಸ್ತಾನದ ಅತಿ ದೊಡ್ಡ ನಗರ (4)
12. ಸೊಂಟಪಟ್ಟಿಯನ್ನು ಹೀಗೂ ಹೇಳುತ್ತೇವೆ (4)
13. ಕೆಟ್ಟ ಉಪದೇಶ-ದುಷ್ಟ ಸಲಹೆಯಿದು (4)
15. ಬೆಳೆಯಲ್ಲಿ ಕಡಿತ ಮಾಡುವುದು (4)

5975 ಉತ್ತರ

ಎಡದಿಂದ ಬಲಕ್ಕೆ:
1. ದುರಾಗ್ರಹಪೀಡಿತ
3. ತೊಡಿಸು 5. ಗುಜರಿ
7. ಮಕಮಕಿಸು
8. ಪಾಯಸ 9. ಸುಮನಾ
11. ಸಂನ್ಯಾಸ 13. ಗಜರಿಮು
14. ನಾಗಮುರಿ 15. ದಿಕ್ಪಟ

ಮೇಲಿನಿಂದ ಕೆಳಕ್ಕೆ :
1. ದುಕ್ಕುಡಿ 2. ತನುಜ
3. ತೊಳೆ 4. ಸುಮರಸ
5. ಗುಸುಗುಸು 6. ರಿಣ
8. ಪಾರಂಗತ 10. ನಾಗರಿಕ
11. ಸಂಪುಟ 12. ಸನಾದಿ

ಹೊಸ ದಿಗಂತ

ಮಾರ್ನಿಂಗ್ ಶೋ

ಗುರುವಾರ 7 ಮೇ 2026, ಬೆಂಗಳೂರು

ಮದನಿಕಾ ಚಿತ್ರದ ಹಾಡಲ್ಲಿ ಮದನಾರಿಯಾದ ರಾಗಿಣಿ







ಈಗಾಗಲೇ ಬೆಳ್ಳಿ ಮೋಡದ ಅಂಬರ, ರನ್-2 ಸೇರಿದಂತೆ ಹಲವಾರು ಚಿತ್ರಗಳನ್ನು ನಿರ್ದೇಶಿಸಿದ ಬಿ.ಎಸ್.ಸಂಜಯ್ ಅವರ ನಿರ್ದೇಶನದಲ್ಲಿ ಮೂಡಿಬರುತ್ತಿರುವ ವಿಶೇಷ ಚಿತ್ರ ಮದನಿಕ. 400 ವರ್ಷಗಳ ಹಿಂದಿನ ಕಥೆಯೊಂದನ್ನು ಈಗಿನ ಜನರೇಶನ್‌ಗೆ ಲಿಂಕ್ ಮಾಡಿ ಈ ಚಿತ್ರಕಥೆಯನ್ನು ತೆರೆಮೇಲೆ ತರುತ್ತಿದ್ದಾರೆ. ತುಪ್ಪದ ಬೆಡಗಿ ರಾಗಿಣಿ ದ್ವಿವೇದಿ ಅವರು ಮೊದಲಬಾರಿಗೆ ರಾಜರ ಆಳ್ವಿಕೆಯ ಮದನಾರಿಯಾಗಿ ಈ ಚಿತ್ರದಲ್ಲಿ ಮಿಂಚಿದ್ದಾರೆ, ಇತ್ತೀಚೆಗೆ ಈ ಚಿತ್ರದ ಟ್ರೈಲರ್ ಹಾಗೂ ಹಾಡು ಬಿಡುಗಡೆಯಾಯಿತು.

ಚಿತ್ರದ ಬಗ್ಗೆ ಮಾತನಾಡುತ್ತಲೇ ಎಮೋಷನಲ್ ಆದ ನಿರ್ದೇಶಕ ಬಿ ಎಸ್. ಸಂಜಯ್, ನನಗೆ ಗೊತ್ತಿಲ್ಲದಂತೆ ಈ ಕಥೆ ಮಾಡುವಾಗ ಒಂದಷ್ಟು ಘಟನೆಗಳು ನಡೆಯಿತು. ನಾನು ದೇವಾನಂದ್ ಸೇರಿ ಒಂದು ಅದ್ಭುತವಾದ ಕಥೆ ಮಾಡಿಕೊಂಡೆವು. ನನ್ನ ಪತ್ನಿ ಅಲ್ಲದೆ ಕುಮಾರಸ್ವಾಮಿ ಅವರ ಬಳಿ ಕಥೆಯನ್ನು ಹೇಳಿದೆ. ಸಿನಿಮಾ ಮಾಡೋಣ ಅಂದಾಗ ಅವರು ಒಪ್ಪಿಗೆ ನೀಡಿದ್ರು. 25ರಿಂ 30 ದಿನ ಶೂಟಿಂಗ್ ಆಯಿತು, ರಾಗಿಣಿ ಅವರು ಈ ಕಥೆಯನ್ನ ಇಷ್ಟಪಟ್ಟು ಅದ್ಭುತವಾಗಿ ಪಾತ್ರ ನಿರ್ವಹಿಸಿದ್ದಾರೆ. ಅವರನ್ನು ಕ್ಲಾಸಿಕಲ್ ಕ್ವೀನ್ ಅನ್ನಬಹುದು. ಸಿನಿಮಾದಲ್ಲಿ ಹತ್ತು ಹಾಡುಗಳ ಜತೆ ಒಂದೊಳ್ಳೇ ಎಮೋಷನ್ಸ್ ಇದೆ, ಕ್ಲಾಸಿಕಲ್ ಸಾಂಗ್ಸ್ ಕೂಡ ಇದೆ. ಮದನಿಕ 400 ವರ್ಷದ ಹಿಂದಿನ ಕಥೆ. ಹಳಗನ್ನಡ ಭಾಷೆಯನ್ನು ದೇವಾನಂದ್ ಬರೆದಿದ್ದಾರೆ. ರಾಗಿಣಿ ಅವರು ಮದನಿಕಾ ಪಾತ್ರದಲ್ಲಿ ಅಭಿನಯಿಸಿದ್ದಾರೆ ಎಂದು ಹೇಳಿದರು.

ನಟಿ ರಾಗಿಣಿ ದ್ವಿವೇದಿ ಮಾತನಾಡಿ, ಮದನಿಕಾ ಚಿತ್ರದ ಬಗ್ಗೆ ನನಗೆ ದೊಡ್ಡ ಮಟ್ಟದ ನಿರೀಕ್ಷೆಯಿದೆ. ಇದು ಬರೀ ಆರಂಭ ಅಷ್ಟೇ. ಗ್ಲಿಂಪ್ಸ್ ಆಫ್ ಮದನಿಕಾ ನೋಡಿದ್ದೀವಿ ಅಷ್ಟೆ. ಆದರೆ ಅದರ ಹಿಂದೆಯೂ ಒಂದಷ್ಟು ಕಥೆ ಇದೆ, ಎರಡೂವರೆ ವರ್ಷದ ಜರ್ನಿ ಇದು. ಎಲ್ಲರಿಗೂ ಗೊತ್ತಿರುವ ಹಾಗೆ, ಈಗ ಟೆಕ್ನಾಲಜಿ, ಮೇಕಿಂಗ್, ಮ್ಯೂಸಿಕ್ ಎಲ್ಲವೂ ಬದಲಾಗಿದೆ. ನಾವೂ ಅಂದುಕೊಂಡಿರಲಿಲ್ಲ, ಇಷ್ಟೊಂದು ಬದಲಾವಣೆ ಆಗುತ್ತೆ ಅಂತ. ಆದರೆ ಭಾವನೆಗಳು ಮಾತ್ರ ಬದಲಾಗಿಲ್ಲ, ಮಿಕ್ಸ್ಡ್ ಎಮೋಶನ್ಸ್ ಈ ಸಿನಿಮಾದಲ್ಲಿದೆ. ಅದ್ಭುತವಾದ ಆಕ್ಷನ್ ಸೀಕ್ವೆನ್ಸ್ ಇದೆ, ಮ್ಯೂಸಿಕ್ ಇದೆ. ಈ ರೀತಿಯ ಸಿನಿಮಾ ಬಹಳಷ್ಟು ವರ್ಷಗಳಿಂದ ಬಂದಿಲ್ಲ ಎಂದು ಮದನಿಕಾ ಚಿತ್ರದ ವಿಶೇಷತೆಗಳ ಬಗ್ಗೆ ಹೇಳಿಕೊಂಡರು.

ಸಂಗೀತ ನಿರ್ದೇಶಕ ಸಲಾಂ ಕೇರಳ ಮಾತನಾಡಿ, ಈ ಹಿಂದೆ ನಾನು ಮೂರು ಸಿನಿಮಾಗಳನ್ನು ಮಾಡಿದ್ದೆ, ಸಂಜಯ್ ಅವರು ಒಂದೊಳ್ಳೆ ಅವಕಾಶ ನೀಡಿದರು. ನನ್ನ ಜೀವನದ ಬೆಸ್ಟ್ ಮ್ಯೂಸಿಕ್ ಆಲ್ಬಮ್ ಇದು ಅಂತಾನೇ ಹೇಳಬಹುದು. ನನ್ನ ಯೋಚನೆಯಲ್ಲಿ ಜನರಲ್ ಮ್ಯೂಸಿಕ್ ಅಂತಾನೆ ಇತ್ತು. ಆದರೆ ನಿರ್ದೇಶಕರನ್ನು ಭೇಟಿಮಾಡಿದ ಮೇಲೆ ಕ್ಲಾಸಿಕಲ್ ಮ್ಯೂಸಿಕ್ ಇರಲಿ ಅಂತ ಹೇಳಿದರು. ದಿ ಬೆಸ್ಟ್ ನೀಡಲು ಪ್ರಯತ್ನಿಸಿದ್ದೇನೆ ಎಂದರು.

ಅತಿಥಿಯಾಗಿದ್ದ ನಿರ್ದೇಶಕ ವಿಕ್ಟರಿ ವಾಸು ಮಾತನಾಡಿ, ಮದನಿಕಾ ಹೆಸರೇ ಒಂದು ಆಕರ್ಷಕ, ಸುಂದರ ಹುಡುಗಿ. ಅದಕ್ಕೆ ರಾಗಿಣಿ ಅವರು ಜೀವ ತುಂಬಿದ್ದಾರೆ. ಸಂಜಯ್ ಮತ್ತು ನನ್ನದು ಇಪ್ಪತ್ತು ವರ್ಷಗಳ ಅವಿನಾಭಾವ ಸಂಬಂಧ. ಈ ಸಿನಿಮಾಗೆ ದೊಡ್ಡ ಗೆಲುವು ಸಿಗಲಿ ಎಂದು ಹೇಳಿದರು.

ಎಸ್. ಪಿ. ಆರ್. ಪ್ರೊಡಕ್ಷನ್ ಹಾಗೂ ಸಮರ್ಥ್ ಡಿಜಿಟಲ್ ಹೌಸ್ ಬ್ಯಾನರ್‌ನಡಿ ಸುಜಾತ ಲಕ್ಷ್ಮೀ ಹಾಗೂ ಕುಮಾರಸ್ವಾಮಿ ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಧರ್ಮ ಕೀರ್ತಿರಾಜ್, ಹರೀಶ್‌ರಾಜ್, ಅಶ್ವಿನ್, ರಾಜ್ನಿ ಸೇರಿದಂತೆ ಹಲವು ಕಲಾವಿದರು ಈ ಚಿತ್ರದಲ್ಲಿ ನಟಿಸಿದ್ದಾರೆ. ಆರ್. ಗಿರಿ ಅವರ ಛಾಯಾಗ್ರಹಣ, ಥ್ರಿಲ್ಲರ್ ಮಂಜು, ಕೌರವ ವೆಂಕಟೇಶ್ ಅವರ ಸಾಹಸ ಸಂಯೋಜನೆ ಈ ಚಿತ್ರಕ್ಕಿದೆ. ಜೂನ್‌ನಲ್ಲಿ ಚಿತ್ರವನ್ನು ತೆರೆಗೆ ತರಲು ನಿರ್ಮಾಪಕ ಸಂಜಯ್ ಅವರು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ಸಿಟಿ ಲೈಟ್ಸ್ ಬಾವಾ ಬಾವಾ ರ‍್ಯಾಪ್‌ಸಾಂಗ್ ಬಿಡುಗಡೆ



ಮಾಸ್ ಮತ್ತು ಕ್ಲಾಸ್ ಎರಡೂ ರೀತಿಯ ಪಾತ್ರಗಳನ್ನು ನಿರ್ವಹಿಸಿ, ಜತೆಗೆ ನಿರ್ದೇಶಕನಾಗಿಯೂ ಸೈ ಎನಿಸಿಕೊಂಡಿರುವ ಯುವ ನಾಯಕ, ನಿರ್ದೇಶಕ ದುನಿಯಾ ವಿಜಯ್‌ಕುಮಾರ್ ಅವರು ಇದೀಗ ತಮ್ಮ ಮಗಳು ಮೋನಿಷಾ ವಿಜಯಕುಮಾರ್ ಅವರನ್ನು ಬೆಳ್ಳಿತೆರೆಗೆ ನಾಯಕಿಯನ್ನಾಗಿ ಪರಿಚಯಿಸುತ್ತಿದ್ದಾರೆ, ಆ ಚಿತ್ರದ ಹೆಸರು ಸಿಟಿ ಲೈಟ್ಸ್. ವಿನಯ್ ರಾಜ್‌ಕುಮಾರ್ ನಾಯಕನಾಗಿ ನಟಿಸಿರುವ ಈ ಚಿತ್ರದ ಬಹುತೇಕ ಕೆಲಸಗಳು ಮುಗಿದಿದ್ದು, ಸದ್ಯ ಸಾಂಗ್ ರೆಕಾರ್ಡಿಂಗ್ ಕಾರ್ಯ ನಡೆಯುತ್ತಿದೆ. ಈ ಚಿತ್ರದ ಬಾವಾ ವಾವಾ ಎಂಬ ಹಾಡಿನ ಬಿಡುಗಡೆ ಕಾರ್ಯಕ್ರಮ ಬುಧವಾರ ನಡೆಯಿತು.



ಹೊಸದಾಗಿ ನಗರಕ್ಕೆ ಬರುವ ಯುವಕ ಯುವತಿಯರ ಬಗ್ಗೆ, ಸಿಟಿ ಲೈಫಲ್ಲಿ ನಡೆಯುವ ಹಲವಾರು ವಿಷಯಗಳ ಬಗ್ಗೆ ಈ ಚಿತ್ರ ಹೇಳಲಿದೆ, ಹೊಸಬರಿಗೆ ಅವಕಾಶ ನೀಡಬೇಕು, ಹೊಸ ಪ್ರತಿಬೆಗಳನ್ನು ಗುರುತಿಸಿ ಅವರಿಗೆ ಸಹಾಯ ಮಾಡಬೇಕು ಎಂಬ ಧ್ಯೇಯ ಇಟ್ಟುಕೊಂಡಿರುವ ದುನಿಯಾ ವಿಜಯ್ ಅವರು ಈ ಚಿತ್ರದ ಹಾಡನ್ನು ಚಿಕ್ಕ ಮಕ್ಕಳಿಂದ ಬಿಡುಗಡೆ ಮಾಡಿಸಿದ್ದು ವಿಶೇಷವಾಗಿತ್ತು. ಭೀಮ ಮತ್ತು ಸಲಗದಲ್ಲಿದ್ದಂತೆ ಇದೂ ಒಂದು ರ‍್ಯಾಪ್ ಸಾಂಗ್ ಆಗಿದ್ದು, ಈ ಬಾವ ಬಾವ ಹಾಡಿನ ಕೊನೆಯಲ್ಲಿ ನಟಿ ಉಮಾಶ್ರೀ ಅವರು ಹೇಳುವ ಸಿಟಿಯಲ್ಲಿ ಬ್ಯಾಡ್‌ಬಾಯ್ಸ್ ನೋಡಿದ್ದೀರಿ, ಅದೇರೀತಿ ಬ್ಯಾಡ್‌ಗರ್ಲ್ ನೋಡಿದ್ದೀರ ಎಂಬ ಮಾತು ಸಾಕಷ್ಟು ಚರ್ಚೆಯಾಗುತ್ತಿದೆ, ತನ್ನದಲ್ಲದ ತಪ್ಪಿಗೆ ಅನುಭವಿಸುವ ಯಾತನೆಯ ಕುರಿತಂತೆ ಮಾಡಲಾಗಿರುವ ಈ ಹಾಡಿಗೆ ಚರಣ್‌ರಾಜ್ ಅವರು ಸಂಗೀತ ಸಂಯೋಜನೆ ಮಾಡಿದ್ದಾರೆ, ಭೀಮ ಚಿತ್ರದಲ್ಲಿ ರಾಹುಲ್ ಡಿಟ್ಟೋ ಎಂಬ ರ‍್ಯಾಪರನ್ನು ಪರಿಚಯಿಸಿದ್ದ ನಿರ್ದೇಶಕ ವಿಜಯ್ ಕುಮಾರ್ ಈ ಚಿತ್ರದಲ್ಲಿ ಅಂಕಿತ ಬಾವ ಎಂಬ ಮತ್ತೊಬ್ಬ ರ‍್ಯಾಪರನ್ನು ಗಾಯಕನನ್ನಾಗಿ ಇಂಟ್ರಡ್ಯೂಸ್ ಮಾಡಿದ್ದಾರೆ,

ವಿನಯ್ ರಾಜ್‌ಕುಮಾರ್ ಮಾತನಾಡಿ ಈ ಚಿತ್ರದಲ್ಲಿ ಚರಣರಾಜ್ ಅವರು 5 ಅದ್ಭುತ ಹಾಡುಗಳನ್ನು ಕೊಟ್ಟಿದ್ದಾರೆ, ಟೈಟಲ್‌ಗೆ ತಕ್ಕಹಾಗೆ ಸಿನಿಮಾ ಬಂದಿದೆ, ಮೋನಿಷಾ ಅದ್ಭುತವಾಗಿ ನಟಿಸಿದ್ದಾರೆ ಎಂದು ಹೇಳಿದರು. ನಾಯಕಿ ಮೋನಿಷಾ ವಿಜಯಕುಮಾರ್ ಮಾತನಾಡಿ ಅಪ್ಪನ ಚಿತ್ರದ ಮೂಲಕ ಚಿತ್ರರಂಗಕ್ಕೆ ಪರಿಚಯವಾಗುತ್ತಿರುವುದಕ್ಕೆ ನಿಜಕ್ಕೂ ಖುಷಿಯಾಗಿದೆ, ಈ ಹಾಡು ತುಂಬಾ ಚೆನ್ನಾಗಿ ಮೂಡಿಬಂದಿದ್ದು, ನಮ್ಮ ಸುತ್ತಮುತ್ತ ಮಾತಾಡುವ ಭಾಷೆಯೇ ಹಾಡಲ್ಲಿದೆ, ನಾನು ಚರಣರಾಜ್ ಅವರ ಫ್ಯಾನ್ ಆಗಿದ್ದೇನೆ ಎಂದರು. ಚರಣ್‌ರಾಜ್ ಮಾತನಾಡಿ ವಿಜಯ್ ಅವರಜ 'ತೆ ಮತ್ತೊಮ್ಮೆ ಕೆಲಸ ಮಾಡುವುದಕ್ಕೆ ತುಂಬಾ ಖುಷಿಯಿದೆ. ಚಿತ್ರದ ಎಲ್ಲಾ ಹಾಡುಗಳೂ ವಿಭಿನ್ನವಾಗಿವೆ ಎಂದರು.

ಈ ವೇಳೆ ವಿಜಯ್‌ಕುಮಾರ್ ಅವರು ಸಾಕಷ್ಟು ವಿಷಯಗಳ ಬಗ್ಗೆ ಮಾತನಾಡಿದ್ದಾರೆ, ಪ್ಯಾನ್ ಇಂಡಿಯಾ ಬಗ್ಗೆ ಮಾತನಾಡಿ ನಾವು ಕನ್ನಡದವರು, ನಮಗೆ ಭಯವೆಂಬುದು ಗೊತ್ತಿಲ್ಲ, ಮೊದಲು ಇಲ್ಲಿ ಗೆಲ್ಲೋಣ, ಮುಂದೆ ಬೇರೆ ಭಾಷೆಗಳಿಗೆ ನೋಡೋಣ ಎಂದು ಹೇಳಿದರು.

ಸದ್ಯದಲ್ಲೇ ಉಳಿದ ಹಾಡುಗಳು

ನಾಯಕ ವಿನಯ್ ರಾಜ್‌ಕುಮಾರ್ ಬಗ್ಗೆ ಮಾತನಾಡಿ ಅವರನ್ನು ತುಂಬಾ ದಿನದಿಂದ ನೋಡುತ್ತಿದ್ದೇನೆ, ಅವರ ಪ್ರಾಮಾಣಿಕತೆ ಇನೋಸೆಂಟ್ ಮತ್ತು ಅವರ ನಟನೆ ಚೆನ್ನಾಗಿದೆ. ಹಾಗಾಗಿ ನಮ್ಮ ಚಿತ್ರಕ್ಕೆ ಆಯ್ಕೆ ಮಾಡಿಕೊಂಡೆ. ಉತ್ತಮವಾಗಿ ನಟಿಸಿದ್ದಾರೆ ಮೋನಿಷಾಳಲ್ಲಿ ಒಳ್ಳೆಯ ಪ್ರತಿಭೆಯಿದೆ, ಆದಷ್ಟು ಬೇಗ ಉಳಿದ ಹಾಡುಗಳನ್ನು ಬಿಡುಗಡೆ ಮಾಡುತ್ತಾ ಹೋಗುತ್ತೇವೆ ಎಂದು ಈ ಸಂಧರ್ಭದಲ್ಲಿ ಹೇಳಿದರು, ಇದೇ ಸಂದರ್ಬದಲ್ಲಿ ಸದ್ಯದಲ್ಲೇ ಬರಲಿರುವ ಮೋನಿಷಾ ಮತ್ತು ವಿನಯ್ ರಾಜ್‌ಕುಮಾರ್ ಇಬ್ಬರ ಬರ್ತ್‌ಡೇ ಕೇಕ್‌ನ್ನು ಕಟ್ ಮಾಡುವ ಮೂಲಕ ಅವರಿಗೆ ಚಿತ್ರತಂಡ ವಿಶ್ ಮಾಡಿತು.

ಹೆಣ್ಮಕ್ಳು ಹೊಗೆ ಬಿಡೋದು ನೋಡಿದ್ರೆ, ಬೇಜಾರಾಗುತ್ತೆ ಹಾಡಲ್ಲಿ ಬರುವ ಬ್ಯಾಡಗರ್ಲ್ ಪದದ ಬಗ್ಗೆ ಸ್ಪಷ್ಟನೆ ನೀಡುತ್ತ ಹೆಣ್ಣು ಎಂದರೆ ಹೂವು, ಆಕೆ ದೇವತೆ ಥರ, ಆದರೆ ಈಗ ಹೆಣ್ಮಕ್ಳು ಹೊಗೆ ಬಿಡೋದು, ಎಣ್ಣೆ ಹೊಡೆಯೋದು ನೋಡ್ತಾಯಿದ್ದರೆ ಬೇಜಾರಾಗತ್ತೆ, ಅದು ತಪ್ಪು, ಹಾಗೆ ಮಾಡಬಾರದು ಎಂದು ಬೇಸರ ವ್ಯಕ್ತಪಡಿಸಿದರು, ತಮಿಳುನಾಡಲ್ಲಿ ವಿಜಯ್ ಅವರ ಗೆಲುವಿನ ಬಗ್ಗೆ ಮಾತನಾಡುತ್ತ ಅವರ ಗೆಲುವು ನಿಜಕ್ಕೂ ಖುಷಿ ತಂದಿದೆ ಎಂದರಲ್ಲದೆ ರಾಜಕೀಯಕ್ಕೆ ಬರುವ ಆಲೋಚನೆ ಇದೆಯಾ ಎಂದು ಕೇಳಿದಾಗ ಸದ್ಯ ಸಿನಿಮಾ, ಮುಂದೆ ನೋಡೋಣ ಎಂದು ನಗುತ್ತಲೇ ಉತ್ತರಿಸಿದರು.

ಆನಂದ್ ಆಡಿಯೋ ತೆಕ್ಕೆಗೆ ಅಯೋಗ್ಯ-2 ಮ್ಯೂಸಿಕ್ ರೈಟ್ಸ್

ನಟ ಸತೀಶ್ ನೀನಾಸಂ, ಬೆಡಗಿ ರಚಿತಾರಾಮ್ ಜೋಡಿಯ ಸೂಪರ್ ಹಿಟ್ ಅಯೋಗ್ಯ ಚಿತ್ರದ ಸೀಕ್ವೆಲ್ ಆಗಿ ತಯಾರಾಗುತ್ತಿರುವ ಅಯೋಗ್ಯ-2 ಚಿತ್ರದ ಶೂಟಿಂಗ್ ಇತ್ತೀಚೆಗಷ್ಟೇ ಮುಕ್ತಾಯಗೊಂಡಿದೆ. ಮಹೇಶ್‌ಕುಮಾರ್ ಅವರ ನಿರ್ದೇಶನದ ಈ ಚಿತ್ರ ಆರಂಭದಿಂದಲೂ ಸಖತ್ ಸದ್ದು ಮಾಡುತ್ತಲೇ ಬಂದಿದೆ. ಈಗಾಗಲೇ ಅಯೋಗ್ಯ ಭಾಗ 1 ಚಿತ್ರ ಅದ್ಭುತ ಯಶಸ್ಸನ್ನು ದಾಖಲಿಸಿದ್ದು, ಅದರ ಖುಷಿಯಲ್ಲೇ ಎರಡನೇ ಭಾಗವನ್ನು ಶುರು ಮಾಡಿತ್ತು ಚಿತ್ರತಂಡ. ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿರುವ ಅಯೋಗ್ಯ ಚಿತ್ರತಂಡ ಹೊಸದೊಂದು ಸುದ್ದಿಯನ್ನು ಹರಿಬಿಟ್ಟಿದೆ.

ಅಯೋಗ್ಯ ಚಿತ್ರದ ಏನಮ್ಮಿ ಏನಮ್ಮಿ ಕನ್ನಡದ ಮೊದಲ 100 ಮಿಲಿಯನ್ ಗಡಿ ದಾಟಿದ ಹಾಡಾಗಿತ್ತು. ಇದೀಗ ಅದೇ ತಂಡದಿಂದ ಮತ್ತೊಂದು ಮ್ಯೂಸಿಕಲ್ ಮ್ಯಾಜಿಕ್ ಹೊರಬರಲು ತಯಾರಿ ನಡೆಸಿದೆ, ಅದಕ್ಕೂ ಮುನ್ನ ಅಯೋಗ್ಯ-2 ಆಡಿಯೋ ರೈಟ್ಸ್ ವಿಷಯವಾಗಿ ಸೌಂಡು ಮಾಡುತ್ತಿದೆ. ಅಯೋಗ್ಯ ಚಿತ್ರದ ಆಡಿಯೋ ಹಕ್ಕು 9 ಲಕ್ಷಕ್ಕೆ ಬಿಕರಿಯಾಗಿತ್ತು. ಇದೀಗ ಅಯೋಗ್ಯ-2 ಅದಕ್ಕಿಂತಲೂ 20ಪಟ್ಟು ಹೆಚ್ಚಿನ ಮೊತ್ತಕ್ಕೆ ಸೇಲಾಗಿದೆ. ಅರ್ಥಾತ್ ಅಯೋಗ್ಯ 2 ಚಿತ್ರದ ಆಡಿಯೋ ರೈಟ್ಸನ್ನು ಬರೋಬ್ಬರಿ 2 ಕೋಟಿ ಕೊಟ್ಟು ಕೊಂಡುಕೊಂಡಿದೆ ಆನಂದ್ ಆಡಿಯೋ ಸಂಸ್ಥೆ.



ಈ ಬಗ್ಗೆ ಖುಷಿ ಹಂಚಿಕೊಂಡಿರುವ ನಿರ್ದೇಶಕ ಮಹೇಶ್, ಅಯೋಗ್ಯ ಚಿತ್ರದ ಎಲ್ಲಾ ಹಾಡುಗಳೂ ದೊಡ್ಡಮಟ್ಟದಲ್ಲಿ ಹಿಟ್ ಆಗಿದ್ದವು. ಅದರಲ್ಲೂ ಏನಮ್ಮಿ ಏನಮ್ಮಿ ಹಾಡು 100 ಮಿಲಿಯನ್ ಆಗಿತ್ತು. ಅದು ಕನ್ನಡದಲ್ಲಿ ಮೊದಲ ಬಾರಿಗೆ 100 ಮಿಲಿಯನ್ ಕ್ರಾಸ್ ಮಾಡಿದ ದಾಖಲೆ ಹೊಂದಿದೆ ಎಂಬುದು ಖುಷಿಯ ವಿಷಯ. ಇದೀಗ ಅದೇ ತಂಡದಿಂದ ಅಯೋಗ್ಯ 2 ಚಿತ್ರ ಸಿದ್ಧವಾಗಿದೆ. ಇದರಲ್ಲೂ ಹಾಡುಗಳು ಒಂದಕ್ಕಿಂತ ಒಂದು ಅದ್ಭುತವಾಗಿವೆ. ಅರ್ಜುನ್ ಜನ್ಯ ಅವರು ಎಷ್ಟೇ ಬ್ಯುಸಿಯಾಗಿದ್ದರೂ ಹಾಡುಗಳನ್ನು ನೀಟಾಗಿ ಮಾಡಿಕೊಟ್ಟಿದ್ದಾರೆ. ಚೇತನ್‌ಕುಮಾರ್ ಅವರ ಸಾಹಿತ್ಯ ಈ ಹಾಡಿಗಿದೆ. ಎಲ್ಲಾ ವಿಷಯಗಳಲ್ಲೂ ಅಯೋಗ್ಯ 2 ದೊಡ್ಡ ಮಟ್ಟದಲ್ಲಿ ಸದ್ದು ಮಾಡಲಿದೆ ಎಂಬುದು ಅವರ ಭರವಸೆ.

ಅಯೋಗ್ಯ ಚಿತ್ರದ ಮೊದಲಭಾಗ ಎಲ್ಲಿಗೆ ಮುಗಿದಿತ್ತೋ, ಅದರ ಮರುದಿನದಿಂದಲೇ ಈ ಚಿತ್ರ ಶುರುವಾಗುತ್ತದೆ. ಎರಡ್ಮೂರು ಹೊಸ ಪಾತ್ರಗಳು ಬರುತ್ತವೆ ಎನ್ನುವುದು ಬಿಟ್ಟರೆ, ಮಿಕ್ಕಂತೆ ಎಲ್ಲಾ ಪಾತ್ರಗಳು ಮುಂದುವರಿಯುತ್ತವೆ. ಅಯೋಗ್ಯ ಕೊನೆಯಲ್ಲಿ ಗ್ರಾಮಪಂಚಾಯ್ತಿ ಸದಸ್ಯನಾಗುವ ಸಿದ್ದೇಗೌಡ ಮುಂದೆ ಏನೆಲ್ಲಾ ಸವಾಲುಗಳನ್ನು ಎದುರಿಸುತ್ತಾನೆ ಎನ್ನುವುದು ಈ ಚಿತ್ರದ ಕಥೆ ಅಂತಾರೆ ನಿರ್ದೇಶಕ ಮಹೇಶ್ ಕುಮಾರ್.

ಬಿಡುಗಡೆಗೆ ಅಣಿಯಾಗುತ್ತಿರುವ ಈ ಚಿತ್ರಕ್ಕೆ ಎಂ.ಮುನೇಗೌಡ ಅವರು ಬಂಡವಾಳ ಹೂಡಿದ್ದಾರೆ. ಸುಂದರ್‌ರಾಜ್, ಶಿವರಾಜ್ ಕೆ.ಆರ್.ಪೇಟೆ, ಅರುಣಾ ಬಾಲರಾಜ್, ಮಂಜು ಪಾವಗಡ ತಾರಾಗಣದಲ್ಲಿದ್ದಾರೆ. ಅರ್ಜುನ್ ಜನ್ಯ ಅವರ ಸಂಗೀತ ಸಂಯೋಜನೆ, ಮಾಸ್ತಿ ಉಪ್ಪಾರಹಳ್ಳಿ ಅವರ ಸಂಭಾಷಣೆ, ಖ್ಯಾತಿಯ ವಿಶ್ವಜಿತ್‌ರಾವ್ ಅವರ ಕ್ಯಾಮೆರಾವರ್ಕ್ ಈ ಚಿತ್ರಕ್ಕಿದೆ.

ಮಕ್ಕಳ ಸ್ನೇಹ ಬಾಂಧವ್ಯದ ಸುತ್ತ ನಡೆಯುವ ಮಕ್ಕಳ ಸೈನ್ಯ





ಕನ್ನಡ ಚಿತ್ರರಂಗದಲ್ಲಿ ಸಂಕಲನಕಾರರಾಗಿ ಕಾರ್ಯ ನಿರ್ವಹಿಸಿರುವ ಎಸ್. ಕೆ. ಸುನೀಲ್ ಕುಮಾರ್ ಅವರ ಚೊಚ್ಚಲ ನಿರ್ದೇಶನದ ಚಿತ್ರ ಮಕ್ಕಳ ಸೈನ್ಯ, ಮೇ 22 ರಂದು ಈ ಚಿತ್ರ ರಾಜ್ಯಾದ್ಯಂತ ತೆರೆಗೆ ಬರುತ್ತಿದೆ. ಈ ಕುರಿತು ಹೆಚ್ಚಿನ ಮಾಹಿತಿ ನೀಡಲು ಆಯೋಜಿಸಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಚಿತ್ರತಂಡದ ಸದಸ್ಯರು ಹಾಜರಿದ್ದು ಮಾತನಾಡಿದರು.

ಎಪ್ಪತ್ತರ ದಶಕದಲ್ಲಿ ಬಂದಿದ್ದ ಸಿಂಹದ ಮರಿ ಸೈನ್ಯ ಚಿತ್ರದ ನಂತರ ಆ ರೀತಿಯ ಯಾವುದೇ ಮಕ್ಕಳ ಸಾಹಸ ಚಿತ್ರ ಬಂದಿರಲಿಲ್ಲ, ಅದೇ ರೀತಿಯ ಕಥೆ ಈ ಚಿತ್ರದಲ್ಲಿರುತ್ತದೆ. ಚಿತ್ರದಲ್ಲಿ ಸ್ನೇಹ, ಸಾಹಸ, ತಂದೆ - ಮಗಳ ಬಾಂಧವ್ಯ ಹಾಗೂ ಸನಾತನ ಎಂಬ ನಾಲ್ಕು ಭಾಗಗಳಿರುತ್ತದೆ. ಮಕ್ಕಳು ಮೊದಲ ಬಾರಿಗೆ ನಟಿಸಿದ್ದಾರೆ ಅಂತ ಹೇಳುವ ಹಾಗಿಲ್ಲ, ಅಷ್ಟು ಅದ್ಭುತವಾಗಿ ನಟಿಸಿದ್ದಾರೆ. ಮಂಡ್ಯ ಜಿಲ್ಲೆಯ ಕೆ.ಆರ. ಪೇಟೆಯ ಅಕ್ಕಿ ಹೆಬ್ಬಾಳಿನಲ್ಲಿ ಚಿತ್ರೀಕರಣ ನಡೆದಿದೆ. ಹಿರಿಯ ಸಾಹಿತಿ ದೊಡ್ಡರಂಗೇಗೌಡ ಅವರು ಗೀತರಚನೆ ಮಾಡಿದ್ದಾರೆ. ಸನ್ನಿರಾಜ್ ಅವರು ಸಂಗೀತ ನೀಡಿದ್ದಾರೆ. ಮಕ್ಕಳ ಚಿತ್ರವಾದರೂ ಯಾವುದೇ ಕಮರ್ಷಿಯಲ್ ಚಿತ್ರಗಳಿಗೂ ಕಡಿಮೆ ಇಲ್ಲದ ರೀತಿಯಲ್ಲೇ ಚಿತ್ರ ಮೂಡಿ ಬಂದಿದೆ. ಚಿತ್ರ ಮೇ 22ರಂದು ಬಿಡುಗಡೆಯಾಗುತ್ತಿದೆ. ಚಿತ್ರಕ್ಕೆ ನಾನೇ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದೇನೆ. ಮುನಿಸ್ವಾಮಿ ಅವರು ನಿರ್ಮಾಣ ಮಾಡಿದ್ದಾರೆ. ಸಂಗೀತ ಅವರು ಸಹ ನಿರ್ದೇಶನ ಮಾಡಿದ್ದಾರೆ. ಮಕ್ಕಳ ಸೈನ್ಯ ಚಿತ್ರಕ್ಕೆ ಸವಾಲಿಗೆ ಸವಾಲ್ ಎಂಬ ಅಡಿಬರಹವಿದೆ ಎಂದು ನಿರ್ದೇಶಕ ಸುನೀಲ್ ಕುಮಾರ್ ಅವರು ತಿಳಿಸಿದರು.

ನಿರ್ಮಾಪಕ ಮುನಿಸ್ವಾಮಿ ಹಾಗೂ ಚಿತ್ರದಲ್ಲಿ ನಟಿಸಿರುವ ಮಹಾಲಕ್ಷ್ಮಿ, ಗಗನ, ಸೋನಾಕ್ಷಿ, ಶಶಾಂಕ್, ರಾಬರ್ಟ್, ರುದ್ರಪ್ಪ ಮುಂತಾದವರು ಮಕ್ಕಳ ಸೈನ್ಯ ಚಿತ್ರದ ಕುರಿತಂತೆ ಮಾತನಾಡಿದರು.

ಎಲ್ಲಮ್ಮನ ಹಾಡೇ ಶಿಖಂಡಿ ಚಿತ್ರಕ್ಕೆ ಪ್ರೇರಣೆ: ಪೋಲಾ ಪ್ರವೀಣ್



ಪೋಲಾ ಪ್ರವೀಣ್‌ಕುಮಾರ್ ಅವರ ನಿರ್ಮಾಣದ ಹಾಗೂ ಗುರುಮೂರ್ತಿ ವಿ. ಅವರ ನಿರ್ದೇಶನದ ಶಿಖಂಡಿ ಚಿತ್ರ ಮೇ 15 ರಂದು ಬಿಡುಗಡೆಯಾಗುತ್ತಿದೆ. ಅದಕ್ಕೆ ಪೂರ್ವಭಾವಿಯಾಗಿ ಈ ಚಿತ್ರದ ಎಲ್ಲಮ್ಮದೇವಿಯ ಹಾಡು ಹಾಗೂ ಟ್ರೈಲರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನೆರವೇರಿತು. ಶ್ರವಣಬೆಳಗೊಳದ ಶಾಸಕರಾದ ಸಿ.ಎನ್.ಬಾಲಕೃಷ್ಣ ಹಾಗೂ ಸಾಯಿಸತೀಶ್ ದೊಡ್ಡಯ್ಯ ಮುಖ್ಯ ಅತಿಥಿಗಳಾಗಿ ಆಗಮಿಸಿ ಚಿತ್ರತಂಡಕ್ಕೆ ಶುಭ ಕೋರಿದರು.

- ಪೋಲಾ ಪ್ರವೀಣ್‌ಕುಮಾರ್ ನಿರ್ಮಾಣದ ಶಿಖಂಡಿ ಚಿತ್ರಕ್ಕೆ ಗುರುಮೂರ್ತಿ ವಿ. ನಿರ್ದೇಶನ
- ಎಲ್ಲಾ ಥರದ ಎಮೋಷನ್ಸ್ ಒಳಗೊಂಡ ಈ ಚಿತ್ರದ ಟ್ರೈಲರ್ ಬಿಡುಗಡೆ

ನಿರ್ದೇಶಕ ಗುರುಮೂರ್ತಿ ಮಾತನಾಡುತ್ತ ಮಹಾಭಾರತದಲ್ಲಿ ಬರುವ ಶಿಖಂಡಿಯ ಪಾತ್ರವನ್ನು ಆಧರಿಸಿದ ಕಥಾಹಂದರ ಈ ಚಿತ್ರದಲ್ಲಿದೆ. ಚಿತ್ರ ಉತ್ತಮವಾಗಿ ಮೂಡಿಬರಲು ಕಲಾವಿದರು ಹಾಗೂ ತಂತ್ರಜ್ಞರ ಸಹಕಾರವೇ ಕಾರಣ. ನಿರ್ಮಾಪಕ ಪೋಲಾ ಪ್ರವೀಣ್‌ಕುಮಾರ್ ಅವರು ಯಾವುದೇ ಕೊರತೆ ಬಾರದ ಹಾಗೆ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಯುವರಾಜ್ ಗೌಡ ಈ ಚಿತ್ರದ ನಾಯಕನಾಗಿ ನಟಿಸಿದ್ದು, ಖ್ಯಾತಿ ನಾಯಕಿಯ ಪಾತ್ರ ನಿರ್ವಹಿಸಿದ್ದಾರೆ. ಈಗಾಗಲೇ ಹಾಡುಗಳು ಹಾಗೂ ಟ್ರೇಲರ್ ಮೂಲಕ ಮೆಚ್ಚುಗೆ ಪಡೆದುಕೊಂಡಿರುವ ನಮ್ಮ ಚಿತ್ರ ಮೇ 15ರಂದು ಕನ್ನಡದಲ್ಲಿ ಮೊದಲು ಬಿಡುಗಡೆಯಾಗುತ್ತಿದೆ. ಆನಂತರ ಉಳಿದ ಭಾಷೆಗಳಲ್ಲಿ ತೆರೆಗೆ ಬರಲಿದೆ. ಮಾಲಾಶ್ರೀ ಅಭಿನಯದ ಮಾರಕಾಸ್ತ್ರ ಚಿತ್ರದ ನಂತರ ನನ್ನ ನಿರ್ದೇಶನದ ಎರಡನೇ ಚಿತ್ರ ಎಂದರು.





ನಿರ್ಮಾಪಕ ಪೋಲಾ ಪ್ರವೀಣ್‌ಕುಮಾರ್ ಮಾತನಾಡುತ್ತ ಹೋಟೆಲ್ ಉದ್ಯಮಿಯಾಗಿರುವ ನಾನು ಈ ಚಿತ್ರದ ಮೂಲಕ ನಿರ್ಮಾಪಕನಾಗಿದ್ದೇನೆ. ಇದಕ್ಕೆ ಕಾರಣ ಇಂದು ಬಿಡುಗಡೆಯಾಗಿರುವ ಯಲ್ಲಮ್ಮ ತಾಯಿಯ ಹಾಡು. ಈ ಚಿತ್ರ ನಿರ್ಮಾಣ ಮಾಡಲು ನನ್ನನ್ನು ಗುರುಮೂರ್ತಿ ಅವರು ಎರಡು ತಿಂಗಳಿನಿಂದ ಸಂಪರ್ಕಿಸುತ್ತಿದ್ದರು. ಆದರೆ ಅವರು ಎರಡು ತಿಂಗಳ ನಂತರ ಬಂದಾಗ ಯಲ್ಲಮ್ಮ ತಾಯಿಯ ಹಾಡನ್ನು ಕೇಳಿಸಿದರು. ಈ ಹಾಡನ್ನು ಕೇಳಿದ ತಕ್ಷಣ ಚಿತ್ರ ನಿರ್ಮಾಣ ಮಾಡಲು ಪ್ರೇರೇಪಣೆಯಾಯಿತು, ಅಷ್ಟು ಪ್ರಭಾವಶಾಲಿಯಾಗಿದೆ ಈ ಹಾಡು, ಡ್ಯುಯೆಟ್ ಸಾಂಗನ್ನು ಈಗಿನ ಹುಡುಗರಿಗಾಗಿ ಮಾಡಿದ್ದೇವೆ, ಎಮೋಷನಲ್ ಸಾಂಗ್ ಮನಮುಟ್ಟುತ್ತದೆ, ಈ ಚಿತ್ರ ದೊಡ್ಡ ಮಟ್ಟದಲ್ಲಿ ಆಗಲು ನನ್ನ ಕುಟುಂಬದ ಸಹಕಾರ ದೊಡ್ಡದು, ಅವರ ಕೋಆಪರೇಶನ್ ಇಲ್ಲದಿದ್ರೆ ಇದು ಸಾಧ್ಯವಾಗ್ತಿರಲಿಲ್ಲ, ಜತೆಗೆ ಚಿತ್ರತಂಡದ ಸಹಕಾರ ಕೂಡ ಇತ್ತು, ನಾನು ಈ ಚಿತ್ರದಲ್ಲಿ ನಾಯಕಿಯ ತಂದೆಯ ಪಾತ್ರದಲ್ಲಿ ನಟಿಸಿದ್ದೇನೆ ಎಂದು ಹೇಳಿದರು.

ನಾಯಕ ಯುವರಾಜ್ ಗೌಡ ಮಾತನಾಡುತ್ತ ಮೂಲತಃ ಮೈಸೂರಿನವನಾದ ನನಗೆ ನಾಯಕನಾಗಬೇಕೆಂಬ ಹಂಬಲವಿತ್ತು. ಆ ಆಸೆ ಈ ಚಿತ್ರದ ಮೂಲಕ ಈಡೇರಿದೆ. ಒಂದೂವರೆ ವರ್ಷದ ಹಿಂದೆ ಈ ಚಿತ್ರ ಪ್ರಾರಂಭವಾಗಿತ್ತು, ನನ್ನ ಪಾತ್ರದ ಹೆಸರು ಸೂರ್ಯ. ಹೆದರಿಸುತ್ತೆ, ನಗಿಸುತ್ತೆ, ಎಲ್ಲಾ ಥರದ ಎಮೋಷನ್ಸ್ ಈ ಚಿತ್ರದಲ್ಲಿದೆ, ನಿರ್ಮಾಪಕರು ನಮ್ಮಂಥ ಹೊಸಬರ ಮೇಲೆ ನಂಬಿಕೆಯಿಟ್ಟು ಈ ಸಿನಿಮಾ ಮಾಡಿದ್ದಾರೆ ಎಂದರು

ನಾಯಕಿ ಖ್ಯಾತಿ ಮಾತನಾಡುತ್ತ ನಾನು ಎಂಜಿನಿಯರಿಂಗ್ ಸ್ಟಡಿ ಮಾಡುತ್ತಿದ್ದೇನೆ, ಶಿಖಂಡಿ ನನ್ನ ಮೊದಲ ಚಿತ್ರ. ಎಲ್ಲರೂ ಹೊಸಬರಾದ್ದರಿಂದ ವರ್ಕ್‌ಶಾಪ್ ಮಾಡಿಸಿ ನಂತರ ಶೂಟಿಂಗ್ ಪ್ರಾರಂಭಿಸಿದರು, ನಿರ್ಮಾಪಕರು ನಮ್ಮ ಮೇಲೆ ನಂಬಿಕೆಯಿಟ್ಟು ಬಂಡವಾಳ ಹಾಕಿದ್ದಾರೆ ಎಂದು ಹೇಳಿದರು.

ಅಲ್ಲದೆ ಉತ್ತಮ ಪಾತ್ರದಲ್ಲಿ ನಟಿಸಿರುವುದಕ್ಕೆ ಖುಷಿಯಾಗಿದೆ ಎಂದು ನಟಿ ನಿಖಿತಾಸ್ವಾಮಿ ಹೇಳಿದರು. ತಮ್ಮ ಪಾತ್ರದ ಬಗ್ಗೆ ಬಿಗ್‌ಬಾಸ್ ನೀತು, ವೇದ ಹಾಗೂ ಬಳ್ಳಾರಿಯ ಚಾಂದಿನಿ ವಿವರಣೆ ನೀಡಿದರು. ಮೊದಲಬಾರಿಗೆ ಮಂಗಳಮುಖಿಯ ಪಾತ್ರದಲ್ಲಿ ನಟಿಸಿರುವ ಅನುಭವವನ್ನು ನಟ ರಾಘವೇಂದ್ರ(ರಾಘು) ಹಂಚಿಕೊಂಡರು. ಯಲ್ಲಮ್ಮ ಹಾಡಿನ ಸಾಹಿತಿ ಹಾಗೂ ಸಂಗೀತ ನಿರ್ದೇಶಕ ಮಂಜುಕವಿ ಹಾಡಿನ ಕುರಿತು ಮಾಹಿತಿ ನೀಡಿದರು. ಸಹ ನಿರ್ಮಾಪಕಿ ಪೋಲಾ ಲಕ್ಷ್ಮೀ, ನಿರ್ಮಾಪಕರ ಪುತ್ರ ಕರಣ್, ಸೊಸೆ ಶ್ರೇಷ್ಠ ಹಾಗೂ ಮಗಳು ನಮ್ರತಾ ಸಮಾರಂಭದಲ್ಲಿ ಉಪಸ್ಥಿತರಿದ್ದರು

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26